ಮಂಗಳೂರು
ಗುರುವಾರ, 9 ಏಪ್ರಿಲ್ 2026
ಸಂಪುಟ 48, ಸಂಚಿಕೆ 21, ಪುಟಗಳು 12+6
■ ಬೆಂಗಳೂರು ■ ಮಂಗಳೂರು ■ ಶಿವಮೊಗ್ಗ ■ ಹುಬ್ಬಳ್ಳಿ
₹5
REG.No.MNG /121/2024-26 Posted at kodialbail P.O / RNI:29813/78/ Daily
hosadigantha.com
epaper.hosadigantha.com
Hosadigantha Digital

ರಾಷ್ಟ್ರ ಜಾಗೃತಿಯ ದೈನಿಕ

ಹೊಸ ದಿಗಂತ

ಲೋಕಹಿತಂ ಮಮ ಕರಣೀಯಂ



ಆನೆ ದಾಳಿ: ಕಾಫಿ ಬೆಳೆಗಾರ ಸಾವು | ೦೫
ಕದನ ವಿರಾಮ ಒಪ್ಪಂದ ಇನ್ನೂ ಅಸ್ಪಷ್ಟ | ೦೭
ವನ್ಯಜೀವಿಗಳ ಸಂತಾನ ಹರಣಕ್ಕೆ ಚಿಂತನೆ | ೦೫

ಶುಭ ದಿನ

ಕಲಿಯುಗಾಬ್ದ 5128, ಪರಾಭವ ಸಂವತ್ಸರ, ಉತ್ತರಾಯಣ, ವಸಂತ ಋತು, ಚೈತ್ರ ಮಾಸ, ಕೃಷ್ಣ ಪಕ್ಷ, ತಿಥಿ: ಸಪ್ತಮಿ, ನಕ್ಷತ್ರ: ಮೂಲ

ದಿನದ ಮಾತು

ಮರೆವು ಒಂದು ವರ. ಏಕೆಂದರೆ ಕೆಲವು ಸಂಗತಿಗಳು ನೆನಪಿನಲ್ಲಿ ಉಳಿಯುವುದು ಒಂದು ಶಾಪ.

▲ ಸುಭಾಷಿತ

ಸಂಭಾವಿತರೇಕೆ ದಲ್ಲಾಳಿಗಳಾಗಲು ಸಾಧ್ಯವಿಲ್ಲ ಗೊತ್ತೇ?

ಗುರುತರ

• ಸೋಮಶೇಖರ ಸಿ.ಜೆ.

• ಪುಟ ೬

ಕಿರುಸುದ್ದಿ

ಇಂದು ಪಿಯು ಫಲಿತಾಂಶ

• **ಬೆಂಗಳೂರು:** ರಾಜ್ಯ ದ್ವಿತೀಯ ಪಿಯುಸಿ ಪರೀಕ್ಷೆ – 1ರ ಫಲಿತಾಂಶವು ಏ.9 ರಂದು ಮಧ್ಯಾಹ್ನ 3 ಗಂಟೆಗೆ ಪ್ರಕಟವಾಗಲಿದೆ ಎಂದು ಕರ್ನಾಟಕ ಶಾಲಾ ಪರೀಕ್ಷೆ ಮತ್ತು ಮೌಲ್ಯನಿರ್ಣಯ ಮಂಡಳಿ ತಿಳಿಸಿದೆ. ಫಲಿತಾಂಶವನ್ನು https://karresults.nic.in ಲಿಂಕ್ ಹಾಗೂ ಕರ್ನಾಟಕ ಒನ್ ಮೊಬೈಲ್ ಆ್ಯಪ್‌ನಿಂದ ಪಡೆಯಬಹುದಾಗಿದೆ. ಅಲ್ಲದೇ, ವಿದ್ಯಾರ್ಥಿಗಳ ನೋಂದಾಯಿತ ಮೊಬೈಲ್ ಸಂಖ್ಯೆಗೆ ವಾಟ್ಸಾಪ್/ಎಸ್‌ಎಂಎಸ್ ಮೂಲಕವೂ ಫಲಿತಾಂಶದ ಮಾಹಿತಿಯನ್ನು ಮಂಡಳಿಯಿಂದ ರವಾನಿಸಲಾಗುತ್ತದೆ. ಈ ವರ್ಷ ಮೊದಲ ಬಾರಿಗೆ ವಿಶೇಷವಾಗಿ, ವಿದ್ಯಾರ್ಥಿಗಳ ಫಲಿತಾಂಶದ ಅಂಕಪಟ್ಟಿಯನ್ನು ಡಿಜಿಲಾಕರ್ ಬಳಸಿ ಡೌನ್‌ಲೋಡ್ ಮಾಡಿಕೊಳ್ಳಬಹುದು ಹಾಗೂ ಫಲಿತಾಂಶದ ಪಟ್ಟಿಯನ್ನು ಸಂಬಂಧಿತ ಕಾಲೇಜುಗಳಿಗೆ ಮಧ್ಯಾಹ್ನ 3 ಗಂಟೆಗೆ ಲಭ್ಯಗೊಳಿಸಲಾಗುವುದು ಎಂದು ಮಂಡಳಿಯ ಅಧ್ಯಕ್ಷರು ತಿಳಿಸಿದ್ದಾರೆ.

ಉದ್ದಿಮೆಗಳ ಬಲಪಡಿಸುವಲ್ಲಿ ಮುದ್ರಾ ಯೋಜನೆ ಯಶಸ್ವಿ

• **ಹೊಸದಿಲ್ಲಿ:** ಉದ್ದಿಮೆಗಳ ಸುಗಮತೆಗಿದ್ದ ಅಡೆತಡೆ ನಿವಾರಿಸಿ, ಜನರ ಆಶೋತ್ತರಗಳಲ್ಲಿ ದೃಢ ವಿಶ್ವಾಸ ಕಾಯ್ದುಕೊಳ್ಳುವ ಮುಖೇನ, ದೇಶಾದ್ಯಂತ ಉದ್ದಿಮೆಗಳ ಸ್ಫೂರ್ತಿ ಬಲಪಡಿಸುವಲ್ಲಿ ಮುದ್ರಾ ಯೋಜನೆ ಯಶಸ್ವಿಯಾಗಿದೆ ಎಂದು ಪ್ರಧಾನಿ ನರೇಂದ್ರ ಮೋದಿ ಹೇಳಿದ್ದಾರೆ.

• ಪುಟ ೭

ಮುಕ್ತ ಮತದಾನಕ್ಕೆ ಸನ್ನದ್ಧ

• **ಬೆಂಗಳೂರು:** ದಾವಣಗೆರೆ ದಕ್ಷಿಣ ಮತ್ತು ಬಾಗಲಕೋಟೆ ವಿಧಾನಸಭೆ ಕ್ಷೇತ್ರಗಳ ಉಪಚುನಾವಣೆಗೆ ಗುರುವಾರ ಮತದಾನ ನಡೆಯಲಿದ್ದು, ಮುಕ್ತ ಮತ್ತು ನ್ಯಾಯಸಮ್ಮತವಾಗಿ ಮತದಾನಕ್ಕೆ ಚುನಾವಣಾ ಆಯೋಗ ಸರ್ವ ಸನ್ನದ್ಧವಾಗಿದೆ.

• ಪುಟ ೪

ಕೈ ಅಭ್ಯರ್ಥಿ ಅಧೀರ್ ರಂಜನ್ ಕಾರಿಗೆ ಟ್ರಕ್ ಡಿಕ್ಕಿ

• ಪುಟ ೭

ಆರ್‌ಬಿಐ ಕಾದುನೋಡುವ ತಂತ್ರ, ಬಡ್ಡಿದರ ಯಥಾಸ್ಥಿತಿ


• ಪುಟ ೭

ರಾಣಾ ಆಯೂಬ್ ವಿರುದ್ಧ ಕ್ರಮಕ್ಕೆ ಹೈಕೋರ್ಟ್ ಸೂಚನೆ

• ಪುಟ ೭

ನಾವೆಲ್ಲರೂ ಒಟ್ಟಾಗಿ ನಾರೀಶಕ್ತಿಯನ್ನು ಸಶಕ್ತಗೊಳಿಸೋಣ

▶ **ನರೇಂದ್ರ ಮೋದಿ, ಪ್ರಧಾನಿ**



ಮುಂಬರುವ ದಿನಗಳಲ್ಲಿ ಭಾರತವು ಹಬ್ಬಗಳ ಸಡಗರದಲ್ಲಿ ಮಿಂದೇಳಲಿದೆ. ಅಸ್ಸಾಂನಲ್ಲಿ 'ರೊಂಗಲಿ ಬಿಹು', ಕೇರಳದಲ್ಲಿ 'ವಿಷು', ತಮಿಳುನಾಡಿನಲ್ಲಿ 'ಪುತ್ತಾಂಡು' ಸಂಭ್ರಮವಿದ್ದರೆ, ಪಂಜಾಬ್ ಸೇರಿ ಉತ್ತರ ಭಾರತದ ವಿವಿಧ ಭಾಗಗಳಲ್ಲಿ 'ಬೈಸಾಖಿ'ಯು ಹೊಸ ಭರವಸೆ ಮತ್ತು ಸಕಾರಾತ್ಮಕತೆಯನ್ನು ಹೊತ್ತು ತರಲಿದೆ. ಈ ಮಂಗಳಕರ ಸಂದರ್ಭಗಳು ಎಲ್ಲರ ಜೀವನದಲ್ಲಿ ಸುಖ, ಶಾಂತಿ ಮತ್ತು ಸಮೃದ್ಧಿಯನ್ನು ತರಲಿ ಎಂದು ಹಾರೈಸುತ್ತೇನೆ.

ಅಷ್ಟೇ ಅಲ್ಲದೆ, ಏ.11 ರಂದು ನಾವು ಮಹಾತ್ಮ ಫುಲೆಯವರ 200ನೇ ಜಯಂತಿಯ ಆಚರಣೆಗಳಿಗೆ ಚಾಲನೆ ನೀಡಲಿದ್ದೇವೆ ಹಾಗೂ ಏ.14 ರಂದು ಅಂಬೇಡ್ಕರ್ ಜಯಂತಿಯ ಸಂದರ್ಭದಲ್ಲಿ ಇಡೀ ಭಾರತವು ಡಾ.ಬಾಬಾಸಾಹೇಬ್ ಅಂಬೇಡ್ಕರ್ ಅವರಿಗೆ ಭಕ್ತಿಪೂರ್ವಕ ಗೌರವ ನಮನಗಳನ್ನು ಸಲ್ಲಿಸಲಿದೆ. ನವಚೈತನ್ಯವು ನಮ್ಮ ಮನಸ್ಸುಗಳನ್ನು ತುಂಬಿರುವ ಇಂತಹ ವಿಶೇಷ ಸಂದರ್ಭಗಳ ನಡುವೆಯೇ, ನಮ್ಮ ರಾಷ್ಟ್ರವು ಮತ್ತೊಂದು ಐತಿಹಾಸಿಕ ಕ್ಷಣದ ಹೊಸ್ತಿಲಲ್ಲಿ ಬಂದು ನಿಂತಿದೆ. ಇದು ನಮ್ಮ ಪ್ರಜಾಪ್ರಭುತ್ವದ ಅಡಿಪಾಯವನ್ನು ಮತ್ತಷ್ಟು ಗಟ್ಟಿಗೊಳಿಸಲು ಹಾಗೂ ಸಮಾನತೆ ಮತ್ತು ಒಳಗೊಳ್ಳುವಿಕೆಯ ಬಗ್ಗೆ ನಮ್ಮೆಲ್ಲರ ಸಾಮೂಹಿಕ ಬದ್ಧತೆಯನ್ನು ಪುನರುಚ್ಚರಿಸಲು ಲಭಿಸಿರುವ ಒಂದು ಮಹತ್ವದ ಅವಕಾಶವಾಗಿದೆ.

ಮಹಿಳಾ ಮೀಸಲಾತಿಯನ್ನು ಜಾರಿಗೆ ತರುವ ಮಹತ್ವದ ಮಸೂದೆಯ ಕುರಿತು ಚರ್ಚಿಸಲು ಮತ್ತು ಅದನ್ನು ಅಂಗೀಕರಿಸಲು ಏ.16ರಂದು ಸಂಸತ್ತು ಸಮಾವೇಶಗೊಳ್ಳಲಿದೆ. ಇದನ್ನು ಕೇವಲ ಒಂದು ಶಾಸನಾತ್ಮಕ ಪ್ರಕ್ರಿಯೆ ಎಂದು ಕರೆದರೆ ಅದು ಅದರ ಮಹತ್ವವನ್ನು ಕಡಿಮೆ ಎಂದು ಅಂದಾಜಿಸಿದಂತಾಗುತ್ತದೆ. ವಾಸ್ತವವಾಗಿ, ಇದು ಭಾರತ ದಾದ್ಯಂತ ಇರುವ ಕೋಟ್ಯಂತರ ಮಹಿಳೆಯರ ಆಕಾಂಕ್ಷೆಗಳ ಪ್ರತಿಬಿಂಬವಾಗಿದೆ. 'ಮಹಿಳೆಯರು ಪ್ರಗತಿ ಹೊಂದಿದಾಗ ಮಾತ್ರ ಸಮಾಜವು ಪ್ರಗತಿ ಹೊಂದುತ್ತದೆ' ಎಂಬ ನಮ್ಮ ಸುದೀರ್ಘ ನಾಗರಿಕತೆಯ ಮೌಲ್ಯಗಳು ಮತ್ತು ನೈತಿಕ ತತ್ವಗಳಿಗೆ ಇದು ಸಾಕ್ಷಿಯಾಗಿದೆ.



ಭಾರತದ ಜನಸಂಖ್ಯೆಯ ಸುಮಾರು ಅರ್ಧದಷ್ಟು ಭಾಗ ಮಹಿಳೆಯರಾಗಿದ್ದು, ರಾಷ್ಟ್ರದ ನಿರ್ಮಾಣದಲ್ಲಿ ಅವರ ಕೊಡುಗೆ ಅಪಾರ ಹಾಗೂ ಅಮೂಲ್ಯವಾಗಿದೆ. ಇಂದು ವಿಜ್ಞಾನ-ತಂತ್ರಜ್ಞಾನದಿಂದ ಹಿಡಿದು ಉದ್ಯಮಶೀಲತೆಯವರೆಗೆ, ಕ್ರೀಡಾಕ್ಷೇತ್ರದಿಂದ ಸಶಸ್ತ್ರ ಪಡೆಗಳವರೆಗೆ ಮತ್ತು ಸಂಗೀತದಿಂದ ಕಲೆಯವರೆಗೆ ಪ್ರತಿಯೊಂದು ಕ್ಷೇತ್ರದಲ್ಲೂ ಮಹಿಳೆಯರು ಭಾರತದ ಪ್ರಗತಿಯ ಮುಂಚೂಣಿಯಲ್ಲಿದ್ದಾರೆ. ಕಳೆದ ಕೆಲವು ವರ್ಷಗಳಿಂದ ಮಹಿಳಾ ಸಬಲೀಕರಣಕ್ಕೆ ಪೂರಕವಾದ ವಾತಾವರಣವನ್ನು ನಿರ್ಮಿಸಲು ನಿರಂತರ ಪ್ರಯತ್ನಗಳು ನಡೆಯುತ್ತಿವೆ. ಶಿಕ್ಷಣದ ಲಭ್ಯತೆ, ಸುಧಾರಿತ ಆರೋಗ್ಯ ಸೇವೆಗಳು, ಆರ್ಥಿಕ ಒಳಗೊಳ್ಳುವಿಕೆ ಹಾಗೂ ಮೂಲಭೂತ ಸೌಕರ್ಯಗಳ ವಿಸ್ತರಣೆಯು ಮಹಿಳೆಯರು ಸಾಮಾಜಿಕ ಮತ್ತು ಆರ್ಥಿಕ ಜೀವನದಲ್ಲಿ ಸಕ್ರಿಯವಾಗಿ ಪಾಲ್ಗೊಳ್ಳಲು ಭದ್ರವಾದ ಅಡಿಪಾಯವನ್ನು ಒದಗಿಸಿವೆ.

➡ಪುಟ ೪

ಅಮೆರಿಕ–ಇಸ್ರೇಲ್, ಇರಾನ್ ನಡುವೆ 2 ವಾರ ಯುದ್ಧ ವಿರಾಮ

ಒಪ್ಪಂದ ಬೆನ್ನಿಗೆ ದಾಳಿ

• **ಟೆಹ್ರಾನ್:** ಅಮೆರಿಕ-ಇಸ್ರೇಲ್ ಮತ್ತು ಇರಾನ್ ನಡುವೆ ಕೊನೆಯ ಕ್ಷಣದಲ್ಲಿ ಎರಡು ವಾರಗಳ ಯುದ್ಧ ವಿರಾಮ ಒಪ್ಪಂದಕ್ಕೆ ಬರಲಾಗಿದೆ. ಇದರಿಂದ ಅಮೆರಿಕಾ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ನೀಡಿದ್ದ ಭಾರೀ ಬಾಂಬ್ ದಾಳಿಯ ಎಚ್ಚರಿಕೆ ತಾತ್ಕಾಲಿಕವಾಗಿ ತಪ್ಪಿದಂತಾಗಿದೆ.




ಆದರೆ, ಒಪ್ಪಂದ ಘೋಷಣೆಯ ಕೆಲವೇ ಗಂಟೆಗಳಲ್ಲಿ ಇರಾನ್ ಮತ್ತು ಗಲ್ಫ್ ರಾಷ್ಟ್ರಗಳಲ್ಲಿ ಮತ್ತೆ ದಾಳಿಗಳು ನಡೆದಿವೆ.

ಏತನ್ಮಧ್ಯೆ, ಲೆಬನಾನ್ ಮೇಲೆ ಇಸ್ರೇಲ್ ದಾಳಿ ಬಳಿಕ ಹಡಗುಗಳು ಹಾರ್ಮುಜ್ ಜಲಸಂಧಿ ಮೂಲಕ ಹಾದುಹೋಗುವುದಕ್ಕೆ ನಿರ್ಬಂಧ ಹೇರಲಾಗಿದೆ ಎಂದು ವರದಿಯಾಗಿದೆ. ಇದೇ ವೇಳೆ ಒಪ್ಪಂದದ ವಿವರಗಳ ಬಗ್ಗೆ ಮೂರು ದೇಶಗಳು ವಿಭಿನ್ನ ಹೇಳಿಕೆಗಳನ್ನು ನೀಡುತ್ತಿರುವುದರಿಂದ ಗೊಂದಲ ಹೆಚ್ಚಾಗಿದೆ.

➡ಪುಟ ೪

ಮುಂದಿನ ಹಾದಿ ಅನಿಶ್ಚಿತ

ಈ ಕದನ ವಿರಾಮವು ತಾತ್ಕಾಲಿಕ ಶಾಂತಿ ನೀಡಿದರೂ, ಪ್ರಮುಖ ವಿಷಯಗಳು ಇನ್ನೂ ಬಾಕಿಯೇ ಇವೆ. ಮುಂದಿನ ಮಾತುಕತೆಗಳು ಪಾಕಿಸ್ತಾನದಲ್ಲಿ ನಡೆಯುವ ಸಾಧ್ಯತೆ ಇದೆ. ಆದರೆ, ಈ ಒಪ್ಪಂದ ದೀರ್ಘಕಾಲಿಕ ಶಾಂತಿಗೆ ದಾರಿ ಮಾಡಿಕೊಡುತ್ತದೆಯೇ ಎಂಬುದು ಇನ್ನೂ ಸ್ಪಷ್ಟವಾಗಿಲ್ಲ.



ಕಚ್ಚಾ ತೈಲ ಇಳಿಕೆ, ಚಿನ್ನ-ಬೆಳ್ಳಿ ಏರಿಕೆ, ಷೇರು ಚೇತರಿಕೆ

ಮಧ್ಯಪ್ರಾಚ್ಯ ಸಂಘರ್ಷಕ್ಕೆ 14 ದಿನಗಳ ತಾತ್ಕಾಲಿಕ ವಿರಾಮ ಘೋಷಿಸುತ್ತಲೇ ಜಾಗತಿಕ ತೈಲ ಮಾರುಕಟ್ಟೆಯಲ್ಲಿ ಒಂದು ಬ್ಯಾರೆಲ್ 90 ಡಾಲರ್‌ಗೆ ಇಳಿಕೆಯಾಗಿದೆ. ಇದೇ ಸಂದರ್ಭ 10 ಗ್ರಾಂ. 24 ಕ್ಯಾರೆಟ್ ಚಿನ್ನದ ದರ 3,980 ರೂ. ಮತ್ತು 10 ಗ್ರಾಂ. ಬೆಳ್ಳಿ ದರವು 100 ರೂ. ಏರಿಕೆ ಕಂಡಿದೆ. ಷೇರುಪೇಟೆ ಚೇತರಿಸಿಕೊಂಡಿದ್ದು, ಬಿಎಸ್‌ಇ ಸೆನ್ಸೆಕ್ಸ್ 2,946.32 ಅಂಕಗಳ ಏರಿಕೆ ಕಂಡು 77,562.9 ಅಂಕ ಮತ್ತು ನಿಫ್ಟಿ 873.7 ಅಂಕಗಳ ಏರಿಕೆಯೊಂದಿಗೆ 23,997.35 ಅಂಕಗಳನ್ನು ತಲುಪಿವೆ.

ಮುಂದುವರಿದ ದಾಳಿ

ಯುದ್ಧ ವಿರಾಮ ಘೋಷಣೆಯ ಬಳಿಕವೂ ಹಲವು ದಾಳಿಗಳು ನಡೆದಿವೆ. ಇರಾನ್‌ನ ಲಾವನ್ ದ್ವೀಪದ ತೈಲ ಶುದ್ಧೀಕರಣ ಘಟಕದ ಮೇಲೆ ದಾಳಿಯಾಗಿದೆ. ಯುಎಇ, ಕುವೈತ್ ಮತ್ತು ಸೌದಿ ಅರೇಬಿಯಾದ ಮೇಲೆ ಕ್ಷಿಪಣಿ ಮತ್ತು ಡ್ರೋನ್ ದಾಳಿಗಳಾಗಿವೆ. ಈ ವೇಳೆ ಸೌದಿ ಅರೇಬಿಯಾ ಒಂಬತ್ತು ಡ್ರೋನ್‌ಗಳನ್ನು ತಡೆದಿದೆ. ಕುವೈತ್‌ನಲ್ಲಿ ವಿದ್ಯುತ್ ಮತ್ತು ನೀರು ಘಟಕಗಳಿಗೆ ಹಾನಿಯಾಗಿದೆ.

ಕದನ ವಿರಾಮ ಸ್ವಾಗತಿಸಿದ ಭಾರತ

ಅಮೆರಿಕ ಮತ್ತು ಇರಾನ್ ನಡುವಿನ ಎರಡು ವಾರಗಳ ಕದನ ವಿರಾಮ ಒಪ್ಪಂದವನ್ನು ಭಾರತೀಯ ವಿದೇಶಾಂಗ ಸಚಿವಾಲಯ(ಎಂಇಎ) ಬುಧವಾರ ಸ್ವಾಗತಿಸಿದೆ. ಮಧ್ಯಪ್ರಾಚ್ಯದಲ್ಲಿ ಯುದ್ಧೋನ್ಮಾದ, ಉದ್ವಿಗ್ನತೆ ಶಮನಗೊಂಡು, ಪ್ರದೇಶದಲ್ಲಿ ಶಾಶ್ವತ ಶಾಂತಿ ಪುನಃಸ್ಥಾಪನೆಯಾಗಬೇಕು. ಮಾತುಕತೆ ಮತ್ತು ರಾಜತಾಂತ್ರಿಕ ಮಾರ್ಗದ ಮೂಲಕ ಸಮಸ್ಯೆಗಳನ್ನು ಬಗೆಹರಿಸಿಕೊಳ್ಳಬೇಕು ಎಂದು ಎಂಇಎ ಸಲಹೆ ನೀಡಿದೆ.

ಅಸ್ಸಾಂ, ಕೇರಳ, ಪುದುಚೇರಿಯಲ್ಲಿ ಮತ

3 ವಿಧಾನಸಭೆಗಳಿಗೆ ಇಂದು ಚುನಾವಣೆ

• **ಹೊಸದಿಲ್ಲಿ:** ಅಸ್ಸಾಂ, ಕೇರಳ ಮತ್ತು ಪುದುಚೇರಿ ವಿಧಾನಸಭೆಗಳಿಗೆ ಗುರುವಾರ ಚುನಾವಣೆ ನಡೆಯಲಿದೆ. ಇದರೊಂದಿಗೆ ಕರ್ನಾಟಕ, ನಾಗಾಲ್ಯಾಂಡ್ ಮತ್ತು ತ್ರಿಪುರಾದಲ್ಲೂ ಕೆಲ ವಿಧಾನಸಭೆ ಕ್ಷೇತ್ರಗಳಿಗೆ ಉಪಚುನಾವಣೆ ನಡೆಯಲಿದೆ. ಎಲ್ಲಾ ಚುನಾವಣೆಗಳ ಮತ ಎಣಿಕೆ ಮೇ 4ರಂದು ನಡೆಯಲಿದೆ.

ಪಾರದರ್ಶಕ ಮತದಾನಕ್ಕಾಗಿ ಚುನಾವಣಾ ಆಯೋಗ ಕೇಂದ್ರ ಪಡೆಗಳನ್ನು ನಿಯೋಜಿಸಿದ್ದು, ವೆಬ್‌ಕಾಸ್ಟಿಂಗ್ ವ್ಯವಸ್ಥೆಯನ್ನೂ ಮಾಡಿದೆ.

ಅಸ್ಸಾಂನಲ್ಲಿ ಎಲ್ಲಾ 126 ಕ್ಷೇತ್ರಗಳಿಗೆ ಒಂದೇ ಹಂತದಲ್ಲಿ ಮತದಾನ ನಡೆಯಲಿದ್ದು, 722 ಅಭ್ಯರ್ಥಿಗಳು ಕಣದಲ್ಲಿದ್ದಾರೆ. ಇಲ್ಲಿ 2.5 ಕೋಟಿ ಮತದಾರರಿದ್ದು, ಮುಖ್ಯಮಂತ್ರಿ ಹಿಮಂತ ಬಿಸ್ವಾ ಶರ್ಮಾ ಮತ್ತು ಕಾಂಗ್ರೆಸ್ ನಾಯಕ ಗೌರವ್ ಗೊಗೊಯ್ ಪ್ರಮುಖ ಅಭ್ಯರ್ಥಿಗಳಾಗಿದ್ದಾರೆ.

➡ಪುಟ ೪

ಗೋವಾ ಉಪಚುನಾವಣೆ ರದ್ದು

ಗೋವಾದ ಪೋಂಡಾ ಕ್ಷೇತ್ರದ ಉಪಚುನಾವಣೆಯನ್ನು ಬಾಂಬೆ ಹೈಕೋರ್ಟ್ ರದ್ದುಗೊಳಿಸಿದೆ. ಪ್ರಸ್ತುತ ವಿಧಾನಸಭೆಯ ಅವಧಿ ಮುಗಿಯಲು ಒಂದು ವರ್ಷಕ್ಕಿಂತ ಕಡಿಮೆ ಸಮಯ ಇರುವುದರಿಂದ ಚುನಾ ವಣೆ ಅನಗತ್ಯ ಎಂದು ನ್ಯಾಯಾಲಯ ತೀರ್ಪು ನೀಡಿದೆ.



ರಾಜ್ಯದ 2 ಕ್ಷೇತ್ರಕ್ಕೆ ಉಪಚುನಾವಣೆ

ಕರ್ನಾಟಕದಲ್ಲಿ ಎರಡು, ನಾಗಾಲ್ಯಾಂಡ್ ಮತ್ತು ತ್ರಿಪುರಾದಲ್ಲಿ ತಲಾ ಒಂದು ಸ್ಥಾನಕ್ಕೆ ಉಪಚುನಾವಣೆ ನಿಗದಿಯಾಗಿದೆ. ಕರ್ನಾಟಕದ ದಾವಣಗೆರೆ ದಕ್ಷಿಣ ಮತ್ತು ಬಾಗಲಕೋಟೆ ಕ್ಷೇತ್ರಗಳಲ್ಲಿ ಕಾಂಗ್ರೆಸ್ ಮತ್ತು ಬಿಜೆಪಿ ಅಭ್ಯರ್ಥಿಗಳ ನಡುವೆ ನೇರ ಹೈವೋಲ್ಟೇಜ್ ಪೈಪೋಟಿ ಏರ್ಪಟ್ಟಿದೆ. ನಾಗಾಲ್ಯಾಂಡ್‌ನ ಕೋರಿಡಾಂಗ್ ಮತ್ತು ತ್ರಿಪುರಾದ ಧರ್ಮನಗರ ಸ್ಥಾನಗಳಿಗೂ ಶಾಸಕರ ನಿಧನದಿಂದಾಗಿ ಚುನಾವಣೆ ನಡೆಯುತ್ತಿದೆ.

➡ಪುಟ ೪

ಮಹಿಳಾ ಮೀಸಲಾತಿ ಕಾಯ್ದೆ ತಿದ್ದುಪಡಿಗೆ ಕೇಂದ್ರ ಅನುಮತಿ

• **ಹೊಸದಿಲ್ಲಿ:** ಮಹಿಳಾ ಮೀಸಲಾತಿ ಕಾಯ್ದೆಯನ್ನು ತ್ವರಿತವಾಗಿ ಜಾರಿಗೆ ತರಲು ಕೇಂದ್ರ ಸರ್ಕಾರ ಮಹತ್ವದ ಹೆಜ್ಜೆ ಇಟ್ಟಿದ್ದು, ಲೋಕಸಭೆ ಹಾಗೂ ವಿಧಾನಸಭೆಗಳಲ್ಲಿ ಮಹಿಳೆಯರಿಗೆ ಶೇ.33 ಮೀಸಲಾತಿ ಅನುಷ್ಠಾನಗೊಳಿಸುವ ಉದ್ದೇಶದಿಂದ ನಾರಿ ಶಕ್ತಿ ವಂದನ್ ಅಧಿನಿಯಮಕ್ಕೆ ತಿದ್ದುಪಡಿ ತರಲಿರುವ ಮಸೂದೆಗೆ ಕೇಂದ್ರ ಸಚಿವ ಸಂಪುಟ ಬುಧವಾರ ಅನುಮೋದನೆ ನೀಡಿದೆ.



ಪ್ರಧಾನಮಂತ್ರಿ ನರೇಂದ್ರ ಮೋದಿ ಅವರ ಅಧ್ಯಕ್ಷತೆಯಲ್ಲಿ ನಡೆದ ಸಚಿವ ಸಂಪುಟ ಸಭೆಯಲ್ಲಿ ಈ ಕರಡು ಮಸೂದೆಗೆ ಒಪ್ಪಿಗೆ ನೀಡಲಾಗಿದೆ ಎಂದು ಮೂಲಗಳು ತಿಳಿಸಿವೆ.

ಸಂಸತ್ತಿನ ಬಜೆಟ್ ಅಧಿವೇಶನವನ್ನು ವಿಸ್ತರಿಸಿರುವ ಕೇಂದ್ರ ಸರ್ಕಾರ, ಏ.16ರಿಂದ 18ರವರೆಗೆ ವಿಶೇಷ ಮೂರು ದಿನಗಳ ಅಧಿವೇಶನ ಕರೆದಿದ್ದು, ಈ ಅವಧಿಯಲ್ಲಿ ಮಸೂದೆಯನ್ನು ಅಂಗೀಕರಿಸುವ ನಿರೀಕ್ಷೆಯಿದೆ.

➡ಪುಟ ೪

ತಿದ್ದುಪಡಿ ಪ್ರಕಾರ

- ಲೋಕಸಭಾ ಸ್ಥಾನಗಳ ಸಂಖ್ಯೆ 543–816ಕ್ಕೆ ಏರಿಕೆ
- ಅದರಲ್ಲಿ 273 ಸ್ಥಾನಗಳು ಮಹಿಳೆಯರಿಗೆ ಮೀಸಲು
- ಎಸ್‌ಸಿ/ಎಸ್‌ಟಿ ವರ್ಗಗಳಿಗೆ ಲಂಬ ಆಧಾರದಲ್ಲಿ ಪ್ರತ್ಯೇಕ ಮೀಸಲು ಮುಂದುವರಿಕೆ
- ಕ್ಷೇತ್ರ ಪುನರ್‌ವಿಂಗಡಣೆ 2027ರ ಜನಗಣತಿ ಬದಲು 2011ರ ಜನಗಣತಿ ಆಧಾರದಲ್ಲಿ
- ರಾಜ್ಯ ವಿಧಾನಸಭೆಗಳಲ್ಲೂ ಅನುಪಾತದ ಆಧಾರದಲ್ಲಿ ಮಹಿಳಾ ಮೀಸಲು

ಇಸಿ ಜತೆಗಿನ ಸಭೆಯಲ್ಲಿ ಟಿಎಂಸಿ ಹೈಡ್ರಾಮಾ

• **ಹೊಸದಿಲ್ಲಿ:** ಡೆರಿಕ್ ಓ ಬ್ರಿಯನ್ ನೇತೃತ್ವದ ತೃಣಮೂಲ ಕಾಂಗ್ರೆಸ್ (ಟಿಎಂಸಿ) ಪ್ರತಿನಿಧಿಗಳ ನಿಯೋಗ ಮತ್ತು ಕೇಂದ್ರ ಚುನಾವಣಾ ಆಯೋಗ(ಸಿಇಸಿ) ನಡುವಿನ ಸಭೆ ಬುಧವಾರ ಉದ್ವಿಗ್ನತೆಯಿಂದ ಕೂಡಿತ್ತು. ಸಭೆಯಲ್ಲಿ ಏನಾಯಿತು ಎಂಬುದರ ಬಗ್ಗೆ ಉಭಯರೂ ಪರಸ್ಪರ ವಿರುದ್ಧದ ಹೇಳಿಕೆಗಳನ್ನು ನೀಡಿದ್ದಾರೆ. ಇಸಿ ಮೂಲಗಳ ಪ್ರಕಾರ, ಟಿಎಂಸಿ ನಾಯಕ ಡೆರಿಕ್ ಓ'ಬ್ರಿಯನ್ ಅವರು ಚರ್ಚೆಯ ವೇಳೆ ಧ್ವನಿ ಎತ್ತಿ, ಮುಖ್ಯ ಚುನಾವಣಾ ಆಯುಕ್ತರಿಗೆ ಮಾತನಾಡಬಾರದೆಂದು ಹೇಳಿದರು ಎಂದು ಆರೋಪಿಸಲಾಗಿದೆ. ಟಿಎಂಸಿ ಸಭೆ ಕೆಲವೇ ನಿಮಿಷಗಳಲ್ಲಿ ಮುಗಿಯಿತು. ಡೆರಿಕ್ ಓ'ಬ್ರಿಯನ್ ಅವರು ಚು. ಆಯೋಗದ ಮೇಲೆ ಏರು ಧ್ವನಿಯಲ್ಲಿ ಕೂಗಿ, ಸಿಇಸಿಗೆ ಮಾತನಾಡಬಾರದೆಂದು ಹೇಳಿದರು ಎಂದು ಇಸಿ ಮೂಲಗಳು ತಿಳಿಸಿವೆ.



➡ಪುಟ ೪


ಇಸಿಗೆ ಟಿಎಂಸಿ ಸವಾಲು

ಆದರೆ, ಟಿಎಂಸಿ ನಾಯಕರು ಚುನಾವಣಾ ಆಯೋಗದ ಆರೋಪಗಳನ್ನು ಸಂಪೂರ್ಣವಾಗಿ ತಳ್ಳಿಹಾಕಿದ್ದಾರೆ. ಅವುಗಳನ್ನು ಸುಳ್ಳು ಎಂದು ಕರೆದಿದ್ದಾರೆ. ಸಭೆಯ ದಾಖಲೆಗಳನ್ನು ಸಾರ್ವಜನಿಕವಾಗಿ ಬಿಡುಗಡೆ ಮಾಡುವಂತೆ ಅವರು ಚು.ಆಯೋಗಕ್ಕೆ ಸವಾಲು ಹಾಕಿದ್ದಾರೆ.

➡ಪುಟ ೪

ಖರ್ಗೆ ವಿರುದ್ಧ 2 ದೂರು

• **ಗುವಾಹಟಿ:** ಅವಹೇಳನಕಾರಿ ಹೇಳಿಕೆ ಸಂಬಂಧ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ವಿರುದ್ಧ ಅಸ್ಸಾಂನ ಎರಡು ಪೊಲೀಸ್ ಠಾಣೆಗಳಲ್ಲಿ ಆರ್‌ಎಸ್‌ಎಸ್ ದೂರು ನೀಡಿದೆ. ಅಸ್ಸಾಂನ ಚುನಾವಣಾ ಪ್ರಚಾರದಲ್ಲಿ ಮಲ್ಲಿಕಾರ್ಜುನ ಖರ್ಗೆ ಅವರು ಬಿಜೆಪಿ ಮತ್ತು ಆರ್‌ಎಸ್‌ಎಸ್ ಅನ್ನು ಸಮೀಕರಿಸಿ ಅವರೆಡು ವಿಷಕಾರಿ ಹಾವುಗಳು ಎಂದಿದ್ದರು. ಈ ಬಗ್ಗೆ ಮಾಹಿತಿ ನೀಡಿದ ಆರ್‌ಎಸ್‌ಎಸ್ ವಕ್ತಾರರೊಬ್ಬರು, ಚುನಾವಣಾ ರ್‍ಯಾಲಿಯಲ್ಲಿ ಮಲ್ಲಿಕಾರ್ಜುನ ಖರ್ಗೆ ಅವರು ಅವಹೇಳನಕಾರಿ, ಕೋಮು ಪ್ರಚೋದನಾಕಾರಿ ಹೇಳಿಕೆ ನೀಡಿದ್ದಾರೆ, ಈ ಹಿನ್ನೆಲೆ ಅವರ ವಿರುದ್ಧ ಕಾನೂನುಕ್ರಮ ಕೈಗೊಳ್ಳುವಂತೆ ದೂರಿನಲ್ಲಿ ಉಲ್ಲೇಖಿಸಲಾಗಿದೆ ಎಂದಿದ್ದಾರೆ.



➡ಪುಟ ೪

ಗುಜರಾತಿಗಳು ಅನಕ್ಷರಸ್ಥರು: ಹೇಳಿಕೆಗೆ ವಿಷಾದಿಸಿದ ಖರ್ಗೆ

• **ಹೊಸದಿಲ್ಲಿ:** ಗುಜರಾತಿಗಳು ಅನಕ್ಷರಸ್ಥರೆಂಬ ಹೇಳಿಕೆಗೆ ಕಾಂಗ್ರೆಸ್ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಬುಧವಾರ ವಿಷಾದ ವ್ಯಕ್ತಪಡಿಸಿದ್ದಾರೆ. ಗುಜರಾತ್ ಜನತೆಯ ಬಗ್ಗೆ ತಮಗೆ ಯಾವಾಗಲೂ ಅತ್ಯುನ್ನತ ಗೌರವವಿದೆ, ಮುಂದೆಯೂ ಇರಲಿದೆ. ನನ್ನ ಹೇಳಿಕೆಯನ್ನು ಉದ್ದೇಶಪೂರ್ವಕವಾಗಿ ತಪ್ಪಾಗಿ ಪ್ರಚಾರಿಸಲಾಗುತ್ತಿದೆ. ಹಾಗಿದ್ದರೂ, ನನ್ನ ಹೇಳಿಕೆಯಿಂದ ಗುಜರಾತ್ ಜನರ ಭಾವನೆಗೆ ನೋವುಂಟಾಗಿದ್ದರೆ ವಿಷಾದ ವ್ಯಕ್ತಪಡಿಸುತ್ತೇನೆ ಎಂದು ಖರ್ಗೆ ಹೇಳಿದ್ದಾರೆ.

➡ಪುಟ ೯

ಜೂ. ರೆಡ್‌ಕ್ರಾಸ್ ಪರೀಕ್ಷೆ: ಉಜಿರೆಯ ಎಸ್‌ಡಿಎಂ ವಿದ್ಯಾರ್ಥಿಗಳ ಸಾಧನೆ

ಬೆಳ್ತಂಗಡಿ: ಭಾರತೀಯ ರೆಡ್ ಕ್ರಾಸ್ ಸಂಸ್ಥೆಯ ಕರ್ನಾಟಕ ರಾಜ್ಯ ಶಾಖೆಯ ವತಿಯಿಂದ ಜನವರಿಯಲ್ಲಿ ಆಯೋಜಿಸಲಾಗಿದ್ದ ಜೂನಿಯರ್ ರೆಡ್ ಕ್ರಾಸ್ ಪರೀಕ್ಷೆಯಲ್ಲಿ ಉಜಿರೆಯ ಎಸ್.ಡಿ.ಎಂ. ಪದವಿ ಪೂರ್ವ ಕಾಲೇಜಿನ ವಿದ್ಯಾರ್ಥಿಗಳು ಅತ್ಯುತ್ತಮ ಸಾಧನೆ ಮಾಡಿದ್ದಾರೆ.

ಈ ರಾಜ್ಯ ಮಟ್ಟದ ಪರೀಕ್ಷೆಯಲ್ಲಿ ಪ್ರಥಮ ಮತ್ತು ದ್ವಿತೀಯ ಪಿಯುಸಿಯ 93 ವಿದ್ಯಾರ್ಥಿಗಳು ಹಾಜರಾಗಿದ್ದು 24 ವಿದ್ಯಾರ್ಥಿಗಳು ಅತ್ಯುನ್ನತ ಶ್ರೇಣಿಯಲ್ಲಿ ಹಾಗೂ ಉಳಿದ ವಿದ್ಯಾರ್ಥಿಗಳು ಉನ್ನತ ಶ್ರೇಣಿಯಲ್ಲಿ ಉತ್ತೀರ್ಣರಾಗಿದ್ದಾರೆ.

ರೆಡ್ ಕ್ರಾಸ್ ಸಂಸ್ಥೆಯ ಉದಾತ್ತ ತತ್ವಗಳು, ಆರೋಗ್ಯ ಜಾಗೃತಿ, ಮಾನವೀಯ ಸೇವೆ ಹಾಗೂ ಪ್ರಥಮ ಚಿಕಿತ್ಸೆಯಂತಹ ವಿಷಯಗಳ ಕುರಿತು ವಿದ್ಯಾರ್ಥಿಗಳು ಈ ಪರೀಕ್ಷೆಯನ್ನು ಎದುರಿಸಿದ್ದರು. ವಿದ್ಯಾರ್ಥಿಗಳ ಈ ಶೈಕ್ಷಣಿಕ ಸಾಧನೆಯನ್ನು ಎಸ್.ಡಿ.ಎಂ. ಪದವಿಪೂರ್ವ ಕಾಲೇಜಿನ ಪ್ರಾಚಾರ್ಯ ಪ್ರಮೋದ್ ಕುಮಾರ್ ಹಾಗೂ ಜೂನಿಯರ್ ರೆಡ್ ಕ್ರಾಸ್ ಘಟಕದ ಪದಾಧಿಕಾರಿಗಳು ಶ್ಲಾಘಿಸಿದ್ದಾರೆ.

ನಿಧನ ಸುದ್ದಿ

ವಾಮನ ಬೋರ್ಕಳ



ಮಂಜೇಶ್ವರ: ವರ್ಕಾಡಿ ಪರಿಸರದ ಸುದ್ದಿಗಳನ್ನು ಹಾಗೂ ಮಾಹಿತಿಗಳನ್ನು ಪತ್ರಿಕಾ ವರದಿಗಾರರಿಗೆ ಹವ್ಯಾಸಿಯಾಗಿ ನೀಡುತ್ತಿದ್ದ ವರ್ಕಾಡಿ ಬಳಿಯ ಬೋರ್ಕಳ ನಿವಾಸಿ ವಾಮನ್ ಬೋರ್ಕಳ (56) ಹೃದಯ ಸಂಬಂಧ ಕಾಯಿಲೆಯಿಂದಾಗಿ ಬುಧವಾರ ಮಧ್ಯಾಹ್ನ ಮಂಗಳೂರಿನ ಖಾಸಗಿ ಆಸ್ಪತ್ರೆಯಲ್ಲಿ ನಿಧನ ಹೊಂದಿದರು. ಕಳೆದ ಒಂದು ವರ್ಷದಿಂದ ಹೃದಯ ಸಂಬಂಧ ಕಾಯಿಲೆಯಿಂದ ಬಳಲುತ್ತಿದ್ದ ಅವರು ವಿವಿಧ ಆಸ್ಪತ್ರೆಗಳಲ್ಲಿ ಚಿಕಿತ್ಸೆ ಪಡೆಯುತ್ತಿದ್ದರು. ಕಳೆದ ಒಂದು ವಾರದಿಂದ ಮಂಗಳೂರಿನ ಖಾಸಗಿ ಆಸ್ಪತ್ರೆಯಲ್ಲಿ ದಾಖಲಾಗಿ ತೀವ್ರ ನಿಗಾ ಘಟಕದಲ್ಲಿ ಚಿಕಿತ್ಸೆ ಪಡೆಯುತ್ತಿದ್ದರು. ಮೃತರು ದಿವಂಗತರಾದ ಪುಟ್ಟ ಶೆಟ್ಟಿಗಾರ್ ಮತ್ತು ಗಿರಿಜಾ ದಂಪತಿಗಳ ಪುತ್ರನಾಗಿದ್ದು, ಪತ್ನಿ ಮೀನಾಕ್ಷಿ, ಮಕ್ಕಳಾದ ಪ್ರೀತಿಕಾ, ಕೃತಿಕಾ ಅವರನ್ನು ಆಗಲಿದ್ದಾರೆ. ವಾಮನ್ ಬೋರ್ಕಳ ಅವರು ಸುಂಕದಕಟ್ಟೆಯ ಬೇಕರಿ ಪಿ.ಸಿ. ರಸ್ತೆ ಬಳಿ ಬೋರ್ಕಳ ಟ್ರೇಡರ್ಸ್ ಎಂಬ ದಿನಸಿ ಸಾಮಗ್ರಿ ಸಂಸ್ಥೆಯನ್ನು ಹೊಂದಿದ್ದು, ಹೊಸ ದಿಗಂತ ಸಹಿತ ವಿವಿಧ ಪತ್ರಿಕೆಗಳ ವಿತರಕರೂ ಆಗಿದ್ದರು. ಅಲ್ಲದೆ ಹವ್ಯಾಸಿ ಪತ್ರಕರ್ತರಾಗಿದ್ದು, ಯಕ್ಷಗಾನ ಪ್ರೇಮಿ, ಗೀತಾ ಸಾಹಿತ್ಯ ಸಂಭ್ರಮದ ಪ್ರೋತ್ಸಾಹಕರೂ ಆಗಿದ್ದು, ಯಕ್ಷಗಾನ ಹಾಗೂ ಗೀತಾ ಸಾಹಿತ್ಯ ಸಂಭ್ರಮದ ಹಲವು ಕಾಯಕ್ರಮಗಳ ಪ್ರಾಯೋಜಕತ್ವವನ್ನು ತಾವೇ ವಹಿಸಿದ್ದರು. ಊರಿನ ಧಾರ್ಮಿಕ, ಸಾಮಾಜಿಕ, ಸಾಂಸ್ಕೃತಿಕ ಕಾರ್ಯಕ್ರಮಗಳ ವರದಿಗಳನ್ನು ಸ್ವತಹ ತಾವೇ ಬರೆದು ಪತ್ರಕರ್ತ ಮಿತ್ರರಿಗೆ ಹಾಗೂ ವಿವಿಧ ಪತ್ರಿಕೆಗಳಿಗೆ ಕಳುಹಿಸಿ ಕೊಡುತ್ತಿದ್ದರು. ಎಲ್ಲರೊಂದಿಗೆ ಒಡನಾಟ ಹೊಂದಿದ್ದ ವಾಮನ್‌ರ ಅಗಲುವಿಕೆ ಸುಂಕದಕಟ್ಟೆ ಹಾಗೂ ಮಜೀರ್‌ಪಳ್ಳ ಭಾಗದಲ್ಲಿ ಸೂತಕದ ಛಾಯೆ ಮೂಡಿಸಿದೆ.

ಕಿಶೋರ್ ಕುಮಾರ್



ಮಂಗಳೂರು: ಸೂಟರ್‌ಪೇಟೆಯ ಪ್ರಜ್ವಲ್ ಯುವಕ ಮಂಡಲದ ಮಾಜಿ ಅಧ್ಯಕ್ಷ ಕಿಶೋರ್ ಕುಮಾರ್ (48) ಏ.7ರಂದು ಮಧ್ಯಾಹ್ನ ಹೃದಯಾಘಾತದಿಂದ ನಿಧನರಾಗಿದ್ದಾರೆ. 25 ವರ್ಷಗಳಿಂದ ಪ್ರಜ್ವಲ್ ಯುವಕ ಮಂಡಲದ ಒಂದಲ್ಲ ಒಂದು ಹುದ್ದೆಯನ್ನು ಸಮರ್ಥವಾಗಿ ನಿಭಾಯಿಸಿಕೊಂಡು ಬಂದಿದ್ದ ಇವರು, ಅತ್ಯಂತ ಸ್ನೇಹಜೀವಿಯಾಗಿ ಸಂಘಟನೆಯ ಬೆಳವಣಿಗೆಯಲ್ಲಿ ತನ್ನನ್ನು ತಾನು ಅತ್ಯಂತ ನಿಷ್ಠೆಯಿಂದ ತೊಡಗಿಸಿಕೊಂಡಿದ್ದರು.

ಇವರ ಅಧ್ಯಕ್ಷತೆಯಲ್ಲಿ ಪ್ರಜ್ವಲ್ ಯುವಕ ಮಂಡಲ 2020ರಲ್ಲಿ ಜಿಲ್ಲಾ ರಾಜ್ಯೋತ್ಸವ ಪ್ರಶಸ್ತಿಯಿಂದ ಪುರಸ್ಕೃತಗೊಂಡಿದೆ. ಇವರು ಪತ್ನಿ, ತಾಯಿ, ಸಹೋದರ ಹಾಗೂ 4 ಮಂದಿ ಸಹೋದರಿಯರನ್ನು ಅಗಲಿದ್ದಾರೆ. ಇವರ ನಿಧನಕ್ಕೆ ಪ್ರಜ್ವಲ್ ಯುವಕ ಮಂಡಲದ ಸರ್ವ ಸದಸ್ಯರು ತೀವ್ರ ಸಂತಾಪ ವ್ಯಕ್ತಪಡಿಸಿದ್ದಾರೆ.

ಲಕ್ಷ್ಮೀ ಬಿ. ಶೆಟ್ಟಿ



ಮಂಜೇಶ್ವರ: ಕುಂಜತ್ತೂರು ಸಮೀಪದ ಮಡಿವಾಳಪಾಲ ಎಂಬಲ್ಲಿನ ಲಕ್ಷ್ಮೀ ಬಿ. ಶೆಟ್ಟಿ (ಕುತ್ತಾರಗುತ್ತು) ದೀರ್ಘಕಾಲದ ಅಸೌಖ್ಯದಿಂದ ಸ್ವಗೃಹದಲ್ಲಿ ನಿಧನರಾದರು. ಅವರಿಗೆ 96 ವರ್ಷವಾಗಿತ್ತು. ಮೃತರು ರಘು ಶೆಟ್ಟಿ, ವಿಶ್ವನಾಥ ಶೆಟ್ಟಿ ಎಂಬ ಪುತ್ರರನ್ನು, ಸುಶೀಲ ಶೆಟ್ಟಿ, ವೇದಾವತಿ ಶೆಟ್ಟಿ, ಸುನಂದ ಶೆಟ್ಟಿ ಎಂಬ ಪುತ್ರಿಯರನ್ನು, ಬಂಧು ಬಳಗವನ್ನು ಅಗಲಿದ್ದಾರೆ.

ಸರಸ್ವತಿ ಮೊಗವೀರ



ಕುಂದಾಪುರ : ಬೀಜಾಡಿ ಗ್ರಾಮದ ದೊಡ್ಡೋಣಿ ನಿವಾಸಿ ಸರಸ್ವತಿ ಮೊಗವೀರ (82) ಇವರು ಸ್ವಗೃಹದಲ್ಲಿ ನಿಧನರಾದರು. ಹಲವು ದಶಕಗಳಿಂದ ಕೋಟೇಶ್ವರದ ಕೋಟಿಲಿಂಗೇಶ್ವರ ದೇವಸ್ಥಾನದ ಸ್ವಚ್ಛತಾ ಕಾರ್ಯ ನಿರ್ವಹಿಸುತ್ತಿದ್ದರು. ಮೃತರು ಓರ್ವ ಪುತ್ರಿ ಹಾಗೂ ಮೂವರು ಪುತ್ರರನ್ನು ಅಗಲಿದ್ದಾರೆ.



ವಿದ್ಯುತ್ ಶಾರ್ಟ್'ಸರ್ಕ್ಯೂಟ್‌ನಿಂದಾಗಿ ಸುಂಟಿಕೊಪ್ಪದ ಗದ್ದೆಹಳ್ಳದ ಪೈಂಟ್ ಮತ್ತು ಹಾರ್ಡ್‌ವೇರ್ ಮಳಿಗೆಗೆ ಬೆಂಕಿ ಹೊತ್ತಿಕೊಂಡ ಘಟನೆ ಬುಧವಾರ ಸಂಜೆಗತ್ತಲಲ್ಲಿ ನಡೆದಿದೆ. ಬಹುಪಾಲು ಸಾಮಗ್ರಿಗಳು ಬೆಂಕಿಗೆ ಆಹುತಿಯಾಗಿವೆ. ಅದೃಷ್ಟವಶಾತ್ ಮಳಿಗೆಯ ಒಳಭಾಗದಲ್ಲಿದ್ದ ಮಹೇಂದ್ರ ಸ್ಕಾರ್ಪಿಯೋ ವಾಹನವನ್ನು ಸ್ಥಳೀಯ ನಿವಾಸಿಗಳು ಹೊರ ತರುವ ಮೂಲಕ ಈ ಬೆಂಕಿಯ ಜ್ವಾಲೆಯನ್ನು ಹತೋಟಿಗೆ ತಂದು ನಂದಿಸುವಲ್ಲಿ ಯಶಸ್ವಿಯಾದರು.

ಪರ್ಯಾಯ ಶ್ರೀ ಶೀರೂರು ಮಠದ ವತಿಯಿಂದ ವಿಪ್ರ ಮಕ್ಕಳಿಗೆ ನಿತ್ಯಾನುಷ್ಠಾನ ತರಬೇತಿ ಶಿಬಿರ

ಉಡುಪಿ: ಮಕ್ಕಳಲ್ಲಿ ಸನಾತನ ಸಂಸ್ಕೃತಿಯ ಮೌಲ್ಯಗಳನ್ನು ಬಿತ್ತಲು ಹಾಗೂ ಧಾರ್ಮಿಕ ಸಂಪ್ರದಾಯಗಳನ್ನು ಪರಿಚಯಿಸುವ ನಿಟ್ಟಿನಲ್ಲಿ ಉಡುಪಿ ಪರ್ಯಾಯ ಶ್ರೀ ಶೀರೂರು ಮಠದ ವತಿಯಿಂದ ವಿಪ್ರ ಉಪನೀತ ಮಕ್ಕಳಿಗಾಗಿ ವಿಶೇಷ 'ಧಾರ್ಮಿಕ ಶಿಕ್ಷಣ ಶಿಬಿರವನ್ನು ಆಯೋಜಿಸಲಾಗಿದೆ.

ಗುರುಕುಲ ಪದ್ಧತಿಯ ಶಿಕ್ಷಣ

ಪರ್ಯಾಯ ಮಠಾಧೀಶರಾದ ಶ್ರೀ ವೇದವರ್ಧನತೀರ್ಥ ಶ್ರೀಪಾದರ ಮಾರ್ಗದರ್ಶನದಲ್ಲಿ ಈ ಶಿಬಿರ ನಡೆಯಲಿದ್ದು, ಪ್ರಾಚೀನ ಗುರುಕುಲ ಪದ್ಧತಿಯ ಜೀವನ ಕ್ರಮವನ್ನು ಮಕ್ಕಳಿಗೆ ಪರಿಚಯಿಸುವುದು ಇದರ ಮುಖ್ಯ ಉದ್ದೇಶವಾಗಿದೆ. ಮುಂಜಾನೆಯಿಂದ ಸಂಜೆಯ ತನಕ ಅನುಸರಿಸಬೇಕಾದ ನಿತ್ಯಾನುಷ್ಠಾನಗಳು, ಸಂಧ್ಯಾವಂದನೆ ಹಾಗೂ ಅಧ್ಯಾತ್ಮ ಮೌಲ್ಯಗಳ ಬಗ್ಗೆ ತಜ್ಞರಿಂದ ಪ್ರಾಯೋಗಿಕ ತರಬೇತಿ ನೀಡಲಾಗುವುದು.

ಉಚಿತ ವಸತಿ ಮತ್ತು ಊಟದ ವ್ಯವಸ್ಥೆ

ಏ. 18 ಮೇ 8ರವರೆಗೆ ಉಡುಪಿ ಶ್ರೀಕೃಷ್ಣ ಮಠದಲ್ಲಿ ಈ ಶಿಬಿರ ನಡೆಯಲಿದ್ದು, ಭಾಗವಹಿಸುವ ಶಿಬಿರಾರ್ಥಿಗಳಿಗೆ ಮಠದ ವತಿಯಿಂದಲೇ ಉಚಿತ ಊಟ ಹಾಗೂ ವಸತಿ ವ್ಯವಸ್ಥೆಯನ್ನು ಕಲ್ಪಿಸಲಾಗಿದೆ. ಶಿಬಿರದಲ್ಲಿ ಸೀಮಿತ ವಿದ್ಯಾರ್ಥಿಗಳಿಗೆ ಮಾತ್ರ ಅವಕಾಶ ವಿರುವ ಕಾರಣ, ಆಸಕ್ತರು ಏ. 10ರ ಒಳಗೆ ತಮ್ಮ ಹೆಸರನ್ನು ನೋಂದಾಯಿಸಿಕೊಳ್ಳಬೇಕು. ನೋಂದಣಿ ಸಮಯದಲ್ಲಿ ವಿದ್ಯಾರ್ಥಿಯ ಹೆಸರು, ಗೋತ್ರ, ಆಧಾರ್ ಸಂಖ್ಯೆ ಹಾಗೂ ದೂರವಾಣಿ ಸಂಖ್ಯೆಯನ್ನು ಒದಗಿಸುವುದು ಕಡ್ಡಾಯವಾಗಿದೆ.

> **ಪೋಷಕರ ಉಪಸ್ಥಿತಿ**
> ಶಿಬಿರದ ಮೊದಲ ದಿನ ವಿದ್ಯಾರ್ಥಿಗಳೊಂದಿಗೆ ಪೋಷಕರು ಖುದ್ದಾಗಿ ಆಗಮಿಸಿ ನೋಂದಣಿ ಪ್ರಕ್ರಿಯೆಯನ್ನು ಪೂರ್ಣಗೊಳಿಸಬೇಕು. ವಿದ್ಯಾರ್ಥಿಯ ಗೋತ್ರ ಹಾಗೂ ಆಧಾರ್ ಕೂಡ ಇರಬೇಕು.
> ■ ಡಾ. ಉದಯ ಸರಳತ್ತಾಯ , ದಿವಾನರು, ಪರ್ಯಾಯ ಶ್ರೀ ಶೀರೂರು ಮಠ

ಮಡಿಕೇರಿ ಗ್ರಾಮಾಂತರ ಬಿಜೆಪಿ ಮುಖಂಡರಿಂದ ಪೊಲೀಸರಿಗೆ ಮನವಿ

ಶರಣ್ಯ ಪ್ರಕರಣದ ಸಮಗ್ರ ತನಿಖೆ

ಮಡಿಕೇರಿ: ಕಕ್ಕಬ್ಬೆ ಬಳಿಯ ತಡಿಯಂಡಮೋಳ್ ಬೆಟ್ಟದಲ್ಲಿ ಚಾರಣಕ್ಕೆ ತೆರಳಿದ ಕೇರಳದ ಯುವತಿ ಶರಣ್ಯಳ ನಡವಳಿಕೆ ಸಂಶಯಕ್ಕೆ ಎಡೆಮಾಡಿದ್ದು, ಈ ಬಗ್ಗೆ ಸೂಕ್ತ ತನಿಖೆ ನಡೆಸುವಂತೆ ಮಡಿಕೇರಿ ಬಿಜೆಪಿ ಗ್ರಾಮಾಂತರ ಮಂಡಲದ ಪ್ರಮುಖರು ಒತ್ತಾಯಿಸಿದ್ದಾರೆ.

ಈ ಸಂಬಂಧ ನಾಪೋಕ್ಲು ಠಾಣಾಧಿಕಾರಿ ರಾಘವೇಂದ್ರ ಅವರಿಗೆ ದೂರು ನೀಡಿರುವ ಬಿಜೆಪಿ ಗ್ರಾಮಾಂತರ ಮಂಡಲದ ಪ್ರಧಾನ ಕಾರ್ಯದರ್ಶಿ ಪೊಕ್ಕುಳಂಡ್ರ ಧನೋಜ್ ಹಾಗೂ ಇತರರು, ಪ್ರಕರಣದ ಬಗ್ಗೆ ಸೂಕ್ತ ತನಿಖೆ ನಡೆಸುವಂತೆ ಆಗ್ರಹಿಸಿದ್ದಾರೆ.

ಕಾಣದ ಕೈಗಳ ಕೈವಾಡ?



ದೂರು ನೀಡಿದ ಬಳಿಕ ಸುದ್ದಿಗಾರರೊಂದಿಗೆ ಮಾತನಾಡಿದ ಧನೋಜ್, ಏಪ್ರಿಲ್ 2ರಂದು ತಡಿಯಂಡಮೋಳ್ ಬೆಟ್ಟಕ್ಕೆ ಚಾರಣಕ್ಕೆ ತೆರಳಿದ ಕೇರಳದ ಶರಣ್ಯ ಎಂಬ ಯುವತಿ ನಾಪತ್ತೆಯಾಗಿದ್ದಳು. ನಾಲ್ಕನೇ ದಿನ ಪತ್ತೆಯಾದ ಆಕೆಯ ನಡವಳಿಕೆಯಿಂದ ಸಂಶಯ ವ್ಯಕ್ತವಾಗಿದೆ. ಇದರಲ್ಲಿ ಕಾಣದ ಕೈಗಳ ಕೈವಾಡವಿರುವ ಸಂಶಯವಿದೆ ಎಂದರು.

ಸತ್ಯಾಸತ್ಯತೆ ಏನು ?

ದಟ್ಟಾರಣ್ಯದಲ್ಲಿ ಆಹಾರವಿಲ್ಲದೆ ಯಾವುದೇ ಕಾರಣಕ್ಕೂ ನಾಲ್ಕು ದಿನಗಳ ಕಾಲ ಇರಲು ಸಾಧ್ಯವಿಲ್ಲ. ದೇಶದ ವಿವಿಧ ಭಾಗಗಳಲ್ಲಿ ನಕ್ಸಲ್ ಚಟುವಟಿಕೆ ನಡೆಯುತ್ತಿದ್ದು, ಈ ಪ್ರಕರಣ ಮತ್ತಷ್ಟು ಸಂಶಯಕ್ಕೆ ಎಡೆ ಮಾಡಿಕೊಟ್ಟಿದೆ. ಇದರಿಂದ ಪೊಲೀಸ್ ಇಲಾಖೆ ಸೂಕ್ತ ತನಿಖೆ ನಡೆಸಿ ಜನರಿಗೆ ಇದರ ಸತ್ಯಾಸತ್ಯತೆಯನ್ನು ತಿಳಿಸಬೇಕಿದೆ ಎಂದರು.



ನಿಜಾಂಶ ಜನರ ಮುಂದಿಡಿ : ಪ್ರಸನ್ನ ಎಡಿಕೇರಿ

ತಡಿಯಂಡಮೋಳ್ ಬೆಟ್ಟದಲ್ಲಿ ಚಾರಣದ ಸಂದರ್ಭ ನಾಪತ್ತೆಯಾಗಿ ನಾಲ್ಕು ದಿನಗಳ ಬಳಿಕ ಪತ್ತೆಯಾದ ಕೇರಳ ಮೂಲದ ಮಹಿಳೆ ಶರಣ್ಯ ಬಗ್ಗೆ ಸಾಕಷ್ಟು ಅನುಮಾನ ಮೂಡುತ್ತಿದ್ದು, ಪೊಲೀಸ್ ಇಲಾಖೆ ಸೂಕ್ತ ತನಿಖೆ ನಡೆಸಿ ನಿಜಾಂಶವನ್ನು ಜನರ ಮುಂದಿಡಬೇಕೆಂದು ಉದ್ಯಮಿ ಹಾಗೂ ಸಮಾಜ ಸೇವಕ ಪ್ರಸನ್ನ ಎಡಿಕೇರಿ ಆಗ್ರಹಿಸಿದ್ದಾರೆ. ಈ ಸಂಬಂಧ ಪತ್ರಿಕಾ ಹೇಳಿಕೆ ನೀಡಿರುವ ಅವರು, ಶರಣ್ಯ ಹುಡುಕಾಟಕ್ಕಾಗಿ ಪೊಲೀಸ್ ಇಲಾಖೆ, ಅರಣ್ಯ ಇಲಾಖೆ, ಸ್ಥಳೀಯರು ಸೇರಿದಂತೆ ಹಲವರು ಕಾರ್ಯಾಚರಣೆ ನಡೆಸಿ ನಾಲ್ಕು ದಿನಗಳ ಬಳಿಕ ಪತ್ತೆಯಾಗಿದ್ದಾರೆ. ಶರಣ್ಯ ಪತ್ತೆಗೆ ಹಗಲು ರಾತ್ರಿಯೆನ್ನದೆ ಕಾರ್ಯಾಚರಣೆ ಮಾಡಲಾಗಿದೆ. ನಮ್ಮ ತೆರಿಗೆ ಹಣದಲ್ಲಿ ಕಾರ್ಯಾಚರಣೆ ನಡೆಸಲಾಗಿದೆ. ಆದರೆ ಶರಣ್ಯ ಏನು ಸಾಧನೆ ಮಾಡಿದ್ದಾರೆಂದು ಆಕೆಗೆ ಸನ್ಮಾನ ಮಾಡಲಾಗಿದೆ ಎಂದು ಪ್ರಶ್ನಿಸಿದ್ದಾರೆ.

ಅದರ ಬದಲು ಕಾರ್ಯಾಚರಣೆ ಮಾಡಿ ಪತ್ತೆ ಹಚ್ಚಿದವರಿಗೆ ಸನ್ಮಾನ ಮಾಡಬಹುದಿತ್ತೆಂದು ಅಭಿಪ್ರಾಯಿಸಿರುವ ಪ್ರಸನ್ನ, ಶರಣ್ಯ ಯಾವುದೇ ಆಹಾರವಿಲ್ಲದೆ ಒಂದು ಬಾಟಲಿ ನೀರಿನಲ್ಲಿ ನಾಲ್ಕು ದಿನ ಕಳೆದಿರುವುದು ಆಶ್ಚರ್ಯಕ್ಕೆ ಕಾರಣವಾಗಿದೆ. ಈ ಬಗ್ಗೆ ಸಾಮಾಜಿಕ ಜಾಲತಾಣಗಳಲ್ಲಿ ಕೂಡಾ ಸಾಕಷ್ಟು ಚರ್ಚೆಗಳಾಗುತ್ತಿದ್ದು, ಇದಕ್ಕೆ ಉತ್ತರ ಸಿಗುವಂತಾಗಬೇಕೆಂದು ಒತ್ತಾಯಿಸಿದ್ದಾರೆ.

ಪಕ್ಕದ ಕೇರಳ ರಾಜ್ಯದಲ್ಲಿ ವಿಧಾನಸಭಾ ಚುನಾವಣೆ ನಡೆಯುತ್ತಿರುವುದರಿಂದ ಶರಣ್ಯ ನಾಪತ್ತೆ ಪ್ರಕರಣ ಚುನಾವಣಾ ಕೇಂದ್ರಿತವಾದಂತೆ ಗೋಚರಿಸುತ್ತಿದೆ. ಒಬ್ಬ ಮಹಿಳೆ ಇದ್ದರೂ ಅವರನ್ನು ಬೆಟ್ಟಕ್ಕೆ ಚಾರಣಕ್ಕೆ ತೆರಳಲು ಅವಕಾಶ ಮಾಡಿಕೊಡಲು ಕಾರಣ ಏನು ಎಂಬುದರ ಬಗ್ಗೆ ಸಂಬಂಧಿಸಿದ ಅರಣ್ಯ ಇಲಾಖೆ ಮಾಹಿತಿ ನೀಡಬೇಕೆಂದು ಆಗ್ರಹಿಸಿದ್ದಾರೆ.

ಪ್ರಚಾರಕ್ಕೋಸ್ಕರ ಮಾಡಿದ್ದೇ?

ನಾಪೋಕ್ಲು ಬಿಜೆಪಿ ಶಕ್ತಿ ಕೇಂದ್ರದ ಅಧ್ಯಕ್ಷ ಶಿವಚಾಳಿಯಂಡ ಅಂಬಿ ಕಾರ್ಯಪ್ಪ ಮಾತನಾಡಿ, ಶರಣ್ಯ ನಾಪತ್ತೆ ಪ್ರಕರಣ ಮೇಲ್ನೋಟಕ್ಕೆ ಪ್ರಚಾರಕ್ಕೋಸ್ಕರ ಮಾಡಿದ ರೀತಿಯಲ್ಲಿದೆ. ನಮ್ಮ ಜಿಲ್ಲೆಯ ಪ್ರವಾಸೋದ್ಯಮಕ್ಕೆ ಕೆಟ್ಟ ಹೆಸರು ತರಲು ನಾಟಕವಾಡುವ ರೀತಿಯಲ್ಲಿ ಕಾಣುತ್ತಿದೆ. ಅದಲ್ಲದೆ ಕಳೆದ ನಾಲ್ಕು ದಿನಗಳಿಂದ ದಟ್ಟಾರಣ್ಯದಲ್ಲಿದ್ದ ಶರಣ್ಯಳಿಗೆ ಯಾವುದೇ ಆಯಾಸವಾಗದ ರೀತಿಯಲ್ಲಿ ಪತ್ತೆಯಾಗಿರುವುದು ಸಂಶಯಕ್ಕೆ ಎಡೆಮಾಡಿದೆ. ಆದ್ದರಿಂದ ಪೊಲೀಸ್ ಇಲಾಖೆ ಸೂಕ್ತ ತನಿಖೆ ನಡೆಸಿ ಕ್ರಮ ಕೈಗೊಳ್ಳಬೇಕೆಂದು ಆಗ್ರಹಿಸಿದರು.

ಕೂಲಂಕಶ ತನಿಖೆಯಾಗಲಿ

ಈ ಸಂದರ್ಭ ಬಿಜೆಪಿ ಶಕ್ತಿ ಕೇಂದ್ರದ ಗ್ರಾಮಾಂತರ ಮಂಡಲದ ಅಧ್ಯಕ್ಷ ಬಿದ್ದಂಡ ರಾಜೇಶ್ ಅಚ್ಚಯ್ಯ, ಉಪಾಧ್ಯಕ್ಷ ಪಾಡಿಯಂಡ ಕಟ್ಟಿ ಕುಶಾಲಪ್ಪ, ತಾಲೂಕು ಪಂಚಾಯಿತಿ ಮಾಜಿ ಸದಸ್ಯ ಬೊಳಿಯಾಡಿರ ಸಂತು ಸುಬ್ರಮಣಿ ಮತ್ತಿತರರು ಶರಣ್ಯ ಪ್ರಕರಣವನ್ನು ಕೂಲಂಕಷ ತನಿಖೆ ನಡೆಸಿ ಕ್ರಮ ಕೈಗೊಳ್ಳಬೇಕೆಂದು ಒತ್ತಾಯಿಸಿದರು.

ದೂರು ಸ್ವೀಕರಿಸಿದ ಠಾಣಾಧಿಕಾರಿ ರಾಘವೇಂದ್ರ ಅವರು ತನಿಖೆ ನಡೆಸುವ ಭರವಸೆ ನೀಡಿದರು.

ಈ ಸಂದರ್ಭ ಬಿಜೆಪಿ ಜಿಲ್ಲಾ ಕಾರ್ಯದರ್ಶಿ ಉಮಾ ಪ್ರಭು, ಪವನ್ ತೋಟಂಬೈಲು, ಗ್ರಾಮ ಪಂಚಾಯತ್ ಮಾಜಿ ಸದಸ್ಯೆ ಕೋಟೇರ ನೀಲಮ್ಮ, ಕಲಿಯಂಡ ಸುನಂದ, ಬಿಜೆಪಿಯ ಪ್ರಮುಖರಾದ ಮನು ಮಹೇಶ್, ಬಿದ್ದಾಟಂಡ ಸಂಪತ್, ಸುರ ನಾಣಯ್ಯ, ಕಂಗಾಂಡ ಜಾಲಿ ಪೂವಪ್ಪ, ನಿರನ್ ಕಾರ್ಯಪ್ಪ, ನಿಡುಮಂಡ ಕೃತಿ ಮತ್ತಿತರರು ಹಾಜರಿದ್ದರು.

ಪುತ್ತೂರು ಶ್ರೀ ಮಹಾಲಿಂಗೇಶ್ವರ ದೇವಳದ ಹೆಸರು ಉಲ್ಲೇಖ : ಕಾನೂನು ಕ್ರಮಕ್ಕೆ ಆಗ್ರಹ



ಪುತ್ತೂರು: ಪುತ್ತೂರು ಮಹಾಲಿಂಗೇಶ್ವರ ದೇವಳದ ಹೆಸರು ಉಲ್ಲೇಖ ಮಾಡಿ ಷಡ್ಯಂತ್ರ ಮಾಡುವವರ ವಿರುದ್ಧ ಕಾನೂನು ಕ್ರಮಕ್ಕಾಗಿ ಶ್ರೀ ಮಹಾಲಿಂಗೇಶ್ವರ ದೇವಸ್ಥಾನ ಸಂರಕ್ಷಣಾ ಸಮಿತಿ ಆಗ್ರಹಿಸಿದೆ.

ಬುಧವಾರ ಶ್ರೀ ಮಹಾಲಿಂಗೇಶ್ವರ ದೇವಸ್ಥಾನ ಸಂರಕ್ಷಣಾ ಸಮಿತಿಯ ಸದಸ್ಯರು ದೇವಳದ ಆಡಳಿತ ಮಂಡಳಿಯ ಅಧ್ಯಕ್ಷ ಈಶ್ವರ್ ಭಟ್ ಪಂಜಿಗುಡ್ಡೆ ಅವರಿಗೆ ಮನವಿಯನ್ನು ನೀಡಿದರು.

ವಿಶ್ವದಾದ್ಯಂತ ಪುತ್ತೂರು ಮಹಾಲಿಂಗೇಶ್ವರ ದೇವರ ಭಕ್ತರಿದ್ದಾರೆ. ಹೀಗಿರುವಾಗ ಎರಡು ಕುಟುಂಬಗಳ ಮಧ್ಯೆ ಇರುವ ವಿಚಾರ ಈಗಾಗಲೇ ಕೋರ್ಟ್‌ನಲ್ಲಿದೆ. ಪಿ.ಜಿ. ಜಗನ್ನಿವಾಸ ರಾವ್ ಹಾಗೂ ಸಂತ್ರಸ್ತೆಯ ಕುಟುಂಬದ ಕಲಹ ಇದೀಗ ದೇವಾಲಯದ ಧ್ವಜಸ್ತಂಭದವರೆಗೂ ಬಂದಿದೆ. ಇದು ಸರಿಯಾದ ಕ್ರಮವಲ್ಲ. ಧ್ವಜಸ್ತಂಭದ ಮುಂದೆ ಪ್ರತಿಭಟಿಸುವುದು ಧಾರ್ಮಿಕ ಆಚರಣೆಗಳಿಗೆ ತಡೆಯೊಡ್ಡುವುದು ಸರಿಯಲ್ಲ. ಪ್ರತಿಭಟಿಸುವುದಕ್ಕೆ ಅದರದ್ದೇ ಆದ ಸ್ಥಳವಿದೆ. ದೇವಾಲಯ ಹಿಂದೂಗಳ ಆರಾಧನಾ ಕೇಂದ್ರ ಅದು ಹಕ್ಕೊತ್ತಾಯ ಮಾಡುವ ಜಾಗವಲ್ಲ ಎಂದು ಮನವಿಯಲ್ಲಿ ಉಲ್ಲೇಖಿಸಲಾಗಿದೆ. ಒಂದು ವೇಳೆ ಪುತ್ತೂರು ಜಾತ್ರಾ ಧ್ವಜಾರೋಹಣ ಸಂದರ್ಭ ಧ್ವಜಸ್ತಂಭ ಬಳಿ ಯಾರಾದ್ರೂ ಪ್ರತಿಭಟನೆ ಅಥವಾ ಧರಣಿ ಮಾಡಲು ಪ್ರಯತ್ನಿಸಿದ್ದಲ್ಲಿ ಮಹಾಲಿಂಗೇಶ್ವರ ದೇವಸ್ಥಾನ ಸಂರಕ್ಷಣಾ ಸಮಿತಿ ಅದಕ್ಕೆ ಅವಕಾಶ ಕೊಡುವುದಿಲ್ಲ. ಎಷ್ಟೇ ದೊಡ್ಡ ಪ್ರಭಾವಿ ವ್ಯಕ್ತಿಗಳಾಗಲಿ ಅವರನ್ನ ಧ್ವಜಸ್ತಂಭ ಬಳಿಯಿಂದಲೇ ಎಳೆದುಕೊಂಡು ಬಂದು ಹೊರ ಹಾಕುತ್ತೇವೆ ಎಂದು ಇದೇ ಸಂದರ್ಭದಲ್ಲಿ ಸಮಿತಿ ಸದಸ್ಯರು ಎಚ್ಚರಿಕೆ ನೀಡಿದ್ದಾರೆ. ಎರಡು ಕುಟುಂಬದ ಕಲಹವನ್ನು ದೇವಸ್ಥಾನದವರೆಗೂ ತರುವುದು ಸರಿಯಲ್ಲ. ಜಾತ್ರೋತ್ಸವದ ಸಂದರ್ಭ ಅಹಿತಕರ ಘಟನೆಗೆ ಆಹ್ವಾನ ನೀಡಬೇಡಿ. ಅಂತವರಿಗೆ ದೇವಳದ ಒಳ ಪ್ರವೇಶಿಸಲು ಕೂಡ ಅವಕಾಶ ನೀಡಬೇಡಿ. ಮುಂಜಾಗ್ರತೆ ಕ್ರಮವಾಗಿ ಅಂತವರನ್ನು ತಡೆಯಬೇಕು ಎಂದು ಆಗ್ರಹಿಸಿದ್ದಾರೆ.

ಇಂದ್ರಾಣೆ ಶ್ರೀ ಮುಖ್ಯಪ್ರಾಣ, ನಾಗದೇವರ ಪುನಃ ಪ್ರತಿಷ್ಠಾಪನಾ ಮಹೋತ್ಸವ ಸಂಪನ್ನ

ಉಡುಪಿ: ಇಂದ್ರಾಳಿಯ ಇಂದ್ರಾಣಿ ಶ್ರೀ ಪಂಚದುರ್ಗಾ ಪರಮೇಶ್ವರೀ ದೇವಸ್ಥಾನದ ವಠಾರದಲ್ಲಿ ನೂತನವಾಗಿ ನಿರ್ಮಾಣ ಗೊಂಡಿರುವ ಗುಡಿಗಳಲ್ಲಿ ಶ್ರೀ ಮುಖ್ಯಪ್ರಾಣ ದೇವರು ಹಾಗೂ ನಾಗದೇವರ ಪುನಃಪ್ರತಿಷ್ಠಾಪನೆ ಮತ್ತು ಬ್ರಹ್ಮಕಲಶೋತ್ಸವವು ಮಂಗಳವಾರ ಅತ್ಯಂತ ಶ್ರದ್ಧಾಭಕ್ತಿ ಹಾಗೂ ಧಾರ್ಮಿಕ ವೈಭವದೊಂದಿಗೆ ಜರುಗಿತು.

ಬೆಳಿಗ್ಗೆ 9.03ರ ಶುಭ ವೃಷಭ ಲಗ್ನ ಸುಮುಹೂರ್ತದಲ್ಲಿ ವೇ|ಮೂ| ಪುತ್ತೂರು ಶ್ರೀನಿವಾಸ ತಂತ್ರಿಗಳ ನೇತೃತ್ವದಲ್ಲಿ ಶ್ರೀ ನಾಗದೇವರ ಪುನಃ ಪ್ರತಿಷ್ಠಾಪನೆ ನೆರವೇರಿತು. ಇದರ ಅಂಗವಾಗಿ ವಿವಿಧ ಹೋಮ ಹಾಗೂ ಆಶ್ಲೇಷ ಬಲಿ ಪೂಜೆಗಳು ನಡೆದವು. ವಿಶೇಷವಾಗಿ 49 (ಏಕೋನ ಪಂಚಾಷತ್) ಕಲಶಗಳ ಆರಾಧನೆ ಮತ್ತು ಪಂಚಾಮೃತ ಕಲಶಾಭಿಷೇಕದೊಂದಿಗೆ ದೇವರಿಗೆ ಮಹಾಪೂಜೆ ಸಲ್ಲಿಸಲಾಯಿತು. ವಟು ಆರಾಧನೆ ಸೇರಿದಂತೆ ವಿವಿಧ ತಾಂತ್ರಿಕ ಪ್ರಕ್ರಿಯೆಗಳಲ್ಲಿ ಪ್ರಧಾನ ಅರ್ಚಕ ಗೋಪಾಲಕೃಷ್ಣ ಉಪಾಧ್ಯಾಯರು ಪಾಲ್ಗೊಂಡಿದ್ದರು.



ಭಕ್ತರಿಗಾಗಿ ಅಚ್ಚುಕಟ್ಟಾದ ವ್ಯವಸ್ಥೆ

ಕ್ಷೇತ್ರಕ್ಕೆ ಹರಿದುಬಂದ ಸಾವಿರಾರು ಭಕ್ತರಿಗೆ ಯಾವುದೇ ತೊಂದರೆಯಾಗದಂತೆ ಸ್ವಯಂಸೇವಕರು ವಿಶೇಷ ಮುತುವರ್ಜಿ ವಹಿಸಿದ್ದರು. ವಾಹನ ಪಾರ್ಕಿಂಗ್, ಸರತಿ ಸಾಲಿನಲ್ಲಿ ದೇವರ ದರ್ಶನ ಹಾಗೂ ತೀರ್ಥ ಪ್ರಸಾದ ವಿತರಣೆಗೆ ಪ್ರತ್ಯೇಕ ವ್ಯವಸ್ಥೆ ಮಾಡಲಾಗಿತ್ತು.

ಸಾಂಸ್ಕೃತಿಕ ವೈಭವ

ಸಂಜೆ ಸಾಂಸ್ಕೃತಿಕ ಕಾರ್ಯಕ್ರಮದ ಅಂಗವಾಗಿ ವಿದುಷಿ ದಿಶಾ ಮತ್ತು ತಂಡದವರಿಂದ 'ನೃತ್ಯಾಮೃತಂ ಪ್ರದರ್ಶನಗೊಂಡಿತು.

ರಾತ್ರಿ ಶ್ರೀ ಯಕ್ಷನಿಧಿ ಮೂಡುಬಿದಿರೆ ಯಕ್ಷಗಾನ ಸಂಸ್ಥೆ ಮತ್ತು ಯುವ ಮೇಳದ ಕಲಾವಿದರಿಂದ ವೀರಮಣಿ ಕಾಳಗ ಎಂಬ ಕಾಲಮಿತಿ ಯಕ್ಷಗಾನ ಪ್ರದರ್ಶ ನವು ಭಕ್ತರ ಗಮನ ಸೆಳೆಯಿತು.

ಕಾರ್ಯಕ್ರಮದಲ್ಲಿ ಜೀರ್ಣೋದ್ಧಾರ ಸಮಿತಿ ಅಧ್ಯಕ್ಷ ಭೂಪತಿ ಶೆಟ್ಟಿ, ಬ್ರಹ್ಮಕಲಶೋತ್ಸವ ಸಮಿತಿ ಅಧ್ಯಕ್ಷ ಬಿ. ಜಯಕರ ಶೆಟ್ಟಿ ಇಂದ್ರಾಳಿ, ದೇವಸ್ಥಾನದ ವ್ಯವಸ್ಥಾಪನಾ ಸಮಿತಿ ಅಧ್ಯಕ್ಷ ಬಿ. ಕುಶಲ ಶೆಟ್ಟಿ ಇಂದ್ರಾಳಿ ಹಾಗೂ ವಿವಿಧ ಸಮಿತಿಗಳ ಪದಾಧಿಕಾರಿಗಳು, ಸಂಚಾಲಕರು ಉಪಸ್ಥಿತರಿದ್ದರು.

ಗುರುಪುರ ಹೆದ್ದಾರಿಯಲ್ಲಿ ಬಸ್ಸು-ಲಾರಿ ಮುಖಾಮುಖಿ

ಬಸ್ಸಿನಲ್ಲಿ 6 ಲಕ್ಷ ರೂ. ಪತ್ತೆ !

ಕೈಕಂಬ: ಮಂಗಳೂರು-ಮೂಡಬಿದ್ರಿ ರಾಷ್ಟ್ರೀಯ ಹೆದ್ದಾರಿ 169ರ ಗುರುಪುರ ಪೇಟೆ ಮತ್ತು ಪೊಳಲಿ ದ್ವಾರದ ಮಧ್ಯೆ ಬೆಳ್ಳಿಬೆಟ್ಟು ಬಸ್ ನಿಲ್ದಾಣದ ಮುಂಭಾಗ ಲಾರಿ ಮತ್ತು ಖಾಸಗಿ ಬಸ್ ನಡುವೆ ಮುಖಾಮುಖಿ ಅಪಘಾತ ಬುಧವಾರ ಮಧ್ಯಾಹ್ನ ನಡೆದಿದ್ದು ಎರಡೂ ವಾಹನಗಳ ಚಾಲಕರು ಗಂಭೀರ ಗಾಯಗೊಂಡಿದ್ದಾರೆ. ಇದೇ ಸಂದರ್ಭ ಬಸ್ಸಿನಲ್ಲಿ 6 ಲಕ್ಷ ರೂ. ನಗದು ಪತ್ತೆಯಾಗಿದೆ.

ಮಂಗಳೂರಿನಿಂದ ಕಾರ್ಕಳದತ್ತ ಸಾಗುತ್ತಿದ್ದ ಖಾಸಗಿ ಬಸ್ ಮತ್ತು ಮಂಗಳೂರು ಕಡೆಗೆ ಹೋಗುತ್ತಿದ್ದ 16 ಚಕ್ರದ ಬೃಹತ್ ಲಾರಿಯು ಬೆಳ್ಳಿಬೆಟ್ಟು ತಿರುವಿನಲ್ಲಿ ಮುಖಾಮುಖಿ ಡಿಕ್ಕಿಯಾದ ಪರಿಣಾಮ ಬಸ್ಸು ಮತ್ತು ಲಾರಿಯ ಮುಂಭಾಗ ಸಂಪೂರ್ಣ ನುಜ್ಜುಗುಜ್ಜಾಗಿದೆ. ಅಪಘಾತದ ತೀವ್ರತೆಗೆ ಎರಡೂ ವಾಹನಗಳ ಚಾಲಕರು ಹೊರಬರಲಾಗದೆ ನರಳಾಡುತ್ತಿದ್ದು, ಸ್ಥಳೀಯರು ಗ್ಯಾಸ್ ಕಟ್ಟರ್ ಮೂಲಕ ಲಾರಿ ಮತ್ತು ಬಸ್ಸಿನ ಕೆಲವು ಭಾಗಗಳನ್ನು ಕತ್ತರಿಸಿ ಗಾಯಾಳುಗಳನ್ನು ಹೊರಗೆ ತೆಗೆದಿದ್ದಾರೆ.

> **6 ಲಕ್ಷ ನಗದು ಪತ್ತೆ**
> ಗ್ಯಾಸ್ ಕಟ್ಟರ್ ಮೂಲಕ ಬಸ್‌ನ ಒಂದು ಭಾಗ ಕತ್ತರಿಸುವ ಸಂಧರ್ಭ ಅಂದಾಜು 6 ಲಕ್ಷ ರೂ ಮೊತ್ತದ ನಗದಿನ ಬಂಡಲ್ ಪತ್ತೆಯಾಗಿದ್ದು, ರಫೀಕ್ ಗುರುಪುರ ನಗದನ್ನು ಸ್ಥಳದಲ್ಲಿ ಇದ್ದ ಬಜ್ಪೆ ಪೊಲೀಸರಿಗೆ ಹಸ್ತಾಂತರಿಸಿದ್ದಾರೆ ಎಂದು ಬಜಪೆ ಪೊಲೀಸ್ ಮೂಲಗಳು ದೃಢ ಪಡಿಸಿವೆ. ಬಜಪೆ ಪೊಲೀಸರು ತನಿಖೆ ನಡೆಸುತ್ತಿದ್ದಾರೆ.

ಇಬ್ಬರ ಕಾಲುಗಳು ಮುರಿತಕ್ಕೊಳಗಾಗಿ ತೀವ್ರ ರಕ್ತಸಿಕ್ತಗೊಂಡಿದ್ದು ಬಸ್ಸಿನಲ್ಲಿದ್ದ ಪ್ರಯಾಣಿಕರಲ್ಲಿ ಐದು ಮಂದಿಗೆ ಸಣ್ಣಪುಟ್ಟ ಗಾಯಗಳಾಗಿವೆ.

ಚಾಲಕರನ್ನು ರಕ್ಷಿಸಲು ನಡೆಸಿದ ತುರ್ತು ಕಾರ್ಯಾಚರಣೆಯಲ್ಲಿ ಸ್ಥಳೀಯರಾದ ರಫೀಕ್, ಶಿವರಾಮ, ರವೂಫ್, ಫಾಝಿಲ್ ಮತ್ತಿತರರು ಸಹಕರಿಸಿದ್ದಾರೆ. ಗುರುಪುರದ ಸೇವಾ ಬ್ರಿಗೇಡ್ ಆಂಬುಲೆನ್ಸ್ ಮೂಲಕ ಗಾಯಾಳುಗಳನ್ನು ಮಂಗಳೂರಿನ ಆಸ್ಪತ್ರೆಗೆ ಸಾಗಿಸಲಾಗಿದೆ.

ಹನುಮಗಿರಿ ಕ್ಷೇತ್ರದಲ್ಲಿ ಇಂದಿನಿಂದ ಏ. 12ರ ವರೆಗೆ ಬ್ರಹ್ಮಕಲಶೋತ್ಸವ | ಆಕರ್ಷಣೆ ಹೆಚ್ಚಿಸಲಿದೆ ಪ್ರತಿದಿನದ ವೈವಿಧ್ಯಮಯ ಕಾರ್ಯಕ್ರಮಗಳು

ಪುತ್ತೂರು ದೇವಳ ವಠಾರದಿಂದ ವೈಭವದ ಹೊರೆಕಾಣಿಕೆ ಮೆರವಣಿಗೆ

ಪುತ್ತೂರು: ಹನುಮಗಿರಿ ಶ್ರೀ ಕೋದಂಡರಾಮ, ಪಂಚಮುಖಿ ಆಂಜನೇಯ ಕ್ಷೇತ್ರದಲ್ಲಿ ಅಷ್ಟಬಂಧ ಬ್ರಹ್ಮಕಲಶೋತ್ಸವವು ಏ.9ರಿಂದ 12ರವರೆಗೆ ನಡೆಯಲಿದ್ದು, ಬುಧವಾರ ಇತಿಹಾಸ ಪ್ರಸಿದ್ಧ ಪುತ್ತೂರು ಶ್ರೀ ಮಹಾಲಿಂಗೇಶ್ವರ ದೇವಾಲಯದ ವಠಾರದಿಂದ ಬೃಹತ್ ಹಸಿರು ಹೊರೆಕಾಣಿಕೆ ಮೆರವಣಿಗೆ ನಡೆಯಿತು.

ಸಂಜೆ ಶ್ರೀ ಮಹಾಲಿಂಗೇಶ್ವರ ದೇವರ ನಡೆ ಯಲ್ಲಿ ಪ್ರಾರ್ಥನೆ ಸಲ್ಲಿಸಿದ ಬಳಿಕ ದೇವಸ್ಥಾನದ ವಠಾರದಲ್ಲಿ ಶ್ರೀ ಮಹಾಲಿಂಗೇಶ್ವರ ದೇವಾಲಯದ ವ್ಯವಸ್ಥಾಪನ ಸಮಿತಿ ಅಧ್ಯಕ್ಷ ಪಂಜಿಗುಡ್ಡೆ ಈಶ್ವರ ಭಟ್ ತೆಂಗಿನಕಾಯಿ ಒಡೆಯುವ ಮೂಲಕ ಚಾಲನೆ ನೀಡಿದರು.

ಬಳಿಕ ನೂರಾರು ವಾಹನಗಳಲ್ಲಿ ತುಂಬಿದ ಹಸಿರು ಹೊರೆಕಾಣಿಕೆ ಮೆರವಣಿಗೆ ನಡೆಯಿತು. ದರ್ಬೆಯ ತನಕ ಕಾಲ್ನಡಿಗೆಯಲ್ಲಿ ಸಾಗಿ ಅಲ್ಲಿಂದ ವಾಹನಗಳ ಮೂಲಕ ಹನುಮಗಿರಿಗೆ ಸಾಗಿತು. ಶ್ರೀರಾಮ-ಸೀತಾದೇವಿ-ಹನುಮ ವೇಷಧಾರಿಗಳ ವಾಹನ, ಕಲ್ಲಡ್ಕ ಗೊಂಬೆ, ವಾದ್ಯ, ಚೆಂಡೆ ಮೇಳ, ಕುಣಿತ ಭಜಕರ ತಂಡ ವಿಶೇಷವಾಗಿ ಮೆರವಣಿಗೆಗೆ ಮೆರುಗು ನೀಡಿತು.





ಹನುಮಗಿರಿ ಕ್ಷೇತ್ರದ ಆಡಳಿತ ಧರ್ಮದರ್ಶಿ ನನ್ಯ ಅಚ್ಯುತ ಮೂಡೆತ್ತಾಯ, ಬ್ರಹ್ಮಕಲಶೋತ್ಸವ ಸಮಿತಿ ಅಧ್ಯಕ್ಷ ನಳಿನ್ ಕುಮಾರ್ ಕಟೀಲ್, ಹೊರೆಕಾಣಿಕೆ ಸಮಿತಿ ಸಂಚಾಲಕರಾದ ಶಶಿಕುಮಾರ್ ರೈ ಬಾಲ್ಯೊಟ್ಟು, ಜಗದೀಶ್ ಶೆಟ್ಟಿ ನೆಲ್ಲಿಕಟ್ಟೆ, ಜೀವಂಧರ್ ಜೈನ್, ರಾಕೇಶ್ ರೈ ಕೆಡೆಂಜಿ, ಬ್ರಹ್ಮಕಲಶೋತ್ಸವ ಸಮಿತಿ ಉಪಾಧ್ಯಕ್ಷರಾದ ಬೂಡಿಯಾರು ರಾಧಾಕೃಷ್ಣ ರೈ, ಸಾಜ ರಾಧಾಕೃಷ್ಣ ಆಳ್ವ, ಮುರಳೀಕೃಷ್ಣ ಹಸಂತಡ್ಕ, ಪ್ರಧಾನ ಕಾರ್ಯದರ್ಶಿಗಳಾದ ಆರ್.ಸಿ. ನಾರಾಯಣ ರೆಂಜ, ನಹುಷ ಪಿ.ವಿ., ಕೋಟಿ ಶ್ರೀರಾಮತಾರಕ ಜಪಯಜ್ಞ ಸಮಿತಿ ಸಂಚಾಲಕ ಸೀತಾರಾಮ ರೈ ಕೆದಂಬಾಡಿಗುತ್ತು, ಪ್ರಮುಖರಾದ ಮಾಜಿ ಶಾಸಕ ಸಂಜೀವ ಮಠಂದೂರು, ಡಾ. ಸುರೇಶ ಪುತ್ತೂರಾಯ, ಧ.ಗ್ರಾ. ಯೋಜನೆಯ ಜಿಲ್ಲಾ ನಿರ್ದೇಶಕ ಬಾಬು ನಾಯ್ಕ್, ತಾಲೂಕು ಯೋಜನಾಧಿಕಾರಿ ಶಶಿಧರ್, ಅರುಣ್ ಕುಮಾರ್ ಪುತ್ತಿಲ, ಅಜಿತ್ ರೈ ಹೊಸಮನೆ, ಗೋಪಾಲಕೃಷ್ಣ ಹೇರಳೆ, ಶ್ರೀಧರ ಪಟ್ಲ, ಯು. ಲೋಕೇಶ್ ಹೆಗ್ಡೆ, ದಿನೇಶ್ ಮೆದು, ವಿದ್ಯಾ ಗೌರಿ, ಪದ್ಮನಾಭ ಶೆಟ್ರಟಿ, ಸುಂದರ ಪೂಜಾರಿ ಬಡಾವು, ಉಜ್ವಲ್ ಪ್ರಭು, ಸುಂದರ ಪೂಜಾರಿ ಬಡಾವು, ನವೀನ್ ರೈ ಕೈಕಾರ ಮತ್ತಿತರರಿದ್ದರು. ರಾಜೇಶ್ ಬನ್ನೂರು ಕಾರ್ಯಕ್ರಮ ನಿರ್ವಹಿಸಿದರು.

> **ಉಗ್ರಾಣ ಮುಹೂರ್ತ**
> ಹೊರೆಕಾಣಿಕೆ ಮೆರವಣಿಗೆಗಿಂತ ಮೊದಲು ಬೆಳಗ್ಗೆ ಈಶ್ವರಮಂಗಲ ಗ್ರಾಮಸ್ಥರ ಹೊರೆಕಾಣಿಕೆ ಸಮರ್ಪಣೆ ಕ್ಷೇತ್ರಕ್ಕೆ ನಡೆಯಿತು. ಬಳಿಕ ಕ್ಷೇತ್ರದಲ್ಲಿ ಉಗ್ರಾಣ ಮುಹೂರ್ತ ನಡೆಯಿತು. ಭಜನ ಕಾರ್ಯಕ್ರಮಗಳಿಗೆ ಚಾಲನೆ ನೀಡಲಾಯಿತು.

> **ಬ್ರಹ್ಮಕಲಶೋತ್ಸವದಲ್ಲಿ ಇಂದು**
> ಏ.9ರಂದು ಸಂಜೆ 5 ಗಂಟೆಗೆ ತಂತ್ರಿಗಳು ಮತ್ತು ವೈದಿಕರನ್ನು ಕ್ಷೇತ್ರಕ್ಕೆ ಪೂರ್ಣಕುಂಭ ಸ್ವಾಗತದೊಂದಿಗೆ ಬರಮಾಡಿಕೊಳ್ಳಲಾಗುತ್ತದೆ. ಸಂಜೆ 6ರಿಂದ ಸುದರ್ಶನ ಹವನ, ವಾಸ್ತು ಬಲಿ ಮೊದಲಾದ ಕಾರ್ಯಕ್ರಮಗಳು ನಡೆಯಲಿದೆ.

ಕಿರುಸುದ್ದಿ

ಎನ್‌ಸಿಸಿ ಸಬ್ ಲೆಫ್ಟಿನೆಂಟ್ ಆಗಿ ತೇಜಸ್ವಿ ಭಟ್ ಕೆ. ನೇಮಕ



ಪುತ್ತೂರು: ನಗರದ ಸಂತ ಫಿಲೋಮಿನಾ ಸ್ವಾಯತ್ತ ಕಾಲೇಜಿನ ವಾಣಿಜ್ಯ ವಿಭಾಗದ ಸಹಾಯಕ ಪ್ರಾಧ್ಯಾಪಕ ತೇಜಸ್ವಿ ಭಟ್ ಕೆ. ನಾಗ್ಪುರದ ಆಫೀಸರ್ಸ್ ಟ್ರೈನಿಂಗ್ ಅಕಾಡೆಮಿಯಲ್ಲಿ (ಕಾಂಪ್ಟಿ) ನಡೆಯುವ ಪ್ರತಿಷ್ಠಿತ ಪ್ರೀ-ಕಮಿಷನ್ ಕೋರ್ಸ್(ಪಿಆರ್‌ಸಿಎನ್) ಯಶಸ್ವಿಯಾಗಿ ಪೂರ್ಣಗೊಳಿಸಿ ರಾಷ್ಟ್ರೀಯ ಕ್ಯಾಡೆಟ್ ಕಾರ್ಪ್ಸ್(ಎನ್‌ಸಿಸಿ)ನಲ್ಲಿ ಸಬ್ ಲೆಫ್ಟಿನೆಂಟ್ ಆಗಿ ನೇಮಕಗೊಂಡಿದ್ದಾರೆ. ಎನ್‌ಸಿಸಿ(ಡಿಜಿಎನ್‌ಸಿಸಿ)ಯ ಮಹಾನಿರ್ದೇಶಕರು ಅವರಿಗೆ ಎನ್‌ಸಿಸಿ ಸಬ್ ಲೆಫ್ಟಿನೆಂಟ್ ಪದವಿಯನ್ನು ನೀಡಿರುತ್ತಾರೆ.

ರಾಷ್ಟ್ರೀಯ ಮಟ್ಟದ ಸ್ಪರ್ಧೆ: ಎನ್‌ಐಟಿಕೆ ಪ್ರಥಮ ಸ್ಥಾನ

ಮಂಗಳೂರು: ಇನ್‌ಸ್ಟಿಟ್ಯೂಟ್ ಫಾರ್ ಸ್ಟೀಲ್ ಡೆವಲಪ್‌ಮೆಂಟ್ ಆ್ಯಂಡ್ ಗ್ರೋಥ್ ಆಯೋಜಿಸಿದ್ದ ರಾಷ್ಟ್ರೀಯ ಮಟ್ಟದ ಸ್ಟೀಲ್ ಡಿಸೈನ್ ಸ್ಪರ್ಧೆಯಲ್ಲಿ ಸುರತ್ಕಲ್ ಎನ್‌ಐಟಿಕೆ ವಿದ್ಯಾರ್ಥಿಗಳು ಪ್ರಥಮ ಸ್ಥಾನವನ್ನು ತಮ್ಮದಾಗಿಸಿಕೊಂಡಿದ್ದಾರೆ. ಪ್ರತಿ ವರ್ಷ ನಡೆಯುವ ಈ ಸ್ಪರ್ಧೆಯಲ್ಲಿ ಯುವ ಇಂಜಿನಿಯರ್‌ಗಳು ಉಕ್ಕನ್ನು ಬಳಸಿಕೊಂಡು ನವೀನ ಹಾಗೂ ಉಪಯುಕ್ತ ಕಟ್ಟಡ ವಿನ್ಯಾಸಗಳನ್ನು ರೂಪಿಸುವುದನ್ನು ಉತ್ತೇಜಿಸಲಾಗುತ್ತದೆ. ಈ ವರ್ಷದ ಸ್ಪರ್ಧೆಯ ಅಂತಿಮ ಸುತ್ತು ಏ.4 ರಂದು ಆನ್‌ಲೈನ್ ಮೂಲಕ ನಡೆಯಿತು. ಏಪ್ರಿಲ್ 6 ರಂದು ಫಲಿತಾಂಶ ಪ್ರಕಟಗೊಂಡಿದ್ದು ದೇಶದ ವಿವಿಧ ಶಿಕ್ಷಣ ಸಂಸ್ಥೆಗಳ ತಂಡಗಳು ಸ್ಪರ್ಧೆಯಲ್ಲಿ ಭಾಗವಹಿಸಿದ್ದವು. ಎನ್‌ಐಟಿಕೆ ಸುರತ್ಕಲ್‌ನ ಸಿವಿಲ್ ಇಂಜಿನಿಯರಿಂಗ್ ವಿಭಾಗದ ಎಂ.ಟೆಕ್ ಸ್ಟ್ರಕ್ಚರಲ್ ಇಂಜಿನಿಯರಿಂಗ್ ವಿದ್ಯಾರ್ಥಿಗಳಾದ ಯಶ್ವಂತ್ ಕೆ.ವಿ. ಹಾಗೂ ಹರೀಶ್ ಗೌಡ ಡಿ.ಎಸ್. ಅವರು ಸಹಾಯಕ ಪ್ರಾಧ್ಯಾಪಕರಾದ ಡಾ.ಜೆ. ವಿಜಯ ವೆಂಕಟೇಶ್ ಕುಮಾರ್ ಅವರ ಮಾರ್ಗದರ್ಶನದಲ್ಲಿ ಸ್ಪರ್ಧೆಯಲ್ಲಿ ಪಾಲ್ಗೊಂಡು ಪ್ರಥಮ ಸ್ಥಾನ ಪಡೆದಿದ್ದಾರೆ. ದೇಶದಾದ್ಯಂತದಿಂದ ಭಾಗವಹಿಸಿದ್ದ ಸುಮಾರು 50 ತಂಡಗಳಲ್ಲಿ 16 ತಂಡಗಳು ಅಂತಿಮ ಸುತ್ತಿಗೆ ಆಯ್ಕೆಯಾಗಿದ್ದವು.

ಏ. 11, 12: ರಾಜ್ಯ ಮಟ್ಟದ ಪಂಜ ಕುಸ್ತಿ ಸ್ಪರ್ಧೆ

ಮಂಗಳೂರು: ದ.ಕ. ಜಿಲ್ಲಾ ಪಂಜ ಕುಸ್ತಿ ಸಂಘದ ಆಶ್ರಯದಲ್ಲಿ ಏ. 11 ಮತ್ತು 12ರಂದು ನಗರದ ಪುರಭವನದಲ್ಲಿ ರಾಜ್ಯ ಮಟ್ಟದ ಪಂಜ ಕುಸ್ತಿ ಸ್ಪರ್ಧೆ ನಡೆಯಲಿದೆ. ಈಗಾಗಲೇ 180 ಮಂದಿ ಕುಸ್ತಿ ಸ್ಪರ್ಧಿಗಳು ನೋಂದಾಯಿಸಿದ್ದು, 250ಕ್ಕೂ ಅಧಿಕ ಮಂದಿ ಭಾಗವಹಿಸುವ ನಿರೀಕ್ಷೆ ಇದೆ. ಪುರುಷರು, ಮಹಿಳೆಯರು ಮತ್ತು ವಿಕಲಚೇತನರಿಗೆ ವಿವಿಧ ದೇಹದಾರ್ಢ್ಯ ವಿಭಾಗದಲ್ಲಿ ಸ್ಪರ್ಧೆ ನಡೆಯಲಿದೆ ಎಂದು ಸಂಘದ ಕಾರ್ಯದರ್ಶಿ ರೇಮಂಡ್ ಡಿಸೋಜ ಬುಧವಾರ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು. ಈ ಸ್ಪರ್ಧೆಯ ಯಶಸ್ಸಿನ ಆಧಾರದಲ್ಲಿ ಮುಂದೆ ರಾಷ್ಟ್ರ ಮಟ್ಟದ ಸ್ಪರ್ಧೆಯನ್ನು ಮಂಗಳೂರಿನಲ್ಲಿಯೇ ನಡೆಸುವ ಚಿಂತನೆ ಇದೆ. ಸ್ಪರ್ಧೆಯನ್ನು ಏ. 11ರಂದು ಬೆಳಿಗ್ಗೆ 11 ಗಂಟೆಗೆ ಮಂಗಳೂರು ನಗರ ಪೊಲೀಸ್ ಆಯುಕ್ತ ಸುಧೀರ್ ಕುಮಾರ್ ರೆಡ್ಡಿ ಉದ್ಘಾಟಿಸುವರು. ಏ. 12ರಂದು ಸಂಜೆ 5.30ಕ್ಕೆ ಸಮಾರೋಪ ಸಮಾರಂಭ ನಡೆಯಲಿದೆ ಎಂದು ಸಂಘದ ಅಧ್ಯಕ್ಷ ಸುನೀಲ್ ಕ್ಸೇವಿಯರ್ ತಿಳಿಸಿದರು. ಸಂಘದ ಉಪಾಧ್ಯಕ್ಷ ಕೃಷ್ಣ ಶೆಣೈ, ಕೋಶಾಧಿಕಾರಿ ಸುಜಿತ್ ಕುಮಾರ್, ಆನಂದ ಸೋನ್ಸ್ ಉಪಸ್ಥಿತರಿದ್ದರು.

ಮತಚಲಾವಣೆಗೆ ಸಜ್ಜಾಗಿದೆ ಕಾಸರಗೋಡು ಜಿಲ್ಲೆಯ ಐದು ವಿಧಾನಸಭಾ ಕ್ಷೇತ್ರಗಳು

ಇಂದು ಅಭ್ಯರ್ಥಿಗಳ ಭವಿಷ್ಯ ನಿರ್ಧಾರ

ಕಾಸರಗೋಡು ಜಿಲ್ಲೆಯ ಐದು ವಿಧಾನಸಭಾ ಕ್ಷೇತ್ರಗಳಾದ ಮಂಜೇಶ್ವರ, ಕಾಸರಗೋಡು, ಉದುಮ, ಕಾಞಂಗಾಡು, ತೃಕ್ಕರೀಪುರ ವಿಧಾನಸಭಾ ಕ್ಷೇತ್ರಗಳಿಗೆ ಇಂದು ಚುನಾವಣೆ ನಡೆಯಲಿದೆ. ವಿಧಾನಸಭಾ ಚುನಾವಣೆಗೆ ಸಂಬಂಧಿಸಿ ಮತದಾನದ ಸಮಯದಲ್ಲಿ ಕಾನೂನು ಸುವ್ಯವಸ್ಥೆಯನ್ನು ಖಚಿತಪಡಿಸಿಕೊಳ್ಳಲು ಜಿಲ್ಲೆಯಾದ್ಯಂತ 1,992 ಮಂದಿ ಪೊಲೀಸರನ್ನು ನಿಯೋಜಿಸಲಾಗಿದೆ ಎಂದು ಜಿಲ್ಲಾ ಪೊಲೀಸ್ ಇಲಾಖೆ ತಿಳಿಸಿದೆ. ಮತದಾನದ ದಿನಕ್ಕೆ ಮುಂಚಿನ 72 ಗಂಟೆಗಳ ಅವಧಿಯಲ್ಲಿ ಪೊಲೀಸ್ ವ್ಯವಸ್ಥೆಯು ಕಟ್ಟೆಚ್ಚರದಲ್ಲಿದೆ. ಯಾವುದೇ ಅಹಿತಕರ ಘಟನೆಗಳು ನಡೆಯದಂತೆ ಜಾಗರೂಕತೆ ವಹಿಸಲಾಗಿದೆ. ಕೇಂದ್ರ ಸಶಸ್ತ್ರ ಪಡೆಗಳ ತುಕಡಿಯು ಜಿಲ್ಲೆಯಲ್ಲಿದ್ದು, ಈ ವಿಭಾಗದ 780 ಸಿಬ್ಬಂದಿಯನ್ನು ನಿಯೋಜಿಸಲಾಗಿದೆ. ಅಲ್ಲದೆ ಕೇಂದ್ರ ಪಡೆ ಮತ್ತು ಬಿಎಸ್‌ಎಫ್ ತುಕಡಿ ಸೇರಿದಂತೆ 16 ತುಕಡಿಗಳು ಜಿಲ್ಲೆಯಲ್ಲಿ ಕರ್ತವ್ಯದಲ್ಲಿವೆ.

ಅಂಚೆ ಮತಪತ್ರ: 6460 ಮಂದಿ ಮತ ಚಲಾವಣೆ

ಕಾಸರಗೋಡು: ವಿಧಾನಸಭಾ ಚುನಾವಣೆಯ ಹಿನ್ನೆಲೆಯಲ್ಲಿ ಜಿಲ್ಲೆಯಲ್ಲಿ ಅಂಚೆ ಮತದಾನ ಕೇಂದ್ರಗಳ (ಪಿವಿಸಿ) ಮೂಲಕ 1335 ಮಂದಿ, ಮತದಾರರ ಸೌಲಭ್ಯ ಕೇಂದ್ರಗಳ (ವಿಎಫ್‌ಸಿ) ಮೂಲಕ 4233 ಜನರು ಮತ್ತು ಗೊತ್ತುಪಡಿಸಿದ ಮತದಾರರ ಸೌಲಭ್ಯ ಕೇಂದ್ರಗಳ (ಐವಿಎಫ್‌ಸಿ) ಮೂಲಕ 892 ಜನರು ಮತ ಚಲಾಯಿಸಿದ್ದಾರೆ.

ವಿಧಾನಸಭಾ ಚುನಾವಣೆಯ ಭಾಗವಾಗಿ ಕಾಸರಗೋಡು ಜಿಲ್ಲೆಯಲ್ಲಿ ಅಂಚೆ ಮತಗಳನ್ನು ನೋಂದಾಯಿಸುವ ಪ್ರಕ್ರಿಯೆ ಪೂರ್ಣಗೊಂಡಿದೆ. ಜಿಲ್ಲೆಯಲ್ಲಿ ಒಟ್ಟು 1335 ಜನರು ಅಂಚೆ ಮತದಾನ ಕೇಂದ್ರಗಳ (ಪಿವಿಸಿ) ಮೂಲಕ ಮತ ಚಲಾಯಿಸಿದ್ದಾರೆ. ಅಗತ್ಯ ಸೇವೆಗಳ ವಿಭಾಗದಲ್ಲಿ ಮಂಜೇಶ್ವರದಲ್ಲಿ 16, ಕಾಸರಗೋಡಿನಲ್ಲಿ 67, ಉದುಮದಲ್ಲಿ 236, ಕಾಞಂಗಾಡಿನಲ್ಲಿ 357 ಮತ್ತು ತೃಕ್ಕರಿಪುರದಲ್ಲಿ 659 ಜನರು ಮತ ಚಲಾಯಿಸಿದ್ದಾರೆ.

ಚುನಾವಣಾ ಅಧಿಕಾರಿಗಳಿಗಾಗಿ ಸ್ಥಾಪಿಸಲಾದ ಮತದಾರರ ಸೌಲಭ್ಯ ಕೇಂದ್ರಗಳ (ವಿಎಫ್‌ಸಿ) ಮೂಲಕ 4233 ಜನರು ಮತ ಚಲಾಯಿಸಿದ್ದಾರೆ. ಮಂಜೇಶ್ವರದಲ್ಲಿ 935, ಕಾಸರಗೋಡಿನಲ್ಲಿ 864, ಉದುಮದಲ್ಲಿ 943, ಕಾಞಂಗಾಡಿನಲ್ಲಿ 790 ಮತ್ತು ತೃಕ್ಕರೀಪುರದಲ್ಲಿ 701 ಮಂದಿ ಮತ ಚಲಾಯಿಸಿದ್ದಾರೆ. ಅಲ್ಲದೆ ಮತದಾನ ಮಾಡದ ಅಧಿಕಾರಿಗಳಿಗಾಗಿ ಸ್ಥಾಪಿಸಲಾದ ಗೊತ್ತುಪಡಿಸಿದ ಸೌಲಭ್ಯ ಕೇಂದ್ರಗಳ (ಐವಿಎಫ್‌ಸಿ) ಮೂಲಕ 892 ಜನರು ಮತ ಚಲಾಯಿಸಿದ್ದಾರೆ.

ಚುನಾವಣಾ ಕರ್ತವ್ಯದಲ್ಲಿರುವವರು ಯಾವುದೇ ಅಡೆತಡೆಯಿಲ್ಲದೆ ಮತ ಚಲಾಯಿಸಲು ಸಾಧ್ಯವಾಗುವಂತೆ ಜಿಲ್ಲೆಯಾದ್ಯಂತ ಅತ್ಯುತ್ತಮ ವ್ಯವಸ್ಥೆಗಳನ್ನು ಮಾಡಲಾಗಿದೆ. ಅಂಚೆ ಮತಗಳನ್ನು ಸಮಯಕ್ಕೆ ಸರಿಯಾಗಿ ಸಂಗ್ರಹಿಸಿ ಸುರಕ್ಷಿತವಾಗಿ ತಲುಪಿಸುವುದನ್ನು ಖಚಿತ ಪಡಿಸಿಕೊಳ್ಳಲು ವಿಶೇಷ ಅಧಿಕಾರಿಗಳನ್ನು ನಿಯೋಜಿಸಲಾಗಿದೆ. ಬೇಸಿಗೆಯ ಬಿಸಿಲಿನ ನಡುವೆಯೂ ಮತ ಚಲಾಯಿಸಲು ಬರುವವರಿಗೆ ಕೇಂದ್ರಗಳಲ್ಲಿ ಕುಡಿಯುವ ನೀರು ಸೇರಿದಂತೆ ಮೂಲಭೂತ ಸೌಲಭ್ಯಗಳನ್ನು ವ್ಯವಸ್ಥೆಗೊಳಿಸಲಾಗಿದೆ.

ಅಂಚೆ ಮತದತ್ತ ನೋಡಲ್ ಅಧಿಕಾರಿ ಟಿ.ಟಿ.ಸುರೇಂದ್ರನ್ ನೇತೃತ್ವದಲ್ಲಿ ಈ ಸೌಲಭ್ಯಗಳನ್ನು ವ್ಯವಸ್ಥೆ ಮಾಡಲಾಗಿದೆ. ಕಣ್ಣೂರು, ವಯನಾಡು ಮತ್ತು ಕಲ್ಲಿಕೋಟೆ ಜಿಲ್ಲೆಗಳಿಂದ ಅರ್ಜಿಗಳನ್ನು ಸಂಗ್ರಹಿಸಿ ತಲುಪಿಸಲು ವಿಶೇಷ ವಾಹನ ಸೌಲಭ್ಯಗಳನ್ನು ವ್ಯವಸ್ಥೆ ಮಾಡಲಾಗಿತ್ತು ಮತ್ತು ರಾಜ್ಯದ ಇತರ ಜಿಲ್ಲೆಗಳಿಂದ ಅರ್ಜಿಗಳನ್ನು ತಲುಪಿಸಲು ಏಜೆಂಟುಗಳಿಗೆ ವಿಶೇಷ ವಾಹನ ಸೌಲಭ್ಯಗಳನ್ನು ವ್ಯವಸ್ಥೆ ಮಾಡಲಾಗಿತ್ತು. ಅದೇ ರೀತಿ ತಿರುವನಂತಪುರದಿಂದ ಜಿಲ್ಲಾ ಅಧಿಕಾರಿಗಳಿಗೆ ಅಂಚೆ ಮತಪತ್ರಗಳನ್ನು ತಲುಪಿಸಲು ವಿಶೇಷ ವಾಹನ ಸೌಲಭ್ಯಗಳನ್ನು ವ್ಯವಸ್ಥೆ ಮಾಡಲಾಗಿದೆ. ಮತಗಟ್ಟೆ ಅಧಿಕಾರಿಗಳಿಗೆ ಮತಗಳನ್ನು ನೋಂದಾಯಿಸಲು ವಿತರಣಾ ಕೇಂದ್ರಗಳಲ್ಲಿ ವಿಎಫ್‌ಸಿ ಸಿಗಳು ಸಮರ್ಪಕವಾಗಿ ಕಾರ್ಯನಿರ್ವಹಿಸುತ್ತಿದ್ದವು.





ಹೆಚ್ಚುತ್ತಿರುವ ತಾಪಮಾನ: ಮುನ್ನೆಚ್ಚರಿಕೆ

ಕಾಸರಗೋಡು ಜಿಲ್ಲೆಯಲ್ಲಿ ಹೆಚ್ಚುತ್ತಿರುವ ಬಿಸಿಲಿನ ತಾಪಮಾನದ ಹಿನ್ನೆಲೆಯಲ್ಲಿ ಏ.9ರಂದು ಚುನಾವಣಾ ಚಟುವಟಿಕೆಗಳಲ್ಲಿ ತೊಡಗಿರುವವರು ಮತ್ತು ಸಾರ್ವಜನಿಕರಿಗೆ ಕಾಸರಗೋಡು ಜಿಲ್ಲಾಧಿಕಾರಿ ಅರ್ಜುನ್ ಪಾಂಡ್ಯನ್ ವಿಶೇಷ ಎಚ್ಚರಿಕೆ ಸೂಚನೆಗಳನ್ನು ನೀಡಿದ್ದಾರೆ. ಬೇಸಿಗೆಯ ತೀವ್ರ ಶಾಖವು ಬಿಸಿಲಿನ ಹೊಡೆತ ಮತ್ತು ನಿರ್ಜಲೀಕರಣದಂತಹ ಆರೋಗ್ಯ ಸಮಸ್ಯೆಗಳಿಗೆ ಕಾರಣವಾಗಬಹುದು ಎಂಬ ಕಾರಣಕ್ಕೆ ಈ ಮುನ್ನೆಚ್ಚರಿಕೆ ಕ್ರಮಗಳನ್ನು ತೆಗೆದುಕೊಳ್ಳಲಾಗಿದೆ. ಚುನಾವಣಾ ಅಧಿಕಾರಿಗಳು ಮತ್ತು ಮತದಾರರು ನೇರ ಸೂರ್ಯನ ಬೆಳಕಿಗೆ ಮೈಯೊಡ್ಡುವುದನ್ನು ತಪ್ಪಿಸಬೇಕು. ಬೆಳಗ್ಗೆ 11 ರಿಂದ ಅಪರಾಹ್ನ 3ರ ವರೆಗೆ ನೇರ ಸೂರ್ಯನ ಬೆಳಕಿಗೆ ಒಳಗಾಗದಂತೆ ತಪ್ಪಿಸಲು ವಿಶೇಷ ಕಾಳಜಿ ವಹಿಸಬೇಕು. ಮತದಾನಕ್ಕಾಗಿ ಬೆಳಗ್ಗೆ ಅಥವಾ ಸಂಜೆ ಸಮಯವನ್ನು ಸಾಧ್ಯವಾದಷ್ಟು ಆಯ್ಕೆ ಮಾಡುವುದು ಸೂಕ್ತವಾಗಿದೆ. ಹೊರಗೆ ಹೋಗುವಾಗ ಛತ್ರಿ, ಟೋಪಿ ಮತ್ತು ಸನ್ ಗ್ಲಾಸ್ ಬಳಸುವುದರಿಂದ ಸೂರ್ಯನ ಬೆಳಕಿನ ಪ್ರಭಾವವನ್ನು ಕಡಿಮೆ ಮಾಡಲು ಸಹಾಯವಾಗುತ್ತದೆ. ಮತದಾರರು ಹೊರಗೆ ಹೋಗುವಾಗ ತಿಳಿ ಬಣ್ಣದ, ದೇಹವನ್ನು ಅಂಟಿಕೊಳ್ಳುವ ಹತ್ತಿ ಬಟ್ಟೆಗಳನ್ನು ಧರಿಸಲು ಮತ್ತು ಪಾದರಕ್ಷೆಗಳನ್ನು ಧರಿಸಲು ಕಾಸರಗೋಡು ಜಿಲ್ಲಾಡಳಿತವು ಸೂಚಿಸಿದೆ. ದೇಹದ ಉಷ್ಣತೆ ಹೆಚ್ಚಾಗುವುದು, ತಲೆ ತಿರುಗುವಿಕೆ, ತೀವ್ರ ತಲೆನೋವು ಮತ್ತು ಮೂರ್ಛೆ ಹೋಗುವುದು ಮುಂತಾದ ಬಿಸಿಲಿನ ಹೊಡೆತದ ಲಕ್ಷಣಗಳು ಗಮನಕ್ಕೆ ಬಂದರೆ ತಕ್ಷಣ ವೈದ್ಯಕೀಯ ಸಹಾಯ ಪಡೆಯಬೇಕು. ಮಕ್ಕಳು, ವೃದ್ಧರು ಮತ್ತು ಗರ್ಭಿಣಿಯರ ವಿಷಯದಲ್ಲಿ ವಿಶೇಷ ಕಾಳಜಿ ವಹಿಸಬೇಕು. ತುರ್ತು ಸಂದರ್ಭದಲ್ಲಿ ಕಾಸರಗೋಡು ಜಿಲ್ಲಾ ವಿಪತ್ತು ನಿರ್ವಹಣಾ ಪ್ರಾಧಿಕಾರವನ್ನು 1077 ಸಂಖ್ಯೆಗೆ ಸಂಪರ್ಕಿಸಬಹುದು ಎಂದು ಜಿಲ್ಲಾಧಿಕಾರಿ ತಿಳಿಸಿದ್ದಾರೆ.

ಜಿಲ್ಲಾಧಿಕಾರಿಗಳು ಮತಗಟ್ಟೆಗಳಿಗೆ ಭೇಟಿ

ಕಾಸರಗೋಡು: ವಿಧಾನಸಭಾ ಚುನಾವಣೆ ಪ್ರಯುಕ್ತ ಜಿಲ್ಲಾ ಚುನಾವಣಾಧಿಕಾರಿಯಾದ ಜಿಲ್ಲಾಧಿಕಾರಿ ಅರ್ಜುನ್ ಪಾಂಡ್ಯನ್ ಅವರು ಜಿಲ್ಲೆಯಲ್ಲಿ ಸ್ಥಾಪಿಸಲಾದ ಮತಗಟ್ಟೆಗಳಿಗೆ ಬುಧವಾರ ಭೇಟಿ ನೀಡಿದರು. ಉದುಮ ವಿಧಾನಸಭಾ ಕ್ಷೇತ್ರದ ಚಂದ್ರಗಿರಿ ಸರಕಾರಿ ಹೈಯರ್ ಸೆಕೆಂಡರಿ ಶಾಲೆಯಲ್ಲಿ ಸ್ಥಾಪಿಸಲಾದ ಐದು ಮತಗಟ್ಟೆಗಳು, ಬೇಕಲ್ ಇಸ್ಲಾಮಿಯಾ ಎಲ್‌ಪಿ ಶಾಲೆಯಲ್ಲಿ ಸ್ಥಾಪಿಸಲಾದ ನಾಲ್ಕು ಮತಗಟ್ಟೆಗಳು ಮತ್ತು ಪೆರಿಯ ಸರಕಾರಿ ಹೈಯರ್ ಸೆಕೆಂಡರಿ ಶಾಲೆ, ಪುಲ್ಲೂರು ಸರಕಾರಿ ಯುಪಿ ಶಾಲೆಯ ಮತಗಟ್ಟೆಗಳಿಗೆ ಜಿಲ್ಲಾಧಿಕಾರಿ ಭೇಟಿ ನೀಡಿದರು.

> **ಕಾಸರಗೋಡು ಜಿಲ್ಲೆಯ ಎಲ್ಲಾ ಐದು ವಿಧಾನಸಭಾ ಕ್ಷೇತ್ರಗಳ ವ್ಯಾಪ್ತಿಯಲ್ಲಿ ನಕಲಿ ಮತದಾನ ಚಲಾವಣೆಯಾಗದಂತೆ ಗರಿಷ್ಠ ವ್ಯವಸ್ಥೆಗಳನ್ನು ಕೈಗೊಳ್ಳಲಾ ಗಿದೆ. ಒಂದು ವೇಳೆ ನಕಲಿ ಮತದಾನಕ್ಕೆ ಯತ್ನಿಸಿದರೆ ಕಟ್ಟುನಿಟ್ಟಿನ ಕಾನೂನು ಕ್ರಮಗಳನ್ನು ಕೈಗೊಳ್ಳಲಾಗುವುದು.**
> ■ ಅರ್ಜುನ್ ಪಾಂಡ್ಯನ್

ಇದೇವೇಳೆ ಜಿಲ್ಲಾಧಿಕಾರಿಗಳು ವಲಯ ಅಧಿಕಾರಿ, ಪ್ರಿಸೈಡಿಂಗ್ ಆಫೀಸರ್‌ಗಳು, ಮತಗಟ್ಟೆ ಅಧಿಕಾರಿಗಳು ಮತ್ತು ಪೊಲೀಸ್ ಅಧಿಕಾರಿಗಳಿಂದ ಮಾಹಿತಿಯನ್ನು ಪಡೆದುಕೊಂಡರು. ಮುಕ್ತ ಮತ್ತು ಪಾರದರ್ಶಕ ಚುನಾವಣೆಯನ್ನು ಖಚಿತಪಡಿಸಿಕೊಳ್ಳಲು ಜಿಲ್ಲಾಧಿಕಾರಿಗಳು ಸಕಲ ಕ್ರಮಗಳನ್ನು ಕೈಗೊಂಡಿದ್ದಾರೆ. ಎಲ್ಲಾ ಮತಗಟ್ಟೆಗಳಲ್ಲಿ ವೆಬ್ ಕಾಸ್ಟಿಂಗ್‌ಗಳನ್ನು ಸ್ಥಾಪಿಸಲಾಗಿದೆ. ಮತಗಟ್ಟೆಯ ಒಳಗೆ ಮತ್ತು ಹೊರಗೆ ಕ್ಯಾಮರಾಗಳನ್ನು ಅಳವಡಿಸಿರುವ ಮೊಬೈಲ್ ಫೋನ್‌ಗಳನ್ನು ಸಂಗ್ರಹಿಸಲು ವಿಶೇಷ ವ್ಯವಸ್ಥೆಗಳನ್ನು ಸಹ ಮಾಡಲಾಗಿದೆ.



ನಕಲಿ ಮತ ಚಲಾಯಿಸಲು ಮುಸ್ಲಿಂಲೀಗ್ ಷಡ್ಯಂತ್ರ: ಸುರೇಂದ್ರನ್ ಆರೋಪ

ಮಂಜೇಶ್ವರ: ಈ ಬಾರಿಯ ವಿಧಾನಸಭಾ ಚುನಾವಣೆಯಲ್ಲಿ ಸೋಲುವುದು ಖಚಿತವಾಗಿರುವ ಹಿನ್ನೆಲೆಯಲ್ಲಿ ಮಂಜೇಶ್ವರ ವಿಧಾನಸಭಾ ಕ್ಷೇತ್ರದಲ್ಲಿ ಮುಸ್ಲಿಂಲೀಗ್ ಅಭ್ಯರ್ಥಿ ಎ.ಕೆ.ಎಂ.ಅಶ್ರಫ್ ಮತ್ತು ಯುಡಿಎಫ್ ನಾಯಕತ್ವವು ದೊಡ್ಡ ಪ್ರಮಾಣದಲ್ಲಿ ನಕಲಿ ಮತದಾನಕ್ಕೆ ಷಡ್ಯಂತ್ರ ರೂಪಿಸಿದೆ ಎಂದು ಮಂಜೇಶ್ವರ ಮಂಡಲದ ಎನ್‌ಡಿಎ ಅಭ್ಯರ್ಥಿ ಕೆ.ಸುರೇಂದ್ರನ್ ಆರೋಪಿಸಿದ್ದಾರೆ.

ಉಪ್ಪಳ ಬಳಿಯ ಸೋಂಕಾಲಿನಲ್ಲಿರುವ ಎನ್‌ಡಿಎ ಚುನಾವಣಾ ಕಚೇರಿಯಲ್ಲಿ ಬುಧವಾರ ಮಾಧ್ಯಮ ಪ್ರತಿನಿಧಿಗಳೊಂದಿಗೆ ಮಾತನಾಡುತ್ತಾ ಅವರು ಈ ವಿಷಯ ತಿಳಿಸಿದರು.



ಮುಸ್ಲಿಂಲೀಗ್ ಕಾರ್ಯಕರ್ತರು ವಿದೇಶಗಳಲ್ಲಿದ್ದು ಅವರ ಮತಗಳನ್ನು ನಕಲೀಕರಿಸಿ ಚಲಾಯಿಸಲು ಮತದಾರರ ಚೀಟಿಗಳನ್ನು ಸಂಗ್ರಹಿಸಲಾಗುತ್ತಿದೆ ಎಂದು ಅವರು ರಹಸ್ಯ ಮಾಹಿತಿಯನ್ನು ಬಹಿರಂಗಪಡಿಸಿದರು. ಮುಸ್ಲಿಂಲೀಗ್ ಬಿಎಲ್‌ಒಗಳ ಮೂಲಕ ಈ ಚೀಟಿಗಳನ್ನು ಸಂಗ್ರಹಿಸಿದೆ. ಮುಸ್ಲಿಂಲೀಗ್ ಪ್ರಭಾವ ಹೊಂದಿರುವ ಸುಮಾರು 33 ಬೂತ್‌ಗಳಲ್ಲಿ ಮತಗಳನ್ನು ವಂಚಿಸುವ ಪ್ರಯತ್ನ ನಡೆಯುತ್ತಿದೆ ಎಂದು ಅವರು ನಿದರ್ಶನಗಳ ಸಹಿತ ಹೇಳಿದ್ದಾರೆ.

ಪ್ರತೀ ಚುನಾವಣೆಯಲ್ಲೂ ಪ್ರಯೋಗಿಸುವ ಈ ನಕಲಿ ಮತ ತಂತ್ರವನ್ನು ಈ ಬಾರಿಯೂ ನಡೆಸುವ ನಿಟ್ಟಿನಲ್ಲಿ ಯುಡಿಎಫ್ ಸಿದ್ಧತೆ ನಡೆಸುತ್ತಿದೆ. ಇದಕ್ಕಾಗಿ ನಕಲಿ ಗುರುತಿನ ಚೀಟಿಗಳನ್ನು ಸಂಗ್ರಹಿಸಲಾಗುತ್ತಿದೆ. ಮಹಿಳೆಯರು ಬುರ್ಖಾ ಧರಿಸಿರುವುದರಿಂದ ನಕಲಿ ಮತದಾನ ಮಾಡಲು ಅವರನ್ನು ಬಳಸಿಕೊಳ್ಳುವ ಪ್ರಯತ್ನ ನಡೆಯುತ್ತಿದೆ. ಶಾಸಕರು ನೇರವಾಗಿ ಇದರ ನೇತೃತ್ವ ವಹಿಸಿದ್ದಾರೆ ಎಂಬ ಮಾಹಿತಿಯಿದೆ.

ಇದರ ವಿರುದ್ಧ ಬಲವಾದ ಕ್ರಮ ಕೈಗೊಳ್ಳುವಂತೆ ಕೆ.ಸುರೇಂದ್ರನ್ ಚುನಾವಣಾ ಆಯೋಗವನ್ನು ಆಗ್ರಹಿಸಿದ್ದಾರೆ. ಎಲ್ಲಾ ಸೂಕ್ಷ್ಮ ಮತಗಟ್ಟೆಗಳಲ್ಲಿ ಬಲವಾದ ಪೊಲೀಸ್ ಮತ್ತು ಮಿಲಿಟರಿ ನಿಯೋಜನೆ ಏರ್ಪಡಿಸಬೇಕು. ಬಿಜೆಪಿಯ ಮತಗಟ್ಟೆ ಏಜೆಂಟರು ನಕಲಿ ಮತದಾನವನ್ನು ಪ್ರಶ್ನಿಸುತ್ತಾರೆ. ನಕಲಿ ಮತದಾನಕ್ಕೆ ಸಹಾಯ ಮಾಡಿದ ಬಿಎಲ್‌ಒಗಳನ್ನು ಕಾನೂನುಬದ್ಧವಾಗಿ ಎದುರಿಸಲಾಗುವುದು ಎಂದು ಕೆ.ಸುರೇಂದ್ರನ್ ತಿಳಿಸಿದ್ದಾರೆ.


ಮುಸ್ಲಿಂಲೀಗ್‌ನ ಭದ್ರಕೋಟೆಯಾಗಿರುವ ಮಂಜೇಶ್ವರ ಪಂಚಾಯತ್ 4, 8, 12, 13, 16 ಮತ್ತು 18 ಬೂತ್‌ಗಳಲ್ಲಿ, 74, 77, 75, 78, 114, 116, 80, 81, 85, 89, 90, ಮತ್ತು 98 ಬೂತ್‌ಗಳಲ್ಲಿ, ಕುಂಬಳೆ ಪಂಚಾಯತ್‌ನ 151, 182, 179, 183, 189, ಮತ್ತು 185 ಬೂತ್‌ಗಳಲ್ಲಿ ಮತ್ತು ವರ್ಕಾಡಿ ಪಂಚಾಯತ್‌ನ 34, 35, 36, 45, 47, 43, 42 ಹಾಗೂ 38 ಬೂತ್‌ಗಳಲ್ಲಿ ನಕಲಿ ಮತಗಳ ಪ್ರಯತ್ನ ನಡೆಯುತ್ತಿದೆ ಎಂದು ಕೆ.ಸುರೇಂದ್ರನ್ ಆಧಾರಗಳ ಸಹಿತ ಮಾಹಿತಿ ನೀಡಿದರು.

ಗಾಂಜಾ ಸಾಗಾಟ: ನಾಲ್ಕು ಮಂದಿಯ ಸೆರೆ

ಮಡಿಕೇರಿ: ವೀರಾಜಪೇಟೆ ನಗರ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಅಕ್ರಮವಾಗಿ ನಿಷೇಧಿತ ಮಾದಕ ವಸ್ತುಗಳ ಮಾರಾಟ ಮತ್ತು ಸರಬರಾಜು ಮಾಡುತ್ತಿದ್ದ ಮೈಸೂರಿನ ನಾಲ್ವರನ್ನು ಕೊಡಗು ಪೊಲೀಸರು ಬಂಧಿಸಿದ್ದಾರೆ.

ಮೈಸೂರು ಶಾಂತಿ ನಗರದ ಹರ್ಷದ್ ಖಾನ್ (25), ಅಜಿತ್ ಸೇಠ್ ನಗರದ ಬಿ.ಡಿ.ಕಾಲೋನಿಯ ಮುಜಾಮಿಲ್ ಅಹಮ್ಮದ್ (46) ಅಫ್ಜಲ್ ಪಾಷ (28) ಹಾಗೂ ಕಲ್ಯಾಣಗಿರಿಯ ಸಾಕ್ಯೂಬ್ (32) ಎಂಬವರೇ ಬಂಧನಕ್ಕೊಳಗಾದವರಾಗಿದ್ದು, ಆರೋಪಿಗಳಿಂದ 1. 5762 ಗ್ರಾಂ ಗಾಂಜಾ ಹಾಗೂ ಒಂದು ಕಾರನ್ನು ವಶಪಡಿಸಿಕೊಳ್ಳಲಾಗಿದೆ.

ವೀರಾಜಪೇಟೆ ನಗರ ಪೊಲೀಸ್ ಠಾಣಾ ವ್ಯಾಪ್ತಿಯ ಆರ್ಜಿ ಗ್ರಾಮದ ಹೆಗ್ಗಳ ಜಂಕ್ಷನ್ ಸಮೀಪ ನಿಷೇಧಿತ ಮಾದಕ ವಸ್ತು ಗಾಂಜಾ ಮಾರಾಟ/ಸರಬರಾಜು ಕುರಿತು ದೊರೆತ ಖಚಿತ ಮಾಹಿತಿ ಆಧಾರದಲ್ಲಿ ಮಂಗಳವಾರ ದಾಳಿ ನಡೆಸಿದ ಪೊಲೀಸರು ಮಾಲು ಸಹಿತ ಆರೋಪಿಗಳನ್ನು ವಶಕ್ಕೆ ಪಡೆದಿದ್ದು, ವೀರಾಜಪೇಟೆ ನಗರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಿಸಿ ನ್ಯಾಯಾಲಯಕ್ಕೆ ಹಾಜರುಪಡಿಸಿದ್ದಾರೆ.



ವೀರಾಜಪೇಟೆ ಉಪ ವಿಭಾಗದ ಡಿವೈಎಸ್ಪಿ ಮಹೇಶ್ ಕುಮಾರ್, ವೃತ್ತ ನಿರೀಕ್ಷಕ ಅನೂಪ್ ಮಾದಪ್ಪ, ಪಿಎಸ್‌ಐ ಪ್ರಮೋದ್, ಎಎಸ್‌ಐ ಮಂಜುನಾಥ.ಟಿ.ಪಿ, ಸಿಬ್ಬಂದಿಗಳಾದ ಹೇಮಂತ್ ಕುಮಾರ.ಬಿ.ಎಂ, ತೇಜಸ್ ಕುಮಾರ್, ಹರೀಶ್ ಎನ್.ಆರ್, ಸಾಗರ್ ಎನ್.ಎಸ್, ಕುಮಾರ.ಜಿ, ಮುದಿಯಪ್ಪಳ ಭೀಮಪ್ಪ ಕಾರ್ಯಾಚರಣೆಯಲ್ಲಿ ಪಾಲ್ಗೊಂಡಿದ್ದರು.

ಪ್ರಕರಣದ ಆರೋಪಿಗಳನ್ನು ಪತ್ತೆ ಮಾಡುವಲ್ಲಿ ಉತ್ತಮವಾಗಿ ಕಾರ್ಯನಿರ್ವಹಿಸಿದ ಅಧಿಕಾರಿ ಹಾಗೂ ಸಿಬ್ಬಂದಿಗಳನ್ನು ಜಿಲ್ಲಾ ಪೊಲೀಸ್ ಅಧೀಕ್ಷಕಿ ಬಿಂದುಮಣಿ.ಆರ್.ಎನ್. ಅವರು ಶ್ಲಾಘಿಸಿದ್ದಾರೆ.

ರತ್ನವರ್ಮ ಹೆಗ್ಗಡೆ ನಾಟಕ ಕೃತಿ ಸ್ಪರ್ಧೆ: 'ಒಂಜಿ ಗುತ್ತುದ ಕತೆ' ಪ್ರಥಮ

ಮಂಗಳೂರು: ಧರ್ಮಸ್ಥಳದ ಧರ್ಮಾಧಿಕಾರಿ ಡಾ.ಡಿ.ವೀರೇಂದ್ರ ಹೆಗ್ಗಡೆ ಪ್ರಾಯೋಜಕತ್ವದಲ್ಲಿ ತುಳುಕೂಟ ಕುಡ್ಲ ವತಿಯಿಂದ ಅಪ್ರಕಟಿತ ನಾಟಕ ಕೃತಿಗಳಿಗೆ ನೀಡುವ ರತ್ನವರ್ಮ ಹೆಗ್ಗಡೆ ಪ್ರಶಸ್ತಿಗೆ ಪತ್ರಕರ್ತ ರಾಜೇಶ್ ಶೆಟ್ಟಿ ದೋಟ ಅವರ 'ಒಂಜಿ ಗುತ್ತುದ ಕತೆ' ಮೊದಲ ಬಹುಮಾನದೊಂದಿಗೆ ಆಯ್ಕೆಯಾಗಿದೆ ಎಂದು ತುಳುಕೂಟ ಅಧ್ಯಕ್ಷೆ ಹೇಮಾ ದಾಮೋದರ ನಿಸರ್ಗ ಮತ್ತು ಪ್ರಧಾನ ಕಾರ್ಯದರ್ಶಿ ವರ್ಕಾಡಿ ರವಿ ಅಲೆವೂರಾಯ ತಿಳಿಸಿದ್ದಾರೆ. ವಿಲಾಸ್ ಕುಮಾರ್ ನಿಟ್ಟೆ (ಆಯೆ ಆನ್ ಮಗೆ) ದ್ವಿತೀಯ ಹಾಗೂ ರಮ್ಯಾ ಬಿ.ಸಿ.ರೋಡ್ (ಭಕ್ತೆ ಪ್ರಹ್ಲಾದೆ) ತೃತೀಯ ಬಹುಮಾನ ಗಳಿಸಿದ್ದಾರೆ. ಪ್ರಶಸ್ತಿ ಪ್ರಥಮ 10 ಸಾವಿರ ರೂ., ದ್ವಿತೀಯ 8 ಸಾವಿರ ರೂ., ತೃತೀಯ 6 ಸಾವಿರ ರೂ. ಹಾಗೂ ಗೌರವ ಸ್ಮರಣಿಕೆ ಒಳಗೊಂಡಿದೆ.

ಏ.14ರಂದು ಸಂಜೆ 4.30ಕ್ಕೆ ಮಂಗಳಾದೇವಿ ದೇವಸ್ಥಾನದ ಸಭಾಂಗಣದಲ್ಲಿ ನಡೆಯುವ ಬಿಸು ಪರ್ಬದಲ್ಲಿ ಗಣ್ಯರ ಸಮ್ಮುಖದಲ್ಲಿ ಪ್ರಶಸ್ತಿ ಪ್ರದಾನ ಮಾಡಲಾಗುವುದು. ರಾಣಿ ಅಬ್ಬಕ್ಕ ಅಧ್ಯಯನ ಕೇಂದ್ರದ ಸ್ಥಾಪಕ, ನಿರ್ದೇಶಕ ಡಾ.ತುಕಾರಾಂ ಪೂಜಾರಿ ಹಾಗೂ ನಾಟಕಕಾರ, ನಿರೂಪಕ ಕದ್ರಿ ನವನೀತ ಶೆಟ್ಟಿ ತೀರ್ಪುಗಾರರಾಗಿದ್ದರು ಎಂದು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಶಿವಭಾಗ್‌ನ ಅಲ್ಲಲ್ಲಿ ನೀರಿನ ಸಮಸ್ಯೆ | ಎತ್ತರದ ಪ್ರದೇಶಗಳಿಗೆ ನೀರು ಬರುತ್ತಿಲ್ಲ

ತೊಟ್ಟಿ ತುಂಬುವ ಮೊದಲೇ ನೀರು ಪೂರೈಕೆ ಸ್ಥಗಿತ

ಹರೀಶ ಕುಲ್ಕುಂದ

ದಿಗಂತ ವಾಟರ್ ಚೆಕ್

ಮಂಗಳೂರು: ನಗರದ ಮಧ್ಯಭಾಗ, ರಾಷ್ಟ್ರೀಯ ಹೆದ್ದಾರಿ ಜತೆಗೆ ಗ್ರಾಮೀಣ ಪ್ರದೇಶವನ್ನು ಹೋಲುವ ಪರಿಸರವನ್ನು ಒಡಲೊಳಗೆ ಇರಿಸಿಕೊಂಡಿರುವ ಶಿವಭಾಗ್ ವಾರ್ಡ್‌ನ ಅಲ್ಲಲ್ಲಿ ನೀರಿನ ಸಮಸ್ಯೆ ಇದೆ.

ಕಂಕನಾಡಿ ಬಾಲಿಕಾಶ್ರಮ ರಸ್ತೆ, ಮಿಶನ್ ಕಂಪೌಂಡ್, ಕಂಕನಾಡಿ ಬೈಪಾಸ್, ಕುದ್ಕೋರಿಗುಡ್ಡೆ, ಲೋವರ್ ಬೆಂದೂರ್ ಒಂದು, ಎರಡು, ಮೂರನೇ ಕ್ರಾಸ್, ಶಿವಭಾಗ್, ನಂತೂರು, ತಾರೆತೋಟ, ಬಿಕರ್ನಕಟ್ಟೆ, ಕೈಕಂಬ, ಜಯಶ್ರೀ ಗೇಟ್, ನಾಯ್ಗರಮನೆ, ಪದವು ಮೇಗಿನಮನೆವರೆಗೆ ವ್ಯಾಪಿಸಿರುವ ಈ ವಾರ್ಡ್‌ನ ಎತ್ತರದ ಪ್ರದೇಶಗಳಿಗೆ ಮನಪಾ ಪೈಪ್‌ಲೈನ್‌ನಲ್ಲಿ ನೀರು ತಲುಪುತ್ತಿಲ್ಲ.

ಶಿವಭಾಗ್ ವಾರ್ಡ್‌ನ ಕದ್ರಿ ಶಿವಭಾಗ್ ಪ್ರದೇಶಕ್ಕೆ ಬೆಂದೂರು ಟ್ಯಾಂಕ್‌ನಿಂದ ನೀರು ಪೂರೈಕೆ ಆಗುತ್ತಿದೆ. ಬಿಕರ್ನಕಟ್ಟೆ ಪರಿಸರಕ್ಕೆ ಬಾಲಯೇಸು ಮಂದಿರ ಬಳಿಯ ಟ್ಯಾಂಕ್‌ನಿಂದ ನೀರು ಒದಗಿಸಲಾಗುತ್ತಿದೆ. ಮೇಗಿನಮನೆ, ನಾಯ್ಗರಮನೆ ಪ್ರದೇಶಕ್ಕೆ ಎರಡು ದಿನಕ್ಕೊಮ್ಮೆ ನೀರು ಸರಬರಾಜು ಮಾಡಲಾಗುತ್ತಿದೆ. ಹಾಗಾಗಿ ಇಲ್ಲಿ ನೀರಿನ ಸಮಸ್ಯೆ ಉದ್ಭವಿಸಿದೆ. ಎರಡು ದಿನಕ್ಕೊಮ್ಮೆ ನೀರು ಬಂದರೂ, ನೀರಿನ ತೊಟ್ಟಿ ತುಂಬುವ ಮೊದಲೇ ನೀರು ಪೂರೈಕೆ ನಿಲ್ಲಿಸಲಾಗುತ್ತಿದೆ. ಪದಮಿತ್ತ್ ಕಾಲನಿಯಲ್ಲಿ ಎರಡು ದಿನಕ್ಕೊಮ್ಮೆ ನೀರು ಬರುತ್ತಿದ್ದು, ಇಲ್ಲಿನ ಮನೆಗಳಲ್ಲಿ ನೀರು ಸಂಗ್ರಹಕ್ಕೆ ವ್ಯವಸ್ಥೆಯಿಲ್ಲ. ಈ ಕಾರಣದಿಂದ ಇಲ್ಲಿನ ನಿವಾಸಿಗಳು ನೀರಿನ ತೀವ್ರ ತೊಂದರೆ ಅನುಭವಿಸುತ್ತಿದ್ದಾರೆ. ಇಲ್ಲಿನ ತಗ್ಗುಪ್ರದೇಶಗಳಿಗೆ ಸಾಕಷ್ಟು ಪ್ರಮಾಣದಲ್ಲಿ ನೀರು ಪೂರೈಕೆ ಆಗುತ್ತಿದೆ. ಅವಿನಾಶ್ ಮೊಸಾಯಿಕ್, ಕೈಕಂಬ ಶನೀಶ್ವರ ದೇವಸ್ಥಾನ ಪ್ರದೇಶ ಎತ್ತರದಲ್ಲಿರುವ ಕಾರಣ ಇಲ್ಲಿಗೆ ಪಾಲಿಕೆ ನೀರು ತಲುಪುತ್ತಿಲ್ಲ ಎನ್ನುತ್ತಾರೆ ಸ್ಥಳೀಯರು.

ಇಲ್ಲಿಗೆ ಅಪರೂಪಕ್ಕೆ ಎಂಬಂತೆ ನೀರು ಬರುತ್ತಿದೆ. ನೀರಿನ ಸಮಸ್ಯೆ ಬಗ್ಗೆ ಮಂಗಳೂರು ಮಹಾನಗರ ಪಾಲಿಕೆ ಎಂಜಿನಿಯರ್‌ಗಳಿಗೆ ಹೇಳಿದರೂ ನೀರು ಪೂರೈಕೆ ಆಗುತ್ತಿಲ್ಲ. ನೀರಿನ ವಿಚಾರದಲ್ಲಿ ಪಾಲಿಕೆಯಿಂದ ಯಾವುದೇ ಸ್ಪಂದನೆ ಇಲ್ಲ ಎಂಬುದು ಇಲ್ಲಿನವರ ದೂರು.

ಚಿತ್ರ: ರಾಜೇಶ್ ಶೆಟ್ಟಿ ಬಳ್ಳಾಲ್‌ಬಾಗ್



ಪದವು ಮೇಗಿನಮನೆ ಬಳಿ ಶಾಸಕರ ಅನುದಾನದಲ್ಲಿ ತೋಡು ವಿಸ್ತರಣೆ ಕಾಮಗಾರಿ ನಡೆಯುತ್ತಿದೆ



> **ನಮ್ಮಲ್ಲಿ ಪಾಲಿಕೆ ನೀರು ಪ್ರತಿದಿನ ಬರುತ್ತಿಲ್ಲ. ಎರಡು ದಿನಕ್ಕೊಮ್ಮೆ ನೀರು ಬಂದರೂ, ಮೊದಲ ಮಹಡಿಗೆ ನೀರು ಹತ್ತುವುದಿಲ್ಲ. ಎರಡು ವರ್ಷದಿಂದ ನೀರಿನ ಸಮಸ್ಯೆಯಿದ್ದು, ಈ ಬಾರಿ ನೀರಿನ ಭಾರಿ ಕೊರತೆ ಕಾಣಿಸಿಕೊಂಡಿದೆ. ಸ್ಥಳೀಯರು ಕುಡಿಯುವ ನೀರಿಗೂ ಪರದಾಡುವಂತಾಗಿದೆ. ನೀರಿನ ಸಮಸ್ಯೆಯನ್ನು ಶಾಸಕರ ಗಮನಕ್ಕೆ ತಂದಿದ್ದೇವೆ. ನಮಗೆ ಟ್ಯಾಂಕರ್ ಮೂಲಕ ಒಮ್ಮೊಮ್ಮೆ ನೀರು ಬರುತ್ತಿದೆ. ಪ್ರತಿದಿನ ಉತ್ತಮ ಪ್ರೆಶರ್‌ನೊಂದಿಗೆ ನೀರು ಪೂರೈಕೆಗೆ ಪಾಲಿಕೆ ಅಧಿಕಾರಿಗಳು ಕ್ರಮ ಕೈಗೊಳ್ಳಬೇಕು.**
> ■ ದೇವದಾಸ್ ಪದಮಿತ್ತ್, ಶಿವಭಾಗ್ ವಾರ್ಡ್ ನಿವಾಸಿ

ಕುದ್ಕೋರಿಗುಡ್ಡದಲ್ಲಿ ಡ್ರೈನೇಜ್ ಸಮಸ್ಯೆ



ಕಂಕನಾಡಿ ಕುದ್ಕೋರಿಗುಡ್ಡ ಪ್ರದೇಶದಲ್ಲಿ ರಾಜ ಕಾಲುವೆ ಯಲ್ಲಿ ಡ್ರೈನೇಜ್ ನೀರು ಹರಿಯುತ್ತಿದೆ. ಕಳೆದ 30 ವರ್ಷದಿಂದ ಈ ಸಮಸ್ಯೆಯಿದ್ದು, ಮಳೆಗಾಲದಲ್ಲಿ ಪಂಪ್‌ವೆಲ್ ವೃತ್ತದ ಬಳಿ ಕೃತಕ ನೆರೆ ಸೃಷ್ಟಿಯಾದಾಗ ಇಲ್ಲಿನ ಒಳಚರಂಡಿ ನೀರು ನೆರೆ ನೀರಿನೊಂದಿಗೆ ಮಿಶ್ರಣಗೊಂಡು ಸುತ್ತಲಿನ ಪ್ರದೇಶದಲ್ಲಿ ದುರ್ವಾಸನೆ ಬೀರುತ್ತದೆ. ಬೇರೆ ವಾರ್ಡ್‌ಗಳಿಂದಲೂ ಇಲ್ಲಿಗೆ ರಾಜಕಾಲುವೆ ಮೂಲಕ ಡ್ರೈನೇಜ್ ನೀರು ಬರುತ್ತಿದೆ. ಬಿಕರ್ನಕಟ್ಟೆ ತೋಮನಾಯ್ಗರ ಮನೆ ರಸ್ತೆಯಿಂದ ಮಂಜಣ್ಣ ಶೆಟ್ಟಿ ರಸ್ತೆವರೆಗೆ ರಾಜಕಾಲುವೆಯಿದ್ದು, ಹೂಳು ತೆಗೆದಿಲ್ಲ. ಪದವು ಮೇಗಿನಮನೆ ಬಳಿ ತೋಡು ಪೊದೆಗಳಿಂದ ಕೂಡಿಕೊಂಡಿದೆ.



> **ಶಿವಭಾಗ್ ವಾರ್ಡ್‌ನ ಎತ್ತರದ ಪ್ರದೇಶಗಳಲ್ಲಿ ನೀರಿನ ಸಮಸ್ಯೆಯಿದೆ. ಪಾಲಿಕೆ ವತಿಯಿಂದ ಪೂರೈಸುವ ನೀರಿನ ಪ್ರಮಾಣ ಕಡಿಮೆಯಾಗಿದೆ. ಪ್ರೆಶರ್ ಇಲ್ಲದೆ ಕೆಲ ಪ್ರದೇಶಗಳಿಗೆ ನೀರು ತಲುಪುತ್ತಿಲ್ಲ. ಪ್ರತಿದಿನ ಮೂರು ಗಂಟೆಗಳ ಕಾಲ ಉತ್ತಮ ಪ್ರೆಶರ್‌ನೊಂದಿಗೆ ನೀರು ಒದಗಿಸಿದರೆ ನಮ್ಮ ವಾರ್ಡ್‌ನಲ್ಲಿ ನೀರಿನ ಸಮಸ್ಯೆ ಕಾಣಿಸದು. ನೀರಿನ ಕೊರತೆ ಎದುರಿಸುತ್ತಿರುವ ಪದಮಿತ್ತ್‌ನಲ್ಲಿ ಕೊಳವೆಬಾವಿ ನಿರ್ಮಿಸುವಂತೆ ಮಂಗಳೂರು ಮಹಾನಗರ ಪಾಲಿಕೆಗೆ ಪ್ರಸ್ತಾವನೆ ಸಲ್ಲಿಸಲಾಗಿದೆ. ಪಾಲಿಕೆ ವತಿಯಿಂದ ಈ ಬಾರಿ ರಾಜಕಾಲುವೆ ಹೂಳು, ಕಸ ತೆಗೆಯುವ ಕೆಲಸವೂ ಆಗಿಲ್ಲ. ಶಿವಭಾಗ್ ಮುಖ್ಯರಸ್ತೆ ವಿಸ್ತರಣೆ ಕಾರ್ಯ ಆಗಿದ್ದು, ಹೊಸದಾಗಿ ಕಾಂಕ್ರೀಟ್ ಅಳವಡಿಸಬೇಕಿದೆ. ತೋಮನಾಯ್ಗರ ಮನೆ ಬಳಿ ರಾಜ ಕಾಲುವೆಗೆ ತಡೆಗೋಡೆ ನಿರ್ಮಿಸಲಾಗಿದೆ. ಪದವು ಮೇಗಿನಮನೆ ಬಳಿ ಶಾಸಕರ ಅನುದಾನದಲ್ಲಿ ತೋಡು ವಿಸ್ತರಣೆ ಕಾಮಗಾರಿ ನಡೆಯುತ್ತಿದೆ. ಕುದ್ಕೋರಿ ಗುಡ್ಡದಲ್ಲಿ ಹೊಸ ಡ್ರೈನೇಜ್ ಲೈನ್ ಅಳವಡಿಸಿದರೆ ಅಲ್ಲಿನ ಒಳಚರಂಡಿ ಸಮಸ್ಯೆಗೆ ಪರಿಹಾರ ದೊರೆಯಲಿದೆ.**
> ■ ಕಾವ್ಯಾ ನಟರಾಜ್ ಆಳ್ವ, ಶಿವಭಾಗ್ ವಾರ್ಡ್ ನಿಕಟಪೂರ್ವ ಕಾರ್ಪೊರೇಟರ್

ಮೇಗಿನಮನೆಯಲ್ಲಿ ಬೋರ್‌ವೆಲ್ ಇದ್ದು, ಸುತ್ತಲಿನ ಪ್ರದೇಶಕ್ಕೆ ನೀರಿನ ಸಮಸ್ಯೆಯನ್ನು ಕೊಂಚ ಮಟ್ಟಿಗೆ ನೀಗಿಸಿದೆ.

ಮಂಗಳೂರು ಮಹಾನಗರ ಪಾಲಿಕೆಯಲ್ಲಿ ಟ್ಯಾಂಕರ್ ಕೊರತೆ ಇರುವುದರಿಂದ ಇಲ್ಲಿಗೆ ಟ್ಯಾಂಕರ್ ನೀರೂ ಆಗೊಮ್ಮೆ ಈಗೊಮ್ಮೆ ಮಾತ್ರ ಬರುತ್ತಿದೆ. ಓಣಿಗಳಿಗೆ ಟ್ಯಾಂಕರ್ ಆಗಮಿಸುವುದು ಸಾಧ್ಯವಾಗುತ್ತಿಲ್ಲ. ಸಿದ್ಧಿವಿನಾಯಕ ಪ್ರದೇಶಕ್ಕೆ ಟ್ಯಾಂಕರ್ ಬರುತ್ತಿಲ್ಲ. ಫ್ಲ್ಯಾಟ್‌ಗಳಲ್ಲಿ ಬೋರ್‌ವೆಲ್‌ಗಳಿದ್ದು, ಖಾಸಗಿ ಟ್ಯಾಂಕರ್ ಮೂಲಕವೂ ನೀರು ತರಿಸಿಕೊಳ್ಳುತ್ತಿದ್ದಾರೆ.

ಮುಂದಿನ ವಾರ್ಡ್ -35
ಪದವು ಸೆಂಟ್ರಲ್ ಪರಿಸರದ ಸ್ಥಿತಿಗತಿ

ಪ್ರವಾಸಕ್ಕೆ ಬಂದಿದ್ದ ಕೇರಳದ ಬಾಲಕಿ ನಿಗೂಢ ನಾಪತ್ತೆ

• **ಚಿಕ್ಕಮಗಳೂರು:** ಕೇರಳದ ಪಾಲಕ್ಕಾಡ್ ಜಿಲ್ಲೆಯಿಂದ ಕುಟುಂಬದವರೊಂದಿಗೆ ಪ್ರವಾಸಕ್ಕೆ ಬಂದಿದ್ದ 15 ವರ್ಷದ ಶ್ರೀನಂದಾ ಎಂಬ ಬಾಲಕಿ ದತ್ತಪೀಠ ಸಮೀಪದ ಮಾಣಿಕ್ಯಧಾರ ಜಲಪಾತದ ಬಳಿ ನಿಗೂಢವಾಗಿ ನಾಪತ್ತೆಯಾಗಿದ್ದಾಳೆ.

ಪೋಷಕರೂ ಸೇರಿದಂತೆ 60 ಮಂದಿ ಜತೆ ಮಂಗಳವಾರ ಮಾಣಿಕ್ಯಧಾರಕ್ಕೆ ಭೇಟಿ ನೀಡಿದ್ದ ಸಂದರ್ಭದಲ್ಲಿ ಸಂಜೆ 5.30ರ ವೇಳೆಗೆ ಶ್ರೀನಂದಾ ಕಾಣೆಯಾಗಿದ್ದಾಳೆ. ಗಾಬರಿಗೊಂಡ ಪೋಷಕರು, ಜೊತೆಯಲ್ಲಿದ್ದವರೆಲ್ಲರೂ ಸುತ್ತಲ ಪ್ರದೇಶದಲ್ಲಿ ಹುಡುಕಾಡಿದ್ದಾರೆ. ಅಷ್ಟರ ವೇಳೆಗೆ ಕತ್ತಲಾವರಿಸಿದ ಹಿನ್ನೆಲೆಯಲ್ಲಿ 8.30ರ ವೇಳೆಗೆ ಐಡಿ ಪೀಠ ಠಾಣೆಗೆ ಮಾಹಿತಿ ನೀಡಿದ್ದಾರೆ. ತಕ್ಷಣ ಕಾರ್ಯ ಪ್ರವೃತ್ತರಾದ ಪೊಲೀಸರು ಅರಣ್ಯ ಸಿಬ್ಬಂದಿ ತಂಡ ವೊಂದನ್ನು ರಚಿಸಿ ತಡರಾತ್ರಿವರೆಗೆ ಶೋಧ ಕಾರ್ಯ ಆರಂಭಿಸಿದ್ದಾರೆ. ಆದರೆ ಆಕೆಯ ಸುಳಿವು ಸಿಕ್ಕಿಲ್ಲ.

60 ಸಿಬ್ಬಂದಿ ತಂಡ: ಬುಧವಾರ ಜಿಲ್ಲಾ ಪೊಲೀಸ್ ಮುಖ್ಯಾಧಿಕಾರಿ ಜಿತೇಂದ್ರ ಕುಮಾರ್ ದಯಾಮ ಅವರು ಎಸ್‌ಡಿಆರ್‌ಎಫ್ ಸೇರಿದಂತೆ ಪೊಲೀಸ್ ಹಾಗೂ ಅರಣ್ಯ ಇಲಾಖೆ ಸಿಬ್ಬಂದಿಗಳನ್ನೊಳಗೊಂಡ 60 ಜನರ ತಂಡವೊಂದನ್ನು ರಚಿಸಿ ಬೆಳಗ್ಗೆ 5 ಗಂಟೆಯಿಂದಲೇ ಪತ್ತೆ ಕಾರ್ಯ ಆರಂಭಿಸಿದ್ದಾರೆ.

ಕುಟುಂಬದಲ್ಲಿ ಮಡುಗಟ್ಟಿದ ಆತಂಕ: ಘಟನೆಯಿಂದ ಬಾಲಕಿಯ ಇಡೀ ಕುಟುಂಬದಲ್ಲಿ ಆತಂಕ ಮಡುಗಟ್ಟಿದೆ. ಆಕೆ ಸುರಕ್ಷಿತವಾಗಿ ಪತ್ತೆಯಾಗಲಿ ಎಂದು ಕ್ಷಣ ಕ್ಷಣಕ್ಕೂ ಪ್ರಾರ್ಥಿಸುತ್ತಿದ್ದಾರೆ. ಕುಟುಂಬ ಸಮೇತ ಪ್ರವಾಸದ ಸಡಗರವನ್ನು ಆಸ್ವಾದಿಸಬೇಕಿದ್ದ ಅಷ್ಟೂ ಮಂದಿ ಮಂಕಾಗಿದ್ದಾರೆ. ದುಗಡದಿಂದಲೇ ಸಮಯ ದೂಡುತ್ತಿರುವ ಎಲ್ಲರೂ ಶೋಧ ಕಾರ್ಯದಲ್ಲಿ ತೊಡಗಿರುವ ಸಿಬ್ಬಂದಿಗಳಿಂದ ಸಿಹಿಸುದ್ದಿ ಬರಲೆಂದು ಕಾತರದಿಂದ ಕಾಯುತ್ತಿದ್ದಾರೆ.

> ಬಾಲಕಿ ಕುಟುಂಬದವರಿಂದ ದೂರು ಪಡೆದು ನಾಪತ್ತೆ ಪ್ರಕರಣ ದಾಖಲಿಸಲಾಗಿದೆ. ಇದು ಕುಟುಂಬ ಸಮೇತ ಹಮ್ಮಿಕೊಳ್ಳಲಾದ ಪ್ರವಾಸವಾಗಿತ್ತು. ಬಾಲಕಿಯ ಪೋಷಕರೂ, ಚಿಕ್ಕಪ್ಪ, ಚಿಕ್ಕಮ್ಮ ಸೇರಿದಂತೆ ಕುಟುಂಬದ ಹಿರಿಯರೂ ಸಹ ಇದ್ದರು. ಶೋಧ ಕಾರ್ಯವನ್ನು ಮುಂದುವರಿಸಲಾಗಿದೆ.
> ■ ಜಿತೇಂದ್ರ ಕುಮಾರ್ ದಯಾಮ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ

ಸವಾಲಿನ ಶೋಧ ಕಾರ್ಯ

ಸಂಪೂರ್ಣ ಹುಲ್ಲುಗಾವಲು, ಕಲ್ಲು ಬೆಟ್ಟ ಹಾಗೂ ಇಳಿಜಾರು ಪ್ರದೇಶಗಳಿಂದ ಕೂಡಿರುವ ಈ ಪ್ರದೇಶದಲ್ಲಿ ಕಾರ್ಯಾಚರಣೆ ಸವಾಲಿನದ್ದಾಗಿದೆ. ಘಟನೆ ಚಿಕ್ಕಮಗಳೂರು ಗ್ರಾಮಾಂತರ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ನಡೆದಿದ್ದು, ಬಾಲಕಿ ನಾಪತ್ತೆಯಾಗಿರುವ ಬಗ್ಗೆ ಸ್ಥಳೀಯರಿಂದ ಹಲವು ರೀತಿ ಅಭಿಪ್ರಾಯಗಳು ವ್ಯಕ್ತವಾಗುತ್ತಿದೆ.

ಥರ್ಮಲ್ ಕ್ಯಾಮೆರಾ ಬಳಕೆ

ಅರಣ್ಯ ಇಲಾಖೆಯ ಥರ್ಮಲ್ ಕ್ಯಾಮೆರಾಗಳನ್ನೂ ಶೋಧ ಕಾರ್ಯಕ್ಕೆ ಬಳಸಿಕೊಳ್ಳಲಾಗುತ್ತಿದೆ. ಮಾಣಿಕ್ಯಧಾರ ಸೇರಿದಂತೆ ದತ್ತಪೀಠದ ಸುತ್ತಲೂ ಇಂಚಿಂಚು ಜಾಗವನ್ನೂ ಬಿಡದೆ ಡ್ರೋನ್ ಕ್ಯಾಮೆರಾದಲ್ಲಿ ಶೋಧ ನಡೆಸಿದರೂ ಸಂಜೆವರೆಗೆ ಬಾಲಕಿಯ ಸುಳಿವು ಸಿಕ್ಕಿಲ್ಲ.

ಮಹಿಳಾ ಮೀಸಲಾತಿ ಕಾಯ್ದೆ ತಿದ್ದುಪಡಿಗೆ ಕೇಂದ್ರ ಅನುಮತಿ

ಪುಟ ೧➡ ಪ್ರಸ್ತುತ ಜಾರಿಯಲ್ಲಿರುವ ವ್ಯವಸ್ಥೆಯಂತೆ ಮಹಿಳಾ ಮೀಸಲಾತಿ 2027ರ ಜನಗಣತಿಯ ಆಧಾರದ ಮೇಲಿನ ಕ್ಷೇತ್ರ ಪುನರ್‌ವಿಂಗಡಣೆ ಬಳಿಕ ಮಾತ್ರ ಜಾರಿಗೆ ಬರಬೇಕಾಗಿತ್ತು. ಇದರಿಂದ 2034ರೊಳಗೆ ಮಾತ್ರ ಜಾರಿಗೆ ಸಾಧ್ಯತೆ ಇತ್ತು. ಆದರೆ ಹೊಸ ತಿದ್ದುಪಡಿಯ ಮೂಲಕ ಅದನ್ನು 2029ರ ಲೋಕಸಭಾ ಚುನಾವಣೆಯಿಂದಲೇ ಜಾರಿಗೆ ತರಲು ಸರ್ಕಾರ ಮುಂದಾಗಿದೆ.

ಈ ಕ್ರಮಕ್ಕೆ ಸಂಬಂಧಿಸಿ ಎರಡು ಪ್ರತ್ಯೇಕ ಮಸೂದೆಗಳನ್ನು ಸರ್ಕಾರ ತರಲಿದೆ. ಒಂದರಿಂದ ನಾರಿ ಶಕ್ತಿ ವಂದನ್ ಅಧಿನಿಯಮಕ್ಕೆ ಸಂವಿಧಾನ ತಿದ್ದುಪಡಿ, ಮತ್ತೊಂದರಿಂದ ಡಿಲಿಮಿಟೇಶನ್ ಕಾಯ್ದೆಗೆ ತಿದ್ದುಪಡಿ ಮಾಡಲಾಗುತ್ತದೆ. ಸಂಸತ್ತಿನಲ್ಲಿ ಅಂಗೀಕಾರವಾದ ಬಳಿಕ ಹೊಸ ಕಾನೂನುಗಳು 2029ರ ಮಾರ್ಚ್ 31ರಿಂದ ಜಾರಿಗೆ ಬರುವ ಸಾಧ್ಯತೆ ಇದ್ದು, ಮುಂದಿನ ಲೋಕಸಭಾ ಚುನಾವಣೆ ಜೊತೆಗೆ ಒಡಿಶಾ, ಅರುಣಾಚಲ ಪ್ರದೇಶ, ಸಿಕ್ಕಿಂ ಮತ್ತು ಆಂಧ್ರ ಪ್ರದೇಶ ವಿಧಾನಸಭಾ ಚುನಾವಣೆಯಲ್ಲಿಯೂ ಮಹಿಳಾ ಮೀಸಲು ಜಾರಿಯಾಗಲಿದೆ.

ರಸಗೊಬ್ಬರ ಸಬ್ಸಿಡಿ ಶೇ.12 ಹೆಚ್ಚಳ

• **ಹೊಸದಿಲ್ಲಿ:** 2026ರ ಖಾರಿಫ್ ಹಂಗಾಮಿನ ಫಾಸ್ಫೇಟಿಕ್ ಮತ್ತು ಪೊಟ್ಯಾಸಿಕ್ ರಸಗೊಬ್ಬರಗಳ ಸಬ್ಸಿಡಿಯನ್ನು ಶೇ.12ರಷ್ಟು ಹೆಚ್ಚಿಸಿ ಒಟ್ಟು 41,534 ಕೋಟಿ ರೂ.ಗಳಿಗೆ ಕೇಂದ್ರ ಸಚಿವ ಸಂಪುಟ ಬುಧವಾರ ಅನುಮೋದನೆ ನೀಡಿದೆ. ಪ್ರಧಾನಿ ನರೇಂದ್ರ ಮೋದಿ ಅಧ್ಯಕ್ಷತೆಯಲ್ಲಿ ನಡೆದ ಸಭೆಯಲ್ಲಿ, 2026ರ ಏ.1ರಿಂದ ಸೆ.30ರವರೆಗೆ ಜಾರಿಗೆ ಬರುವಂತೆ ಹೊಸ ಸಬ್ಸಿಡಿ ದರಗಳನ್ನು ನಿಗದಿಪಡಿಸಲಾಗಿದೆ. ಸಾರಜನಕಕ್ಕೆ ಪ್ರತಿ ಕೆಜಿಗೆ 47.32 ರೂ., ಫಾಸ್ಫೇಟ್‌ಗೆ 52.76 ರೂ. ಮತ್ತು ಗಂಧಕಕ್ಕೆ (ಸಲ್ಫರ್) 3.16 ರೂ. ನಿಗದಿಪಡಿಸಲಾಗಿದೆ. ಪೊಟ್ಯಾಶ್ ಸಬ್ಸಿಡಿಯನ್ನು ಪ್ರತಿ ಕೆಜಿಗೆ 2.38 ರೂ.ಗಳಲ್ಲಿ ಸ್ಥಿರವಾಗಿಡಲಾಗಿದೆ. ಈ ಹಂಚಿಕೆ, 2025ರ ಖಾರಿಫ್ ಹಂಗಾಮಿಗಿಂತ 4,317 ಕೋಟಿ ರೂ. ಹೆಚ್ಚಾಗಿದೆ. ಪಶ್ಚಿಮ ಏಷ್ಯಾದ ಸಂಘರ್ಷಗಳಿಂದಾಗಿ ಜಾಗತಿಕ ಬೆಲೆಗಳು ಏರುತ್ತಿದ್ದರೂ, ಡೈ-ಅಮೋನಿಯಂ ಫಾಸ್ಫೇಟ್‌ನ ಚಿಲ್ಲರೆ ಬೆಲೆಯನ್ನು 50 ಕೆಜಿ ಚೀಲಕ್ಕೆ 1,350 ರೂ.ಗಳಲ್ಲಿ ಕಾಯ್ದುಕೊಳ್ಳಲಾಗುವುದು ಎಂದು ಕೇಂದ್ರ ಮಾಹಿತಿ ಮತ್ತು ಪ್ರಸಾರ ಸಚಿವ ಅಶ್ವಿನಿ ವೈಷ್ಣವ್ ತಿಳಿಸಿದ್ದಾರೆ.

1.74 ಲಕ್ಷ ಕೋಟಿ ರೂ. ಮೌಲ್ಯದ ಯೋಜನೆಗಳಿಗೆ ಅಸ್ತು

ಕೈಗಾರಿಕಾ ಬೆಳವಣಿಗೆ, ರಾಷ್ಟ್ರೀಯ ಸಾಮರ್ಥ್ಯ ಹೆಚ್ಚಿಸಲು ಇಂಧನ, ಮೂಲಸೌಕರ್ಯ, ನಗರ ಸಾರಿಗೆಗೆ ಸಂಬಂಧಿಸಿದ 1.74 ಲಕ್ಷ ಕೋಟಿ ರೂಪಾಯಿ ಮೊತ್ತದ ವಿವಿಧ ಯೋಜನೆಗಳಿಗೆ ಕೇಂದ್ರ ಸಂಪುಟ ಅನುಮೋದನೆ ನೀಡಿದೆ.

ಇಂಧನ ಮತ್ತು ಸಂಸ್ಕರಣಾ ಮೂಲಸೌಕರ್ಯ: ರಾಜಸ್ಥಾನದ ಪಚಪದರದಲ್ಲಿ 79,459 ಕೋಟಿ ರೂ. ವೆಚ್ಚದ ಹಿಂದೂಸ್ತಾನ್ ಪೆಟ್ರೋಲಿಯಂ ಕಾರ್ಪೊರೇಷನ್ ಲಿಮಿಟೆಡ್ (ಹೆಚ್‌ಪಿಸಿಎಲ್) ಸಂಸ್ಕರಣಾಗಾರ ಯೋಜನೆಗೆ ಹಸಿರು ನಿಶಾನೆ ತೋರಿದೆ. ಈ ಘಟಕ, ಭಾರತದ ಸಂಸ್ಕರಣಾ ಸಾಮರ್ಥ್ಯಕ್ಕೆ ವಾರ್ಷಿಕ 9 ಮಿಲಿಯನ್ ಮೆಟ್ರಿಕ್ ಟನ್ ಸೇರ್ಪಡೆಗೊಳಿಸಲಿದೆ. ಇದರ ನಿರ್ಮಾಣ ಕಾರ್ಯ ಪೂರ್ಣಗೊಂಡಿದ್ದು, ಜುಲೈನಲ್ಲಿ ವಾಣಿಜ್ಯ ಕಾರ್ಯಾಚರಣೆ ಪ್ರಾರಂಭವಾಗಲಿದೆ. ಈ ಯೋಜನೆಗೆ, ಹೆಚ್‌ಪಿಸಿಎಲ್‌ನಿಂದ 19,600 ಕೋಟಿ ರೂ. ಇಕ್ವಿಟಿ ಕೊಡುಗೆಯನ್ನು ಸರ್ಕಾರ ಅನುಮೋದಿಸಿದೆ.

ಕಿಡಿ ನುಡಿ

• ವಾಸುದೇವರಾವ್ ಕಕ್ಕೆನೇಜಿ

◈ ನಾನು ಸಾಲದ ರಾಮಯ್ಯ ಅಲ್ಲ, ಅನ್ನದ ರಾಮಯ್ಯ – ಸಿದ್ದರಾಮಯ್ಯ

– ಇದು ನಿಜ ಅನ್ನಬೇಕು, ಹಿಂದೂ ವಿರೋಧಿಗಳು ಏನೇ ಮಾಡಿದರೂ ಏನೇ ಮಾತನಾಡಿದರೂ ಏನೂ ಮಾಡದ ಏನೂ ಅನ್ನದ ರಾಮಯ್ಯ!

ದಿನ ಭವಿಷ್ಯ

ಮೇಷ ಗುಣಾತ್ಮಕ ಸಂಕೇತಗಳಿಂದಲೇ ಇಂದಿನ ದಿನ ಆರಂಭ. ನಿಮಗೆ ಪೂರಕ ಪರಿಸ್ಥಿತಿ. ಆರ್ಥಿಕ ಚಿಂತೆ ನಿವಾರಣೆ. ಆತ್ಮೀಯರ ಸಂಗಡ ಖುಷಿ ಪಡುವಿರಿ.

ವೃಷಭ ಎಲ್ಲರೂ ನಿಮ್ಮಂತೆ ಯೋಚಿಸಬೇಕು ಎಂದು ಬಯಸುವುದು ತಪ್ಪು. ಇತರರ ಭಾವನೆ ಗೌರವಿಸಿ. ಮನೆಯಲ್ಲಿ ಹಿರಿಯರಿಗೆ ಅನಾರೋಗ್ಯ ಸಂಭವ.

ಮಿಥುನ ಕೌಟುಂಬಿಕ ವಿಷಯ ಮುಖ್ಯವಾಗುತ್ತದೆ. ಕಳೆದು ಹೋದುದಕ್ಕೆ ಕೊರಗುತ್ತಾ ಕೂರದಿರಿ. ನಗುನಗುತ್ತಾ ನಿಮ್ಮ ಹೊಣೆ ನಿಭಾಯಿಸಿ. ಆರೋಗ್ಯ ಕಾಯ್ದುಕೊಳ್ಳಿ.

ಕಟಕ ಗತದಿನಗಳ ಬಗ್ಗೆ ಅತಿಯಾಗಿ ಚಿಂತಿಸದಿರಿ. ಈಗ ಮಾಡಬೇಕಾದ ಕೆಲಸಕ್ಕೆ ಆದ್ಯತೆ ಕೊಡಿ. ಕೆಲ ವಿಷಯಗಳಿಗೆ ಅತಿರೇಕದ ಪ್ರತಿಕ್ರಿಯೆ ತೋರುತ್ತೀರಿ.

ಸಿಂಹ ವಿರಾಮದ ಮಧ್ಯೆಯೂ ಕೆಲಸದ ಒತ್ತಡ ಬಾಧಿಸುವುದು. ಆಪ್ತರ ಸಂಗಡ ವಾಗ್ವಾದಕ್ಕೆ ಇಳಿಯಬೇಡಿ. ನೀವು ಮೌನವಾಗಿ ಉಳಿಯಿರಿ.

ಕನ್ಯಾ ವ್ಯವಹಾರದ ಬಗ್ಗೆ ಹೆಚ್ಚು ಗಮನ ಕೊಡಿ. ನಿರ್ಲಕ್ಷ್ಯ ತೋರಿದರೆ ನಷ್ಟ ಉಂಟಾದೀತು. ಹೆತ್ತವರು ಮಕ್ಕಳ ಜತೆ ಮೆದುವಾಗಿ ವರ್ತಿಸಬೇಕು.

ತುಲಾ ನಿಮ್ಮ ಜತೆಗೆ ಅತಿಯಾದ ಸಲುಗೆ ಸಾಧಿಸುವವರ ಕುರಿತು ಎಚ್ಚರವಿರಲಿ. ಮನೆಯಲ್ಲಿ ಸೌಹಾರ್ದ ವಾತಾವರಣ, ನೆಮ್ಮದಿ.

ವೃಶ್ಚಿಕ ಕೆಲವರನ್ನು ಕುರುಡಾಗಿ ನಂಬದಿರಿ. ಅವರಿಂದಲೇ ಮೋಸ ಹೋಗುವಿರಿ. ಕೆಲಸದ ಒತ್ತಡದಿಂದಾಗಿ ವಿಶ್ರಾಂತಿಗೆ ಆಸ್ಪದ ಸಿಗಲಾರದು.

ಧನು ಕೌಟುಂಬಿಕ ಪರಿಸ್ಥಿತಿ ನೆಮ್ಮದಿ ತರಲಿದೆ. ಆತ್ಮೀಯರ ಒಡನಾಟದಲ್ಲಿ ಸಂತೋಷ ಕಾಣುವಿರಿ. ಹಣ ಗಳಿಕೆಗೆ ಮೋಟಕು ದಾರಿ ಹಿಡಿಯದಿರಿ.

ಮಕರ ಜಡತ್ವ ಬಿಟ್ಟು ಕ್ರಿಯಾಶೀಲರಾಗಿ. ನಿಮ್ಮ ಹವ್ಯಾಸ ಬಿಡಬೇಡಿ. ದೈಹಿಕ ಶ್ರಮದಿಂದ ಬಳಲುವಿರಿ. ಆಪ್ತರ ಜತೆ ಮಾತಿನ ಚಕಮಕಿ.

ಕುಂಭ ವ್ಯವಹಾರದಲ್ಲಿ ಮಹತ್ವದ ಬದಲಾವಣೆ ತೋರುವ ಸಾಧ್ಯತೆಯಿದೆ. ಮಾನಸಿಕ ಒತ್ತಡ ನಿವಾರಣೆಗೆ ಧ್ಯಾನ ಸಹಕಾರಿಯಾದೀತು.

ಮೀನ ಯೋಜನೆ ಹಾಕಿ ಕೆಲಸ ನಿರ್ವಹಿಸಿ. ಇಲ್ಲವಾದರೆ ಗೊಂದಲ ಎದುರಿಸುವಿರಿ. ಆರೋಗ್ಯ ಸ್ಥಿರ. ಹಣದ ಚಿಂತೆಯೊಂದು ಪರಿಹಾರ.

ರಾಹುಕಾಲ: 1.30–3.00
ಗುಳಿಕಕಾಲ: 9.00–10.30

ಅದೃಷ್ಟ ಸಂಖ್ಯೆ:2,8,5,3

ದಾವಣಗೆರೆ ದಕ್ಷಿಣ, ಬಾಗಲಕೋಟೆ ಕ್ಷೇತ್ರಗಳ ಮತದಾನ ಇಂದು

ಮುಕ್ತ ಮತದಾನಕ್ಕೆ ಸನ್ನದ್ಧ

• **ಬೆಂಗಳೂರು:** ದಾವಣಗೆರೆ ದಕ್ಷಿಣ ಮತ್ತು ಬಾಗಲಕೋಟೆ ವಿಧಾನಸಭೆ ಕ್ಷೇತ್ರಗಳ ಉಪಚುನಾವಣೆಗೆ ಗುರುವಾರ ಮತದಾನ ನಡೆಯಲಿದ್ದು, ಮುಕ್ತ ಮತ್ತು ನ್ಯಾಯಸಮ್ಮತವಾಗಿ ಮತದಾನಕ್ಕೆ ಚುನಾವಣಾ ಆಯೋಗ ಸರ್ವ ಸನ್ನದ್ಧವಾಗಿದೆ.

ಬುಧವಾರ ಮಸ್ಟರಿಂಗ್ ಮುಗಿಸಿದ ಸಿಬ್ಬಂದಿ, ಅಧಿಕಾರಿಗಳು ಮತ ಯಂತ್ರಗಳ ಜೊತೆಗೆ ಸಂಜೆಯೇ ಮತದಾನ ಕೇಂದ್ರಗಳಿಗೆ ತಲುಪಿದ್ದಾರೆ. ಬೆಳಗ್ಗೆ 7 ರಿಂದ ಸಂಜೆ 6 ಗಂಟೆಯವರೆಗೆ ಮತದಾನ ನಡೆಯಲಿದ್ದು, ಮತದಾರರು ಅಗತ್ಯ ದಾಖಲೆಗಳೊಂದಿಗೆ ಮತಗಟ್ಟೆಗೆ ಬಂದು ಮತದಾನ ಮಾಡಬೇಕಿದೆ.

ದಾವಣಗೆರೆ ದಕ್ಷಿಣ ಕ್ಷೇತ್ರದಲ್ಲಿ 25 ಮತ್ತು ಬಾಗಲಕೋಟೆ ಕ್ಷೇತ್ರದಲ್ಲಿ 9 ಅಭ್ಯರ್ಥಿಗಳು ಸೇರಿ ಒಟ್ಟು 34 ಅಭ್ಯರ್ಥಿಗಳು ಚುನಾವಣಾ ಕಣದಲ್ಲಿದ್ದಾರೆ. ಬಾಗಲಕೋಟೆಯಲ್ಲಿ 322 ಮತಗಟ್ಟೆ ಮತ್ತು ದಾವಣಗೆರೆಯಲ್ಲಿ 284 ಮತಗಟ್ಟೆಗಳನ್ನು ಸ್ಥಾಪಿಸಲಾಗಿದೆ. ಮತಗಟ್ಟೆಗಳಲ್ಲಿ ಕುಡಿಯುವ ನೀರು, ರ್‍ಯಾಂಪ್ ಸಹಿತ ಎಲ್ಲಾ ವ್ಯವಸ್ಥೆಗಳನ್ನು ಮಾಡಲಾಗಿದೆ.

ಚುನಾವಣಾ ಅಕ್ರಮ ತಡೆಗಟ್ಟಲು ಮತ್ತು ಕಾನೂನು ಸುವ್ಯವಸ್ಥೆ ಕಾಪಾಡಲು ಸಿಎಪಿಎಫ್ ತುಕಡಿ, ಎಎಸ್‌ಐ, ಪ್ರೊಬೇಷನರಿ ಪಿಎಸ್‌ಐ, ಎಚ್‌ಸಿ, ಪಿಸಿ ಮತ್ತು ಹೋಂ ಗಾರ್ಡ್ ಸಿಬ್ಬಂದಿಯನ್ನು ಬಳಸಿಕೊಳ್ಳಲಾಗುತ್ತಿದೆ. ಸೂಕ್ಷ್ಮ ಮತಗಟ್ಟೆಗಳಲ್ಲಿ ಹೆಚ್ಚುವರಿ ಕೇಂದ್ರ ಸಶಸ್ತ್ರ ಪಡೆಗಳನ್ನು ನಿಯೋಜಿಸಲಾಗಿದೆ. ಒಟ್ಟು 16 ಕಂಪನಿ ಕೇಂದ್ರ ಪಡೆಗಳು ಆಗಮಿಸಿದೆ. ಎರಡು ಕ್ಷೇತ್ರಗಳಲ್ಲಿ ಸ್ಥಳೀಯ ಪೊಲೀಸರ ಜೊತೆಗೆ ತಲಾ 8 ಕೇಂದ್ರ ಪಡೆಗಳನ್ನು ನೇಮಿಸಲಾಗಿದೆ.



ಬಿಜೆಪಿ–ಕಾಂಗ್ರೆಸ್ ನಡುವೆ ನೇರ ಸ್ಪರ್ಧೆ

ಉಪಚುನಾವಣೆಯಲ್ಲಿ ಆಡಳಿತರೂಢ ಕಾಂಗ್ರೆಸ್ ಮತ್ತು ಬಿಜೆಪಿ ನಡುವೆ ನೇರ ಸ್ಪರ್ಧೆಯಿದೆ. ಎರಡು ಕ್ಷೇತ್ರಗಳಲ್ಲೂ ಕಾಂಗ್ರೆಸ್‌ನಿಂದ ಕುಟುಂಬದ ಸದಸ್ಯರು ಸ್ಪರ್ಧೆ ಮಾಡಿದ್ದು, ದಾವಣಗೆರೆಯಲ್ಲಿ ಶಾಮನೂರು ಶಿವಶಂಕರಪ್ಪ ಅವರ ಮೊಮ್ಮಗ ಸಮರ್ಥ ವಿರುದ್ಧ ಬಿಜೆಪಿಯಿಂದ ಶ್ರೀನಿವಾಸ ಟಿ. ದಾಸಕರಿಯಪ್ಪ ಸ್ಪರ್ಧಿಸಿದ್ದಾರೆ. ಬಾಗಲಕೋಟೆಯಲ್ಲಿ ಎಚ್.ವೈ. ಮೇಟಿ ಅವರ ಹಿರಿಯ ಮಗ ಉಮೇಶ ಮೇಟಿ ವಿರುದ್ಧ ವೀರಣ್ಣ ಚರಂತಿಮಠ ಕಣದಲ್ಲಿದ್ದಾರೆ. ಮತದಾರರ ಆಯ್ಕೆ ಯಾರೆಂದು ಮೇ 4ಕ್ಕೆ ತಿಳಿಯಲಿದೆ.

4,90,869 ಅರ್ಹ ಮತದಾರರು: ಎರಡೂ ಕ್ಷೇತ್ರಗಳಲ್ಲಿ 4,90,869 ಮತದಾರರು ತಮ್ಮ ಹಕ್ಕು ಚಲಾಯಿಸಲು ಅರ್ಹರಾಗಿದ್ದಾರೆ. ಬಾಗಲಕೋಟೆ ಕ್ಷೇತ್ರದಲ್ಲಿ 1,26,999 ಪುರುಷ ಮತ್ತು 1,32,775 ಮಹಿಳಾ ಮತದಾರರು ಹಾಗೂ 23 ಇತರೆ ಸೇರಿ ಒಟ್ಟು 2,59,797 ಮತದಾರರಿದ್ದಾರೆ. ಅಲ್ಲದೇ 385 ಸೇವಾ ಮತದಾರರು, 90 ಪಿಡಬ್ಲ್ಯೂಡಿ (ವಿಶಿಷ್ಟಚೇತನ) ಮತದಾರರಿದ್ದಾರೆ. ದಾವಣಗೆರೆ ಕ್ಷೇತ್ರದಲ್ಲಿ 1,13,399 ಪುರುಷರು ಮತ್ತು 1,17,690 ಮಹಿಳೆಯರು ಹಾಗೂ 43 ಇತರೆ ಸೇರಿದಂತೆ ಒಟ್ಟು 2,31,072 ಮತದಾರರಿದ್ದಾರೆ. ಈಗಾಗಲೇ 229 ಮಂದಿ ಹಿರಿಯ ನಾಗರಿಕರು ಮತ್ತು ವಿಶಿಷ್ಟಚೇತನರು ಈಗಾಗಲೇ ಮನೆಯಿಂದಲೇ ಮತದಾನ ಪ್ರಕ್ರಿಯೆ ಪೂರ್ಣಗೊಳಿಸಿದ್ದಾರೆ.

ಸಾಂವಿಧಾನಿಕ ನೈತಿಕತೆ ಅಸ್ಪಷ್ಟ

• **ಹೊಸದಿಲ್ಲಿ:** ಧರ್ಮದ ಅಗತ್ಯ ಆಚರಣೆಗಳು, ನಂಬಿಕೆಗಳು ಹಾಗೂ ಸಂಪ್ರದಾಯಗಳನ್ನು ನಿರ್ಧರಿಸಲು ಸಾಂವಿಧಾನಿಕ ನೈತಿಕತೆಯನ್ನು ನ್ಯಾಯಾಂಗ ಪರಿಶೀಲನೆಯ ಮಾನದಂಡವನ್ನಾಗಿ ಬಳಸಲಾಗುವುದಿಲ್ಲ ಎಂದು ಕೇಂದ್ರ ಸರ್ಕಾರ ಬುಧವಾರ ಸುಪ್ರೀಂ ಕೋರ್ಟ್‌ಗೆ ಸ್ಪಷ್ಟಪಡಿಸಿದೆ.

ಶಬರಿಮಲೆ ಸೇರಿ ಧಾರ್ಮಿಕ ಸ್ಥಳಗಳಲ್ಲಿ ಮಹಿಳೆಯರ ವಿರುದ್ಧದ ತಾರತಮ್ಯ ಕುರಿತ ಅರ್ಜಿಗಳ ವಿಚಾರಣೆ ವೇಳೆ ಕೇಂದ್ರ ಈ ಮಹತ್ವದ ವಾದ ಮಂಡಿಸಿದೆ. ಮುಖ್ಯ ನ್ಯಾ. ಸೂರ್ಯಕಾಂತ್ ನೇತೃತ್ವದ ಒಂಬತ್ತು ನ್ಯಾಯಮೂರ್ತಿಗಳ ಸಾಂವಿಧಾನಿಕ ಪೀಠದ ಮುಂದೆ ವಾದಿಸಿದ ಸಾಲಿಸಿಟರ್ ಜನರಲ್ ತುಷಾರ್ ಮೆಹ್ತಾ, 'ಸಾಂವಿಧಾನಿಕ ನೈತಿಕತೆ ಎಂಬುದು ಅಸ್ಪಷ್ಟ, ವ್ಯಕ್ತಿನಿಷ್ಠ ಹಾಗೂ ರಾಜಕೀಯ ವಿಜ್ಞಾನದ ಪರಿಕಲ್ಪನೆಯಾಗಿದ್ದು, ಧಾರ್ಮಿಕ ನಂಬಿಕೆಗಳ ಸತ್ಯಾಸತ್ಯತೆ ಪರೀಕ್ಷಿಸಲು ಇದು ಆಧಾರವಾಗಲು ಸಾಧ್ಯವಿಲ್ಲ' ಎಂದು ಹೇಳಿದರು.

ಅವರ ಪ್ರಕಾರ, 2018ರ ಶಬರಿಮಲೆ ತೀರ್ಪಿನಲ್ಲಿ ಈ ಪರಿಕಲ್ಪನೆಯನ್ನು ತಪ್ಪಾಗಿ ಅನ್ವಯಿಸಲಾಗಿದ್ದು, ಅದೇ ಮಹಿಳಾ ಪ್ರವೇಶ ನಿಷೇಧ ತೆರವಿಗೆ ಆಧಾರವಾಯಿತು. ಧಾರ್ಮಿಕ ಆಚರಣೆಗಳನ್ನು ಪರೀಕ್ಷಿಸಬೇಕಾದರೆ ಅದು ಸಂವಿಧಾನದ ಸ್ಪಷ್ಟ ನಿಯಮಾವಳಿಗಳ ಆಧಾರದಲ್ಲೇ ಆಗಬೇಕು, ಸಾಂವಿಧಾನಿಕ ನೈತಿಕತೆ ಎಂಬ ಅಸ್ಪಷ್ಟ ಕಲ್ಪನೆಯ ಆಧಾರದಲ್ಲಿ ಅಲ್ಲ ಎಂದು ಅವರು ಒತ್ತಿಹೇಳಿದರು.

ಧಾರ್ಮಿಕ ಆಚರಣೆಗಳು ಸಾರ್ವಜನಿಕ ಸುವ್ಯವಸ್ಥೆ, ನೈತಿಕತೆ ಮತ್ತು ಆರೋಗ್ಯಕ್ಕೆ ಸಂಬಂಧಿಸಿದಾಗ ಮಾತ್ರ ನ್ಯಾಯಾಲಯ ಹಸ್ತಕ್ಷೇಪಿಸಬಹುದು ಎಂದು ಅವರು ಹೇಳಿದರು. ಆದರೆ 2018ರ ಶಬರಿಮಲೆ ತೀರ್ಪಿನಲ್ಲಿ ಸಾಮಾಜಿಕ ನೈತಿಕತೆಯ ಬದಲು ಸಾಂವಿಧಾನಿಕ ನೈತಿಕತೆಯನ್ನು ಮಾನದಂಡವನ್ನಾಗಿ ಬಳಸಲಾಗಿದೆ ಎಂದು ಟೀಕಿಸಿದರು.

ವಿಚಾರಣೆ ವೇಳೆ ನ್ಯಾ. ಬಿ.ವಿ. ನಾಗರತ್ನ, 'ಸಾರ್ವಜನಿಕ ನೈತಿಕತೆ ಅನುಯಾಯಿಗಳ ದೃಷ್ಟಿಯಿಂದ ನಿರ್ಧಾರವಾಗುತ್ತದೆ, ಸಾಂವಿಧಾನಿಕ ನೈತಿಕತೆ ಅತ್ಯಂತ ವ್ಯಕ್ತಿನಿಷ್ಠ' ಎಂದು ಅಭಿಪ್ರಾಯಪಟ್ಟರು. ಇದೇ ವೇಳೆ, 'ಅಯ್ಯಪ್ಪ ಭಕ್ತರಲ್ಲದವರು ಶಬರಿಮಲೆ ಪದ್ಧತಿಯನ್ನು ಹೇಗೆ ಪ್ರಶ್ನಿಸಬಹುದು?' ಎಂದು ಸುಪ್ರೀಂ ಕೋರ್ಟ್ ಪ್ರಶ್ನಿಸಿತು.

ಧಾರ್ಮಿಕ ಸ್ವಾತಂತ್ರ್ಯದ ವ್ಯಾಪ್ತಿಯನ್ನು ನಿರ್ಧರಿಸಲು ಸುಪ್ರೀಂ ಕೋರ್ಟ್ ರೂಪಿಸಿರುವ ಏಳು ಪ್ರಶ್ನೆಗಳಲ್ಲಿ ಪ್ರಮುಖವಾದದ್ದು ಅನುಚ್ಛೇದ 25 ಮತ್ತು 26ರಲ್ಲಿನ ನೈತಿಕತೆ ಪದವು ಸಾಂವಿಧಾನಿಕ ನೈತಿಕತೆಯನ್ನೂ ಒಳಗೊಂಡಿದೆಯೇ? ಎಂಬುದಾಗಿದೆ. ಇದಕ್ಕೆ ಪ್ರತಿಕ್ರಿಯಿಸಿದ ಕೇಂದ್ರ, ಸಾಂವಿಧಾನಿಕ ನೈತಿಕತೆ ಸ್ವತಂತ್ರ ಪರೀಕ್ಷಾ ಮಾನದಂಡವಲ್ಲ, ಅದು ಭಾವನಾತ್ಮಕ ಕಲ್ಪನೆ ಮಾತ್ರ ಎಂದು ವಾದಿಸಿತು. ಈ ವೇಳೆ ಮೆಹ್ತಾ, ವ್ಯಭಿಚಾರ ಹಾಗೂ ಸಲಿಂಗಕಾಮಿ ಸಂಬಂಧಗಳ ಅಪರಾಧ ಮುಕ್ತಗೊಳಿಸಿದ ಜೋಸೆಫ್ ಶೈನ್ ಮತ್ತು ನವತೇಜ್ ಸಿಂಗ್ ಜೋಹರ್ ತೀರ್ಪುಗಳನ್ನು ಉಲ್ಲೇಖಿಸಿ, ವಿದೇಶಿ ಕಾನೂನು ತಜ್ಞರ ಅಭಿಪ್ರಾಯಗಳು ಹಾಗೂ ಪಾಶ್ಚಾತ್ಯ ಬರಹಗಳನ್ನು ಅವಲಂಬಿಸಿ ಭಾರತೀಯ ನ್ಯಾಯಾಂಗ ತೀರ್ಪುಗಳು ಬರಬಾರದು ಎಂದು ಹೇಳಿದರು.

ಒಪ್ಪಂದ ಬೆನ್ನಿಗೆ ದಾಳಿ

ಪುಟ ೧➡ ಇರಾನ್ ಪ್ರಕಾರ, ಹಾರ್ಮುಜ್ ಸಮುದ್ರ ಮಾರ್ಗದಲ್ಲಿ ಸಾಗುವ ಹಡಗುಗಳಿಂದ ಶುಲ್ಕ ವಸೂಲು ಮಾಡುವ ತನ್ನ ಹೊಸ ಕ್ರಮವನ್ನು ಈ ಒಪ್ಪಂದ ಮಾನ್ಯಗೊಳಿಸುತ್ತದೆ. ಆದರೆ ಇದರ ವಿವರಗಳು ಸ್ಪಷ್ಟವಾಗಿಲ್ಲ.

ಪಾಕಿಸ್ತಾನ ಮತ್ತು ಇತರ ದೇಶಗಳು ಲೆಬನಾನ್‌ನಲ್ಲಿ ಯುದ್ಧ ವಿರಾಮವಾಗುತ್ತದೆ ಎಂದು ಹೇಳಿದರೆ, ಇಸ್ರೇಲ್ ಅದನ್ನು ನಿರಾಕರಿಸಿದೆ. ಇರಾನ್‌ನ ಅಣು ಮತ್ತು ಕ್ಷಿಪಣಿ ಯೋಜನೆಗಳ ಭವಿಷ್ಯವೂ ಇನ್ನೂ ಅನಿಶ್ಚಿತವಾಗಿದೆ. ಟೆಹ್ರಾನ್ ನಗರದಲ್ಲಿ ಸರ್ಕಾರ ಪರ ಪ್ರತಿಭಟನಾಕಾರರು ಅಮೆರಿಕ ಮತ್ತು ಇಸ್ರೇಲ್ ವಿರುದ್ಧ ಘೋಷಣೆಗಳನ್ನು ಕೂಗಿದ್ದಾರೆ. ಇನ್ನೂ ಕೆಲವೆಡೆ ಇರಾನ್ ವಿರುದ್ಧ ಘೋಷಣೆಗಳನ್ನು ಕೂಗಲಾಗಿದೆ.

ಹಲವು ವಿರೋಧಾಭಾಸ: ಟ್ರಂಪ್ ಆರಂಭದಲ್ಲಿ ಇರಾನ್ ನೀಡಿದ 10 ಅಂಶಗಳ ಯೋಜನೆಯನ್ನು ಒಪ್ಪುವಂತದ್ದು ಎಂದು ಹೇಳಿದರು. ಆದರೆ, ಫಾರ್ಸಿ ಭಾಷೆಯಲ್ಲಿ ಹೊರಬಂದ ಆವೃತ್ತಿಯಲ್ಲಿ ಯುರೇನಿಯಂ ಶುದ್ಧೀಕರಣ ಮುಂದುವರಿಸಲು ಅವಕಾಶ ಇದೆ ಎಂಬ ಸೂಚನೆ ಕಂಡುಬಂದ ನಂತರ, ಅದನ್ನು ಸುಳ್ಳು ಎಂದಿದ್ದಾರೆ.

ಅಮೆರಿಕ ಮತ್ತು ಇಸ್ರೇಲ್ ದಾಳಿಗಳು ಇರಾನ್‌ನ ಸೇನಾ ಸಾಮರ್ಥ್ಯಕ್ಕೆ ಭಾರೀ ಹೊಡೆತ ನೀಡಿದರೂ, ಅದರ ಅಣು ಯೋಜನೆ ಸಂಪೂರ್ಣ ನಾಶವಾಗಿಲ್ಲ.

ಇಸಿ ಜತೆಗಿನ ಸಭೆಯಲ್ಲಿ ಟಿಎಂಸಿ ಹೈಡ್ರಾಮಾ

• ಪುಟ ೧➡ ಮಾತ್ರವಲ್ಲದೇ ಮುಖ್ಯ ಚುನಾವಣಾ ಆಯುಕ್ತ ಜ್ಞಾನೇಶ್ ಕುಮಾರ್ ಅವರು ಮಧ್ಯಪ್ರವೇಶಿಸಿ ಪರಿಸ್ಥಿತಿಯನ್ನು ನಿಯಂತ್ರಿಸಲು ಪ್ರಯತ್ನಿಸಿದರು ಎಂದು ಹೇಳಲಾಗಿದೆ. "ಕೂಗುವುದು ಮತ್ತು ಅಸಭ್ಯ ವರ್ತನೆ ಸರಿಯಲ್ಲ" ಎಂದು ಅವರು ಎಚ್ಚರಿಕೆ ನೀಡಿದರು ಎಂದು ಮೂಲಗಳು ಹೇಳಿವೆ.

ಇಸಿ ಹೇಳಿಕೆ ಸುಳ್ಳು: ಟಿಎಂಸಿ ಸಂಸದ ಸಾಕೇತ್ ಗೋಖಲೆ ಕೂಡ ಇಸಿ ಹೇಳಿಕೆಯನ್ನು ಸುಳ್ಳು ಎಂದು ಹೇಳಿದ್ದಾರೆ. ನಾನು ಸ್ವತಃ ಸಭೆಯಲ್ಲಿ ಹಾಜರಿದ್ದೆ. ಇಸಿ ಹೇಳಿದಂತೆ ಏನೂ ನಡೆದಿಲ್ಲ. ಸಿಇಸಿ ಕೇವಲ ತೊಲಗಿ ಎಂದರು. ಸಭೆಯ ದಾಖಲೆ ಬಿಡುಗಡೆ ಮಾಡಲಿ, ಇಲ್ಲವಾದರೆ ನಾವು ಮಾಡುತ್ತೇವೆ ಎಂದು ಹೇಳಿದ್ದಾರೆ. ಟಿಎಂಸಿ ನಾಯಕಿ ಸಾಗರಿಕಾ ಘೋಷ್ ಕೂಡ ಇಸಿ ಹೇಳಿಕೆಯನ್ನು ತಳ್ಳಿಹಾಕಿದರು. ಇದು ಸಂಪೂರ್ಣ ಸುಳ್ಳು. ನಮ್ಮ ನಾಲ್ವರ ಪ್ರತಿನಿಧಿ ಮಂಡಳಿಗೆ ಕೇವಲ 2 ಸಾಲುಗಳು ಮಾತ್ರ ಹೇಳಲಾಯಿತು 'ನಿಮ್ಮ ಅಧಿಕೃತ ಪ್ರತಿನಿಧಿ ಯಾರು? ಮತ್ತು ತೊಲಗಿ ಎಂದು ಅವರು ಹೇಳಿದ್ದಾರೆ. ಇದಕ್ಕೂ ಮೊದಲು, ಲೋಕಸಭಾಧ್ಯಕ್ಷ ಓಂ ಬಿರ್ಲಾ ಮತ್ತು ರಾಜ್ಯಸಭೆಯ ಉಪಸಭಾಪತಿ ಸಿ.ಪಿ. ರಾಧಾಕೃಷ್ಣನ್ ಅವರು ಸಿಇಸಿ ವಿರುದ್ಧ ವಿಪಕ್ಷಗಳು ಸಲ್ಲಿಸಿದ್ದ ನೋಟಿಸ್‌ಗಳನ್ನು ತಿರಸ್ಕರಿಸಿದ್ದರು. ಈ ನೋಟಿಸ್‌ಗಳಲ್ಲಿ ಪಕ್ಷಪಾತಿ ವರ್ತನೆ ಮತ್ತು ಚುನಾವಣಾ ಅಕ್ರಮಗಳ ತನಿಖೆಗೆ ಅಡ್ಡಿಪಡಿಸುವುದು ಎಂಬ ಆರೋಪಗಳು ಇದ್ದವು. ಆದರೆ ಪ್ರಾಥಮಿಕ ಸಾಕ್ಷ್ಯಗಳ ಕೊರತೆಯಿಂದ ಅವುಗಳನ್ನು ಅಂಗೀಕರಿಸಲಾಗಲಿಲ್ಲ. 294 ಸದಸ್ಯರ ಪಶ್ಚಿಮ ಬಂಗಾಳ ವಿಧಾನಸಭೆ ಚುನಾವಣೆಯ ಮತದಾನ ಏ.23 ಮತ್ತು 29ರಂದು ಎರಡು ಹಂತಗಳಲ್ಲಿ ನಡೆಯಲಿದ್ದು, ಮೇ 4ರಂದು ಫಲಿತಾಂಶ ಪ್ರಕಟವಾಗಲಿದೆ.

ಇಸಿಗೆ ಟಿಎಂಸಿ ಸವಾಲು

ಪುಟ ೧➡ ಪತ್ರಕರ್ತರೊಂದಿಗೆ ಮಾತನಾಡಿದ ಡೆರಿಕ್ ಓ'ಬ್ರಿಯನ್ ಅವರು, ನಾವು ಸಿಇಸಿಯನ್ನು ಭೇಟಿಯಾದಾಗ, ಕೇವಲ 7 ನಿಮಿಷಗಳಲ್ಲಿ ತೊಲಗಿ ಎಂದು ಹೇಳಿ ಹೊರಹಾಕಿದರು. ಸಭೆ 10:02ಕ್ಕೆ ಪ್ರಾರಂಭವಾಗಿ 10:07ಕ್ಕೆ ಮುಗಿಯಿತು ಎಂದು ಅವರು ಹೇಳಿದರು. ನಾವು ಅಧಿಕಾರಿಗಳನ್ನು ವರ್ಗಾವಣೆ ಮಾಡುವ ಬಗ್ಗೆ ಪ್ರಶ್ನಿಸಿದಾಗ, ನ್ಯಾಯಸಮ್ಮತ ಚುನಾವಣೆಯನ್ನು ಹೇಗೆ ನಡೆಸಬಹುದು ಎಂದು ಕೇಳಿದಾಗ, ಅವರು ಹೊರಹೋಗಿ ಎಂದು ಹೇಳಿದರು. ಇದು ನಾಚಿಕೆಗೇಡಿತನ ಎಂದು ಅವರು ಆಕ್ರೋಶ ವ್ಯಕ್ತಪಡಿಸಿದರು.

ಶುದ್ಧ ನೀರಿನ ಘಟಕ ಸರಿಪಡಿಸಲು ಕ್ರಮ

• **ಬೆಂಗಳೂರು:** ರಾಜ್ಯದಲ್ಲಿ ದುರಸ್ತಿಯಾಗಬೇಕಾಗಿರುವ ಶುದ್ಧ ನೀರಿನ ಘಟಕಗಳನ್ನು ಈ ವರ್ಷ ಆದ್ಯತೆಯ ಮೇಲೆ ಸರಿಪಡಿಸಲು ಉದ್ದೇಶಿಸಿದ್ದು, ಜಿಲ್ಲಾ ಪಂಚಾಯತ್ ಸಿಇಓಗಳು ವೈಜ್ಞಾನಿಕ ರೀತಿಯಲ್ಲಿ ಅಧ್ಯಯನ ಮಾಡಿ ವರದಿಯನ್ನು ಸಿದ್ಧಪಡಿಸಿ ಕಳುಹಿಸಬೇಕು ಎಂದು ಗ್ರಾಮೀಣಾಭಿವೃದ್ಧಿ ಸಚಿವ ಪ್ರಿಯಾಂಕ್ ಖರ್ಗೆ ಸೂಚಿಸಿದರು.


ರಾಜ್ಯದ ಎಲ್ಲ ಜಿಲ್ಲಾ ಪಂಚಾಯತ್ ಸಿಇಓಗಳೊಂದಿಗೆ ವಿಡಿಯೋ ಕಾನ್ಫರೆನ್ಸ್ ಮೂಲಕ ಸಭೆ ನಡೆಸಿದ ಸಚಿವರು, ಗ್ರಾಮಗಳಲ್ಲಿ ಕುಡಿಯುವ ನೀರಿಗೆ ತೊಂದರೆಯಾಗದಂತೆ ಈಗಾಗಲೇ ನೀಡಿರುವ ಸೂಚನೆಗಳಂತೆ ಕ್ರಮ ಕೈಗೊಳ್ಳಲು ನಿರ್ದೇಶಿಸಿದರು.

ಕುಡಿಯುವ ನೀರಿನ ಸಮಸ್ಯೆಯಿಂದಾಗಿ ದೂರು ಸಲ್ಲಿಸುವ ಜನಪ್ರತಿನಿಧಿಗಳು ಹಾಗೂ ಸಾರ್ವಜನಿಕರ ಸಮಸ್ಯೆಗಳನ್ನು ಆಲಿಸಿ ಅವರಿಗೆ ಉತ್ತರ ನೀಡುವ ಮೂಲಕ ಅಧಿಕಾರಿಗಳು ಉತ್ತರದಾಯಿಗಳಾಗಬೇಕು. ಜಿಲ್ಲೆ ಹಾಗೂ ತಾಲೂಕು ಮಟ್ಟದಲ್ಲಿ ಅಧಿಕಾರಿಗಳು ಜವಾಬ್ದಾರಿಯಿಂದ ಕಾರ್ಯನಿರ್ವಹಿಸಬೇಕು ಎಂದು ಹೇಳಿದರು.

ಖರ್ಗೆ ವಿರುದ್ಧ 2 ದೂರು

ಪುಟ ೧➡ **ಖರ್ಗೆ ಹೇಳಿದ್ದೇನು?:** ನೀವು ನಮಾಜ್ ಮಾಡುತ್ತಿರುವಾಗ ನಿಮ್ಮ ಮುಂದೆ ವಿಷಯುಕ್ತ ಹಾವು ಬಂದರೆ, ನಮಾಜ್ ನಿಲ್ಲಿಸಿ ಮೊದಲು ಆ ಹಾವನ್ನು ಕೊಲ್ಲಬೇಕು ಎಂದು ಕುರಾನ್ ಹೇಳುತ್ತದೆ. ಆರ್‌ಎಸ್‌ಎಸ್ ಮತ್ತು ಬಿಜೆಪಿ ಕೂಡ ಅದೇ ವಿಷದ ಹಾವಿದ್ದಂತೆ ಇವುಗಳನ್ನು ತೊಡೆದು ಹಾಕದಿದ್ದರೆ ನೀವು ಬದುಕಲು ಸಾಧ್ಯವಿಲ್ಲ ಎಂದು ಖರ್ಗೆ ಅಸ್ಸಾಂನ ಶ್ರೀ ಭೂಮಿ ಜಿಲ್ಲೆಯ ದಕ್ಷಿಣ ವಿಧಾನಸಭಾ ಕ್ಷೇತ್ರದ ನೀಲಂಬಜಾರ್‌ನಲ್ಲಿ ರ್‍ಯಾಲಿಯಲ್ಲಿ ಹೇಳಿಕೆ ನೀಡಿದ್ದರು.

ಗುಜರಾತಿಗಳು ಅನಕ್ಷರಸ್ಥರು: ಹೇಳಿಕೆಗೆ ವಿಷಾದಿಸಿದ ಖರ್ಗೆ



ಪುಟ ೧➡ ಕೇರಳದಲ್ಲಿ ಚುನಾವಣಾ ಪ್ರಚಾರದ ವೇಳೆ, ಗುಜರಾತ್ ಜನರೆಲ್ಲರೂ ಅನಕ್ಷರಸ್ಥರು, ಹೀಗಾಗಿ ಪ್ರಧಾನಿ ನರೇಂದ್ರ ಮೋದಿ ಅವರನ್ನು ಸುಲಭದಲ್ಲಿ ಮೂರ್ಖರನ್ನಾಗಿಸುತ್ತಾರೆ ಎಂಬ ವಿವಾದಾತ್ಮಕ ಹೇಳಿಕೆಯನ್ನು ನೀಡಿದ್ದರು. ಕೇರಳದ ಜನತೆ ಬುದ್ಧಿವಂತರು ಮತ್ತು ವಿದ್ಯಾವಂತರು, ಪ್ರಧಾನಿ ಮೋದಿ ಮತ್ತು ಕೇರಳ ಮುಖ್ಯಮಂತ್ರಿ ಪಿಣರಾಯಿ ವಿಜಯನ್ ಕೇರಳ ಜನತೆಗೆ ಮೋಸ ಮಾಡಲು ಸಾಧ್ಯವಿಲ್ಲ ಎಂದು ಹೇಳಿದ್ದರು. ವಿರೋಧ ವ್ಯಕ್ತವಾದ ನಂತರ ಕ್ಷಮೆ ಕೇಳುತ್ತಿದ್ದಾರೆ ಎಂದು ಗುಜರಾತ್ ಬಿಜೆಪಿ ಟೀಕಿಸಿದೆ.

ಐಪಿಎಲ್ ಟಿಕೆಟ್ ನಿರಾಕರಿಸಿದ ಶಾಸಕ ಚನ್ನಬಸಪ್ಪ

• **ಶಿವಮೊಗ್ಗ:** ಮುಂಬರುವ ಐಪಿಎಲ್ ಪಂದ್ಯಗಳಿಗೆ ಸಂಬಂಧಿಸಿದಂತೆ ನನ್ನ ಹೆಸರಿನಲ್ಲಿ ಯಾವುದೇ ಟಿಕೆಟ್ ಅಥವಾ ಪಾಸ್‌ಗಳನ್ನು ವಿತರಿಸಬಾರದೆಂದು ಶಾಸಕ ಎಸ್.ಎನ್. ಚನ್ನಬಸಪ್ಪ ಸಭಾಧ್ಯಕ್ಷರಿಗೆ ಪತ್ರ ಬರೆದಿದ್ದಾರೆ. ಕಳೆದ ವರ್ಷ ಇದೇ ಐಪಿಎಲ್ ಪಂದ್ಯದ ಸಂದರ್ಭದಲ್ಲಿ ನಡೆದ ದುರಂತದಲ್ಲಿ 11 ಜನ ಅಮಾಯಕರು ಪ್ರಾಣ ಕಳೆದುಕೊಂಡ ಘಟನೆಯ ಆಕ್ರಂದನ ಇಂದಿಗೂ ನನ್ನ ಕಿವಿಯಲ್ಲಿ ಮಾರ್ದನಿಸುತ್ತಿದೆ. ಆ ನೋವಿನ ನಡುವೆ ನಾವು ಐಪಿಎಲ್ ಟಿಕೆಟ್‌ಗಾಗಿ ಸದನದಲ್ಲಿ ಪಟ್ಟು ಹಿಡಿಯುವುದು ನಮ್ಮನ್ನು ಜನರ ದೃಷ್ಟಿಯಲ್ಲಿ ಇನ್ನಷ್ಟು ಕನಿಷ್ಠರನ್ನಾಗಿಸುತ್ತದೆ ಎಂದು ತಿಳಿಸಿದ್ದಾರೆ. ಈ ಎಲ್ಲಾ ಹಿನ್ನೆಲೆಯಲ್ಲಿ ಹಾಗೂ ನನ್ನ ಆತ್ಮಸಾಕ್ಷಿಗೆ ಅನುಗುಣವಾಗಿ ಸರ್ಕಾರ ಅಥವಾ ಕೆ.ಎಸ್.ಸಿ.ಎ ವತಿಯಿಂದ ಶಾಸಕರಿಗೆ ನೀಡಲಾಗುವ ಐಪಿಎಲ್ ಪಂದ್ಯದ ಯಾವುದೇ ಪಾಸ್ ಅಥವಾ ಟಿಕೆಟ್‌ಗಳನ್ನು ನಾನು ಸವಿನಯವಾಗಿ ನಿರಾಕರಿಸುತ್ತಿದ್ದೇನೆ ಎಂದು ಪತ್ರದಲ್ಲಿ ತಿಳಿಸಿದ್ದಾರೆ.

ತರಬೇತಿ ಉಚಿತ

• **ಬೆಂಗಳೂರು:** ಆರೋಹಿ ಫೌಂಡೇಶನ್ ವತಿಯಿಂದ ದ್ವಿತೀಯ ಪಿಯುಸಿ ಉತ್ತೀರ್ಣರಾದ, ಡಿಗ್ರಿ ಓದಲು ಬಯಸುವ (ಬಿ.ಕಾಂ, ಬಿಸಿಎ ಮತ್ತು ಬಿಬಿಎಂ ಮಾತ್ರ) ವಿದ್ಯಾರ್ಥಿಗಳಿಗೆ ಉಚಿತ ವಸತಿ, ಆಹಾರ, ಶಿಕ್ಷಣದೊಂದಿಗೆ ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ತರಬೇತಿ ವ್ಯವಸ್ಥೆ ಮಾಡಲಾಗಿದೆ. ನಾಲ್ಕು ವರ್ಷಗಳ ಇಂಟಿಗ್ರೇಟೆಡ್ ಅಂಡರ್ ಗ್ರಾಜುಯೇಟ್ ಅರ್ಜಿ ಸಲ್ಲಿಸಲು ಅರ್ಹರಾಗಿದ್ದಾರೆ. ಹೆಚ್ಚಿನ ಮಾಹಿತಿಗಾಗಿ 8073365116/8296281678 ಈ ಮೊಬೈಲ್ ಸಂಖ್ಯೆಯನ್ನು ಸಂಪರ್ಕಿಸಬಹುದಾಗಿದೆ.

ನಾವೆಲ್ಲರೂ ಒಟ್ಟಾಗಿ ನಾರೀಶಕ್ತಿಯನ್ನು ಸಶಕ್ತಗೊಳಿಸೋಣ

ಪುಟ ೧➡ ಆದಾಗ್ಯೂ, ರಾಜಕೀಯ ಕ್ಷೇತ್ರದಲ್ಲಿ ಮತ್ತು ಶಾಸಕಾಂಗ ಸಂಸ್ಥೆಗಳಲ್ಲಿ ಮಹಿಳೆಯರ ಪ್ರಾತಿನಿಧ್ಯವು ಸಮಾಜದಲ್ಲಿ ಅವರ ಪಾತ್ರಕ್ಕೆ ಅನುಗುಣವಾಗಿ ಶ್ರೇಣೀಕೃತವಾಗಿಲ್ಲ ಎಂಬುದು ಕಟು ಸತ್ಯ. ಆಡಳಿತ ಮತ್ತು ನಿರ್ಧಾರ ಕೈಗೊಳ್ಳುವ ಪ್ರಕ್ರಿಯೆಯಲ್ಲಿ ಮಹಿಳೆಯರು ಭಾಗಿಯಾದಾಗ, ಅವರು ತಮ್ಮೊಂದಿಗೆ ತರುವ ವಿಶಿಷ್ಟ ಅನುಭವ ಮತ್ತು ಒಳನೋಟಗಳು ಸಾರ್ವಜನಿಕ ಚರ್ಚೆಗಳನ್ನು ಶ್ರೀಮಂತಗೊಳಿಸುವುದಲ್ಲದೆ ಆಡಳಿತದ ಗುಣಮಟ್ಟವನ್ನೂ ವೃದ್ಧಿಸುತ್ತವೆ. ಈ ದೃಷ್ಟಿಯಿಂದ ಅವರ ಪ್ರಾತಿನಿಧ್ಯದ ಕೊರತೆಯು ನಿಜಕ್ಕೂ ದುರದೃಷ್ಟಕರ.

ಆದ್ದರಿಂದಲೇ, 2029ರ ಲೋಕಸಭಾ ಚುನಾವಣೆ ಹಾಗೂ ಮುಂಬರುವ ವಿವಿಧ ರಾಜ್ಯಗಳ ವಿಧಾನಸಭಾ ಚುನಾವಣೆಗಳು ಮಹಿಳಾ ಮೀಸಲಾತಿಯಲ್ಲೇ ನಡೆಯುವುದು ಅನಿವಾರ್ಯವಾಗಿದೆ. ಕಳೆದ ದಶಕಗಳಲ್ಲಿ, ಪ್ರಜಾಪ್ರಭುತ್ವದ ಸಂಸ್ಥೆಗಳಲ್ಲಿ ಮಹಿಳೆಯರಿಗೆ ಅವರ ನ್ಯಾಯಸಮ್ಮತ ಸ್ಥಾನಮಾನ ನೀಡಲು ಹಿಂದಿನ ಸರ್ಕಾರಗಳು ಅನೇಕ ಪ್ರಯತ್ನಗಳನ್ನು ಮಾಡಿದ್ದವು. ಸಮಿತಿಗಳನ್ನು ರಚಿಸಲಾಯಿತು, ಮಸೂದೆಗಳ ಕರಡುಗಳನ್ನು ಮಂಡಿಸಲಾಯಿತು; ಆದರೆ, ಅವು ಯಾವುದೂ ಅಂತಿಮ ಗುರಿ ತಲುಪಲಿಲ್ಲ. ಆದರೂ, ಶಾಸಕಾಂಗಗಳಲ್ಲಿ ಮಹಿಳಾ ಪ್ರಾತಿನಿಧ್ಯ ಹೆಚ್ಚಾಗಬೇಕು ಎಂಬ ಬಗ್ಗೆ ದೇಶದಲ್ಲಿ ವ್ಯಾಪಕ ಒಮ್ಮತವಿತ್ತು. ಇದೇ ಒಮ್ಮತದ ಮನೋಭಾವದೊಂದಿಗೆ 2023ರ ಸೆಪ್ಟೆಂಬರ್‌ನಲ್ಲಿ ಸಂಸತ್ತು 'ನಾರಿ ಶಕ್ತಿ ವಂದನಾ ಅಧಿನಿಯಮ'ವನ್ನು ಅಂಗೀಕರಿಸಿತು. ಇದನ್ನು ನಾನು ನನ್ನ ಜೀವನದ ಅತ್ಯಂತ ಸಾರ್ಥಕ ಮತ್ತು ವಿಶೇಷ ಕ್ಷಣಗಳಲ್ಲಿ ಒಂದೆಂದು ಭಾವಿಸುತ್ತೇನೆ.

ಇದು ಇನ್ನು ಮುಂದೆ ಮುಂದೂಡಲಾಗದ ಕ್ಷಣವಾಗಿದೆ. ಮಹಿಳಾ ಪ್ರಾತಿನಿಧ್ಯವನ್ನು ಒದಗಿಸುವಲ್ಲಿ ಉಂಟಾಗುವ ಪ್ರತಿಯೊಂದು ವಿಳಂಬವೂ, ವಾಸ್ತವವಾಗಿ ನಮ್ಮ ಪ್ರಜಾಪ್ರಭುತ್ವದ ಗುಣಮಟ್ಟ ಮತ್ತು ಒಳಗೊಳ್ಳುವಿಕೆಯನ್ನು ಬಲಪಡಿಸುವ ಪ್ರಕ್ರಿಯೆಯನ್ನು ವಿಳಂಬಗೊಳಿಸಿದಂತೆಯೇ ಸರಿ. ಶಾಸಕಾಂಗ ಸಂಸ್ಥೆಗಳಲ್ಲಿ ಮಹಿಳೆಯರ ಹೆಚ್ಚಿನ ಭಾಗವಹಿಸುವಿಕೆಯ ಅಗತ್ಯವನ್ನು ದಶಕಗಳಿಂದಲೂ ಗುರುತಿಸಲಾಗಿದೆ, ಚರ್ಚಿಸಲಾಗಿದೆ ಮತ್ತು ಪುನರುಚ್ಚರಿಸಲಾಗಿದೆ.

ಈಗಲೂ ಕ್ರಮ ಕೈಗೊಳ್ಳುವುದನ್ನು ಮುಂದೂಡುವುದೆಂದರೆ, ನಾವು ಈಗಾಗಲೇ ಕಂಡುಕೊಂಡಿರುವ ಮತ್ತು ಸರಿಪಡಿಸುವ ಶಕ್ತಿಯನ್ನು ಹೊಂದಿರುವ ಅಸಮತೋಲನವನ್ನು ನಾವೇ ಮುಂದುವರಿಸಿದಂತಾಗುತ್ತದೆ. ಭಾರತವು ಆತ್ಮವಿಶ್ವಾಸ ಮತ್ತು ಸ್ಪಷ್ಟ ಗುರಿಯೊಂದಿಗೆ ಮುನ್ನಡೆಯುತ್ತಿರುವ ಈ ಸಂದರ್ಭದಲ್ಲಿ, ನಮ್ಮ ಸಾಂಸ್ಥಿಕ ವ್ಯವಸ್ಥೆಯು ಸಮಸ್ತ ನಾಗರಿಕರ– ವಿಶೇಷವಾಗಿ ಜನಸಂಖ್ಯೆಯ ಅರ್ಧದಷ್ಟು ಇರುವ ಮಹಿಳೆಯರ– ಆಕಾಂಕ್ಷೆಗಳನ್ನು ಪ್ರತಿಬಿಂಬಿಸುವುದು ಅತ್ಯಗತ್ಯ.

ಇದು ಕೇವಲ ಒಂದು ಸರ್ಕಾರ, ಪಕ್ಷ ಅಥವಾ ವ್ಯಕ್ತಿಗೆ ಸಂಬಂಧಿಸಿದ ವಿಷಯವಲ್ಲ. ಬದಲಾಗಿ, ಇಡೀ ರಾಷ್ಟ್ರವೇ ಈ ಹೆಜ್ಜೆಯ ಮಹತ್ವವನ್ನು ಅರಿತು, ಅದನ್ನು ಸಾಕಾರಗೊಳಿಸಲು ಒಗ್ಗೂಡುವ ಸಂದರ್ಭವಾಗಿದೆ. ಇದು ನಾವು ನಮ್ಮ 'ನಾರಿ ಶಕ್ತಿ'ಗೆ ಸಲ್ಲಿಸಬೇಕಾದ ಗೌರವ ಮತ್ತು ಕರ್ತವ್ಯವಾಗಿದೆ. ಆದ್ದರಿಂದಲೇ, ಮಹಿಳಾ ಮೀಸಲಾತಿ ಮಸೂದೆಯ ಅಂಗೀಕಾರವು ಅತ್ಯಂತ ವ್ಯಾಪಕವಾದ ಒಮ್ಮತವನ್ನು ಪ್ರತಿಬಿಂಬಿಸಬೇಕು ಮತ್ತು ವಿಶಾಲವಾದ ರಾಷ್ಟ್ರ ಹಿತಾಸಕ್ತಿಯಿಂದ ಮಾರ್ಗದರ್ಶಿಸಲ್ಪಡಬೇಕು. ಪ್ರಜಾಪ್ರಭುತ್ವದ ನಿಜವಾದ ಶಕ್ತಿಯು ಕಾಲಕ್ಕೆ ತಕ್ಕಂತೆ ವಿಕಸನಗೊಳ್ಳುವ ಮತ್ತು ತನ್ನನ್ನು ತಾನು ಹೆಚ್ಚು ಒಳಗೊಳ್ಳುವಿಕೆಯತ್ತ ಕೊಂಡೊಯ್ಯುವ ಸಾಮರ್ಥ್ಯದಲ್ಲಿದೆ ಎಂಬುದನ್ನು ಈ ಕ್ಷಣ ನಮಗೆ ನೆನಪಿಸುತ್ತಿದೆ.

ನಾವು ಈ ಐತಿಹಾಸಿಕ ಸಂಸತ್ತಿನ ಅಧಿವೇಶನವನ್ನು ಸಮೀಪಿಸುತ್ತಿರುವಾಗ, ಪಕ್ಷ ಭೇದ ಮರೆತು ಭಾರತದ ಮಹಿಳೆಯರಿಗಾಗಿ ಕೈಗೊಂಡಿರುವ ಈ ಮಹತ್ವದ ಹೆಜ್ಜೆಯನ್ನು ಬೆಂಬಲಿಸಲು ಒಟ್ಟಾಗಿ ಬರುವಂತೆ ನಾನು ಎಲ್ಲಾ ಸಂಸತ್ ಸದಸ್ಯರಿಗೆ ಮನವಿ ಮಾಡುತ್ತೇನೆ. ರಾಷ್ಟ್ರೀಯ ಪ್ರಾಮುಖ್ಯತೆಯ ವಿಷಯ ಬಂದಾಗ, ಭಾರತವು ತನ್ನೆಲ್ಲಾ ಭಿನ್ನಾಭಿಪ್ರಾಯಗಳನ್ನು ಮರೆತು ಏಕತೆಯಿಂದ ವರ್ತಿಸುತ್ತದೆ ಎಂಬುದನ್ನು ನಾವೆಲ್ಲರೂ ಕಾಲಕಾಲಕ್ಕೆ ಸಾಬೀತುಪಡಿಸುತ್ತಲೇ ಬಂದಿದ್ದೇವೆ. ಇದು ಕೂಡ ಅಂತಹದ್ದೇ ಒಂದು ಮಹತ್ವದ ಕ್ಷಣವಾಗಿದೆ. ನಾವೆಲ್ಲರೂ ಒಟ್ಟಾಗಿ ಮುನ್ನಡೆಯೋಣ; ಸಂವಿಧಾನದ ಮೌಲ್ಯಗಳನ್ನು ಗಟ್ಟಿಗೊಳಿಸೋಣ ಮತ್ತು ರಾಷ್ಟ್ರದ ಸಮಗ್ರ ಪ್ರಗತಿಗಾಗಿ ನಮ್ಮ 'ನಾರಿ ಶಕ್ತಿ'ಯನ್ನು ಸಶಕ್ತಗೊಳಿಸೋಣ.

ಮೂರು ವಿಧಾನಸಭೆಗಳಿಗೆ ಇಂದು ಚುನಾವಣೆ

ಪುಟ ೧➡ ಕೇರಳದ ಎಲ್ಲಾ 140 ಸ್ಥಾನಗಳಿಗೂ ಒಂದೇ ಹಂತದಲ್ಲಿ ಮತದಾನ ನಡೆಯಲಿದ್ದು, 890 ಅಭ್ಯರ್ಥಿಗಳು ಸ್ಪರ್ಧಿಸುತ್ತಿದ್ದಾರೆ. ಇಲ್ಲಿ 2.7 ಕೋಟಿಗೂ ಹೆಚ್ಚು ಮತದಾರರು ಸಿಪಿಐ(ಎಂ) ನೇತೃತ್ವದ ಎಲ್‌ಡಿಎಫ್ ಮತ್ತು ಕಾಂಗ್ರೆಸ್ ನೇತೃತ್ವದ ಯುಡಿಎಫ್ ನಡುವೆ ಒಬ್ಬರನ್ನು ಆಯ್ಕೆ ಮಾಡಲಿದ್ದಾರೆ. ಪುದುಚೇರಿಯ 30 ವಿಧಾನಸಭಾ ಸ್ಥಾನಗಳಿಗೆ ಸಿಎಂ ಎನ್. ರಂಗಸಾಮಿ ಸೇರಿದಂತೆ 294 ಅಭ್ಯರ್ಥಿಗಳು ಕಣದಲ್ಲಿದ್ದಾರೆ.

ರಾಜ್ಯದ 2 ಕ್ಷೇತ್ರಕ್ಕೆ ಉಪಚುನಾವಣೆ

ಪುಟ ೧➡ **ಕಾಂಗ್ರೆಸ್‌ಗೆ ಪ್ರತಿಷ್ಠೆಯ ಪ್ರಶ್ನೆ:** ದಾವಣಗೆರೆ ದಕ್ಷಿಣ ಕ್ಷೇತ್ರದಲ್ಲಿ ಆಡಳಿತಾರೂಢ ಕಾಂಗ್ರೆಸ್ ಸಮರ್ಥ್ ಶಾಮನೂರು ಅವರನ್ನು ಕಣಕ್ಕಿಳಿಸಿದೆ. ಇವರ ವಿರುದ್ಧ ಬಿಜೆಪಿ ಟಿ.ದಾಸಕರಿಯಪ್ಪ ಅವರನ್ನು ಅಭ್ಯರ್ಥಿಯನ್ನಾಗಿ ಮಾಡಿದೆ. ಈ ಕ್ಷೇತ್ರ ಶಾಮನೂರು ಕುಟುಂಬದ ಭದ್ರಕೋಟೆಯೆಂದು ಪರಿಗಣಿಸಲ್ಪಟ್ಟಿದ್ದು, ಯುವ ನಾಯಕ ಸಮರ್ಥ್‌ಗೆ ಇದು ಮೊದಲ ಚುನಾವಣೆ. ಬಾಗಲಕೋಟೆಯಲ್ಲಿ ಕಾಂಗ್ರೆಸ್‌ನಿಂದ ಉಮೇಶ್ ಮೇಟಿ, ಬಿಜೆಪಿಯಿಂದ ವೀರಭದ್ರಯ್ಯ ಚರಂತಿಮಠ ಸ್ಪರ್ಧಿಸಿದ್ದಾರೆ.

ಖರ್ಗೆ ಮಾನಸಿಕ ಆರೋಗ್ಯ ಸರಿಯಿಲ್ಲ: ಛಲವಾದಿ ಟೀಕೆ

ಬೆಂಗಳೂರು: ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರು ತಮ್ಮ ನಾಲಗೆಯನ್ನು ಹದ್ದುಬಸ್ತಿನಲ್ಲಿ ಇಟ್ಟುಕೊಳ್ಳಬೇಕು. ಅರಳು – ಮರಳು ರೀತಿ ಮಾತನಾಡಬಾರದು. ಇವರ ಮಾನಸಿಕ ಆರೋಗ್ಯ ಸರಿ ಇಲ್ಲ ಎಂದು ವಿಧಾನಪರಿಷತ್ ಪ್ರತಿಪಕ್ಷ ನಾಯಕ ಛಲವಾದಿ ನಾರಾಯಣಸ್ವಾಮಿ ಟೀಕಿಸಿದರು.



ಬಿಜೆಪಿ ರಾಜ್ಯ ಕಾರ್ಯಾಲಯದಲ್ಲಿ ಮಾಧ್ಯಮಗಳೊಂದಿಗೆ ಮಾತನಾಡಿ, ಮಲ್ಲಿಕಾರ್ಜುನ ಖರ್ಗೆ ಬಿಜೆಪಿ ಮತ್ತು ಆರ್‌ಎಸ್‌ಎಸ್ ವಿರುದ್ಧ ಪ್ರಚೋದನಾಕಾರಿ ಹೇಳಿಕೆ ನೀಡಿರುವುದು ಖಂಡನೀಯ. ದೇಶದಾದ್ಯಂತ ಜನರು ಇವರ ವಿರುದ್ಧ ಹಿಡಿಶಾಪ ಹಾಕುತ್ತಿದ್ದಾರೆ. ಕೊಲ್ಲಲು ಪ್ರಚೋದನೆ ನೀಡುವುದು ಸರಿ ಅಲ್ಲ ಎಂದರು.

ಕರ್ನಾಟಕ ದ್ವೇಷ ಭಾಷಣ ಮತ್ತು ದ್ವೇಷ ಅಪರಾಧ ತಡೆ ಮಸೂದೆಗೆ ಅಂಗೀಕಾರ ದೊರೆತಿದೆ. ಆ ಮಸೂದೆ ಅನ್ವಯ ಖರ್ಗೆ ಅವರ ರೀತಿ ಪ್ರಚೋದನಾಕಾರಿಯಾಗಿ ಮಾತನಾಡಿದರೆ, ಪ್ರಕರಣ ದಾಖಲು ಮಾಡಬಹುದು. ಆದ್ದರಿಂದ ಬಿಜೆಪಿ ದೂರು ನೀಡಿದೆ. ಖರ್ಗೆ ಅವರ ಹೇಳಿಕೆ ಖಂಡಿಸಿ ಬಿಜೆಪಿಯ ಕಾರ್ಯಕರ್ತರು ಸಿಡಿದೆದ್ದು ಎಲ್ಲಾ ಕಡೆ ಪ್ರತಿಭಟನೆ ನಡೆಸುತ್ತಿದ್ದಾರೆ ಎಂದು ತಿಳಿಸಿದರು.

ಮಲ್ಲಿಕಾರ್ಜುನ ಖರ್ಗೆ ಅವರ ಬೆಂಬಲಕ್ಕೆ ಕಾಂಗ್ರೆಸ್‌ನಿಂದ ಯಾರೂ ಬಂದಿಲ್ಲ. ಪ್ರಿಯಾಂಕ್ ಹಾಗೂ ಮಲ್ಲಿಕಾರ್ಜುನ ಖರ್ಗೆ ಅವನ್ನು ನಿರ್ಲಕ್ಷ್ಯ ಮಾಡಿದ್ದಾರೆ. ಕಾಂಗ್ರೆಸ್‌ನಿಂದ ಮೂಲೆಗುಂಪಾದ ಇವರಿಬ್ಬರು ತಮ್ಮನ್ನು ತೋರಿಸಿಕೊಳ್ಳಲು ಈ ರೀತಿಯ ಹಗೆತನದ ಹೇಳಿಕೆ ನೀಡಿದ್ದಾರೆ. ಅಪ್ಪ ಮತ್ತು ಮಗನ ತಲೆಯಲ್ಲಿ ವಿಷಕಾರಿ ಹಾವಿಗಿಂತ ಹೆಚ್ಚು ವಿಷವಿದೆ ಎಂದು ವ್ಯಂಗ್ಯವಾಡಿದರು. ಮಲ್ಲಿಕಾರ್ಜುನ ಖರ್ಗೆ ಹಾಗೂ ಅವರ ಪುತ್ರ ಪ್ರಿಯಾಂಕ್ ಖರ್ಗೆ ಅವರ ವಿರುದ್ಧ ಕೇಂದ್ರ ಸರ್ಕಾರವು ಸ್ವಯಂಪ್ರೇರಿತ ದೂರು ದಾಖಲಿಸಿ ತಿಹಾರ್ ಜೈಲಿಗೆ ಕಳಿಸಬೇಕು. ಆಗ ಇವರು ಇಂತಹ ವಿಷಕಾರಿ ಹೇಳಿಕೆ ನೀಡುವುದಿಲ್ಲ ಎಂದರು.



ಒಪ್ಪಂದಕ್ಕೆ ಸಹಿ

ಕರ್ನಾಟಕ ವಿಧಾನಮಂಡಲದ ಉಭಯ ಸಚಿವಾಲಯಗಳನ್ನು ಸಂಪೂರ್ಣ ಡಿಜಿಟಲೀಕರಿಸಲು ವಿಧಾನಸಭೆಯ ಅಧ್ಯಕ್ಷ ಯು.ಟಿ. ಖಾದರ್ ಅವರು ನ್ಯಾಷನಲ್ ಇ-ವಿಧಾನ್ ಅಪ್ಲಿಕೇಶನ್ ಕೇಂದ್ರ ಸಂಸದೀಯ ವ್ಯವಹಾರಗಳ ಸಚಿವಾಲಯದ ಅಧಿಕಾರಿ ಡಾ. ಸತ್ಯಪ್ರಕಾಶ್ ಖಠಾನ ಅವರೊಂದಿಗೆ ಬುಧವಾರ ಚರ್ಚೆ ನಡೆಸಿ ಒಪ್ಪಂದಕ್ಕೆ ಸಹಿ ಮಾಡಿದರು.

ಅನಿಲ ಕೊರತೆ ಇಲ್ಲ, ಆತಂಕ ಬೇಡ

ಬೆಂಗಳೂರು: ರಾಜ್ಯದ ವಿವಿಧ ಆಟೋ ಗ್ಯಾಸ್ ಬಂಕ್‌ಗಳಲ್ಲಿ ಅನಿಲದ ದಾಸ್ತಾನು ಕೊರತೆ ಇಲ್ಲ. ಸಾರ್ವಜನಿಕರು ಆತಂಕಪಡುವ ಅಗತ್ಯವಿಲ್ಲ ಎಂದು ಆಹಾರ, ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಇಲಾಖೆಯು ಸ್ಪಷ್ಟಪಡಿಸಿದೆ.

ಕಳೆದ ಕೆಲವು ದಿನಗಳಿಂದ ಆಟೋ ಮಾಲೀಕರು, ಚಾಲಕರು ಬಂಕ್‌ಗಳ ಮುಂದೆ ಸುದೀರ್ಘ ಸರತಿ ಸಾಲಿನಲ್ಲಿ ನಿಲ್ಲುತ್ತಿರುವ ಅಂಶ ಸರ್ಕಾರದ ಗಮನಕ್ಕೆ ಬಂದಿದೆ. ಈ ಕುರಿತು ಕೆಲವು ಮಾಧ್ಯಮಗಳಲ್ಲಿ ಪ್ರಕಟವಾಗಿರುವ ವರದಿಗಳು ಕೇವಲ ವದಂತಿ ಎಂದು ಆಹಾರ ಇಲಾಖೆ ತಿಳಿಸಿದೆ. ಕೆಲವು ಖಾಸಗಿ ಆಟೋ ಗ್ಯಾಸ್ ಸರಬರಾಜು ಸಂಸ್ಥೆಗಳಲ್ಲಿ ಮಾತ್ರ ಅಲ್ಪಮಟ್ಟಿನ ಕೊರತೆ ಕಂಡುಬಂದಿದ್ದು, ಇದನ್ನು ಸರಿಪಡಿಸಲು ಸರ್ಕಾರಿ ಸ್ವಾಮ್ಯದ ತೈಲ ಕಂಪನಿಗಳಾದ ಇಂಡಿಯನ್ ಆಯಿಲ್, ಭಾರತ್ ಪೆಟ್ರೋಲಿಯಂ ಮತ್ತು ಹಿಂದೂಸ್ತಾನ್ ಪೆಟ್ರೋಲಿಯಂ ಮೂಲಕ ಹೆಚ್ಚಿನ ಪ್ರಮಾಣದ ಅನಿಲವನ್ನು ಪೂರೈಕೆ ಮಾಡಲಾಗುತ್ತಿದೆ ಎಂದು ಮಾಹಿತಿ ನೀಡಿದೆ.

ಹಿಂದೆ ಈ 3 ಸಂಸ್ಥೆಗಳು ಸರಾಸರಿ 56.67 ಮೆಟ್ರಿಕ್ ಟನ್ ಆಟೋ ಗ್ಯಾಸ್ ಅನ್ನು ಸರಬರಾಜು ಮಾಡುತ್ತಿದ್ದವು. ಆದರೆ, ಪ್ರಸ್ತುತ ಬೇಡಿಕೆಯನ್ನು ಪೂರೈಸಲು ಸರಬರಾಜು ಪ್ರಮಾಣವನ್ನು ಗಣನೀಯವಾಗಿ ಹೆಚ್ಚಿಸಲಾಗಿದ್ದು, ಸದ್ಯ ಪ್ರತಿದಿನ ಸರಾಸರಿ 83.58 ಮೆಟ್ರಿಕ್ ಟನ್ ಗ್ಯಾಸ್ ಅನ್ನು ಚಿಲ್ಲರೆ ಮಾರಾಟ ಮಳಿಗೆಗಳಿಗೆ ಪೂರೈಸಲಾಗುತ್ತಿದೆ ವಿವರಿಸಿದೆ. ರಾಜ್ಯದ ಆಟೋ ಮಾಲೀಕರು, ಚಾಲಕರು ಇಂತಹ ಯಾವುದೇ ಸುಳ್ಳು ವದಂತಿಗಳನ್ನು ನಂಬಬಾರದು ಮತ್ತು ಆತಂಕಕ್ಕೊಳಗಾಗಿ ಬಂಕ್‌ಗಳ ಮುಂದೆ ಸಾಲುಗಟ್ಟಿ ನಿಲ್ಲಬಾರದು ಎಂದು ಸರ್ಕಾರ ಮನವಿ ಮಾಡಿದೆ.

ಗರಿಷ್ಠ 94.11 ಮೆಟ್ರಿಕ್ ಟನ್ ಪೂರೈಕೆ

ಏ. 2ರಿಂದ 6 ರವರೆಗಿನ ಅಂಕಿ ಅಂಶಗಳನ್ನು ಗಮನಿಸಿದರೆ, ಪೂರೈಕೆಯಲ್ಲಿ ಸ್ಥಿರತೆ ಇರುವುದು ಕಂಡುಬರುತ್ತದೆ. ಏ.2 ರಂದು 87.78 ಮೆಟ್ರಿಕ್ ಟನ್, ಏ.3 ರಂದು 86.05 ಮೆಟ್ರಿಕ್ ಟನ್, ಏ.4 ರಂದು 84.80 ಮೆಟ್ರಿಕ್ ಟನ್, ಏ.5 ರಂದು ಗರಿಷ್ಠ 94.11 ಮೆಟ್ರಿಕ್ ಟನ್ ಹಾಗೂ ಏ.6 ರಂದು 83.58 ಮೆಟ್ರಿಕ್ ಟನ್ ಅನಿಲವನ್ನು ಈ ಮೂರು ಪ್ರಮುಖ ಸಂಸ್ಥೆಗಳು ಯಶಸ್ವಿಯಾಗಿ ಪೂರೈಕೆ ಮಾಡಿವೆ.

ಕಿರುಸುದ್ದಿ

ಕಾಡಾನೆ ದಾಳಿ: ಬೆಳೆಗಾರ ಸಾವು

ಮಡಿಕೇರಿ: ಕೊಡಗು ಜಿಲ್ಲೆಯಲ್ಲಿ ವನ್ಯಜೀವಿ–ಮಾನವ ಸಂಘರ್ಷ ಮುಂದುವರಿದಿದ್ದು, ಬುಧವಾರ ಬೆಳ್ಳಂಬೆಳಗ್ಗೆ ಕಾಫಿ ಬೆಳೆಗಾರರೊಬ್ಬರು ಕಾಡಾನೆ ದಾಳಿಗೆ ಬಲಿಯಾಗಿದ್ದಾರೆ. ಪೊನ್ನಂಪೇಟೆ ತಾಲೂಕಿನ ಶ್ರೀಮಂಗಲ ಹೋಬಳಿಯ ಕಾಯಿಮಾನಿ ನಿವಾಸಿ ಮೂಕಳಮಾಡ ರತ್ತು ಎಂಬುವರೇ ಕಾಡಾನೆ ದಾಳಿಗೆ ಸಿಲುಕಿ ಪ್ರಾಣ ತೆತ್ತವರು. ಬುಧವಾರ ಬೆಳಗ್ಗೆ ಕುಚಿ–ಕಾಯಿಮಾನಿ ನಡುವೆ ಇರುವ ತಮ್ಮ ತೋಟಕ್ಕೆ ಬೆಳಗ್ಗೆ 7ಗಂಟೆ ಸುಮಾರಿಗೆ ನಡೆದುಕೊಂಡು ಹೋಗುತ್ತಿದ್ದಾಗ ಕಾಡಾನೆ ಅವರ ಮೇಲೆ ತೀವ್ರ ಸ್ವರೂಪದ ದಾಳಿ ನಡೆಸಿ ತುಳಿದು ಸಾಯಿಸಿದೆ. ಮೃತದೇಹವನ್ನು ಕುಟ್ಟ ಸರಕಾರಿ ಆಸ್ಪತ್ರೆಯಲ್ಲಿಡಲಾಗಿದೆ. ಶ್ರೀಮಂಗಲ ಹೋಬಳಿಯ ಕುರ್ಚಿ ಕಾಯಿಮಾನಿ ಭಾಗದಲ್ಲಿ ಸುಮಾರು 8–10 ಕಾಡಾನೆಗಳ ಗುಂಪು ಓಡಾಡುತ್ತಿರುವುದಾಗಿ ಸ್ಥಳೀಯರು ತಿಳಿಸಿದ್ದು, ಸಾರ್ವಜನಿಕರು ಭಯಭೀತರಾಗಿದ್ದಾರೆ.

ಈಶ್ವರ ಖಂಡ್ರೆ ಸಂತಾಪ: ಕೊಡಗಿನಲ್ಲಿ ಕಾಡಾನೆ ದಾಳಿಯಿಂದ ಕಾಫಿ ಬೆಳೆಗಾರರೊಬ್ಬರು ಮೃತಪಟ್ಟಿರುವುದು ಅತ್ಯಂತ ನೋವಿನ ಸಂಗತಿ. ಮಾನವ–ಆನೆ ಸಂಘರ್ಷ ತಡೆಯಲು ಸರ್ಕಾರ ಮತ್ತು ಇಲಾಖೆ ಶಕ್ತಿ ಮೀರಿ ಪ್ರಯತ್ನಿಸುತ್ತಿದೆ. ಜೀವಕ್ಕೆ ಬೆಲೆ ನೀಡಲು ಸಾಧ್ಯವೇ ಇಲ್ಲ. ಈ ನೋವಿನ ಸಂದರ್ಭದಲ್ಲಿ ನೊಂದ ಕುಟುಂಬದ ಜೊತೆ ಸರ್ಕಾರ ಇದೆ ಎಂದು ಸಚಿವ ಈಶ್ವರ ಬಿ.ಖಂಡ್ರೆ ಹೇಳಿದ್ದಾರೆ.

ಕೋರ್ಸ್ ಪ್ರವೇಶಕ್ಕೆ ಅರ್ಜಿ

ಬೆಂಗಳೂರು: ಎಂಬಿಎ, ಎಂಸಿಎ, ಎಂಇ, ಎಂ.ಟೆಕ್ ಮತ್ತು ಎಂ.ಆರ್ಕಿಟೆಕ್ಚರ್ ಕೋರ್ಸ್‌ಗಳ ಪ್ರವೇಶಕ್ಕೆ ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸಲು ಏ.20 ರವರೆಗೆ ದಿನಾಂಕ ವಿಸ್ತರಿಸಲಾಗಿದೆ ಎಂದು ಕರ್ನಾಟಕ ಪರೀಕ್ಷಾ ಪ್ರಾಧಿಕಾರದ ಕಾರ್ಯನಿರ್ವಾಹಕ ನಿರ್ದೇಶಕ ಎಚ್. ಪ್ರಸನ್ನ ತಿಳಿಸಿದ್ದಾರೆ. ಶುಲ್ಕ ಪಾವತಿಗೆ ಏ.22 ಕೊನೆ ದಿನ. ಏ.8 ರಂದು ಇದ್ದ ಕೊನೆ ದಿನಾಂಕವನ್ನು ಅಭ್ಯರ್ಥಿಗಳ ಕೋರಿಕೆ ಮೇರೆಗೆ ವಿಸ್ತರಿಸಿದ್ದು, ಪುನಃ ಮುಂದೂಡುವುದಿಲ್ಲ. ನಿಗದಿತ ದಿನಾಂಕದೊಳಗೆ ಅರ್ಜಿ ಸಲ್ಲಿಸಬೇಕು ಎಂದು ಮಾಹಿತಿ ನೀಡಿದ್ದಾರೆ.

ವರ್ಗಾವಣೆ ನಿಯಮ ತಿದ್ದುಪಡಿ ಅಧಿಸೂಚನೆ ಪ್ರಕಟ

ಬೆಂಗಳೂರು: ರಾಜ್ಯ ಸರ್ಕಾರವು ವೈದ್ಯಾಧಿಕಾರಿಗಳ ವರ್ಗಾವಣೆ ನಿಯಮಗಳಲ್ಲಿ ತಿದ್ದುಪಡಿ ಮಾಡುವ ಕುರಿತು ಅಧಿಸೂಚನೆ ಹೊರಡಿಸಿದೆ. ಈ ತಿದ್ದುಪಡಿ ನಿಯಮದಲ್ಲಿ ಶೇ.50 ಕ್ಕಿಂತ ಹೆಚ್ಚು ಹುದ್ದೆಗಳು ಖಾಲಿ ಇರುವ ಆಸ್ಪತ್ರೆಗಳಲ್ಲಿ ತಕ್ಷಣವೇ ವೈದ್ಯರನ್ನು ನಿಯೋಜಿಸಬೇಕು ಎಂದು ಸ್ಪಷ್ಟಪಡಿಸಲಾಗಿದ್ದು, ತುರ್ತು ಸೇವೆಗಳನ್ನು ನಿರ್ವಹಿಸಲು ಅಗತ್ಯವಿರುವ ಹುದ್ದೆಗಳನ್ನು ಸರ್ಕಾರದ ಅಧಿಸೂಚನೆಯ ಮೂಲಕ ಭರ್ತಿ ಮಾಡಬೇಕೆಂದು ಹೇಳಲಾಗಿದೆ. ಪತಿ ಪತ್ನಿ ಬೇರೆ ಬೇರೆ ಸ್ಥಳಗಳಲ್ಲಿ ಕೆಲಸ ಮಾಡುವುದರಿಂದ ಉಂಟಾಗುವ ಸಾಮಾಜಿಕ ಸಮಸ್ಯೆಗಳನ್ನು ಕಡಿಮೆ ಮಾಡಲು, ವೈದ್ಯಾಧಿಕಾರಿಗಳಿಗೆ ತಮ್ಮ ಪತ್ನಿ ಅಥವಾ ಪತಿಯ ಕೆಲಸದ ಸ್ಥಳದ ಸಮೀಪಕ್ಕೆ ವರ್ಗಾವಣೆ ಸೌಲಭ್ಯ ಕಲ್ಪಿಸಲಾಗಿದೆ. ವಿಶೇಷ ವರ್ಗಗಳಿಗೆ ವಿನಾಯಿತಿ ನೀಡುವ ವ್ಯವಸ್ಥೆಯೂ ಈ ಆದೇಶದಲ್ಲಿ ಸೇರಿಸಲಾಗಿದೆ. ಅಂಗವೈಕಲ್ಯ ಹೊಂದಿರುವವರು, ಕುಟುಂಬದ ತುರ್ತು ಸಂಕಷ್ಟ ಎದುರಿಸುತ್ತಿರುವವರು, ಸರ್ಕಾರಿ ನೌಕರರ ಸಂಘದ ಪ್ರಮುಖ ಹುದ್ದೆಗಳಲ್ಲಿ ಇರುವವರಿಗೆ ನಿರ್ದಿಷ್ಟ ಅವಧಿಗೆ ವರ್ಗಾವಣೆ ವಿನಾಯಿತಿ ನೀಡಲಾಗುತ್ತದೆ. ಆರೋಗ್ಯ ಇಲಾಖೆಯ ಕಾರ್ಯನಿರ್ವಹಣೆ ಸುಧಾರಣೆ, ಗ್ರಾಮೀಣ ಪ್ರದೇಶಗಳಲ್ಲಿ ವೈದ್ಯರ ಕೊರತೆ ನಿವಾರಿಸಲು ಹಾಗೂ ಹಲವು ಸರ್ಕಾರಿ ಆಸ್ಪತ್ರೆಗಳಲ್ಲಿ ಹುದ್ದೆಗಳು ಖಾಲಿ ಇರುವುದರಿಂದ ತಕ್ಷಣವೇ ವೈದ್ಯಾಧಿಕಾರಿಗಳನ್ನು ನಿಯೋಜಿಸುವ ಅಗತ್ಯವಿರುವ ಹಿನ್ನೆಲೆಯಲ್ಲಿ ವೈದ್ಯಾಧಿಕಾರಿಗಳ ವರ್ಗಾವಣೆ ನಿಯಮಗಳಲ್ಲಿ ತಿದ್ದುಪಡಿ ಮಾಡುವ ಕುರಿತು ಅಧಿಸೂಚನೆ ಹೊರಡಿಸಿದೆ. ಸಾರ್ವಜನಿಕರಿಂದ ಆಕ್ಷೇಪಣೆ ಮತ್ತು ಸಲಹೆಗಳನ್ನು ಆಹ್ವಾನಿಸಲಾಗಿದೆ.

ಅಂತರ್ಜಲ ಮೌಲ್ಯಮಾಪನ ವರದಿ ಬಿಡುಗಡೆ ಮಾಡಿದ ಸಚಿವ

ಅಂತರ್ಜಲ ಮಟ್ಟ ಏರಿಕೆ

ಬೆಂಗಳೂರು: ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರ ನೇತೃತ್ವದ ನಮ್ಮ ಸರ್ಕಾರ ಕಳೆದೆರಡು ವರ್ಷಗಳಲ್ಲಿ ಜಾರಿಗೊಳಿಸಿರುವ ಜಲಸಂರಕ್ಷಣಾ ಯೋಜನೆಗಳಿಂದಾಗಿ ರಾಜ್ಯದಲ್ಲಿ ಅಂತರ್ಜಲ ಮರುಪೂರಣ ಸಾಮರ್ಥ್ಯದಲ್ಲಿ ಗಣನೀಯವಾಗಿ ಏರಿಕೆಯಾಗಿದೆ ಎಂದು ಸಣ್ಣ ನೀರಾವರಿ ಸಚಿವ ಎನ್.ಎಸ್.ಭೋಸರಾಜು ತಿಳಿಸಿದರು.



ವಿಕಾಸಸೌಧದ ತಮ್ಮ ಕಚೇರಿಯಲ್ಲಿ ಬುಧವಾರ 2025ನೇ ಸಾಲಿನ ಅಂತರ್ಜಲ ಮೌಲ್ಯಮಾಪನ ವರದಿ ಬಿಡುಗಡೆಗೊಳಿಸಿದ ಅವರು, ಉತ್ತಮ ಮಳೆ ಹಾಗೂ ಜನಜಾಗೃತಿ ಅಭಿಯಾನದ ಪರಿಣಾಮವಾಗಿ ಅಂತರ್ಜಲ ಬಳಕೆಯಲ್ಲಿ ಗಣನೀಯವಾದ ಇಳಿಕೆ ಕಂಡುಬಂದಿದೆ ಎಂದರು.

ಈ ವರದಿಯ ಪ್ರಕಾರ, ರಾಜ್ಯದ ಒಟ್ಟಾರೆ ಅಂತರ್ಜಲ ಬಳಕೆಯು 2024ರಲ್ಲಿದ್ದ ಶೇ. 68.44ರಿಂದ 2025ರಲ್ಲಿ ಶೇ. 66.49ಕ್ಕೆ ಇಳಿಕೆಯಾಗಿರುವುದು ಕಂಡುಬಂದಿದೆ. ಈ ಸಕಾರಾತ್ಮಕ ಇಳಿಕೆಯು, ರಾಜ್ಯದಾದ್ಯಂತ ಲಭ್ಯವಿರುವ ವಾರ್ಷಿಕ ಅಂತರ್ಜಲದಲ್ಲಿ ಸರಾಸರಿ ಶೇ. 66.5 ರಷ್ಟನ್ನು ಮಾತ್ರ ಪ್ರಸ್ತುತ ಬಳಸಲಾಗುತ್ತಿದೆ ಎಂಬುದನ್ನು ಸೂಚಿಸುತ್ತದೆ. ಇದಕ್ಕೆ ಪೂರಕವಾಗಿ, ಕರ್ನಾಟಕದ ಅಂತರ್ಜಲ ಮಟ್ಟದಲ್ಲಿ ಗಣನೀಯ ಸುಧಾರಣೆ ಕಂಡುಬಂದಿದೆ. ಒಟ್ಟು ವಾರ್ಷಿಕ ಅಂತರ್ಜಲ ಮರುಪೂರಣ ಪ್ರಮಾಣವು 2024ರಲ್ಲಿದ್ದ 18.74 ಬಿಲಿಯನ್ ಕ್ಯೂಬಿಕ್ ಮೀಟರ್ (ಬಿಸಿಎಂ)ನಿಂದ 2025ರಲ್ಲಿ 19.28 ಬಿಸಿಎಂಗೆ ಗಮನಾರ್ಹವಾಗಿ ಏರಿಕೆಯಾಗಿದೆ. ಈ ಮರುಪೂರಣ ದರದ ಹೆಚ್ಚಳದ ನೇರ ಪರಿಣಾಮವಾಗಿ, ವಾರ್ಷಿಕ ಲಭ್ಯವಿರುವ ಅಂತರ್ಜಲ ಸಂಪನ್ಮೂಲವೂ 16.88 ಬಿಸಿಎಂನಿಂದ 17.41 ಬಿಸಿಎಂಗೆ ಏರಿಕೆಯಾಗಿದೆ ಎಂದು ತಿಳಿಸಿದರು.

ರಾಜ್ಯದಾದ್ಯಂತ ಮೂಲಸೌಕರ್ಯಗಳಲ್ಲಿ ಮೇಲ್ದರ್ಜೆಗೇರಿಕೆಯಾಗಿರುವುದು ಈ ಹೆಚ್ಚಳಕ್ಕೆ ಪ್ರಮುಖ ಕಾರಣವಾಗಿದೆ. ಈ ದೂರದೃಷ್ಟಿಯ ಯೋಜನೆಗಳ ಸಕಾರಾತ್ಮಕ ಪರಿಣಾಮವು ಪ್ರಾದೇಶಿಕ ಮಟ್ಟದಲ್ಲಿ ಸ್ಪಷ್ಟವಾಗಿ ಗೋಚರಿಸುತ್ತಿದೆ. 2024ನೇ ಸಾಲಿನ ದತ್ತಾಂಶಗಳಿಗೆ ಹೋಲಿಸಿದರೆ 11 ತಾಲೂಕುಗಳ ಅಂತರ್ಜಲ ಸ್ಥಿತಿಗತಿಯಲ್ಲಿ ಸುಧಾರಣೆ ಕಂಡುಬಂದಿದೆ. ಗಮನಾರ್ಹವಾಗಿ, ಚಾಮರಾಜನಗರ ತಾಲೂಕು ಅತಿ–ಬಳಕೆ ಪಟ್ಟಿಯಿಂದ ನಿರ್ಣಾಯಕ ಹಂತದ ಪಟ್ಟಿಗೆ ವರ್ಗಾವಣೆಯಾಗಿರುವುದು ಸಕಾರಾತ್ಮಕ ಬೆಳವಣಿಗೆಯಾಗಿದೆ. ಅದೇ ರೀತಿ, ಬೆಳಗಾವಿಯ ಅಥಣಿ, ಬೆಂಗಳೂರು ದಕ್ಷಿಣದ ಚನ್ನಪಟ್ಟಣ, ಚಿತ್ರದುರ್ಗದ ಮೊಳಕಾಲ್ಮೂರು ಹಾಗೂ ಹಾವೇರಿಯ ರಾಣೆಬೆನ್ನೂರು, ಸವಣೂರು ಮತ್ತು ಶಿಗ್ಗಾಂವಿ ತಾಲೂಕುಗಳು ಅರೆ-ನಿರ್ಣಾಯಕ ಸ್ಥಿತಿಯಿಂದ ಸಂಪೂರ್ಣ ಸುರಕ್ಷಿತ ವರ್ಗಕ್ಕೆ ಯಶಸ್ವಿಯಾಗಿ ಬಡ್ತಿ ಪಡೆದಿವೆ ಎಂದು ಮಾಹಿತಿ ನೀಡಿದರು.

ಈ ಸಂದರ್ಭದಲ್ಲಿ ಸಣ್ಣ ನೀರಾವರಿ, ಅಂತರ್ಜಲ ಅಭಿವೃದ್ಧಿ ಇಲಾಖೆಯ ಕಾರ್ಯದರ್ಶಿ ಬಿ.ಕೆ.ಪವಿತ್ರ, ಕೇಂದ್ರ ಅಂತರ್ಜಲ ಅಭಿವೃದ್ಧಿ ಇಲಾಖೆಯ ಅಧಿಕಾರಿಗಳು ಉಪಸ್ಥಿತರಿದ್ದರು.

> **ಕಳೆದ ಸಾಲಿನಲ್ಲಿ ಸುರಿದ ಉತ್ತಮ ಮಳೆ ಹಾಗೂ ಸರ್ಕಾರದ ಭದ್ರ ಜಲ ಸಂರಕ್ಷಣಾ ನೀತಿಗಳ ಯಶಸ್ಸಿನ ಫಲವಾಗಿ, ಕರ್ನಾಟಕವು ಅಂತರ್ಜಲ ಸೂಚ್ಯಂಕಗಳಲ್ಲಿ ಗಮನಾರ್ಹ ಸುಧಾರಣೆಯಾಗಿದೆ. ದತ್ತಾಂಶಗಳ ಪ್ರಕಾರ, ರಾಜ್ಯದಲ್ಲಿ ಒಟ್ಟಾರೆಯಾಗಿ ಅಂತರ್ಜಲ ಬಳಕೆಯು ಗಣನೀಯವಾಗಿ ಇಳಿಕೆಯಾಗಿದ್ದು, ವಾರ್ಷಿಕವಾಗಿ ಅಂತರ್ಜಲ ಮರುಪೂರಣ ಸಾಮರ್ಥ್ಯದಲ್ಲಿ ಭಾರಿ ಏರಿಕೆಯಾಗಿದೆ.**
> ■ **ಎನ್.ಎಸ್.ಭೋಸರಾಜು, ಸಣ್ಣ ನೀರಾವರಿ ಸಚಿವ**

ಗೃಹಬಳಕೆಯ ಅಂತರ್ಜಲ ಅವಲಂಬನೆ ಕ್ಷೀಣ

ಗೃಹಬಳಕೆಯ ಅಂತರ್ಜಲ ಅವಲಂಬನೆಯೂ ತಗ್ಗುತ್ತಿದೆ. ಗೃಹಬಳಕೆಯ ಅಂತರ್ಜಲ ಹೊರತೆಗೆಯುವಿಕೆ ಶೇ. 0.58ರಷ್ಟು ಕಡಿತಗೊಂಡಿದ್ದು, 2024ರಲ್ಲಿದ್ದ 1,21,731 ಹೆಕ್ಟೇರ್ ಮೀಟರ್ (ಎಚ್‌ಎಂ)ನಿಂದ 2025ರಲ್ಲಿ 1,21,023 ಎಚ್‌ಎಂಗೆ ಇಳಿಕೆಯಾಗಿದೆ. ಜಲ ಜೀವನ್ ಮಿಷನ್ ಯೋಜನೆಯಲ್ಲಿ ಜನರು ಅಂತರ್ಜಲದ ಬದಲಾಗಿ ಮೇಲ್ಮೈ ನೀರಿನ ಮೂಲಗಳತ್ತ ಯಶಸ್ವಿಯಾಗಿ ಮುಖಮಾಡಿರುವುದು ಈ ಕಡಿತಕ್ಕೆ ಪ್ರಮುಖ ಕಾರಣವಾಗಿದೆ ಎಂದು ಸಚಿವ ಎನ್.ಎಸ್.ಭೋಸರಾಜು ಹೇಳಿದರು.

ಗ್ಯಾರಂಟಿ ಯೋಜನೆ ನಿಧಿ ವಿವರ ಕೇಳಿದ ಆಯೋಗ

ಚುನಾವಣೆ ವೇಳೆ ರಾಜ್ಯ ಸರ್ಕಾರಕ್ಕೆ ಪತ್ರ ಬರೆದ ಕೇಂದ್ರ ಚುನಾವಣಾ ಆಯೋಗ

ಬೆಂಗಳೂರು: ದಾವಣಗೆರೆ ಮತ್ತು ಬಾಗಲಕೋಟೆ ಜಿಲ್ಲೆಗಳಲ್ಲಿ ನಡೆಯುತ್ತಿರುವ ಉಪಚುನಾವಣೆ ಸಂದರ್ಭದಲ್ಲಿ ಕೇಂದ್ರ ಚುನಾವಣಾ ಆಯೋಗವು ರಾಜ್ಯ ಸರ್ಕಾರಕ್ಕೆ ಪತ್ರ ಬರೆದು, ಗ್ಯಾರಂಟಿ ಯೋಜನೆಗಳಡಿ ಬಿಡುಗಡೆಯಾದ ನಿಧಿಗಳ ವಿವರಗಳನ್ನು ಕೇಳಿರುವುದು ಸಿಎಂ ಸಿದ್ದರಾಮಯ್ಯ ಅವರ ಕಣ್ಣು ಕೆಂಪಾಗಿಸಿದೆ.

ಈ ಕುರಿತು ಎಕ್ಸ್‌ನಲ್ಲಿ ಅಸಮಾಧಾನ ವ್ಯಕ್ತಪಡಿಸಿರುವ ಅವರು, ಗ್ಯಾರಂಟಿ ಯೋಜನೆಗಳು ಈ ಉಪಚುನಾವಣೆ ಸಮಯದಲ್ಲಿ ಜಾರಿಯಾಗಿಲ್ಲ. ಇವು 2023ರ ವಿಧಾನಸಭೆ ಚುನಾವಣೆಯಲ್ಲಿ ಜನರಿಗೆ ನೀಡಿದ ಭರವಸೆಗಳ ಭಾಗವಾಗಿ ನಮ್ಮ ಸರ್ಕಾರ ಅನುಷ್ಠಾನಕ್ಕೆ ತಂದಿರುವ ಕಾರ್ಯಕ್ರಮಗಳಾಗಿವೆ. ಈ ಯೋಜನೆಗಳು ಆಡಳಿತದ ಭಾಗವೇ ಹೊರತು, ಮತದಾರರನ್ನು ಸೆಳೆಯುವ ಕಾರ್ಯಕ್ರಮಗಳಲ್ಲ ಎಂದು ಸ್ಪಷ್ಟಪಡಿಸಿದ್ದಾರೆ.

ಚುನಾವಣಾ ಆಯೋಗ ಅನುಸರಿಸುತ್ತಿರುವ ನೀತಿಯು ಅನುಮಾನಾಸ್ಪದವಾಗಿದೆ. ಇದು ನಿಷ್ಪಕ್ಷಪಾತ ನಡೆಯಲ್ಲ. ಇದು ಒಂದು ಪಕ್ಷಕ್ಕೆ ನೀಡಿದ ಸಹಕಾರವಾಗಿದೆ. ಬಿಜೆಪಿ ಅಥವಾ ಎನ್‌ಡಿಎ ಸರ್ಕಾರಗಳು ಏನು ಮಾಡಿದರೂ ಚುನಾವಣಾ ಆಯೋಗ ಕಣ್ಣು ಮುಚ್ಚಿಕೊಂಡಿರುತ್ತದೆ. ಆದರೆ, ಕರ್ನಾಟಕ ಸರ್ಕಾರ ವಿಧಾನಸಭಾ ಚುನಾವಣೆ ಪೂರ್ವದಲ್ಲಿ ನೀಡಿದ್ದ ಭರವಸೆಗಳನ್ನು ಈಡೇರಿಸುತ್ತಿರುವಾಗ ಅದೇ ಆಯೋಗವು ಕ್ಯಾತೆ ತೆಗೆಯುತ್ತಿದೆ. ಈ ಇಬ್ಬಗೆಯ ನೀತಿಯು ಚುನಾವಣಾ ಆಯೋಗದ ಪಕ್ಷಪಾತವನ್ನು ಬಯಲು ಮಾಡುತ್ತದೆ ಎಂದು ಆರೋಪಿಸಿದ್ದಾರೆ.

ಮಹಾರಾಷ್ಟ್ರ ಮತ್ತು ಬಿಹಾರದಂತಹ ರಾಜ್ಯಗಳಲ್ಲಿ ಚುನಾವಣೆಗೂ ಮುನ್ನ ನಗದು ವರ್ಗಾವಣೆ ಯೋಜನೆಗಳನ್ನು ಪ್ರಕಟಿಸಲಾಗಿದೆ, ಅಂತಹ ಯೋಜನೆಗಳ ಪ್ರಕ್ರಿಯೆಯನ್ನು ವೇಗಗೊಳಿಸಲಾಗಿದೆ. ಮತದಾರರಿಗೆ ನೇರವಾಗಿ ಯೋಜನೆಗಳ ಲಾಭವನ್ನು ವರ್ಗಾವಣೆ ಮಾಡಲಾಗಿದೆ. ಅವೆಲ್ಲವೂ ಬಹಿರಂಗವಾಗಿ ನಡೆದಿವೆ.

ಆಯೋಗದ ಬೆದರಿಕೆಗಳಿಗೆ ಬಗ್ಗಲ್ಲ: ಸಿಎಂ



ಕರ್ನಾಟಕದ ಗ್ಯಾರಂಟಿ ಯೋಜನೆಗಳನ್ನು ಗುರಿಯಾಗಿಸಿ ದಾಳಿ ಮಾಡುವುದು ಕೇವಲ ರಾಜಕೀಯ ಎಂದೆನಿಸುವುದಿಲ್ಲ. ಇದು ಬಡವರ, ಮಹಿಳೆಯರ ಮತ್ತು ಕರ್ನಾಟಕದ ವಿರುದ್ಧದ ಪರೋಕ್ಷ ದಾಳಿಯಾಗಿದೆ. ನುಡಿದಂತೆ ನಡೆವ ಸರ್ಕಾರ ಎಂಬ ಹೆಗ್ಗಳಿಕೆಗೆ ಪಾತ್ರವಾಗಿರುವ ನಮ್ಮ ಸರ್ಕಾರವು ಚುನಾವಣಾ ಆಯೋಗದ ಇಂತಹ ಗೊಡ್ಡು ಬೆದರಿಕೆಗಳಿಗೆ ಬಗ್ಗದೆ ತಾನು ಕೊಟ್ಟ ಭರವಸೆಗಳನ್ನು ಪೂರೈಸುವಲ್ಲಿ ಬದ್ಧವಾಗಿರುತ್ತದೆ ಮತ್ತು ಪ್ರತಿ ಕನ್ನಡಿಗನ ಸೇವೆಯನ್ನು ಎಂದಿನಂತೆ ಮುಂದುವರಿಸಲಿದೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದ್ದಾರೆ.

ಖರ್ಗೆ ದ್ವೇಷದ ಹೇಳಿಕೆ: ಸಿಟಿ ರವಿ ಖಂಡನೆ

ಬೆಂಗಳೂರು: ಬಿಜೆಪಿ ಮತ್ತು ಆರ್‌ಎಸ್‌ಎಸ್ ವಿರುದ್ಧ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಆಕ್ಷೇಪಾರ್ಹ ಹೇಳಿಕೆ ನೀಡಿರುವುದು ಹತಾಶವಾದ ಮಾನಸಿಕ ಅಸ್ವಸ್ಥತೆ ಪ್ರತಿಬಿಂಬಿಸುವಂತಿದೆ. ಅವರ ವಿರುದ್ಧ ಸ್ವಯಂಪ್ರೇರಿತ ದೂರು ದಾಖಲಿಸಿ ಯೋಗ್ಯ ಚಿಕಿತ್ಸೆ ಕೊಡಿಸಿ, ರಾಜಕೀಯ ನಿವೃತ್ತಿ ಕೊಡಿಸಿ ಎಂದು ವಿಪ ಸದಸ್ಯ ಸಿ.ಟಿ.ರವಿ ಅವರು ಆಗ್ರಹಿಸಿದರು.



ಬಿಜೆಪಿ ರಾಜ್ಯ ಕಾರ್ಯಾಲಯದಲ್ಲಿ ಅವರು ಬುಧವಾರ ಮಾಧ್ಯಮಗಳೊಂದಿಗೆ ಮಾತನಾಡಿ, ಖರ್ಗೆ ಅವರು 6 ದಶಕಗಳ ಕಾಲ ರಾಜಕಾರಣದಲ್ಲಿ ಹಲವಾರು ಹುದ್ದೆಗಳನ್ನು ಅನುಭವಿಸಿ ಇಂತಹ ಹೇಳಿಕೆ ನೀಡುವುದು ಒಳ್ಳೆಯದಲ್ಲ. ಹಿರಿತನದ ಹಾಗೂ ಮುತ್ಸದ್ದಿತನದ ಹೇಳಿಕೆಗಳಾಗಿ ಕಾಣುತ್ತಿಲ್ಲ. ಇದೊಂದು ದ್ವೇಷದ ಹೇಳಿಕೆ ಎಂದರು. ಗುಜರಾತ್ ಜನ ಅನಕ್ಷರಸ್ಥರಾಗಿರುವುದರಿಂದ ಬಿಜೆಪಿ ಗೆಲ್ಲಿಸಿದರು ಎಂದು ಖರ್ಗೆ ಹೇಳಿದರು. ಹೀಗೆ ಹೇಳಿ ಗುಜರಾತ್ ಜನರನ್ನು ಅವಮಾನಿಸಿದರು. ಕರ್ನಾಟಕದಲ್ಲಿ ನಿರಂತರವಾಗಿ ಲೋಕಸಭೆಗೆ ಬಿಜೆಪಿಯನ್ನು ಜನ ಬೆಂಬಲಿಸುತ್ತಿದ್ದಾರೆ, ಹಾಗಾದರೆ ಕರ್ನಾಟಕದ ಜನರೂ ಅನಕ್ಷರಸ್ಥರೇ ಎಂದು ಪ್ರಶ್ನಿಸಿದರು.

ಅಸ್ಸಾಂನಲ್ಲಿ ಬಿಜೆಪಿ ಮತ್ತು ಆರ್‌ಎಸ್‌ಎಸ್ ಅನ್ನು ವಿಷಸರ್ಪಕ್ಕೆ ಹೋಲಿಸಿದ್ದೀರಿ. ಮುಂದೆ ಮುಸ್ಲಿಮರನ್ನು ಪ್ರಚೋದಿಸುವ ಕೆಲಸ ಮಾಡಿದ್ದೀರಿ. ಈ ಮೂಲಕ ಪ್ರಜಾಪ್ರಭುತ್ವ ವಿರೋಧಿಯಾಗಿ ನೀವು ವರ್ತಿಸಿದ್ದೀರಿ. ಮಹಾತ್ಮಗಾಂಧಿ ಅವರ ಅನುಯಾಯಿ ಆದ ನೀವು ಇಂತಹ ಹೇಳಿಕೆ ನೀಡಬಾರದು. ಗಾಂಧಿ ಅವರು ಇದನ್ನೇ ಬೋಧಿಸಿದ್ದೆ? ಅಹಿಂಸಾ ತತ್ವ ಎಂದರೆ ಇದೇನಾ? ಇವತ್ತಿನ ಗಾಂಧಿಗಳು ಇಂತಹ ಹೇಳಿಕೆ ನೀಡಿ ಎಂದು ಹೇಳಿಕೊಡುತ್ತಿದ್ದರಾ? ಎಂದು ಪ್ರಶ್ನಿಸಿದರು.

ಬಿಜೆಪಿ ಮತ್ತು ಕಾಂಗ್ರೆಸ್‌ಗೆ ವೈಚಾರಿಕಾ ವಿರೋಧ ಇರಬಹುದು. ಆದರೆ, ನಾವು ಎಂದೂ ಕಾಂಗ್ರೆಸ್ಸಿಗರನ್ನು ಕೊಲ್ಲಿ ಎಂದು ಹೇಳಿಲ್ಲ. ಚುನಾವಣೆಯಲ್ಲಿ ಸೋಲಿಸಿ ಎಂದು ಕರೆ ನೀಡುತ್ತೇವೆ. ಭ್ರಷ್ಟಾಚಾರಿಗಳಾದ ಕಾಂಗ್ರೆಸ್‌ನವರು ದೇಶವಿಭಜನೆಗೆ ಕಾರಣರಾದವರು. ಅಂದಿನಿಂದ ಕುಟುಂಬ ರಾಜಕಾರಣ ಮಾಡುತ್ತಾ ಬಂದವರು. ಸಂವಿಧಾನ ಶಿಲ್ಪಿ ಅಂಬೇಡ್ಕರ್ ಅವರನ್ನು ಸೋಲಿಸಿದವರು ಎಂದು ಹೇಳಿದರು.

> **ಕರ್ನಾಟಕ ಸರ್ಕಾರವು ದ್ವೇಷ ಭಾಷಣ ಮಸೂದೆ ತಂದಿದೆ. ಈಗ ಖರ್ಗೆ ಅವರ ಭಾಷಣವೂ ಇದೇ ಮಸೂದೆ ವ್ಯಾಪ್ತಿಗೆ ಬರುವುದಿಲ್ಲವೇ? ಮುಖ್ಯಮಂತ್ರಿಗಳು ಹಾಗೂ ಮರಿ ಖರ್ಗೆ ಯಾಕೆ ಮಾತನಾಡುತ್ತಿಲ್ಲ? ಪ್ರಿಯಾಂಕ್ ಅವರೂ ಸಮರ್ಥನೆ ಮಾಡುತ್ತಾರೆ ಅಂದರೆ ಅನುವಂಶೀಯವಾಗಿ ಮಾನಸಿಕ ಅಸ್ವಸ್ಥತೆ ಇದೆ ಎಂದಾಯಿತು.**
> ■ **ಸಿ.ಟಿ.ರವಿ, ವಿಧಾನಪರಿಷತ್ ಸದಸ್ಯ**

ವನ್ಯಜೀವಿ ಸಂತಾನ ಹರಣಕ್ಕೆ ಚಿಂತನೆ: ಖಂಡ್ರೆ

ಬೆಂಗಳೂರು: ಮಾನವ – ವನ್ಯಜೀವಿ ಸಂಘರ್ಷ ದಿನದಿಂದ ದಿನಕ್ಕೆ ಹೆಚ್ಚಳವಾಗುತ್ತಿರುವ ಹಿನ್ನೆಲೆಯಲ್ಲಿ ಆಯ್ದ ವನ್ಯಜೀವಿಗಳ ಸಂತಾನ ಶಕ್ತಿ ಹರಣ ಅಥವಾ ಚುಚ್ಚುಮದ್ದು ನೀಡುವ ಬಗ್ಗೆ ಚಿಂತನೆ ಮಾಡುವ ಅಗತ್ಯವಿದ್ದು, ಈ ಕುರಿತು ಸಾರ್ವಜನಿಕವಾಗಿ ಚರ್ಚೆಯೂ ನಡೆಯಬೇಕು ಎಂದು ಅರಣ್ಯ ಸಚಿವ ಈಶ್ವರ ಬಿ. ಖಂಡ್ರೆ ಅಭಿಪ್ರಾಯಪಟ್ಟಿದ್ದಾರೆ.



ಬೆಂಗಳೂರಿನಲ್ಲಿ ಬುಧವಾರ ತಮ್ಮನ್ನು ಭೇಟಿ ಮಾಡಿದ್ದ ಸುದ್ದಿಗಾರರೊಂದಿಗೆ ಮಾತನಾಡಿ, ಕೆಲವು ಆಯ್ದ ವನ್ಯಜೀವಿಗಳ ಸಂಖ್ಯೆಯಲ್ಲಿ ಭಾರೀ ಹೆಚ್ಚಳವಾಗುತ್ತಿದೆ. ಇವುಗಳ ಸಂಖ್ಯೆಗೆ ಕಡಿವಾಣ ಹಾಕುವ ಅಗತ್ಯವೂ ಕಂಡುಬರುತ್ತಿದೆ. ವನ್ಯಜೀವಿಗಳ ಸಂರಕ್ಷಣೆಯೂ ಆಗಬೇಕು, ಅಮೂಲ್ಯವಾದ ಜೀವಹಾನಿಯೂ ತಪ್ಪಬೇಕು. ಮಾನವರ ಜೀವ ಉಳಿಸುವ ಕೆಲಸವೂ ಆಗಬೇಕಿದೆ ಎಂದು ಹೇಳಿದರು.

ಇದು ಆಯ್ದ ವನ್ಯಜೀವಿಗಳ ಸಂತಾನ ಶಕ್ತಿ ಹರಣ ಅಥವಾ ಚುಚ್ಚುಮದ್ದು ನೀಡುವ ನಿರ್ಧಾರವಲ್ಲ, ಒಂದು ಚಿಂತನೆ ಮಾತ್ರ. ಈ ಬಗ್ಗೆ ಸಾರ್ವಜನಿಕ ವಲಯದಲ್ಲಿ ಚರ್ಚೆ ಆಗುವ ಅಗತ್ಯ ಇದೆ. ಜೊತೆಗೆ ತತ್ಸಂಬಂಧವಾದ ಪ್ರಕರಣ ಸರ್ವೋಚ್ಚ ನ್ಯಾಯಾಲಯದಲ್ಲಿರುವುದರಿಂದ ತಜ್ಞರು, ಕಾನೂನು ಪಂಡಿತರೊಂದಿಗೆ ಚರ್ಚಿಸಿ ನ್ಯಾಯಾಲಯಕ್ಕೆ ಪ್ರಸ್ತಾವನೆ ಸಲ್ಲಿಸುವ ಬಗ್ಗೆಯೂ ಹಿರಿಯ ಅಧಿಕಾರಿಗಳೊಂದಿಗೆ ಸಭೆ ನಡೆಸಬೇಕಾಗುತ್ತದೆ ಎಂದರು.

ಜೀವನವೂ ಇರಬೇಕು, ಜೀವನೋಪಾಯವೂ ಇರಬೇಕು. ಯಾವ ಭಾಗದಲ್ಲಿ ಯಾವ ವನ್ಯಜೀವಿಗಳ ಸಂಖ್ಯೆಯಲ್ಲಿ ಭಾರೀ ಹೆಚ್ಚಳವಾಗುತ್ತದೋ ಅಲ್ಲಿ ಒಂದೆರಡು ವರ್ಷ ನಿಯಂತ್ರಿಸುವ ಬಗ್ಗೆ ಚಿಂತನೆ ನಡೆಯುತ್ತಿದೆ. ಬೇರೆ ಬೇರೆ ರಾಜ್ಯಗಳಲ್ಲೂ ಇಂತಹ ಆಲೋಚನೆ, ಚಿಂತನೆ ಇದೆ. ಈ ಬಗ್ಗೆ ಸಾರ್ವಜನಿಕ ಚರ್ಚೆ ನಡೆಯುವ ಅಗತ್ಯವಿದೆ ಎಂದರು.

ಅರಣ್ಯವಾಸಿಗಳ ಸ್ಥಳಾಂತರಕ್ಕೆ ಚಿಂತನೆ: ಸ್ವಯಂ ಇಚ್ಛೆಯಿಂದ ಕಾಡಿನಿಂದ ಹೊರಬರಲು ಇಚ್ಛಿಸುವ ಅರಣ್ಯವಾಸಿಗಳ ಸ್ಥಳಾಂತರದ ಬಗ್ಗೆಯೂ ಸರ್ಕಾರ ಗಂಭೀರ ಚಿಂತನೆ ನಡೆಸಿದೆ. ಆ ರೀತಿ ಸ್ವಯಂ ಪ್ರೇರಣೆಯಿಂದ ಹೊರಬರುವವರ ಪಟ್ಟಿ ಸಿದ್ಧಪಡಿಸಲು ತಿಳಿಸಿದ್ದು, ಪಟ್ಟಿ ಸಿದ್ಧವಾದ ಬಳಿಕ ಎಷ್ಟು ಹಣದ ಅಗತ್ಯ ಬರುತ್ತದೆ. ಆಯವ್ಯಯದಲ್ಲಿ ಎಷ್ಟು ಹಣ ನೀಡಲಾಗಿದೆ. ಎಷ್ಟು ಕೊರತೆ ಆಗುತ್ತದೆ ಎಂಬ ಬಗ್ಗೆ ಹಣಕಾಸು ಸಚಿವರೂ ಆದ ಮುಖ್ಯಮಂತ್ರಿ ಗಳೊಂದಿಗೆ ಚರ್ಚಿಸಿ ನಿರ್ಧಾರ ಕೈಗೊಳ್ಳುವುದಾಗಿ ಹೇಳಿದರು. ಈ ರೀತಿ ಅರಣ್ಯದಲ್ಲಿರುವ ವಸತಿಪ್ರದೇಶಗಳನ್ನು ಸ್ಥಳಾಂತರಿಸು ವುದರಿಂದ ವನ್ಯಜೀವಿಗಳ ಆವಾಸಸ್ಥಾನ ವಿಸ್ತರಣೆ ಆಗುತ್ತದೆ ಎಂದರು.

ಆನೆಧಾಮ ನಿರ್ಮಾಣಕ್ಕೆ ಕ್ರಮ

ಆನೆಗಳ ಸಮಸ್ಯೆ ಪರಿಹರಿಸಲು ಆನೆ ಧಾಮ ಮಾಡುವ ಬಗ್ಗೆ ಸರ್ಕಾರ ಯೋಜನೆ ರೂಪಿಸಿತ್ತು. ಅದಕ್ಕೆ ಕೇಂದ್ರ ಸರ್ಕಾರದಿಂದ ಅನುಮತಿ ಸಿಗುವಲ್ಲಿ ತೊಡಕಾಗಿದೆ. ಈ ಸಮಸ್ಯೆ ಪರಿಹರಿಸಿಕೊಂಡು ಆನೆ ಧಾಮ ನಿರ್ಮಾಣದ ಬಗ್ಗೆ ಕ್ರಮ ವಹಿಸಲಾಗುವುದು ಎಂದು ಈಶ್ವರ ಖಂಡ್ರೆ ತಿಳಿಸಿದರು.

ಉದ್ಯೋಗ ಸೃಷ್ಟಿಗೆ ಆದ್ಯತೆ ನೀಡಲು ಸಭೆ ಆಯೋಜನೆ: ಸಚಿವ ಸುಧಾಕರ್

ಮೇ 15, 16ರಂದು ಸಿ2ಸಿ ಶೃಂಗಸಭೆ

ಬೆಂಗಳೂರು: ಉನ್ನತ ಶಿಕ್ಷಣದಲ್ಲಿ ಹೆಚ್ಚಿನ ಕೌಶಲ ಶಿಕ್ಷಣವನ್ನು ವಿದ್ಯಾರ್ಥಿಗಳಿಗೆ ನೀಡುವ ಮೂಲಕ ಉದ್ಯೋಗವಕಾಶಗಳನ್ನು ಕಲ್ಪಿಸುವುದು ಮತ್ತು ಸೃಷ್ಟಿಸುವ ದೃಷ್ಟಿಯಲ್ಲಿ ಕ್ಯಾಂಪಸ್ ಟು ಕರಿಯರ್ (ಸಿ2ಸಿ) ಶೃಂಗಸಭೆಯನ್ನು ಮೇ 15 ಮತ್ತು 16ರಂದು ಲಲಿತ್ ಅಶೋಕ್ ಹೋಟೆಲ್‌ನಲ್ಲಿ ಹಮ್ಮಿಕೊಂಡಿರುವುದಾಗಿ ಉನ್ನತ ಶಿಕ್ಷಣ ಸಚಿವ ಡಾ. ಎಂ.ಸಿ.ಸುಧಾಕರ್ ತಿಳಿಸಿದರು.



ಬುಧವಾರ ವಿಧಾನಸೌಧದಲ್ಲಿ ಕಾರ್ಯಕ್ರಮದ ಲಾಂಛನ ಬಿಡುಗಡೆ ಮಾಡಿ ಮಾತನಾಡಿದ ಅವರು, ಈ ಶೃಂಗಸಭೆಯಲ್ಲಿ ರಾಜ್ಯದ ಪ್ರಮುಖ ಕೈಗಾರಿಕಾ ಸಂಸ್ಥೆಗಳು, ಶಿಕ್ಷಣ ತಜ್ಞರು ಹಾಗೂ ಸರ್ಕಾರ ಒಂದೆಡೆ ಸೇರಿ ಚರ್ಚಿಸಿ, ರಾಜ್ಯದ ವಿದ್ಯಾರ್ಥಿಗಳಿಗೆ ಉದ್ಯೋಗ ಅವಕಾಶಗಳನ್ನು ಕಲ್ಪಿಸಿ ಕೊಡುವಂತಹ ಶಿಕ್ಷಣ ನೀಡುವ ಮಹತ್ವದ ಕಾರ್ಯ ನಡೆಯಲಿದೆ ಎಂದರು. ಕಾರ್ಯಕ್ರಮದಲ್ಲಿ ಕಾಲೇಜು ಶಿಕ್ಷಣ ಇಲಾಖೆಯ ಪ್ರಧಾನ ಕಾರ್ಯದರ್ಶಿ ಖುಷ್ಬೂ ಗೊಯೆಲ್ ಚೌಧರಿ, ಆಯುಕ್ತೆ ಮಂಜುಶ್ರೀ, ಕೌಶಲಾಭಿವೃದ್ಧಿ ಇಲಾಖೆಯ ಕಾರ್ಯದರ್ಶಿ ಮನೋಜ್ ಕುಮಾರ್ ಮೀನಾ, ಮಣಿಪಾಲ್ ಅಕಾಡೆಮಿಯ ಏಕಲವ್ಯ ಬರೊಚ ಮತ್ತಿತರರಿದ್ದರು.

ವಿದೇಶಿ ಭಾಷೆ ಕಲಿಕೆಗೆ ಹೆಚ್ಚು ಗಮನ

ನಾವು ನಮ್ಮ ಕಾಲೇಜುಗಳಲ್ಲಿ ಬಿಬಿಎ, ಬಿಸಿಎ ಕೋರ್ಸ್‌ಗಳಿಗೆ ಒತ್ತು ನೀಡುತ್ತಿದ್ದೇವೆ. ನಮ್ಮ ಕಾಲೇಜುಗಳಲ್ಲಿ ಪ್ರಯೋಗಾಲಯ, ಅಗತ್ಯ ಸಾಫ್ಟ್‌ವೇರ್, ಕೌಶಲಕ್ಕೆ ಆದ್ಯತೆ ನೀಡುತ್ತದ್ದೇವೆ. ಜರ್ಮನ್, ಜಪಾನಿ ಭಾಷೆ ಕಲಿತವರಿಗೆ ಉದ್ಯೋಗಾವಕಾಶಗಳು ಹೆಚ್ಚಿರುವುರು ನಮ್ಮ ಗಮನಕ್ಕೆ ಬಂದಿದೆ. ನಮ್ಮ ಕಾಲೇಜುಗಳಲ್ಲಿ ವಿದೇಶಿ ಭಾಷೆ ಕಲಿಕೆಗೆ ಹೆಚ್ಚು ಗಮನ ಕೇಂದ್ರಿಕರಿಸಲಿದ್ದೇವೆ. ಫಲಿತಾಂಶ ಆಧಾರಿತ ಉನ್ನತ ಶಿಕ್ಷಣ ನಮ್ಮ ಉದ್ದೇಶ ಎಂದು ಹೇಳಿದರು.

ರಾಜ್ಯ ಶಿಕ್ಷಣ ನೀತಿ ಸಂಬಂಧ ಸಂಪುಟದಲ್ಲಿ ತೀರ್ಮಾನ

ರಾಜ್ಯ ಶಿಕ್ಷಣ ನೀತಿ ಸಂಬಂಧಪಟ್ಟಂತೆ ಮುಂಬರುವ ಸಚಿವ ಸಂಪುಟಸಭೆಯಲ್ಲಿ ತೀರ್ಮಾನ ಕೈಗೊಳ್ಳಲಿರುವ ಸಾಧ್ಯತೆಯಿದೆ. ಈಗಾಗಲೇ ಉನ್ನತ ಶಿಕ್ಷಣದಲ್ಲಿ ರಾಜ್ಯ ಶಿಕ್ಷಣ ನೀತಿಗೆ ಅನುಗುಣವಾಗಿ ಶಿಕ್ಷಣ ವ್ಯವಸ್ಥೆಯನ್ನು ಅನುಷ್ಠಾನಗೊಳಿಸಲಾಗಿದೆ. ಉಳಿದಂತೆ ಶಿಕ್ಷಣದಲ್ಲಿನ ಉತ್ಕೃಷ್ಟತೆ ಕಾಪಾಡಿಕೊಳ್ಳುವ ನಿಟ್ಟಿನಲ್ಲಿ ಕೆಲ ಚರ್ಚೆಗಳು ನಡೆಯುತ್ತಿದ್ದು, ಆ ಪ್ರಕಾರ ಕೆಲವು ಸಚಿವರು ರಾಜ್ಯ ಶಿಕ್ಷಣ ನೀತಿಯ ಕರಡನ್ನು ಓದುತ್ತಿರುವುದರಿಂದ ವಿಳಂಬವಾಗಿದೆ ಎಂದು ಡಾ. ಎಂ.ಸಿ.ಸುಧಾಕರ್ ಸ್ಪಷ್ಟಪಡಿಸಿದರು.

ಬಿಜೆಪಿ ಕರ್ನಾಟಕದ ಮಹಾರಥರು ಪುಸ್ತಕ ಬಿಡುಗಡೆ | ಸಂಸದ ಯದುವೀರ್ ಅಭಿಮತ

ವಿದ್ಯಾರ್ಥಿಯಾಗಿ ಬಿಜೆಪಿ ಇತಿಹಾಸ ಕಲಿಕೆ

ಮೈಸೂರು: ಬಿಜೆಪಿ ಕರ್ನಾಟಕದ ಮಹಾರಥರು ಪುಸ್ತಕದ ಮೂಲಕ ಪಕ್ಷದ ರಾಜ್ಯ ನಾಯಕರ ಕೊಡುಗೆಯನ್ನು ದಾಖಲೀಕರಣ ಮಾಡಿಕೊಟ್ಟಿದ್ದಾರೆ. ಪಕ್ಷ ಸಾಗಿ ಬಂದಿರುವ ಹಾದಿ, ಎದುರಿಸಿದ ಸಂಕಷ್ಟ ಎಲ್ಲವನ್ನು ಈ ಪುಸ್ತಕದಲ್ಲಿ ವಿವರಿಸಲಾಗಿದೆ. ಪಕ್ಷದ ನಾಯಕರು ಹಾಕಿಕೊಟ್ಟಿರುವ ಸಿದ್ಧಾಂತ, ಆದರ್ಶಗಳನ್ನು ಮುಂದಿಟ್ಟುಕೊಂಡು ಮುಂದುವರಿಯೋಣ, ಬಿಜೆಪಿಯ ಇತಿಹಾಸವನ್ನು ನಾನು ವಿದ್ಯಾರ್ಥಿಯಾಗಿ ಕಲಿಯುತ್ತಿದ್ದೇನೆ ಎಂದು ಸಂಸದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ತಿಳಿಸಿದರು.



ಚಾಮರಾಜಪುರಂನಲ್ಲಿರುವ ಬಿಜೆಪಿ ಕಚೇರಿಯಲ್ಲಿ ನಡೆದ ಲೇಖಕ ಎಸ್.ಆರ್.ಗೋಪಾಲ್‌ರಾವ್ ಅವರ ಬಿಜೆಪಿ ಕರ್ನಾಟಕದ ಮಹಾರಥರು ಪುಸ್ತಕ ಬಿಡುಗಡೆ ಮಾಡಿ ಅವರು ಮಾತನಾಡಿದರು.

ಮಾಜಿ ಸಿಎಂ ಬಿ.ಎಸ್.ಯಡಿಯೂರಪ್ಪನವರ ಮಾಜಿ ಮಾಧ್ಯಮ ಸಲಹೆಗಾರ ಶಾಂತರಾಮ್ ಮಾತನಾಡಿ, ಎಲ್ಲಾ ರಾಜಕೀಯ ಪಕ್ಷಗಳಲ್ಲಿ ವಿವಿಧ ವರ್ಗದ ಜನರಿಗಾಗಿ ವಿವಿಧ ವಿಭಾಗಗಳಿವೆ. ಆದರೆ ರಾಜಕಾರಣಿಗಳು ಸಾಹಿತ್ಯ ರಚಿಸುವುದಕ್ಕೆ ಪ್ರತ್ಯೇಕ ವಿಭಾಗವಿಲ್ಲ. ಹಾಗಾಗಿ ಈ ನಿಟ್ಟಿನಲ್ಲಿ ಪಕ್ಷಗಳು ಚಿಂತನೆ ನಡೆಸಿ, ರಾಜಕಾರಣಿಗಳಲ್ಲಿ ಸಾಹಿತ್ಯ ರಚನೆಗೆ ಉತ್ತೇಜನ ನೀಡಬೇಕೆಂದು ಹೇಳಿದರು. ಅಖಂಡ ಭಾರತ ನಿರ್ಮಾಣವಾಗಬೇಕು ಎಂಬುದು ದೇಶದ ಜನರ ಬಯಕೆಯಾಗಿತ್ತು. ಆದರೆ ಕಾಂಗ್ರೆಸ್‌ನವರು ದೇಶವನ್ನು ವಿಭಜನೆ ಮಾಡುವ ಮೂಲಕ ದೇಶದ ಜನರಿಗೆ ಆಘಾತವನ್ನುಂಟು ಮಾಡಿದ್ದರು ಎಂದು ವಿಧಾನಪರಿಷತ್ ಸದಸ್ಯ ತೋಂಟದಾರ್ಯ ತಿಳಿಸಿದರು.

ಲೇಖಕ ಎಸ್.ಆರ್.ಗೋಪಾಲ್‌ರಾವ್ ಮಾತನಾಡಿ, ಜಮ್ಮು, ಕಾಶ್ಮೀರದ ಜನರು ದೇಶದ ಎಲ್ಲಿಯಾದರೂ ಭೂಮಿ, ಜಮೀನು ಖರೀದಿಸಬಹುದು. ಆದರೆ ದೇಶದ ಜನರು ಮಾತ್ರ ಜಮ್ಮು ಮತ್ತು ಕಾಶ್ಮೀರದಲ್ಲಿ ಭೂಮಿ ಖರೀದಿಸುವಂತಿಲ್ಲ ಎಂಬ ಕಾಯ್ದೆಯನ್ನು ಜಾರಿಗೊಳಿಸಲಾಯಿತು. ಇದನ್ನು ವಿರೋಧಿಸಿದ ಡಾ.ಶ್ಯಾಮಪ್ರಸಾದ್ ಮುಖರ್ಜಿ ಅವರನ್ನು ಕಾಂಗ್ರೆಸ್ ಸರ್ಕಾರ ಬಂಧಿಸಿ, ಜೈಲಿಗೆ ಹಾಕಿತ್ತು. ಆದರೆ ಅವರು ಹೇಗೆ ಮೃತಪಟ್ಟರು ಎಂಬುದು ಇಂದಿಗೂ ಯಾರಿಗೂ ಗೊತ್ತಿಲ್ಲ ಎಂದರು. ಪಕ್ಷದ ಜಿಲ್ಲಾ ಗ್ರಾಮಾಂತರ ಅಧ್ಯಕ್ಷ ಕುಂಬ್ರಳ್ಳಿ ಎನ್.ಸುಬ್ಬಣ್ಣ ವಹಿಸಿದ್ದರು. ಶಾಸಕ ಟಿ.ಎಸ್. ಶ್ರೀವತ್ಸ, ಪಕ್ಷದ ರಾಜ್ಯ ವಕ್ತಾರ ಎಂ.ಜಿ.ಮಹೇಶ್, ಪ್ರಧಾನ ಕಾರ್ಯದರ್ಶಿ ಸೋಮಸುಂದರ್, ಲೇಖಕ ಎಸ್.ಆರ್.ಗೋಪಾಲ್ ರಾವ್, ಅಲ್ಪಸಂಖ್ಯಾತರ ಮೋರ್ಚಾದ ಅಧ್ಯಕ್ಷ ಡಾ. ಅನಿಲ್ ಥಾಮಸ್ ಮತ್ತಿತರರು ಉಪಸ್ಥಿತರಿದ್ದರು.

ಸಂಪಾದಕೀಯ

ಯುದ್ಧಕ್ಕೆ ಮಧ್ಯಂತರ ವಿರಾಮ

ಇರಾನಿನ ನಾಗರಿಕತೆಯನ್ನೆ ನಾಶ ಮಾಡುತ್ತೇನೆ ಎಂದು ಗುಡುಗಿ, ಇದಕ್ಕೆ ಗಡುವು ವಿಧಿಸಿದ್ದ ಅಮೆರಿಕದ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಹಠಾತ್ತನೆ ಎರಡು ವಾರಗಳ ಕದನ ವಿರಾಮಕ್ಕೆ ಒಪ್ಪಿಕೊಂಡಿದ್ದಾರೆ. ಇರಾನ್ ಕೂಡಾ ಕದನವಿರಾಮದ ಪ್ರಸ್ತಾವವನ್ನು ಒಪ್ಪಿಕೊಂಡಿದ್ದು, ಹೊರ್ಮುಜ್ ಜಲಸಂಧಿಯನ್ನು ಮುಕ್ತಗೊಳಿಸಲು ಸಮ್ಮತಿಸಿದೆ. ಇದು ಕಳೆದ ಒಂದೂವರೆ ತಿಂಗಳಿಂದ ನಡೆಯುತ್ತಿರುವ ಕೊಲ್ಲಿ ಸಮರದ ಕಡೆಯಿಂದ ಕೇಳಿಬಂದ ಮೊದಲ ಸಮಾಧಾನಕರ ಬೆಳವಣಿಗೆ. ಕೇವಲ ಇರಾನ್, ಅಮೆರಿಕ ಮತ್ತು ಯುದ್ಧ ಸಂತ್ರಸ್ತವಾದ ಕೊಲ್ಲಿ ರಾಷ್ಟ್ರಗಳಷ್ಟೇ ಅಲ್ಲದೆ ಇಡೀ ಜಗತ್ತೇ ಈಗ ನಿರಾಳ ನಿಟ್ಟುಸಿರು ಬಿಟ್ಟಿದೆ. ಏಕೆಂದರೆ ಇರಾನ್, ಇಸ್ರೇಲ್, ಅಮೆರಿಕ ನಡುವಿನ ಈ ಸಮರವು ಜಾಗತಿಕ ದುಷ್ಪರಿಣಾಮಗಳನ್ನು ಸೃಷ್ಟಿಸಿತ್ತು. ಯುದ್ಧವು ಇನ್ನಷ್ಟು ಕಾಲ ಮುಂದುವರಿಯುವುದು ಜಗತ್ತಿನ ಎಲ್ಲ ದೇಶಗಳ ಪಾಲಿಗೂ ಅಸಹನೀಯವೆನಿಸಿತ್ತು. ಹಾಗಾಗಿ ತೆರೆಮರೆಯಲ್ಲಿ ಸಾಕಷ್ಟು ಸಂಧಾನ ಪ್ರಕ್ರಿಯೆಗಳು ನಡೆದಿದ್ದವು. ಅಂತಹ ಪ್ರಸ್ತಾಪಗಳು ಆರಂಭದಲ್ಲಿ ಹಿನ್ನಡೆಗಳನ್ನು ಕಂಡಿದ್ದವು. ಆದರೀಗ ಉಭಯತ್ರರೂ ಎರಡುವಾರಗಳ ಕದನವಿರಾಮಕ್ಕೆ ಒಪ್ಪಿರುವುದು ಸಮಾಧಾನಕರ ವಿಷಯ. ಪ್ರಸಕ್ತ ಕದನವಿರಾಮ ರೂಪುಗೊಳ್ಳುವಲ್ಲಿ ನೇಪಥ್ಯದಲ್ಲಿ ಚೀನಾ ಮಹತ್ವದ ಪಾತ್ರ ವಹಿಸಿದೆಯೆಂದು ಈಗ ಹೇಳಲಾಗುತ್ತಿದೆ. ಆದರೆ ಯುದ್ಧ ಪೂರ್ಣ ಸಮಾಪ್ತಿಯಾಯಿತೆಂದು ಈಗಲೇ ಸಂಪೂರ್ಣ ಸಮಾಧಾನಪಟ್ಟುಕೊಳ್ಳುವಂತಿಲ್ಲ. ಏಕೆಂದರೆ ರಾಜತಾಂತ್ರಿಕ ಮಾತುಕತೆಗಳು ಇನ್ನಷ್ಟೇ ನಡೆಯಬೇಕಿವೆ. ಎಲ್ಲರಿಗೂ ಸಮ್ಮತವಾಗುವಂತಹ ಅಂತಿಮ ಒಪ್ಪಂದ ಇನ್ನಷ್ಟೇ ರೂಪುಗೊಳ್ಳಬೇಕಿದೆ. ಈ ಮಾತುಕತೆಯಲ್ಲಿ ಸಾಕಷ್ಟು ಹಗ್ಗಜಗ್ಗಾಟಗಳೂ ನಡೆಯಲಿರುವುದು ಖಂಡಿತ. ಡೊನಾಲ್ಡ್ ಟ್ರಂಪ್‌ನಂತಹ ಅಪ್ರಬುದ್ಧ, ಅಹಂಭಾವಿ ಮುಖಂಡನ ಜತೆ ಸಂಧಾನ ನಡೆಸುವುದೂ ಕಷ್ಟಕರವೆ. ಸಂಧಾನ ಮುರಿದು ಬಿದ್ದು ಹಠಾತ್ತನೆ ಯುದ್ಧ ಪುನರಾರಂಭಗೊಂಡರೂ ಅಚ್ಚರಿ ಪಡಬೇಕಿಲ್ಲ. ಸದ್ಯಕ್ಕಂತೂ ಎರಡು ವಾರಗಳ ವಿರಾಮವಾದರೂ ಸಿಕ್ಕಿತಲ್ಲ ಎಂಬ ಸಮಾಧಾನ.



ಈವರೆಗಿನ ಸಮರವೇ ಸಾಕಷ್ಟು ಹಾನಿ ತಂದೊಡ್ಡಿದೆ. ಜೀವ ಹಾನಿಯಷ್ಟೆ ಅಲ್ಲದೆ ಸೊತ್ತು ಹಾನಿಯೂ ಸಾಕಷ್ಟು ಸಂಭವಿಸಿದೆ. ಬಾಂಬು ದಾಳಿ, ಕ್ಷಿಪಣಿ ದಾಳಿಯಿಂದ ಹಾನಿಗೀಡಾದ ಪ್ರದೇಶಗಳ ದುರಸ್ತಿಗೆ ಬಹಳಷ್ಟು ಪರಿಶ್ರಮ, ವೆಚ್ಚ ತಗಲಲಿದೆ. ಯುದ್ಧದಿಂದಾಗಿ ಬಹಳಷ್ಟು ದೇಶಗಳ ಆರ್ಥಿಕತೆಗೂ ಹೊಡೆತ ಬಿದ್ದಿದೆ. ತೈಲೋತ್ಪನ್ನ ಮತ್ತು ಅಡುಗೆ ಅನಿಲಗಳ ಪೂರೈಕೆಯಲ್ಲಿ ವ್ಯತ್ಯಯವಾಗಿದೆ. ಇವೆಲ್ಲ ಸರಿದಾರಿಗೆ ಬರಲು ಇನ್ನಷ್ಟು ಕಾಲಾವಕಾಶ ಬೇಕು. ಭಾರತಕ್ಕೆ ಸಂಬಂಧಿಸಿ ಹೇಳುವುದಾದರೆ, ಸಮರ ಕಾಲದಲ್ಲೂ ತೈಲ ಪರಿಸ್ಥಿತಿ ಮತ್ತು ಎಲ್‌ಪಿಜಿ ಪೂರೈಕೆಯನ್ನು ಸಮರ್ಥವಾಗಿ ನಿಭಾಯಿಸಿರುವುದಕ್ಕೆ ಭಾರತ ಸರಕಾರವನ್ನು ಅಭಿನಂದಿಸಬೇಕಾಗುತ್ತದೆ. ಈ ಯುದ್ಧ ಎಲ್ಲರಿಗೂ ಸಾಕಷ್ಟು ಪಾಠಗಳನ್ನು ಕಲಿಸಿದೆ. ಇನ್ನಾದರೂ ಯುದ್ಧ ನಿರತ ಪಕ್ಷಗಳೆಲ್ಲವೂ ಯುಕ್ತ ಜ್ಞಾನವನ್ನು ತಂದುಕೊಂಡು ಸಮರಕ್ಕೆ ಶಾಶ್ವತ ಅಂತ್ಯ ಹಾಡಲಿ, ಜಾಗತಿಕ ವ್ಯವಸ್ಥೆ ಮತ್ತೆ ಹಿಂದಿನ ಪರಿಸ್ಥಿತಿಗೆ ಮರಳಲಿ ಎಂಬುದು ಎಲ್ಲರ ಆಶಯ.

ಸಂಭಾವಿತರೇಕೆ ದಲ್ಲಾಳಿಗಳಾಗಲು ಸಾಧ್ಯವಿಲ್ಲ ಗೊತ್ತೇ?

ಗುರುತರ
ಸೋಮಶೇಖರ ಸಿ.ಜೆ.
sompreethi@gmail.com



ಅಮೆರಿಕ-ಇಸ್ರೇಲ್ ಮತ್ತು ಇರಾನ್ ನಡುವಿನ ಯುದ್ಧಕ್ಕೆ ಎರಡು ವಾರಗಳ ಕದನ ವಿರಾಮ ಘೋಷಣೆಯಾಗಿದೆ. ಆದರೆ, ಈ ಕದನ ವಿರಾಮವನ್ನು ಶಾಂತಿಯ ಮುನ್ಸೂಚನೆ ಎಂದು ಭಾವಿಸಬಹುದೇ? ಅಥವಾ ಇದೊಂದು ಮುಂದಿನ ಅಧ್ಯಾಯಕ್ಕೆ ತಾತ್ಕಾಲಿಕ ಅಲ್ಪವಿರಾಮವೇ? ಈ ಎರಡೂ ಪ್ರಶ್ನೆಗಳಿಗೆ ಉತ್ತರ ಹುಡುಕಬೇಕಾದರೆ, ಈ ಇಡೀ ಯುದ್ಧದ ಹಿಂದಿನ ರಾಜಕೀಯ ನಾಟಕವನ್ನು ಅರ್ಥಮಾಡಿಕೊಳ್ಳಬೇಕು. ವಿಶೇಷವಾಗಿ, ಈ ಯುದ್ಧದ ಮಧ್ಯಸ್ಥಿಕೆಗೆ ಯಾರು ಬಂದರು, ಯಾಕೆ ಬಂದರು, ಮತ್ತು ಅದರ ಹಿಂದಿನ ಲೆಕ್ಕಾಚಾರವೇನು ಎಂಬುದನ್ನು ವಿಶ್ಲೇಷಿಸಬೇಕು.

ಈ ಯುದ್ಧ ಆರಂಭವಾದಾಗಿನಿಂದಲೂ ಅದರ ಪರಿಣಾಮಗಳು ಜಗತ್ತಿನಾದ್ಯಂತ ಅನುಭವಕ್ಕೆ ಬರುತ್ತಿದ್ದವು. ತೈಲ ಬೆಲೆ ಏರಿಕೆ, ಹಡಗು ಸಾರಿಗೆ ಅಡಚಣೆ, ಜಾಗತಿಕ ಆರ್ಥಿಕ ಅನಿಶ್ಚಿತತೆ ಒಂದಲ್ಲ ಒಂದು ರೀತಿಯಲ್ಲಿ ಪ್ರತಿಯೊಂದು ದೇಶವೂ ಈ ಯುದ್ಧದ ಬಿಸಿಯನ್ನು ಅನುಭವಿಸುತ್ತಿತ್ತು. ಹೀಗಾಗಿ, ಜಗತ್ತಿನ ಬಹುತೇಕ ರಾಷ್ಟ್ರಗಳು ಈ ಯುದ್ಧ ಒಂದು ನಿಂತರೆ ಸಾಕು ಎಂದು ಹಂಬಲಿಸುತ್ತಿದ್ದವು. ಆದರೆ, ಈ ಯುದ್ಧವನ್ನು ನಿಲ್ಲಿಸಬೇಕಾದರೆ ಯಾರೋ ಒಬ್ಬರು ಮಧ್ಯಸ್ಥಿಕೆಗೆ ಮುಂದೆ ಬರಬೇಕಿತ್ತು. ಆದರೆ, ಆ ಮಧ್ಯಸ್ಥಿಕೆಯ ಪಾತ್ರವನ್ನು ವಹಿಸಿಕೊಳ್ಳುವುದು ಅಷ್ಟು ಸುಲಭವಾಗಿರಲಿಲ್ಲ.

ಏಕೆಂದರೆ, ಸ್ವತಃ ಅಮೆರಿಕದ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರ ನಡೆ-ನುಡಿಯೇ ಒಂದು ದೊಡ್ಡ ಸಮಸ್ಯೆಯಾಗಿತ್ತು. ಒಂದು ಕಡೆ ಯುದ್ಧ ಮಾಡುತ್ತಿದ್ದರೂ, ಮತ್ತೊಂದೆಡೆ ತಮ್ಮ ಮಿತ್ರರಾಷ್ಟ್ರಗಳನ್ನೇ ದೂರ ಮಾಡಿಕೊಂಡಿದ್ದರು. ನ್ಯಾಟೋ ಮೈತ್ರಿಕೂಟದೊಂದಿಗಿನ ಸಂಬಂಧ ಹಳಸಿಹೋಗಿತ್ತು. ಅಮೆರಿಕದ ಅತ್ಯಂತ ಆಪ್ತ ಮಿತ್ರರಾಷ್ಟ್ರಗಳಾದ ಫ್ರಾನ್ಸ್ ಮತ್ತು ಬ್ರಿಟನ್‌ನ ನಾಯಕರೂ ಟ್ರಂಪ್ ಅವರಿಂದ ಅಂತರ ಕಾಯ್ದುಕೊಂಡಿದ್ದರು. ಸ್ಪೇನ್‌ನಂಥ ದೇಶಗಳ ನಾಯಕರಂತೂ ನೇರವಾಗಿಯೇ ಈ ಯುದ್ಧಕ್ಕೆ ವಿರೋಧ ವ್ಯಕ್ತಪಡಿಸಿ, ಟ್ರಂಪ್ ಅವರ ಮುಖಕ್ಕೆ ಹೊಡೆದಂತೆ ನಾವು ಭಾಗಿಯಾಗಲ್ಲ ಎಂದು ಸ್ಪಷ್ಟವಾಗಿ ಹೇಳಿಬಿಟ್ಟಿದ್ದರು. ಒಟ್ಟಾರೆ, ಈ ಯುದ್ಧ ಅಮೆರಿಕಕ್ಕೆ ರಾಜತಾಂತ್ರಿಕವಾಗಿ ಭಾರೀ ನಷ್ಟ ಉಂಟುಮಾಡಿತ್ತು.

ಇಂಥ ಸಂದರ್ಭದಲ್ಲಿ ಟ್ರಂಪ್ ಅವರಿಗೆ ಯುದ್ಧ ನಿಲ್ಲಿಸುವ ಅನಿವಾರ್ಯತೆ ಬಂದಿತ್ತು. ಆದರೆ, ಮಧ್ಯಸ್ಥಿಕೆಗೆ ಬೇಕಾದ ವ್ಯಕ್ತಿ ಅಥವಾ ದೇಶ ಎಂಥದ್ದಿರಬೇಕು ಎಂಬುದೇ ಇಲ್ಲಿ ಕುತೂಹಲಕರ ಅಂಶ. ಸಾಮಾನ್ಯವಾಗಿ, ಮಧ್ಯಸ್ಥಿಕೆ ವಹಿಸುವ ದೇಶವೆಂದರೆ ಅದು ಎರಡೂ ಪಕ್ಷಗಳ ನಂಬಿಕೆ ಗಳಿಸಿರುವ, ಜಾಗತಿಕ ಮಟ್ಟದಲ್ಲಿ ಗೌರವ ಹೊಂದಿರುವ, ತಟಸ್ಥ ನಿಲುವಿನ ದೇಶವಾಗಿರಬೇಕು. ಆದರೆ, ಇಲ್ಲಿ ಟ್ರಂಪ್ ಅವರಿಗೆ ಅಂಥ ಸಂಭಾವಿತ ದೇಶ ಬೇಕಿರಲೇ ಇಲ್ಲ. ಏಕೆಂದರೆ, ಮಾತುಕತೆ ಯಶಸ್ವಿಯಾದರೂ ಸರಿಯೇ, ವಿಫಲವಾದರೂ ಸರಿಯೇ ಎಲ್ಲ ಸಂದರ್ಭಗಳಲ್ಲೂ ಮಧ್ಯಸ್ಥಿಕೆದಾರನನ್ನೇ ಬಲಿಪಶು ಮಾಡಿ, ಜವಾಬ್ದಾರಿಯಿಂದ ತಪ್ಪಿಸಿಕೊಳ್ಳುವ ಅವಕಾಶ ಬೇಕಿತ್ತು. ಜಗತ್ತಿನ ಮರ್ಯಾದಾವಂತ ರಾಷ್ಟ್ರಗಳು ಈ ಪಾತ್ರಕ್ಕೆ ಒಪ್ಪಲು ಸಾಧ್ಯವೇ ಇರಲಿಲ್ಲ. ಟ್ರಂಪ್ ಅವರ ಹುಚ್ಚುತನದ ನಡೆಗಳೊಂದಿಗೆ ಕುಳಿತು ಮಾತನಾಡುವುದೇ ಅಪಮಾನ ಎಂದು ಭಾವಿಸುವ ವಾತಾವರಣ ಆಗ ಜಗತ್ತಿನಲ್ಲಿ ಮನೆಮಾಡಿತ್ತು.

ಇಂಥ ಹೊತ್ತಿನಲ್ಲಿ ಸಿಕ್ಕಿದ್ದು ಪಾಕಿಸ್ತಾನ. ಪಾಕಿಸ್ತಾನ ಏನಾದರೂ ಜಾಗತಿಕ ಮಟ್ಟದಲ್ಲಿ ನಂಬಿಕೆಯ ಸಂಕೇತವೇ? ಅಥವಾ ಜಾಗತಿಕ ರಾಜಕಾರಣದಲ್ಲಿ ಭಾರೀ ಪ್ರಭಾವ ಹೊಂದಿರುವ ಶಕ್ತಿಯೇ? ಖಂಡಿತಾ ಅಲ್ಲ. ಆದರೆ, ಟ್ರಂಪ್ ಅವರಿಗೆ ಬೇಕಿದ್ದುದು ಕೇವಲ ಒಂದು ವೇದಿಕೆ. ತಮ್ಮ ಸಂದೇಶವನ್ನು ಇರಾನ್‌ಗೆ ತಲುಪಿಸಲು ಒಂದು ಮಾಧ್ಯಮ. ಪಾಕಿಸ್ತಾನ ಆ ಪಾತ್ರಕ್ಕೆ ಹೇಳಿ ಮಾಡಿಸಿದಂತಿತ್ತು. ಅದಕ್ಕೆ ಕಾರಣವೂ ಇತ್ತು ಪಾಕಿಸ್ತಾನಕ್ಕೆ ಇರಾನ್ನೊಂದಿಗೆ ಗಡಿ ಹಂಚಿಕೊಳ್ಳುವ ಭೌಗೋಳಿಕ ಸಂಬಂಧವಿತ್ತು, ಮತ್ತು ಅಮೆರಿಕದ ಒತ್ತಡಕ್ಕೆ ಒಳಗಾಗಬಹುದಾದ ಆರ್ಥಿಕ ಅವಲಂಬನೆಯೂ ಇತ್ತು. ಆದರೆ ಒಂದು ಮಾತು ಸ್ಪಷ್ಟ ಯಾರಿಗಾದರೂ ಯುದ್ಧ ಮಾಡಬೇಡಿ ಎಂದು ಹೇಳಿ ಒಪ್ಪಿಸುವ ನೈತಿಕ ಸ್ಥಾನದಲ್ಲಂತೂ ಪಾಕಿಸ್ತಾನ ಇರಲಿಲ್ಲ. ಒಟ್ಟಾರೆಯಾಗಿ ಹೇಳುವುದಾದರೆ, ಪಾಕಿಸ್ತಾನ ಬಳಸಿ ಎಸೆಯಬಹುದಾದ ದಾಳದಂತೆ ಕೆಲಸ ಮಾಡಿತು ಅಷ್ಟೇ, ಅದಕ್ಕಿಂತ ಹೆಚ್ಚೇನೂ ಅಲ್ಲ.

ಈಗ ಕದನ ವಿರಾಮ ಘೋಷಣೆಯಾಗಿದೆ ನಿಜ. ಆದರೆ, ಟ್ರಂಪ್ ಅವರ ಮಾತುಗಳು ಮಾತ್ರ ಬದಲಾಗಿಲ್ಲ. ಕದನ ವಿರಾಮದ ಮಾತನಾಡುತ್ತಲೇ,



ಇರಾನ್‌ಗೆ ಶಸ್ತ್ರಾಸ್ತ್ರ ಒದಗಿಸುವ ದೇಶಗಳ ಮೇಲೆ ಶೇ.50ರಷ್ಟು ಟ್ಯಾರಿಫ್ ಹೇರುವುದಾಗಿ ಬೆದರಿಕೆ ಹಾಕಿದ್ದಾರೆ. ಒಮ್ಮೆ ಕದನ ವಿರಾಮ ಘೋಷಣೆಯಾದ ಮೇಲೆ, ಶಾಂತಿಯ ಹಾದಿಯಲ್ಲಿ ಮುನ್ನಡೆಯಬೇಕಾದ ಸಮಯದಲ್ಲಿ ಇಂಥ ಪ್ರಚೋದನಕಾರಿ ಮಾತುಗಳೇಕೆ? ಇದು ಟ್ರಂಪ್ ಅವರ ಚಂಚಲ ಸ್ವಭಾವವನ್ನು ಮತ್ತೊಮ್ಮೆ ಜಗತ್ತಿನ ಮುಂದೆ ಬಯಲು ಮಾಡಿದೆ. ಇಂಥ ಅನಿರೀಕ್ಷಿತ ನಡೆಗಳನ್ನು ನೋಡಿದಾಗ, ಯಾವ ಸಂಭಾವಿತ ರಾಷ್ಟ್ರವಾದರೂ ಟ್ರಂಪ್ ಜತೆಗೆ ಕುಳಿತು ಮಧ್ಯಸ್ಥಿಕೆ ವಹಿಸಲು ಸಾಧ್ಯವೇ ಎಂಬ ಪ್ರಶ್ನೆ ಮತ್ತೆ ಮತ್ತೆ ಮೂಡುತ್ತದೆ.

ಆದರೆ, ಈ ಸಂಗತಿಗಳು ಭಾರತದಲ್ಲೇ ಇರುವ ಪ್ರಗತಿಪರರು, ಬುದ್ಧಿಜೀವಿಗಳು ಅನ್ನಿಸಿಕೊಂಡವರಿಗೆ, ಪ್ರತಿಪಕ್ಷ ಕಾಂಗ್ರೆಸ್‌ಗೆ ಗೊತ್ತಾಗುತ್ತಲೇ ಇಲ್ಲ. ತೀರ ಅನಿಶ್ಚಿತತೆ ಮನಸ್ಸುಳ್ಳ ಟ್ರಂಪ್ ಪರವಾಗಿ ಎಲ್ಲಾದರೂ ಮಧ್ಯಸ್ಥಿಕೆ ವಹಿಸಲು ಸಾಧ್ಯವೇ? ಒಂದು ವೇಳೆ ಮಾತುಕತೆ ಮುರಿದುಬಿದ್ದು, ಮಧ್ಯಸ್ಥಿಕೆ ವಹಿಸಿದ್ದ ದೇಶವನ್ನೇ ತಪ್ಪಿತಸ್ಥರನ್ನಾಗಿ ಮಾಡಿಬಿಟ್ಟರೆ? ಇದಕ್ಕಾಗಿಯೇ ಇತ್ತೀಚೆಗಷ್ಟೇ ವಿದೇಶಾಂಗ ಸಚಿವ ಎಸ್.ಜೈಶಂಕರ್ ಅವರು ಭಾರತ ದಲ್ಲಾಳಿ ದೇಶವಲ್ಲ ಎಂದು ಕಡ್ಡಿ ಮುರಿದಂತೆ ಹೇಳಿದ್ದು.

ಭಾರತಕ್ಕೆ ಹಿಂದಿನಿಂದಲೂ ತನ್ನದೇ ಆದ ಒಂದು ಗೌರವ ಇರಿಸಿಕೊಂಡಿದೆ. ಈ ಗೌರವವನ್ನು ಟ್ರಂಪ್ ದೆಸೆಯಿಂದ ಕಳೆದುಕೊಳ್ಳಲು ಸಾಧ್ಯವೇ ಇಲ್ಲ. ಅದು ಆಗಲೂ ಬಾರದು. ರಾಜತಾಂತ್ರಿಕತೆ ಮತ್ತು ವಿದೇಶಾಂಗ ವ್ಯವಹಾರ ಎಂದರೇನು ಎಂಬುದೇ ತಿಳಿಯದ ವ್ಯಕ್ತಿ ನಂಬಿ ಯಾವ ಕೆಲಸವನ್ನೂ ಮಾಡಲು ಸಾಧ್ಯವಿಲ್ಲ. ನೋಡಿ ಇತ್ತೀಚೆಗಷ್ಟೇ ಟ್ರಂಪ್, ಫ್ರಾನ್ಸ್‌ಗೆ ಬೈಯ್ಯುವಾಗ, ಮ್ಯಾಕ್ರಾನ್ ಪತ್ನಿಯ ವಯಸ್ಸಿನ ಬಗ್ಗೆ ವ್ಯಂಗ್ಯ ಮಾಡಿಬಿಟ್ಟರು. ಮತ್ತೊಂದು ದೇಶದ ಮುಖ್ಯಸ್ಥನ ಪತ್ನಿ ಬಗ್ಗೆ ತಾನು ಮಾತನಾಡಬಹುದೇ? ಎಂಬ ಕನಿಷ್ಠ ಜ್ಞಾನವೂ ಟ್ರಂಪ್‌ಗಿಲ್ಲ.

ಆದರೆ, ಪಾಕಿಸ್ತಾನದ ಸ್ಥಿತಿ ಹಾಗಿಲ್ಲ. ಮೊದಲೇ ಹೇಳಿದ ಹಾಗೆ, ಇಲ್ಲಿ ಮಾನ-ಮರ್ಯಾದೆ ಎಂಬುದಕ್ಕೆ ಅರ್ಥವೇ ಗೊತ್ತಿಲ್ಲ. ಗಾಜಾ ಶಾಂತಿ ಪಡೆ ವಿಚಾರದಲ್ಲಿ ಅಮೆರಿಕಕ್ಕೇ ಕರೆಸಿಕೊಂಡ ಪಾಕ್ ಪ್ರಧಾನಿ ಶಾಭಾಜ್ ಷರೀಫ್‌ಗೆ ಟ್ರಂಪ್ ಅವಮಾನಿಸಿ ಕಳಿಸಿದರು. ಅಷ್ಟೇ ಅಲ್ಲ, ದೇಶದ ಪ್ರಧಾನಿಗೂ ಮೀರಿ, ಈ ದೇಶದ ಸೇನಾ ಮುಖ್ಯಸ್ಥನನ್ನು ಶ್ವೇತಭವನಕ್ಕೆ ಕರೆಸಿ ಸನ್ಮಾನ ಮಾಡಿ ಕಳಿಸಿದರು. ಇದು ಆ ದೇಶದ ಪ್ರಧಾನಿಗೆ ಮಾಡುವ ದೊಡ್ಡ ಅವಮಾನ. ಆದರೂ, ಶಾಭಾಜ್‌ಗೆ ಇದು ಅರ್ಥವಾಗಲೇ ಇಲ್ಲ. ಟ್ರಂಪ್ ತನಗಿಂತ ಸೇನಾ ಮುಖ್ಯಸ್ಥರಿಗೇ ಹೆಚ್ಚು ಮನ್ನಣೆ ನೀಡುತ್ತಿದ್ದಾರೆ ಎಂಬುದೂ ಗೊತ್ತಾಗಲಿಲ್ಲ. ಏಕೆಂದರೆ, ಮೊದಲಿನಿಂದಲೂ ಶಾಭಾಜ್ ಷರೀಫ್ ಜೋಕರ್‌ನಂತೆ ಕೆಲಸ ಮಾಡುತ್ತಿದ್ದಾರೆಯೇ ವಿನಃ ತೀರಾ ಗಂಭೀರದಿಂದ ವರ್ತಿಸುತ್ತಿಲ್ಲ. ಅಷ್ಟೇ ಅಲ್ಲ, ಆಪರೇಶನ್ ಸಿಂದೂರ್ ವೇಳೆ ಟ್ರಂಪ್, ಪಾಕ್ ಅನ್ನು ಭಾರತದ ಕೈಯಿಂದ ಕಾಪಾಡಿದ್ದರು. ಭಾರತದ ಆಕ್ರಮಣ, ಆಕ್ರೋಶಕ್ಕೆ ಬಸವಳಿದಿದ್ದ ಪಾಕ್‌ಗೆ ಜೀವ ಬೇಕಿತ್ತು. ಆದರೆ ಟ್ರಂಪ್‌ಗೆ ಅಡ್ಡಬಿದ್ದು, ಕದನ ವಿರಾಮವಾಗುವಂತೆ ಮಾಡಿಕೊಂಡಿದ್ದರು. ಪಾಪ, ಆ ಹೊತ್ತಿನ ಋಣವನ್ನು ಸಂದಾಯ ಮಾಡಬೇಕಾಗಿತ್ತು. ಅದಕ್ಕೆ ಈಗ ಮಧ್ಯವರ್ತಿ ಅಥವಾ ದಲ್ಲಾಳಿ ರೀತಿ ಪಾಕ್ ಕೆಲಸ ಮಾಡಿತು.

ಇನ್ನು ಈ ಯುದ್ಧದಲ್ಲಿ ಗೆದ್ದವರು ಯಾರು ಎಂಬ ಪ್ರಶ್ನೆಗೆ ಉತ್ತರ ಹುಡುಕಿದರೆ, ಅದು ಇರಾನ್ ಕಡೆಗೇ ವಾಲುತ್ತದೆ. ಅಮೆರಿಕ ಮತ್ತು ಇಸ್ರೇಲ್‌ನ ಸಂಯುಕ್ತ ಮಿಲಿಟರಿ ಶಕ್ತಿಯ ಮುಂದೆ ಇರಾನ್ ಏನೇನೂ ಅಲ್ಲ ಎಂದು ಅನೇಕರು ಭಾವಿಸಿದ್ದರು. ಆದರೆ, ಇರಾನ್ ಅಮೆರಿಕಕ್ಕೆ ಸರಿಯಾಗಿಯೇ ತಿರುಗೇಟು ನೀಡಿತು. ಮಧ್ಯಪ್ರಾಚ್ಯದ ಇತರ ದೇಶಗಳನ್ನೂ ನಡುಗಿಸಿತು. ಯುದ್ಧ ನಿಲ್ಲಿಸಬೇಕು ಎಂಬ ಒತ್ತಡ ಅಮೆರಿಕದ ಮೇಲೆಯೇ ಬಿದ್ದಿತು ಎಂಬ ಸತ್ಯವೇ ಇರಾನ್ನ ಮೇಲುಗೈಯನ್ನು ಸಾಬೀತುಪಡಿಸುತ್ತದೆ. ಅಮೆರಿಕ ಮತ್ತು ಇಸ್ರೇಲ್ ಸೇನಾ ತಾಂತ್ರಿಕತೆಯಲ್ಲಿ ಮುಂದಿದ್ದರೂ, ರಾಜಕೀಯವಾಗಿ ಮತ್ತು ರಾಜತಾಂತ್ರಿಕವಾಗಿ ಅವರು ಸೋಲನ್ನು ಅನುಭವಿಸಿದ್ದಂತೂ ನಿಶ್ಚಿತ.

ಒಟ್ಟಾರೆಯಾಗಿ ಈ ಸಂಪೂರ್ಣ ಪ್ರಕರಣ ಜಾಗತಿಕ ರಾಜಕಾರಣದ ಒಂದು ಕಟು ಸತ್ಯವನ್ನು ಬಿಚ್ಚಿಡುತ್ತದೆ. ಅದೆಂದರೆ ಒಬ್ಬ ನಾಯಕನ ಹುಚ್ಚುತನ ಇಡೀ ಜಾಗತಿಕ ವ್ಯವಸ್ಥೆಯನ್ನು ಹೇಗೆ ಅಲ್ಲೋಲಕಲ್ಲೋಲ ಮಾಡಬಲ್ಲದು ಎಂಬುದು.

ಟ್ರಂಪ್ ಅವರ ಈ ಯುದ್ಧ ಅಮೆರಿಕಕ್ಕೆ ಮಿತ್ರರನ್ನು ಕಳೆದುಕೊಳ್ಳುವಂತೆ ಮಾಡಿತು, ಇರಾನ್‌ಗೆ ನೈತಿಕ ಶಕ್ತಿಯನ್ನು ನೀಡಿತು, ಮತ್ತು ಪಾಕಿಸ್ತಾನದಂಥ ದೇಶವನ್ನು ಒಂದು ಬಳಸಿ ಎಸೆಯುವ ಸಾಧನದಂತೆ ಉಪಯೋಗಿಸಲಾಯಿತು. ಸಂಭಾವಿತರು ದಲ್ಲಾಳಿಗಳಾಗಲು ಸಾಧ್ಯವಿಲ್ಲ ಎಂಬ ಮಾತು ಇಲ್ಲಿ ಅಕ್ಷರಶಃ ಸತ್ಯವಾಗಿದೆ. ಏಕೆಂದರೆ, ಟ್ರಂಪ್ ಎಂಬ ವ್ಯಕ್ತಿತ್ವದ ಜತೆಗೆ ಕೈಜೋಡಿಸುವುದೇ ಒಂದು ಅಪಾಯ ಎಂಬುದನ್ನು ಜಗತ್ತು ಈಗಾಗಲೇ ಅರ್ಥಮಾಡಿಕೊಂಡಿದೆ. ಈ ಕದನ ವಿರಾಮ ಎಷ್ಟು ದಿನ ಉಳಿಯುತ್ತದೆ ಎಂಬುದು ಸಹ ಟ್ರಂಪ್ ಅವರ ಮನಸ್ಥಿತಿಯ ಮೇಲೆಯೇ ನಿಂತಿದೆ ಇದೇ ಇಂದಿನ ಜಗತ್ತಿನ ದುರಂತ.

ಅಸ್ಸಾಂ: ಬಿಜೆಪಿ ಹ್ಯಾಟ್ರಿಕ್ ಸಾಧಿಸೀತೆ?

ಹಿಮಂತ ಬಿಸ್ವ ನೇತೃತ್ವದ ಬಿಜೆಪಿ ಸರಕಾರವು ಉತ್ತಮ ಆಡಳಿತ ನೀಡಿದ ಕಾರಣಕ್ಕಾಗಿ ಈ ಬಾರಿ ಹ್ಯಾಟ್ರಿಕ್ ಗೆಲುವು ಸಾಧಿಸುವ ಸಂಕೇತಗಳು ತೋರುತ್ತಿವೆ.

ಕೆ.ಆರ್. ಕಾಮತ್



ಅಸ್ಸಾಂ ಚುನಾವಣೆಗೆ ಇಂದು ಮತದಾನ ನಡೆಯಲಿದೆ. ಅಸ್ಸಾಂನಲ್ಲಿ ಇಪ್ಪತ್ತೈದು ವರ್ಷಗಳ ನಂತರ ಒಂದೇ ಹಂತದಲ್ಲಿ ಮತದಾನವು ಜರುಗುತ್ತಿರುವುದು ಅತ್ಯಂತ ಮಹತ್ವದ ವಿಷಯವೆ. ಹತ್ತು ವರ್ಷಗಳಿಂದ ಅಧಿಕಾರದಲ್ಲಿರುವ ಭಾರತೀಯ ಜನತಾ ಪಕ್ಷ ಸರಕಾರವು ರಾಜ್ಯದಲ್ಲಿ ಶಾಂತಿ ಮತ್ತು ಕಾನೂನು ಸುವ್ಯವಸ್ಥೆ ಮರುಸ್ಥಾಪಿಸಿರುವುದೇ ಇದಕ್ಕೆ ಪ್ರಮುಖ ಕಾರಣ.

ಈ ಚುನಾವಣೆಯಲ್ಲಿ ಯಾವ ಪಕ್ಷ ಅಧಿಕಾರಕ್ಕೆ ಬರಲಿದೆ ಎಂಬುದು ಎಂದೋ ಇತ್ಯರ್ಥವಾದ ವಿಷಯ ಎಂಬುದು ಬಹುತೇಕರ ಅಭಿಪ್ರಾಯ. ಅಸ್ಸಾಂನಲ್ಲಿ ಈಗ ತೀವ್ರಗತಿಯಲ್ಲಿ ಸಾಗುತ್ತಿರುವ ಅಭಿವೃದ್ಧಿ ಕಾರ್ಯಗಳು ಮತ್ತು ಬೆಳವಣಿಗೆಗಳನ್ನು ಸೂಕ್ಷ್ಮವಾಗಿ ಗಮನಿಸುತ್ತಿರುವವರಿಗೆ ಅಸ್ಸಾಮಿನಲ್ಲಿ ಯಾರು ಅಧಿಕಾರಕ್ಕೆ ಬರುತ್ತಾರೆಂದು ಊಹಿಸುವುದು ಕಷ್ಟವೇನಲ್ಲ. ಬಿಜೆಪಿ ಮತ್ತೆ ಅಧಿಕಾರಕ್ಕೇರಿ ಹ್ಯಾಟ್ರಿಕ್ ಸಾಧಿಸಲಿದೆಯೆಂಬುದು ಬಹುತೇಕ ರಾಜಕೀಯ ಪಂಡಿತರ ಅಭಿಪ್ರಾಯವಾಗಿದೆ.

ಅಸ್ಸಾಂನಲ್ಲಿ ಮೇಲಿನ ಅಸ್ಸಾಂ, ಕೆಳಗಿನ ಅಸ್ಸಾಂ ಮತ್ತು ಬರಾಕ್ ಕಣಿವೆ–ಬೆಟ್ಟಗಳು ಎಂಬ ಮೂರು ಪ್ರಾಂತ್ಯಗಳಿವೆ. ಮೇಲಿನ ಅಸ್ಸಾಂನಲ್ಲಿ 56 ವಿಧಾನಸಭಾ ಸ್ಥಾನಗಳು, ಕೆಳಗಿನ ಅಸ್ಸಾಂನಲ್ಲಿ 50 ಸ್ಥಾನಗಳು ಮತ್ತು ಬರಾಕ್ ಕಣಿವೆಯಲ್ಲಿ 20 ಸ್ಥಾನಗಳಿವೆ. ಅಸ್ಸಾಂನಲ್ಲಿ ಒಟ್ಟು 126 ವಿಧಾನಸಭಾ ಸ್ಥಾನಗಳಿವೆ.

2021ರ ಚುನಾವಣೆಯಲ್ಲಿ ಮೇಲಿನ ಅಸ್ಸಾಂ ಮತ್ತು ಕೆಳಗಿನ ಅಸ್ಸಾಂ ಪ್ರಾಂತ್ಯಗಳು ಹೆಚ್ಚಾಗಿ ಬಿಜೆಪಿಯನ್ನು ಬೆಂಬಲಿಸಿದರೆ, ಬರಾಕ್ ಕಣಿವೆ ಪ್ರಾಂತ್ಯದಲ್ಲಿ ಕಾಂಗ್ರೆಸ್ಸಿಗೆ ಹೆಚ್ಚು ಸ್ಥಾನ ದೊರಕಿತ್ತು. 2021ರಲ್ಲಿ ಪಕ್ಷಗಳ ಬಲಾಬಲ: ಎನ್‌ಡಿಎ –75, ಯುಪಿಎ–50, ಪಕ್ಷೇತರ –1.

ಸುಮಾರು ಎರಡು ದಶಕಗಳ ಹಿಂದೆ ಅಸ್ಸಾಂ ಒಂದು ಪ್ರಕ್ಷುಬ್ಧ ಪೀಡಿತ ಪ್ರದೇಶವಾಗಿತ್ತು. ಬಾಂಬ್‌ಸ್ಫೋಟಗಳು, ಕೊಲೆಗಳು, ಉಗ್ರಗಾಮಿಗಳ ಹಿಂಸಾಕೃತ್ಯಗಳು, ದರೋಡೆ, ಅಪಹರಣ ಮುಂತಾದವು ದಿನನಿತ್ಯದ ಸಂಗತಿಗಳಾಗಿದ್ದವು. ಅಸ್ಸಾಂನಲ್ಲಿ ಜನರು "ನಾನು ಭಾರತೀಯನಲ್ಲ. ನಾನು ಅಸ್ಸಾಮಿ" ಎನ್ನುತ್ತಿದ್ದರು. ನಾನು ಭಾರತೀಯ ಎಂದು ಹೇಳಲು ಅವರು ಹೆದರುತ್ತಿದ್ದರು. ಉಗ್ರಗಾಮಿಗಳು ಮತದಾನ ಮಾಡಲು ಬಿಡುತ್ತಿರಲಿಲ್ಲ. ಜನಗಳು ಮತಗಟ್ಟೆಗೆ ಹೋಗಿ ಮತದಾನ ಮಾಡಲು ಹೆದರುತ್ತಿದ್ದರು. ಕತ್ತಲು ಕವಿಯುತ್ತಿದ್ದಂತೆ ರಸ್ತೆಗಳು ನಿರ್ಮಾನುಷ್ಯವಾಗುತ್ತಿದ್ದವು. ರಾಜ್ಯದಲ್ಲಿ ಬಂಡವಾಳ ಹೂಡಿಕೆ ನಿಂತು ಹೋಗಿತ್ತು. ಅಭಿವೃದ್ಧಿ ಕುಂಠಿತವಾಗಿತ್ತು.

ಆದರೆ ಅಸ್ಸಾಂನಲ್ಲಿ ಒಮ್ಮೆ ಬಿಜೆಪಿ ಸರಕಾರ ಅಧಿಕಾರಕ್ಕೆ ಬಂದಿದ್ದೆ ತಡ ಇಂತಹ ಎಲ್ಲ ಕೃತ್ಯಗಳಿಗೆ ಕಡಿವಾಣ ಬಿತ್ತು. ಸಹಸ್ರಾರು ಉಗ್ರಗಾಮಿಗಳು ಶಸ್ತ್ರಾಸ್ತ್ರಗಳನ್ನು ಕೆಳಗಿಟ್ಟು ಸರಕಾರಕ್ಕೆ ಶರಣಾಗಿದ್ದಾರೆ. ವಿಧ್ವಂಸಕ ಕೃತ್ಯಗಳು ನಿಂತುಹೋಗಿವೆ. ರಾಜ್ಯದಲ್ಲಿ ಶಾಂತಿ ನೆಲೆಸಿದೆ. ಇಂದು ಅಸ್ಸಾಂ ಪ್ರಗತಿಯ ಹಾದಿಯಲ್ಲಿ ವೇಗವಾಗಿ ಮುಂದಕ್ಕೆ ಸಾಗುತ್ತಿದೆ.

ಕೇಂದ್ರದಲ್ಲಿ ಕಾಂಗ್ರೆಸ್ ಸರ್ಕಾರದ ಪ್ರಧಾನಮಂತ್ರಿ ಮನಮೋಹನ್ ಸಿಂಗ್ ಅಸ್ಸಾಂನಿಂದಲೇ ರಾಜ್ಯಸಭೆಗೆ ಆಯ್ಕೆಯಾಗಿದ್ದರೂ ಅವರು ತಮ್ಮ ಅಧಿಕಾರಾವಧಿಯಲ್ಲಿ (2004–2014) ಕೇವಲ 10 ಬಾರಿ ಅಸ್ಸಾಂಗೆ ಭೇಟಿ ನೀಡಿದ್ದರು. ಆದರೆ ಎನ್‌ಡಿಎ ಸರ್ಕಾರದ ಪ್ರಧಾನ ಮಂತ್ರಿ ನರೇಂದ್ರ ಮೋದಿ 2014–2025ರ ನಡುವಿನಲ್ಲಿ 77 ಬಾರಿ ಅಸ್ಸಾಂ ಮತ್ತು ಈಶಾನ್ಯ ರಾಜ್ಯಗಳಿಗೆ ಭೇಟಿ ನೀಡಿದ್ದಾರೆ.

ಅಸ್ಸಾಂ ರಾಜ್ಯದಲ್ಲಿ ಹಿಂದೆ ಕೇವಲ 6 ವೈದ್ಯಕೀಯ ಕಾಲೇಜುಗಳು ಇದ್ದರೆ ಇಂದು ಅವುಗಳ ಸಂಖ್ಯೆ 15ಕ್ಕೆ ಏರಿದೆ. 6 ವೈದ್ಯಕೀಯ ಕಾಲೇಜುಗಳು ನಿರ್ಮಾಣ ಹಂತದಲ್ಲಿವೆ. ಇನ್ನೂ 10 ವೈದ್ಯಕೀಯ ಕಾಲೇಜುಗಳು ಯೋಜನಾ ಹಂತದಲ್ಲಿವೆ. ಅಸ್ಸಾಂನ ಜಿಡಿಪಿ 2015–16ರಲ್ಲಿ ರೂ. 2.24 ಲಕ್ಷ ಕೋಟಿ ಇದ್ದರೆ 2024–25ರಲ್ಲಿ ಅದು ರೂ. 7.41 ಲಕ್ಷ ಕೋಟಿಗೆ ಏರಿದೆ. ತಲಾ ಆದಾಯ 2021ರಲ್ಲಿ ರೂ. 1.03 ಲಕ್ಷ ಇದ್ದರೆ ಅದು 2024–25ರಲ್ಲಿ ರೂ. 1.50 ಲಕ್ಷಕ್ಕೆ ಏರಿದೆ. ದೀರ್ಘಕಾಲದಿಂದ ನನೆಗುದಿಗೆ ಬಿದ್ದಿದ್ದ ಬ್ರಹ್ಮಪುತ್ರ ನದಿಯ ಮೇಲಿನ ಹಲವು ಸೇತುವೆಗಳ ಕಾಮಗಾರಿಗಳನ್ನು ಪೂರ್ಣಗೊಳಿಸಿ ದೇಶಕ್ಕೆ ಸಮರ್ಪಿಸಲಾಗಿದೆ. ಕೇಂದ್ರ ತೆರಿಗೆಯಲ್ಲಿ ಅಸ್ಸಾಂನ ಪಾಲು 2001–2016ರ ಕಾಲದಲ್ಲಿ ವರ್ಷಕ್ಕೆ ರೂ. 10000 ಕೋಟಿ ಸಿಗುತ್ತಿದ್ದರೆ ಅದು 2025–26ರ ವೇಳೆಗೆ ರೂ. 50,000 ಕೋಟಿಗೆ ಏರಿದೆ.

ಕಾಂಗ್ರೆಸ್ ಮೈತ್ರಿಕೂಟ

ಸದ್ಯ ಕಾಂಗ್ರೆಸ್ ಅಸ್ಸಾಂನಲ್ಲಿ ಮೊದಲಿನಂತೆ ಬಲಿಷ್ಠವಾಗಿಲ್ಲ. ಹಾಗಾಗಿ ಅದರ ನೇತೃತ್ವದ ಮೈತ್ರಿಕೂಟ ಕೂಡಾ ದುರ್ಬಲವಾಗಿದೆ. 2021ರ ವಿಧಾನಸಭೆ ಚುನಾವಣೆ ಸಂದರ್ಭದಲ್ಲಿ ಕಾಂಗ್ರೆಸ್ ಮೈತ್ರಿಕೂಟದಲ್ಲಿ 11 ಪಕ್ಷಗಳು ಇದ್ದರೆ, ಈ ಬಾರಿ ಆ ಸಂಖ್ಯೆ ಕುಸಿದಿದೆ. ಕೆಲವು ಪಕ್ಷಗಳು ಕಾಂಗ್ರೆಸ್ ಮೈತ್ರಿ ತೊರೆದಿವೆ.

ಆದರೆ ಕಾಂಗ್ರೆಸ್ ಕರ್ನಾಟಕದಂತೆಯೇ ಅಸ್ಸಾಂನಲ್ಲೂ ಹಲವಾರು ಗ್ಯಾರಂಟಿಗಳನ್ನು ಘೋಷಿಸಿದ್ದು ಆ ಮೂಲಕ ಜನರನ್ನು ಸೆಳೆಯುವ ಯೋಜನೆ ಹಾಕಿಕೊಂಡಿದೆ. ಅದು ಎಷ್ಟರ ಮಟ್ಟಿಗೆ ಫಲ ನೀಡುವುದು ಎಂದು ನೋಡಬೇಕು.

ಅಸ್ಸಾಂನಲ್ಲಿ ಮುಸ್ಲಿಮರು ಶೇ.34ರಷ್ಟಿದ್ದು ಕೆಲವು ಕ್ಷೇತ್ರಗಳಲ್ಲಿ ನಿರ್ಣಾಯಕರಾಗಿದ್ದಾರೆ. 2021ರಲ್ಲಿ ಬದ್ರುದ್ದೀನ್ ಅಜಮಲ್‌ನ ಎಐಯುಡಿಎಫ್ ಪಕ್ಷವು ಕಾಂಗ್ರೆಸ್‌ನೊಂದಿಗೆ ಮೈತ್ರಿ ಮಾಡಿಕೊಂಡು ಸ್ಪರ್ಧಿಸಿ 16 ಸ್ಥಾನ ಗೆದ್ದಿತ್ತು. ಆದರೆ ಈ ಬಾರಿ ಅದು ಸ್ವತಂತ್ರವಾಗಿ ಸ್ಪರ್ಧಿಸುತ್ತಿದೆ. ಇದು ಕಾಂಗ್ರೆಸ್ ಪಕ್ಷಕ್ಕೆ ದೊಡ್ಡ ತಲೆನೋವಾಗಿ ಪರಿಣಮಿಸಿದೆ. ಇದರಿಂದಾಗಿ ಕಾಂಗ್ರೆಸಿಗೆ ಸಿಗುವ ಮುಸ್ಲಿಂ ಮತಗಳ ಮೇಲೆ ಪರಿಣಾಮವಾಗಲಿದೆ.

ಎನ್‌ಡಿಎ ಮೈತ್ರಿಕೂಟ

ಬಿಜೆಪಿ ನೇತೃತ್ವದ ಎನ್‌ಡಿಎ ಮೈತ್ರಿಕೂಟದಲ್ಲಿ ಮೂರು ಪಕ್ಷಗಳಿವೆ. ಅಸ್ಸಾಂ ಗಣ ಸಂಗ್ರಾಮ್ ಪರಿಷದ್ (ಎಜಿಪಿ), ಬೋಡೋಲ್ಯಾಂಡ್ ಪೀಪಲ್ಸ್ ಫ್ರಂಟ್ (ಬಿಪಿಎಫ್) ಮತ್ತು ರಬಾಹಸೊಂಗ್ ಜೋಡಾ ಮಂಚ್ ಎನ್‌ಡಿಎ ಕೂಟದಲ್ಲಿರುವ ಪಕ್ಷಗಳಾಗಿವೆ.

ಗುಡ್ಡಗಾಡು ಪ್ರದೇಶದ ಮತಗಳನ್ನು ಸೆಳೆಯಲು ಎನ್‌ಡಿಎ ವಿಶೇಷ ಯೋಜನೆಗಳನ್ನು ಹಾಕಿಕೊಂಡಿದೆ.

ಚುನಾವಣಾ ವಿಷಯ

ಅಕ್ರಮ ಬಾಂಗ್ಲಾದೇಶಿ ವಲಸಿಗರು, ಅಭಿವೃದ್ಧಿ, ಪ್ರತಿವರ್ಷ ಬ್ರಹ್ಮಪುತ್ರ ನದಿಯಿಂದ ಸಂಭವಿಸುವ ನೆರೆ ಸಮಸ್ಯೆ, ನೆರೆ ನೀರಿನಿಂದ ಪ್ರತಿವರ್ಷ ಸಹಸ್ರಾರು ಎಕ್ರೆ ಕೃಷಿ ಭೂಮಿ ಕೊರೆತ ಮುಂತಾದವು ಪ್ರಮುಖ ಚುನಾವಣಾ ವಿಷಯಗಳಾಗಿವೆ.

ಅಕ್ರಮ ವಲಸಿಗರು ಸುಮಾರು 1.50 ಲಕ್ಷ ಬಿಗಾ ಸರ್ಕಾರಿ ಭೂಮಿಯನ್ನು ಆಕ್ರಮಿಸಿಕೊಂಡಿದ್ದಾರೆ. ನಾವು ನಮ್ಮ ಸ್ವಂತ ಭೂಮಿಯಲ್ಲೇ ನಮ್ಮ ಅಸ್ಮಿತೆ ಕಳೆಕೊಳ್ಳುತ್ತಿದ್ದೇವೆ ಎಂಬ ಭಯ ಅಸ್ಸಾಮಿ ಜನಗಳ ಮನದಲ್ಲಿ ಆವರಿಸಿದೆ.

ಅಸ್ಸಾಂನಲ್ಲಿ ಮುಸ್ಲಿಮೇತರ ರಾಜಕೀಯ ನಾಯಕರು ಕಾಂಗ್ರೆಸ್ ಪಕ್ಷವನ್ನು ತ್ಯಜಿಸಿ ಬಿಜೆಪಿ ಪಕ್ಷಕ್ಕೆ ಸೇರುತ್ತಿದ್ದಾರೆ. ಕಾಂಗ್ರೆಸ್ ಪಕ್ಷಕ್ಕೆ ನಾಯಕರೇ ಇಲ್ಲದ ಸ್ಥಿತಿ ನಿರ್ಮಾಣವಾಗಿದೆ. ಇತ್ತೀಚೆಗೆ ಅಸ್ಸಾಂನ ಮಾಜಿ ಕಾಂಗ್ರೆಸ್ ಮುಖ್ಯಸ್ಥ ಭೂಪೇನ್ ಬೋರಾ ಮತ್ತು ಸಂಸದ್ ಸದಸ್ಯ ಪ್ರದ್ಯುತ್ ಬೊಡೊಯ್ ಇವರುಗಳು ಕಾಂಗ್ರೆಸ್ ಪಕ್ಷ ತ್ಯಜಿಸಿ ಬಿಜೆಪಿಗೆ ಸೇರಿರುವುದನ್ನು ಇಲ್ಲಿ ಸ್ಮರಿಸಿಕೊಳ್ಳಬಹುದು. ಒಟ್ಟಿನಲ್ಲಿ ಅಸ್ಸಾಂನಲ್ಲಿ ಕಾಂಗ್ರೆಸ್ಸಿನ ಪರಿಸ್ಥಿತಿ ಅಸ್ತವ್ಯಸ್ತವಾಗಿದೆ.

ಮುಖ್ಯಮಂತ್ರಿ ಹಿಮಂತ ಬಿಸ್ವ ಶರ್ಮಾ ಎದುರು ಕಾಂಗ್ರೆಸ್‌ನ ಪ್ರಮುಖ ಮುಖಂಡ ಗೌರವ ಗೋಗೊಯ್ ತೀರಾ ಕುಬ್ಜರಾಗಿ ಕಾಣುತ್ತಾರೆ. ಹಿಂತ ಬಿಸ್ವಾ ಅವರು ಉಗ್ರಗಾಮಿಗಳನ್ನು ಮಟ್ಟ ಹಾಕಿ, ಅಸ್ಸಾಮಿನಲ್ಲಿ ಶಾಂತಿ ನೆಲೆಸುವಂತೆ ಮಾಡಿ ತನ್ನ ಸುಶಾಸನದ ಮೂಲಕ ಅಸ್ಸಾಂಗೆ ಮತ್ತು ದೇಶಕ್ಕೆ ಕೀರ್ತಿ ತಂದಿದ್ದಾರೆ. ಹಿಮಂತ್ ಬಿಸ್ವ ಶರ್ಮಾ ದೇಶದ ಅತ್ಯುತ್ತಮ ಮುಖ್ಯಮಂತ್ರಿಗಳಲ್ಲಿ ಒಬ್ಬರು.

ಇವೆಲ್ಲ ಅಂಶಗಳು ಮುಂಬರುವ ಚುನಾವಣೆಯಲ್ಲಿ ಬಿಜೆಪಿ ಜಯಭೇರಿ ಬಾರಿಸಿ ಹ್ಯಾಟ್ರಿಕ್ ಸಾಧಿಸುವುದಕ್ಕೆ ಪೂರಕವಾಗಲಿದೆ ಎಂದು ಪಕ್ಷವು ನಂಬಿಕೊಂಡಿದೆ.

ಅಸಂಸ್ಕೃತ ಕಪಿಗಳೂ, ಸುಸಂಸ್ಕೃತ ಮನುಷ್ಯರೂ

ವಾನರರು ಸುಸಂಸ್ಕೃತ ಜೀವನ ನಡೆಸಿದರೆ, ಮನುಷ್ಯರಾದ ಯಾದವರು ಪ್ರಮತ್ತರಾಗಿ ತಮ್ಮ ಪತನವನ್ನು ತಾವೇ ತಂದುಕೊಂಡರು.

ಆ-ಲೋಚನ
ರಾಧಾಕೃಷ್ಣ ಕಲ್ಚಾರ್
rkkalchar@gmail.com



ಎರಡು ಸಮುದಾಯಗಳು ಎರಡಕ್ಕೂ ಸಮರ್ಥ ನಾಯಕತ್ವ ದೊರೆತಿತ್ತು. ನಿರ್ದಿಷ್ಟ ಗುರಿಯೂ ಇತ್ತು. ಜೀವನದಲ್ಲಿ ಹಿರಿದಾದ ಸಾಧನೆ ಮಾಡಿದ ಹೆಮ್ಮೆಯೂ ಇತ್ತು. ಆದರೆ ಎರಡರ ಭವಿಷ್ಯ ಮಾತ್ರ ವಿಭಿನ್ನವಾಯಿತು. ಒಂದು ಹೀನಾಯ ವಾದ ಪತನವನ್ನು ಕಂಡಿತು. ಇನ್ನೊಂದು ಆತ್ಯುನ್ನತಿಯನ್ನು ಸಾಧಿಸಿ, ಅಲ್ಲೇ ಉಳಿಯಿತು.

ಒಂದು ರಾಮಾಯಣದ ವಾನರ ಸಂದೋಹ. ಇನ್ನೊಂದು ಭಾಗವತದ ಯಾದವರ ಸಮೂಹ. ಹಾಳಾಗುವುದಕ್ಕೆ ಅವಕಾಶವಿದ್ದ ಕಪಿಗಳು ಹಾಗಾಗಲಿಲ್ಲ. ಅವರೇನಾದರೂ ದುರ್ಬುದ್ಧಿ ಮಾಡಿದರೆ ನಿಂದಿಸುವವರಿರಲಿಲ್ಲ. ಎಷ್ಟೆಂದರೂ ಕಪಿಗಳು ತಾನೇ? ಯಾದವರು ಹಾಗಲ್ಲ. ಅವರಿಗೆ ಲೋಕಾಪವಾದ, ನರಕ ಭೀತಿ ಎರಡೂ ಇರಬೇಕಾಗಿತ್ತು. ಆದರೆ ಲಜ್ಜಾರಹಿತ, ಭಂಡ ಬಾಳುವೆ ಅವರದಾಯಿತು. ಈ ಎರಡೂ ಸಮೂಹಗಳ ಚರ್ಯೆಯನ್ನು ನೋಡೋಣ.

ವಾನರರು ಅಂದರೆ ಮಂಗಗಳು ಹೇಗಿದ್ದಾವು? ಚಂಚಲವಾದ ಬುದ್ಧಿ, ನಿರ್ದಿಷ್ಟ ಗುರಿಯಿಲ್ಲದ, ಹೊಟ್ಟೆಪಾಡು ಮಾತ್ರ ಮುಖ್ಯವಾದ ವರ್ಗ ಅದು. ರಾಮಾಯಣದಲ್ಲಿ ಒಂದಿಷ್ಟು ನಾಗರಿಕ ಜೀವನವನ್ನು ರೂಢಿಸಿಕೊಂಡಂತೆ ಕಾಣುತ್ತದೆ. ಅವರೆಲ್ಲ ವಾಲಿ ಎಂಬವನ ಆಳ್ವಿಕೆಯಲ್ಲಿ ಕಿಷ್ಕಿಂಧೆಯಲ್ಲಿ ಬಾಳುತ್ತಿದ್ದವರು. ವಾನರರ ಹಲವು ಶಾಖೆಗಳು ಲೋಕದ ಹಲವು ಕಡೆ ಹರಡಿದ್ದರೂ, ಅವರಿಗೆ ಪ್ರಧಾನ ನೆಲೆ ಕಿಷ್ಕಿಂಧೆಯೇ ಆಗಿತ್ತು ಅನ್ನೋಣ. ಇಲ್ಲಾದರೂ ಬಹಳ ಸುಖವಾಗಿಯೇನೂ ಅವರಿದ್ದ ಹಾಗಿಲ್ಲ. ಅವರನ್ನು ಆಳುತ್ತಿದ್ದ ವಾಲಿಯ ಚಾರಿತ್ರ್ಯವೇ ಕಳಂಕಿತವಾಗಿತ್ತು. ತನ್ನ ತಮ್ಮನಾದ ಸುಗ್ರೀವನ ಹೆಂಡತಿಯನ್ನು ಬಲಾತ್ಕಾರವಾಗಿ ತಾನಿಟ್ಟುಕೊಂಡು, ತಮ್ಮನನ್ನು ಮನೆಯಿಂದ ಓಡಿಸಿದವನು ಅವನು. ಪ್ರಭುತ್ವವನ್ನು ಹೊಂದಿದವನು ನೀತಿಗೆಟ್ಟವನಾದರೆ, ಪ್ರಜೆಗಳು ಹೇಗಿದ್ದಿರಬಹುದು ಎಂದು ಊಹಿಸಿಕೊಳ್ಳಿ. ಯಾರು ಆಳುತ್ತಾನೋ ಅವನೇ ತಾನೇ ಆದರ್ಶ? ಕಪಿಗಳೂ ಅವನನ್ನು ಅನುಸರಿಸಿದರೆ ಆಶ್ಚರ್ಯವೇನು?


ಬಹು ದೀರ್ಘಕಾಲ ಅವರು ಹಾಗೇ ಇದ್ದಿರಬೇಕು. ಒಂದು ದಿನ ಅವರ ಬದುಕನ್ನು ಬದಲಾಯಿಸುವ ವಿದ್ಯಮಾನವೊಂದು ಘಟಿಸಿತು. ಕಿಷ್ಕಿಂಧೆಯ ದಾರಿಯಾಗಿ ರಾಮ ಬಂದ. ಅವನಿಗೂ ಸುಗ್ರೀವನಿಗೂ ಸ್ನೇಹವಾಯಿತು. ದುಷ್ಟನಾಗಿದ್ದ ವಾಲಿಯನ್ನು ಕೊಂದು, ಸುಗ್ರೀವನಿಗೆ ಕಿಷ್ಕಿಂಧೆಯ ಪಟ್ಟವನ್ನು ರಾಮ ಕಟ್ಟಿದ. ಅದು ತನಕ ಇದ್ದ ವಾಲಿಯ ಆಳ್ವಿಕೆ ಮುಗಿಯಿತು. ವಾನರರು ಸುಗ್ರೀವನ ನಿಯಂತ್ರಣಕ್ಕೆ ಬಂದರು. ಅವರಿಗೆ ದೊರಕಿದ ಮೊದಲ ಕಾರ್ಯವೇ ಅನ್ಯಾಯವನ್ನು ವಿರೋಧಿಸುವುದು. ರಾಮನ ಪತ್ನಿಯಾದ ಸೀತೆಯ ಅನ್ವೇಷಣೆ, ಮುಂದೆ ಕೆಟ್ಟವನಾಗಿದ್ದ ರಾವಣನ ವಿರುದ್ಧ ಹೋರಾಟ. ಇದರಲ್ಲಿ ದೊರೆತ ಯಶಸ್ಸು ಅವರ ವ್ಯಕ್ತಿತ್ವವನ್ನು ಹಿಗ್ಗಿಸಿತು. ಚಪಲಚಿತ್ತದ ಕಪಿಗಳೆಂಬ ಉಪೇಕ್ಷೆ, ಅಪಹಾಸ್ಯಗಳಿಗೆ ಒಳಗಾದವರು, ಜಗತ್ತಿನ ಬಲಾಢ್ಯರೆಲ್ಲ ಯಾರಿಗೆ ಅಂಜುತ್ತಿದ್ದರೋ ಅಂತಹ ಪ್ರಚಂಡ ಶಕ್ತಿಯ ರಾವಣನನ್ನು ಸೋಲಿಸಿದ ಕೀರ್ತಿ ಅವರ ಆತ್ಮವಿಶ್ವಾಸವನ್ನು ವರ್ಧಿಸಿರಬೇಕು. ಅವರು ಸಮುದ್ರಕ್ಕೆ ಸೇತುವೆ ಕಟ್ಟಿದ್ದೇನು ಸಾಧಾರಣ ಸಾಧನೆಯೇ? 'ಏನೂ ಅಲ್ಲದವರು ಇಷ್ಟನ್ನು ಸಾಧಿಸಿದೆವಲ್ಲ' ಎಂಬ ಸಾರ್ಥಕತೆ ಮೂಡಿರಬೇಕು.

'ಮರದಿಂದ ಮರಕೆ ಹಾರುವಿರಿ, ಸಂಧಿ ಮರಿಯಾದೆಗಳನೇನರಿವಿರಿ, ಮಿಗೆ ಪುರುಬುಗಳನೆತ್ತಿ ಹಣ್ಣುವಿರಿ, ನೋಯೆ ಕಿರಿಕಿರಿ ಕಿರ್ರನೆ ಟ್ಟಟಿರಿಗುಟ್ಟುತ್ತ ಭರದಿಂದಲೋಡುವ ಭಟರು' ಎಂಬ ಹೀಯಾಳಿಕೆಗೆ ಗುರಿಯಾದ ಅವರಿಗೆ ಇದೊಂದು ಮಹತ್ವದ ಸೀಮೋಲ್ಲಂಘನವೇ. ಆದರಿಂದ ಅವರ ವರ್ಚಸ್ಸು ಹೆಚ್ಚಿದ್ದು ಮಾತ್ರವಲ್ಲ, ಅದನ್ನು ಉಳಿಸಿಕೊಳ್ಳಬೇಕು ಎಂಬ ಜಾಗೃತಿಯೂ ಮೂಡಿರಬೇಕು. ಅದನ್ನು ಮುಂದೆ ಉಳಿಸಿಕೊಂಡರು ಕೂಡ.

ಇದಕ್ಕೆ ಹೋಲಿಕೆಯಾಗಿ ಯಾದವರನ್ನು ಗಮನಿಸೋಣ.

ಅವರೂ ಭಯಭೀತ ಸ್ಥಿತಿಯಲ್ಲಿ ಬದುಕುತ್ತಿದ್ದವರು. ಅವರನ್ನು ಆಳುತ್ತಿದ್ದವನು ಕಂಸ. ಅವನೋ ತಂದೆಯನ್ನು ಸೆರೆಮನೆಗೆ ತಳ್ಳಿ ತಾನು ಸಿಂಹಾಸನವೇರಿದವನು. ತನಗೊಬ್ಬ ವೈರಿ ಹುಟ್ಟಿದ್ದಾನೆ, ಅವನಿಂದ ತನ್ನ ಮೃತ್ಯು ಎಂದು ಗ್ರಹಿಸಿ ಎಳೆಯ ಶಿಶುಗಳನ್ನೆಲ್ಲ ಕೊಲ್ಲಿಸುತ್ತಿದ್ದ ಕ್ರೂರಿ. ಅವನ ಕೈಕೆಳಗೆ ನಿತ್ಯ ಮರಣ ಭಯದಿಂದ ಬಾಳುತ್ತಿದ್ದ ಯಾದವರನ್ನು ಪಾರು ಮಾಡುವುದಕ್ಕಾಗಿ ಎಂಬಂತೆ





ಕೃಷ್ಣ ಹುಟ್ಟಿಬಂದ. ಕಂಸನನ್ನು ಕೊಂದ. ಮಥುರೆಯನ್ನು ಭಯಮುಕ್ತವಾಗಿಸಿದ. ತನ್ನವರಿಗಾಗಿ ದ್ವಾರಕೆಯೆಂಬ ಹೊಸದಾದ ಪಟ್ಟಣವನ್ನು ಕಟ್ಟಿಸಿದ.

ಯಾದವರಿಗೆ ಇದರಿಂದ ನೆಮ್ಮದಿಯ ಜೀವನ ಸಾಧ್ಯವಾಯಿತು. ಅಲ್ಲಿಯವರೆಗೆ ಶ್ರೀಮಂತರಾಗಿರಲಿಲ್ಲ. ಪಶುಪಾಲನೆಯಂತಹ ವೃತ್ತಿಯನ್ನು ಅನುಸರಿಸುತ್ತಿದ್ದರು. ನಿಧಾನಕ್ಕೆ ಅವರೂ ಸಂಪನ್ನರಾದರು. ರಾಜಕಾರಣಿಗಳಾದರು. ಪರಾಕ್ರಮಿಗಳಾದರು.

ಇದೆಲ್ಲ ಅವರ ಸಾಮುದಾಯಿಕ ವರ್ಚಸ್ಸು, ಗೌರವಗಳನ್ನು ವರ್ಧಿಸಿತು. ಯಾದವರು ತಲೆಯೆತ್ತಿ ಸ್ವಾಭಿಮಾನದಿಂದ ಬಾಳುವುದು ಸಾಧ್ಯವಾಯಿತು.

ಜೀವನದಲ್ಲಿ ನೋವನ್ನುಂಡವರು ಅಹಂಕಾರಿಗಳಾಗುವ ಸಾಧ್ಯತೆ ಕಡಿಮೆಯಿರುತ್ತದೆ. ಯಾದವರು ಸಾಕಷ್ಟು ಸಂಕಟವನ್ನು ಅನುಭವಿಸಿದವರು. ಹಾಗಾಗಿ ಜೀವನದಲ್ಲಿ ಉನ್ನತಿಗೇರಿದಾಗ ಅದರಿಂದ ಅವರಲ್ಲಿ ಮದ ತಲೆಯೆತ್ತಬಾರದಿತ್ತು. ಅಲ್ಲದೆ ಕುರುಕ್ಷೇತ್ರದಲ್ಲಿ ನಡೆದ ಆ ಮಹಾಯುದ್ಧಕ್ಕೆ ಸಾಕ್ಷಿಯಾದವರು. ಅದರಲ್ಲಿ ಭಾಗವಹಿಸಿದವರು. ನೆತ್ತರ ಹೊಳೆ ಹರಿದುದನ್ನು, ತರುಣರ ಬರ್ಬರ ಹತ್ಯೆಗಳನ್ನು ಕಂಡವರು. ಮಾನವೀಯತೆಯ ಈ ಪತನವನ್ನು ನೋಡಿಯೂ ಅವರಿಗೆ ಅಂತರಂಗದಲ್ಲಿ ಮಾರ್ದವತೆ ಮೂಡಲಿಲ್ಲ. ಅಂತಹ ಒಂದು ಸ್ಪಂದನ ಶಕ್ತಿಯನ್ನು ಕಳೆದುಕೊಂಡಿರಬೇಕು. ಅದು ಹೋಗಲಿ, ಅವರಿಗೆ ದೊರೆತ ನಾಯಕತ್ವವೇನು ಸಾಮಾನ್ಯವೆ? ಯುಗಪುರುಷ, ಪರಮಾತ್ಮನ ಅವತರಣವೆನಿಸಿದ ಕೃಷ್ಣ ಅವರಿಗೆ ನಾಯಕನಾಗಿದ್ದ. ಕಪಿಗಳಿಗೆ ಆದರ್ಶ ಪುರುಷ ರಾಮನಿದ್ದಂತೆ ಯಾದವರಿಗೆ ಕೃಷ್ಣನಿದ್ದ.

ಅವನ ಮುತ್ಸದ್ದಿತನದ ಕಾರಣ ಯಾದವರು ಗುರುತಿಸಲ್ಪಟ್ಟಿದ್ದರು. ಆದರೆ ಅವರ ಪತನಕ್ಕೆ ಇದ್ಯಾವುದು ತಡೆಯಾಗಲಿಲ್ಲ.

ಪಾಂಡವರು ಕುರುಕ್ಷೇತ್ರದಲ್ಲಿ ನಡೆದ ಯುದ್ಧದಲ್ಲಿ ಗೆದ್ದು ಹಸ್ತಿನಾವತಿಯನ್ನು ತಮ್ಮದಾಗಿಸಿಕೊಂಡರು. ಇತ್ತ ಯಾದವರು ದಿನೇ ದಿನೇ ಪ್ರಮತ್ತರಾಗುತ್ತ ಹೋದರು. ಅವರೊಳಗೆ ಸ್ಪರ್ಧೆ, ದ್ವೇಷ, ಅಸಹನೆಗಳು ಹೆಚ್ಚಿದವು. ಕುಡಿತ ವಿಪರೀತವಾಯಿತು. ಸೊಕ್ಕು ತುಂಬಿಕೊಂಡಿತು. ಇದೇ ಸೊಕ್ಕಿನಿಂದಾಗಿ, ದ್ವಾರಕೆಗೆ ಬಂದ ಋಷಿಗಳನ್ನು ಅವಮಾನಿಸಿದರು. ಸಾಂಬನಿಗೆ ಗರ್ಭಿಣಿ ಹೆಂಗಸಿನ ವೇಷ ಹಾಕಿ, "ಇವಳು ಹೆರುವುದು ಹೆಣ್ಣೋ ಗಂಡೋ?" ಎನ್ನುವ ಕುಹಕದ ಪ್ರಶ್ನೆ ಕೇಳಿದರು. ಪರಿಣಾಮದಿಂದ, "ಇವಳು ಹೆರುವುದು ಒಂದು ಒನಕೆಯನ್ನು. ಅದರಿಂದ ಸರ್ವನಾಶ ಹೊಂದಿ" ಎಂಬ ಶಾಪವನ್ನೂ ಪಡೆದರು. ಆ ಬಳಿಕ ಪಾಪ ಕಳೆದುಕೊಳ್ಳುವುದಕ್ಕೆ ಪ್ರಭಾಸ ಎಂಬ ತೀರ್ಥಕ್ಷೇತ್ರಕ್ಕೆ ಹೋದವರು, ಅಲ್ಲಿ ಮೂಗಿನವರೆಗೆ ಮದ್ಯ ಕುಡಿದರು. ತಮ್ಮೊಳಗೆ ಕಚ್ಚಾಡಿಕೊಂಡರು. ಪರಸ್ಪರ ಬಡಿದಾಡಿಕೊಂಡು. ಎಲ್ಲರೂ ಸತ್ತರು. ಯಾದವೀ ಕಲಹ ಅಂದರೆ ಅದು. ಅವರಲ್ಲಿ ಏನಿದ್ದರೇನು? ಎಷ್ಟು ಸಂಪತ್ತು ತುಂಬಿದ್ದರೇನು? ಮೂಲತಃ ಇರಬೇಕಾದ ಸಂಸ್ಕಾರವೇ ಇರಲಿಲ್ಲ. ಅದನ್ನು ಕಲಿಯಲೂ ಇಲ್ಲ.

ಕಪಿಗಳಾದರೋ ಸಂಸ್ಕಾರವಿಲ್ಲದ ಪ್ರಾಣಿವರ್ಗಕ್ಕೆ ಸೇರಿದವರು. ಮಧುವನದ ಪ್ರಕರಣ ಬಿಟ್ಟರೆ ಬೇರೆಲ್ಲಿಯೂ ಅವರು ಪ್ರಮತ್ತತೆಯಿಂದಾಗಲಿ, ಅಹಂಕಾರದಿಂದಾಗಲಿ ವರ್ತಿಸಿದ್ದು ಕಾಣುವುದಿಲ್ಲ. ವಾಲಿ ಸುಗ್ರೀವರ ನಡುವಿನ ಜಗಳದಂತಹ ಜಗಳ ಅವರೊಳಗೆ ನಡೆಯಲಿಲ್ಲ. ಅಥವಾ ಅಂತಹ ಒಂದು ಅಸಹ್ಯ ಘಟನೆಯಿಂದ ಪಾಠವನ್ನು ಕಲಿತರೋ ಏನೋ. ಒಂದು ಸಲ, ಒಂದೇಸಲ ಸುಗ್ರೀವ ತನಗೊದಗಿದ ಕಿಷ್ಕಿಂಧೆಯ ಒಡೆತನವನ್ನು ಅನುಭವಿಸುತ್ತ ರಾಮಕಾರ್ಯವನ್ನು ಅಲ್ಪಕಾಲ ವಿಸ್ಮರಿಸಿದನೇ ಹೊರತು, ವಾಲಿಯಂತೆ ಅನ್ಯರ ಪತ್ನಿಯನ್ನು ಬಲಾತ್ಕರಿಸುವುದಕ್ಕೆ ಹೋಗಲಿಲ್ಲ.

ಎಷ್ಟು ಕಾಲ ಕಿಷ್ಕಿಂಧೆಯಲ್ಲಿದ್ದರೋ ಅಷ್ಟೂ ಕಾಲ ಚೆನ್ನಾಗಿಯೇ ಬಾಳಿದರು. ತಮಗೆ ನಾಯಕನಾಗಿದ್ದ ವಾಲಿಯನ್ನು ಅನುಕರಿಸಲಿಲ್ಲ. ಸಾತ್ವಿಕನಾದ ಸುಗ್ರೀವನನ್ನು ಅನುಸರಿಸಿದರು. ರಾಮನನ್ನು ಆರಾಧಿಸಿದರು. ತಮಗೆ ಸಹಜವಾದ ಚಾಂಚಲ್ಯವನ್ನು, ಚಪಲತೆಯನ್ನು ಬಿಟ್ಟು ಉನ್ನತಿಯನ್ನು ಸಾಧಿಸಿದರು. ಆ ಮೂಲಕ ಸಂಸ್ಕಾರಯುತ ಜೀವನಕ್ಕೆ ಜಾತಿ ವರ್ಗಗಳ ಸೀಮೆಯಿಲ್ಲ ಎಂದು ತೋರಿಸಿದರು.

ಯಾದವರು ವಿದ್ಯಾವಂತರು. ಚಂದ್ರವಂಶದ ಒಂದು ಕವಲಾಗಿ ಬಂದವರು. ಗಾರ್ಗ್ಯರಂತ ಗುರುಗಳನ್ನು ಹೊಂದಿದ್ದರು. ಆದರೂ ಸಂಸ್ಕಾರಹೀನರಾಗಿ ನಡೆದುಕೊಂಡರು. ವಿವೇಕವಂತರಾಗಿದ್ದರೆ ಉನ್ನತಿಯನ್ನು ಸಾಧಿಸಬಹುದಾಗಿದ್ದ ಯಾದವರು ಅದಿಲ್ಲದೆ ಹಾಳಾದರು. ತಮ್ಮ ನಾಯಕನಾಗಿದ್ದ ಶ್ರೀಕೃಷ್ಣನಿಗೂ ಕಲ್ಪಿಷದ ಸೋಂಕು ತಗುಲಿಸಿದರು.

ಇರಾನ್–ಅಮೆರಿಕ ಮತ್ತು ಇಸ್ರೇಲ್ ಸಂಘರ್ಷ: 2 ವಾರಗಳ ತಾತ್ಕಾಲಿಕ ಯುದ್ಧ ವಿರಾಮ

ಒಪ್ಪಂದ ಇನ್ನೂ ಅಸ್ಪಷ್ಟ

ದುಬೈ: ಇರಾನ್, ಅಮೆರಿಕ ಮತ್ತು ಇಸ್ರೇಲ್ ನಡುವೆ ಎರಡು ವಾರಗಳ ಯುದ್ಧ ವಿರಾಮ ಒಪ್ಪಂದಕ್ಕೆ ಒಪ್ಪಿಗೆ ದೊರೆತಿದೆ. ಕೊನೆ ಕ್ಷಣದಲ್ಲಿ ನಡೆದ ಈ ಒಪ್ಪಂದ ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರು ಇರಾನ್ ಮೇಲೆ ಭಾರೀ ಬಾಂಬ್ ದಾಳಿ ನಡೆಸುವ ಬೆದರಿಕೆಯಿಂದ ಹಿಂದೆ ಸರಿಯಲು ಕಾರಣವಾಯಿತು.



ಆದರೆ, ಬುಧವಾರದ ವೇಳೆಗೆ ಈ ಒಪ್ಪಂದ ನಿಜವಾಗಿ ಜಾರಿಯಲ್ಲಿದೆಯೇ?, ಅದರ ಷರತ್ತುಗಳು ಏನು?, ಇದು ದೀರ್ಘಕಾಲಿಕ ಶಾಂತಿಗೆ ದಾರಿ ಮಾಡಿಕೊಡುತ್ತದೆಯೇ? ಎಂಬುದು ಸ್ಪಷ್ಟವಾಗಿಲ್ಲ. ಒಪ್ಪಂದ ಘೋಷಣೆಯ ಕೆಲವೇ ಗಂಟೆಗಳ ನಂತರವೂ ವಿವಿಧ ದೇಶಗಳಲ್ಲಿ ಕ್ಷಿಪಣಿ ಹಾಗೂ ಡ್ರೋನ್ ದಾಳಿಗಳ ವರದಿಗಳು ಬಂದಿವೆ. ಅಮೆರಿಕ ಉಪಾಧ್ಯಕ್ಷ ಜೆ.ಡಿ. ವ್ಯಾನ್ಸ್ ಈ ಒಪ್ಪಂದವನ್ನು "ದುರ್ಬಲ ತಾತ್ಕಾಲಿಕ ಶಾಂತಿ" ಎಂದು ವರ್ಣಿಸಿದ್ದಾರೆ.

ಯುದ್ಧ ಮುಗಿದಿಲ್ಲ, ಬೆರಳು ಟ್ರಿಗರ್‌ನಲ್ಲಿರಲಿ: ಮೊಜ್ತಬಾ

ಎರಡು ವಾರಗಳ ಕದನ ವಿರಾಮ ಘೋಷಿಸಿದ್ದರೂ ಅಮೆರಿಕ ನೀಡಿದ ಭರವಸೆಯನ್ನು ನಂಬುವಂತಿಲ್ಲ. ಹೀಗಾಗಿ ಬೆರಳುಗಳು ಬಂದೂಕಿನ ಟ್ರಿಗರ್ ಮೇಲಿರಲಿ ಎಂದು ಸರ್ವೋಚ್ಚ ನಾಯಕ ಆಯತ್ತೊಲ್ಲಾ ಸಯ್ಯದ್ ಮೊಜ್ತಬಾ ತಮ್ಮ ಸೈನಿಕರನ್ನು ಎಚ್ಚರಿಸಿದ್ದಾರೆ. ಅಮೆರಿಕ ಯಾವಾಗಲೂ ವಂಚಿಸುತ್ತಲೇ ಬಂದಿದ್ದು, ಅದರ ಮಾತಿನ ಮೇಲೆ ನಮಗೆ ನಂಬಿಕೆಯಿಲ್ಲ. ಅಮೆರಿಕ ಪುನಃ ದಾಳಿ ಆರಂಭಿಸಿದರೆ, ಪ್ರತಿ ಆಕ್ರಮಣಕ್ಕೂ ತಕ್ಕ ಉತ್ತರ ನೀಡಲಿದ್ದೇವೆ ಎಂದು ಇರಾನ್ ಸೇನೆ ಹೇಳಿದೆ.

ಮಧ್ಯಪ್ರಾಚ್ಯದ ಸುವರ್ಣ ಯುಗ ಆರಂಭ: ಟ್ರಂಪ್

ಇರಾನ್ ಅನ್ನು ಶಿಲಾಯುಗಕ್ಕೆ ತಳ್ಳುವುದಾಗಿ ಬೆದರಿಕೆಯೊಡ್ಡಿದ್ದ ಅಧ್ಯಕ್ಷ ಟ್ರಂಪ್ ಸುವರ್ಣಯುಗದ ಮಾತನ್ನಾಡಿದ್ದಾರೆ. ಸುಮಾರು 39 ದಿನಗಳ ಸಂಘರ್ಷದ ಬಳಿಕ ಅಮೆರಿಕ ಮತ್ತು ಇರಾನ್ ಎರಡು ವಾರಗಳ ಕದನವಿರಾಮ ಒಪ್ಪಂದಕ್ಕೆ ಒಪ್ಪಿಕೊಂಡಿವೆ. ಇದನ್ನು ಮಧ್ಯಪ್ರಾಚ್ಯದ ಸುವರ್ಣಯುಗ ಎಂದು ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಬಣ್ಣಿಸಿದ್ದಾರೆ. ವಿಶ್ವ ಶಾಂತಿಗೆ ದೊಡ್ಡ ದಿನ, ಇರಾನ್ ಬಹಳಷ್ಟು ಹಾನಿಯನ್ನು ಕಂಡಿದ್ದು, ಕದನ ವಿರಾಮವನ್ನು ಬಯಸುತ್ತಿದೆ. ಅದೇ ರೀತಿ ಎಲ್ಲರೂ ಕದನ ವಿರಾಮ ಬಯಸುತ್ತಿದ್ದಾರೆ ಎಂದು ಟ್ರಂಪ್ ಹೇಳಿದ್ದಾರೆ. ಏ.1ರಂದು ಇರಾನ್ ವಿದ್ಯುತ್ ಸ್ಥಾವರಗಳು ಮತ್ತು ಸೇತುವೆಗಳ ಮೇಲೆ ದಾಳಿ ಬೆದರಿಕೆಯೊಡ್ಡಿದ್ದ ಟ್ರಂಪ್, ಮುಂದಿನ 2ರಿಂದ 3 ವಾರಗಳಲ್ಲಿ ಇರಾನ್ ಅನ್ನು ಪುನಃ ಶಿಲಾಯುಗಕ್ಕೆ ಕಳುಹಿಸುವುದಾಗಿ ಎಚ್ಚರಿಕೆ ನೀಡಿದ್ದರು. ಧನಾತ್ಮಕ ಕ್ರಮಗಳನ್ನು ತೆಗೆದುಕೊಳ್ಳುತ್ತೇವೆ. ದೊಡ್ಡ ಹಣಕಾಸಿನ ಲಾಭವಾಗಲಿದೆ. ಇರಾನ್ ತನ್ನ ಮರುನಿರ್ಮಾಣ ಆರಂಭಿಸಬಹುದು. ಎಲ್ಲಾ ಪೂರೈಕೆಗಳನ್ನು ಪುನರಾರಂಭ ಆಗಲಿವೆ. ಇದು ಮಧ್ಯಪ್ರಾಚ್ಯದ ಸುವರ್ಣಯುಗ ಆಗಿರಲಿದೆ ಎಂದು ಟ್ರಂಪ್ ಹೇಳಿದ್ದಾರೆ.

ಸೇನೆಗೆ ಖಮೇನಿ ಆದೇಶ

39 ದಿನಗಳ ಸಂಘರ್ಷವನ್ನು ಅಂತ್ಯಗೊಳಿಸಲು ಅಮೆರಿಕದೊಂದಿಗೆ ಎರಡು ವಾರಗಳ ಒಪ್ಪಂದಕ್ಕೆ ಬಂದ ನಂತರ, ಇರಾನ್‌ನ ಪರಮೋಚ್ಚ ನಾಯಕ ಮೊಜ್ತಬಾ ಖಮೇನಿ, ತಮ್ಮ ಎಲ್ಲಾ ಮಿಲಿಟರಿ ಘಟಕಗಳಿಗೆ ದಾಳಿ ನಿಲ್ಲಿಸುವಂತೆ ಆದೇಶಿಸಿದ್ದಾರೆ. ಯುದ್ಧದ ನಡುವೆ ಈ ತಾತ್ಕಾಲಿಕ ವಿರಾಮವಿದ್ದರೂ ಇರಾನ್ ಮಿಲಿಟರಿ ಕಟ್ಟೆಚ್ಚರದಲ್ಲಿದೆ. ಇರಾನ್ ಪಡೆಗಳು ದಾಳಿಗೆ ಸನ್ನದ್ಧವಾಗಿದ್ದು, ಅಮೆರಿಕ ಅಥವಾ ಇಸ್ರೇಲ್‌ನಿಂದ ಯಾವುದೇ ಸಣ್ಣ ತಪ್ಪು ಸಂಭವಿಸಿದರೂ ಪೂರ್ಣ ಬಲದೊಂದಿಗೆ ಪ್ರತಿಕ್ರಿಯಿಸುವುದಾಗಿ ಸುಪ್ರೀಂ ನ್ಯಾಷನಲ್ ಸೆಕ್ಯುರಿಟಿ ಕೌನ್ಸಿ ಲ್ ತಿಳಿಸಿದೆ. ಫೆಬ್ರವರಿ 28 ರಂದು ಪ್ರಾರಂಭವಾದ ಈ ಯುದ್ಧದಲ್ಲಿ ಆಯತೊಲ್ಲಾ ಅಲಿ ಖಮೇನಿ ಹತ್ಯೆಯಾಗಿದ್ದರು. ಅಧ್ಯಕ್ಷ ಡೊನಾಲ್ಡ್ ಟ್ರಂಪ್, ಇರಾನ್‌ನ 10 ಅಂಶಗಳ ಪ್ರಸ್ತಾವನೆಯನ್ನು ಮಾತುಕತೆಗೆ ಕಾರ್ಯಸಾಧ್ಯವಾದ ಆಧಾರವೆಂದು ಒಪ್ಪಿಕೊಂಡಿದ್ದಾರೆ. ಈ ಯೋಜನೆ, ಈ ಪ್ರದೇಶದಿಂದ ಅಮೆರಿಕದ ಯುದ್ಧ ಪಡೆಗಳ ಹಿಂತೆಗೆತ, ಎಲ್ಲಾ ಪ್ರಾಥಮಿಕ ಮತ್ತು ದ್ವಿತೀಯ ಹಂತದ ನಿರ್ಬಂಧಗಳ ರದ್ದತಿ ಮತ್ತು ಇರಾನ್‌ನ ತಡೆಹಿಡಿಯಲಾದ ಸಂಪತ್ತಿನ ಬಿಡುಗಡೆಯನ್ನು ಒಳಗೊಂಡಿದೆ. ಅಲ್ಲದೆ, ಅಂದಾಜಿನ ಪ್ರಕಾರ ಹಾನಿಗಳಿಗೆ ಅಮೆರಿಕ ಪರಿಹಾರ ಪಾವತಿಸಬೇಕೆಂದು ಇರಾನ್ ಒತ್ತಾಯಿಸಿದೆ.

ಷರತ್ತುಗಳ ಬಗ್ಗೆ ಗೊಂದಲ

ಹಾರ್ಮುಜ್ ಜಲಸಂಧಿಯಿಂದ ಸಾಗುವ ಹಡಗುಗಳಿಂದ ಶುಲ್ಕ ವಸೂಲಿ ಮಾಡುವ ತನ್ನ ಹೊಸ ನೀತಿಯನ್ನು ಅಧಿಕೃತಗೊಳಿಸಲು ಈ ಒಪ್ಪಂದ ಅವಕಾಶ ನೀಡುತ್ತದೆ. ಆದರೆ, ಇದಕ್ಕೆ ಇತರ ದೇಶಗಳು ಒಪ್ಪಿಕೊಂಡಿವೆಯೇ ಎಂಬುದು ತಿಳಿದಿಲ್ಲ. ಇದೇ ವೇಳೆ, ಪಾಕಿಸ್ತಾನ ಮಧ್ಯಸ್ಥಿಕೆಯಿಂದ ಲೆಬನಾನ್‌ನಲ್ಲಿ ನಡೆಯುತ್ತಿರುವ ಹೋರಾಟವನ್ನು ತಾತ್ಕಾಲಿಕವಾಗಿ ನಿಲ್ಲಿಸಲು ಒಪ್ಪಂದದಲ್ಲಿ ಉಲ್ಲೇಖವಿದೆ ಎಂದು ಹೇಳಲಾಗಿದೆ. ಆದರೆ, ಈ ಒಪ್ಪಂದಕ್ಕೂ ಲೆಬನಾನ್ ಮೇಲೆ ನಮ್ಮ ದಾಳಿಗೂ ಸಂಬಂಧವಿಲ್ಲ, ದಾಳಿ ಮುಂದುವರಿಯುತ್ತದೆ ಇಸ್ರೇಲ್ ಸ್ಪಷ್ಟಪಡಿಸಿದೆ. ಟೆಹ್ರಾನ್ ನಗರದಲ್ಲಿ ಈ ಘೋಷಣೆಯ ಬಳಿಕ ಸರ್ಕಾರದ ಬೆಂಬಲಿಗರು ಅಮೆರಿಕ ಮತ್ತು ಇಸ್ರೇಲ್ ವಿರುದ್ಧ ಘೋಷಣೆ ಕೂಗಿ ಪ್ರತಿಭಟನೆ ನಡೆಸಿದ್ದಾರೆ. ಇದು ಕಠಿಣ ನಿಲುವಿನ ಬಣಗಳ ಆಕ್ರೋಶವನ್ನು ತೋರಿಸುತ್ತದೆ.

ಹಾರ್ಮುಜ್ ಮೇಲೆ ಆರ್ಥಿಕ, ರಾಜಕೀಯ ಪ್ರಭಾವ

ಹಾರ್ಮುಜ್ ಜಲಸಂಧಿ ವಿಶ್ವದ ತೈಲ ಸಾಗಣೆಯ ಸುಮಾರು ಶೇ.20 ಸಾಗುವ ಪ್ರಮುಖ ಮಾರ್ಗವಾಗಿದೆ. ಯುದ್ಧದ ಅವಧಿಯಲ್ಲಿ ಈ ಪ್ರದೇಶದ ಮೇಲೆ ಇರಾನ್ ಹಿಡಿತ ಸಾಧಿಸಿದ್ದು, ಜಾಗತಿಕ ಆರ್ಥಿಕತೆಗೆ ದೊಡ್ಡ ಹೊಡೆತ ನೀಡಿತು. ಹೊಸ ಯೋಜನೆಯ ಪ್ರಕಾರ, ಈ ಜಲಸಂಧಿಯಲ್ಲಿ ಸಾಗುವ ಹಡಗುಗಳಿಂದ ಇರಾನ್ ಮತ್ತು ಒಮಾನ್ ಶುಲ್ಕ ವಸೂಲಿ ಮಾಡಬಹುದು. ಇದು ಹಿಂದಿನ ದಶಕಗಳಲ್ಲಿ ಜಲಸಂಧಿಯನ್ನು ಉಚಿತ ಅಂತಾರಾಷ್ಟ್ರೀಯ ಮಾರ್ಗವಾಗಿ ಪರಿಗಣಿಸಿದ್ದ ಪರಿಪಾಠವನ್ನು ಸಂಪೂರ್ಣವಾಗಿ ಬದಲಾಯಿಸಬಹುದು. ಈ ಹಣವನ್ನು ಇರಾನ್ ಪುನರ್ ನಿರ್ಮಾಣಕ್ಕೆ ಬಳಸಲಿದೆ ಎಂದು ಹೇಳಲಾಗಿದೆ. ಆದರೆ ಇದು ಗಲ್ಫ್ ಪ್ರದೇಶದ ಇತರ ದೇಶಗಳಿಗೆ ಒಪ್ಪಿಕೊಳ್ಳಲು ಕಷ್ಟವಾಗಬಹುದು.

ಸಾವಿರಾರು ಜನರ ಸಾವು

ಈ ಯುದ್ಧದಲ್ಲಿ ಸಾವಿರಾರು ಜನರು ಮೃತಪಟ್ಟಿದ್ದಾರೆ. ಇರಾನ್‌ನಲ್ಲಿ ಮಾರ್ಚ್ ಅಂತ್ಯದ ವೇಳೆಗೆ 1,900ಕ್ಕೂ ಹೆಚ್ಚು ಜನರು ಮೃತಪಟ್ಟಿದ್ದಾರೆ ಎಂದು ಅಂದಾಜಿಸಲಾಗಿದೆ. ಲೆಬನಾನ್‌ನಲ್ಲಿ, ಹೆಜ್ಬೊಲ್ಲಾ ವಿರುದ್ಧ ಇಸ್ರೇಲ್ ನಡೆಸುತ್ತಿರುವ ಯುದ್ಧದಲ್ಲಿ 1,500ಕ್ಕೂ ಹೆಚ್ಚು ಜನರು ಮೃತಪಟ್ಟಿದ್ದು, 10 ಲಕ್ಷಕ್ಕೂ ಹೆಚ್ಚು ಜನರು ಸ್ಥಳಾಂತರಗೊಂಡಿದ್ದಾರೆ. ಇಸ್ರೇಲ್‌ನಲ್ಲಿ 23 ಜನರು ಮತ್ತು ಅಮೆರಿಕದ 13 ಸೈನಿಕರು ಮೃತರಾಗಿದ್ದಾರೆ. ಗಲ್ಫ್ ಪ್ರದೇಶ ಮತ್ತು ವೆಸ್ಟ್ ಬ್ಯಾಂಕ್‌ನಲ್ಲಿ ಕೂಡ ಹಲವರು ಪ್ರಾಣ ಕಳೆದುಕೊಂಡಿದ್ದಾರೆ.

ಅಣು, ಕ್ಷಿಪಣಿ ಕಾರ್ಯಕ್ರಮಗಳ ಭವಿಷ್ಯ

ಯುದ್ಧದ ವೇಳೆ ಅಮೆರಿಕ ಮತ್ತು ಇಸ್ರೇಲ್ ಇರಾನ್‌ನ ಅಣು ಮತ್ತು ಕ್ಷಿಪಣಿ ಮೂಲಸೌಕರ್ಯಗಳಿಗೆ ಭಾರೀ ಹಾನಿ ಉಂಟುಮಾಡಿದರೂ, ಅವು ಸಂಪೂರ್ಣವಾಗಿ ನಾಶವಾಗಿಲ್ಲ ಎನ್ನುವುದು ಸ್ಪಷ್ಟವಾಗಿದೆ. ಇರಾನ್ ತನ್ನ ಅಣು ಕಾರ್ಯಕ್ರಮ ಶಾಂತಿಯುತ ಉದ್ದೇಶಗಳಿಗಾಗಿ ಎಂದು ಹೇಳಿಕೊಂಡರೂ, ಅದು ಶೇ.60 ಮಟ್ಟದ ಯುರೇನಿಯಂ ಶುದ್ಧೀಕರಣ ನಡೆಸಿರುವುದು ಅಣ್ವಸ್ತ್ರ ಮಟ್ಟಕ್ಕೆ ತಲುಪಲು ಬಹಳ ಸಮೀಪದಲ್ಲಿದೆ. ಒಪ್ಪಂದದ ಫಾರ್ಸಿ ಆವೃತ್ತಿಯಲ್ಲಿ "ಯುರೇನಿಯಂ ಶುದ್ಧೀಕರಣಕ್ಕೆ ಅನುಮತಿ" ಎಂಬ ಪದ ಬಳಕೆ ಇದ್ದು, ಇಂಗ್ಲಿಷ್ ಆವೃತ್ತಿಯಲ್ಲಿ ಅದು ಕಾಣಿಸಿಲ್ಲ. ಇದರಿಂದ ಒಪ್ಪಂದದ ನಿಜಸ್ವರೂಪದ ಬಗ್ಗೆ ಅನುಮಾನಗಳು ಹೆಚ್ಚಿವೆ. ಇಸ್ರೇಲ್ ಅಧಿಕಾರಿಗಳು ಅಮೆರಿಕದೊಂದಿಗೆ ಸಂಯೋಜನೆ ಮಾಡಿಕೊಂಡು ಈ ಒಪ್ಪಂದ ಸಾಧಿಸಲಾಗಿದೆ ಎಂದು ತಿಳಿಸಿದ್ದಾರೆ. ಅವರು ಇರಾನ್‌ನ ಅಣು ಮತ್ತು ಕ್ಷಿಪಣಿ ಕಾರ್ಯಕ್ರಮಗಳನ್ನು ಸಂಪೂರ್ಣವಾಗಿ ನಿಲ್ಲಿಸಲು ಒತ್ತಡ ಮುಂದುವರಿಸಲಾಗುವುದು ಎಂದು ಹೇಳಿದ್ದಾರೆ.

ಮುಂದಿನ ಹಾದಿ ಏನು?

ಈ ಎರಡು ವಾರಗಳ ಯುದ್ಧ ವಿರಾಮವು ಶಾಶ್ವತ ಶಾಂತಿಗೆ ದಾರಿ ಮಾಡಿಕೊಡುತ್ತದೆಯೇ ಎಂಬುದು ಇನ್ನೂ ಅನುಮಾನಾಸ್ಪದವಾಗಿದೆ. ಪಾಕಿಸ್ತಾನದಲ್ಲಿ ಶೀಘ್ರದಲ್ಲೇ ಶಾಂತಿ ಮಾತುಕತೆಗಳು ಆರಂಭವಾಗಬಹುದು ಎಂದು ಹೇಳಲಾಗಿದ್ದರೂ, ಪ್ರಮುಖ ವಿಷಯಗಳ ಮೇಲೆ ಭಿನ್ನಾಭಿಪ್ರಾಯಗಳು ಮುಂದುವರಿದಿವೆ. ಒಪ್ಪಂದವು ತಾತ್ಕಾಲಿಕವಾಗಿ ಉದ್ವಿಗ್ನತೆಯನ್ನು ಕಡಿಮೆ ಮಾಡಿದ್ದರೂ, ಅದರ ಅನಿಶ್ಚಿತತೆ ಮತ್ತು ಮುಂದುವರಿಯುತ್ತಿರುವ ದಾಳಿಗಳು ಈ ಪ್ರದೇಶದಲ್ಲಿ ಸ್ಥಿರತೆ ಇನ್ನೂ ದೂರದಲ್ಲಿದೆ ಎಂಬುದನ್ನು ಸೂಚಿಸುತ್ತವೆ.



ಒಪ್ಪಂದ ನಂತರವೂ ಮುಂದುವರಿದ ದಾಳಿ

ಒಪ್ಪಂದ ಘೋಷಣೆಯ ನಂತರವೂ ದಾಳಿಗಳು ಸಂಪೂರ್ಣ ನಿಂತಿಲ್ಲ. ಯುನೈಟೆಡ್ ಅರಬ್ ಎಮಿರೇಟ್ಸ್, ಸೌದಿ ಅರೇಬಿಯಾ, ಬಹ್ರೈನ್ ಮತ್ತು ಕುವೈತ್‌ನಲ್ಲಿ ಕ್ಷಿಪಣಿ ಎಚ್ಚರಿಕೆಯ ಸೈರನ್‌ಗಳು ಮೊಳಗುತ್ತಿವೆ. ಅಬುಧಾಬಿಯಲ್ಲಿ ಅನಿಲ ಸಂಸ್ಕರಣಾ ಘಟಕಕ್ಕೆ ಬೆಂಕಿ ತಗುಲಿದ ಘಟನೆ ವರದಿಯಾಗಿದೆ. ಕುವೈತ್‌ನಲ್ಲಿ ಡ್ರೋನ್ ದಾಳಿಗಳಿಗೆ ಸೇನೆ ಪ್ರತಿಕ್ರಿಯೆ ನೀಡಿದೆ. ಇರಾನ್‌ನ ಲವಾನ್ ದ್ವೀಪದಲ್ಲಿರುವ ತೈಲ ಶುದ್ಧೀಕರಣ ಘಟಕದ ಮೇಲೂ ದಾಳಿ ನಡೆದಿದೆ ಎಂದು ವರದಿಯಾಗಿದೆ. ಈ ಘಟನೆಗಳು ಯುದ್ಧ ವಿರಾಮದ ಪರಿಣಾಮಕಾರಿತ್ವದ ಬಗ್ಗೆ ಗಂಭೀರ ಪ್ರಶ್ನೆಗಳನ್ನು ಎಬ್ಬಿಸುತ್ತವೆ.

ಕದನ ವಿರಾಮ ಸ್ವಾಗತಿಸಿದ ಭಾರತ

ಹೊಸದಿಲ್ಲಿ : ಅಮೆರಿಕ–ಇರಾನ್ ನಡುವಿನ ಎರಡು ವಾರಗಳ ಕದನ ವಿರಾಮವನ್ನು ಸ್ವಾಗತಿಸಿರುವ ಭಾರತ, ಪಶ್ಚಿಮ ಏಷ್ಯಾದಲ್ಲಿ ಶಾಶ್ವತ ಶಾಂತಿ ಸ್ಥಾಪನೆಗಾಗಿ ವಲಯದಲ್ಲಿನ ಉದ್ವಿಗ್ನತೆ –ಸಂಘರ್ಷ ಶಮನಗೊಳ್ಳಬೇಕು, ಮಾತುಕತೆ ಮತ್ತು ರಾಜತಾಂತ್ರಿಕತೆ ಮುಖೇನ ಸಮಸ್ಯೆಗಳನ್ನು ಬಗೆಹರಿಸಬೇಕು ಎಂದು ಆಗ್ರಹಿಸಿದೆ. ಅಂದಾಜು ಶೇ.20 ಜಾಗತಿಕ ತೈಲ ಮತ್ತು ಎಲ್‌ಎನ್‌ಜಿ ಪೂರೈಕೆ ನಿಭಾಯಿಸುವ , ಪರ್ಶಿಯನ್ ಕೊಲ್ಲಿ ಮತ್ತು ಗಲ್ಫ್ ಆಫ್ ಒಮನ್ ನಡುವಿನ ನಿರ್ಣಾಯಕ ಜಲಮಾರ್ಗ , ಹಾರ್ಮುಜ್ ಜಲಸಂಧಿ ಮುಖೇನ ಅಬಾಧಿತವಾಗಿ ನೌಕಾಯಾನ ಮತ್ತು ಜಾಗತಿಕ ವಾಣಿಜ್ಯ ಚಟುವಟಿಕೆಗಳು ನಡೆಯುವಂತಾಗಬೇಕೆಂದೂ ಭಾರತ ನಿರೀಕ್ಷೆ ವ್ಯಕ್ತಪಡಿಸಿದೆ.

ಕದನವಿರಾಮವನ್ನು ನಾವು ಸ್ವಾಗತಿಸುತ್ತೇವೆ ಮತ್ತು ಇದು ಪ.ಏಷ್ಯಾದಲ್ಲಿ ಶಾಶ್ವತ ಶಾಂತಿ ಸ್ಥಾಪನೆಗೆ ಪೂರಕವಾಗಲಿದೆ ಎಂಬ ಭರವಸೆ ಹೊಂದಿದ್ದೇವೆ. ಸಂಘರ್ಷ ಆದಷ್ಟು ಶೀಘ್ರ ಕೊನೆಗಾಣಲು ಮಾತುಕತೆ, ರಾಜತಾಂತ್ರಿಕತೆಯ ಹಾದಿಯೇ ವಿಹಿತವೆಂದು ಭಾರತ ಈ ಹಿಂದೆಯೇ ನಿರಂತರವಾಗಿ ಪ್ರತಿಪಾದಿಸುತ್ತಾ ಬಂದಿದೆ . ಸಂಘರ್ಷದಿಂದ ಜನರು ಈಗಾಗಲೆ ಸಾಕಷ್ಟು ತೊಂದರೆಗೀಡಾಗಿದ್ದಾರೆ. ಜಾಗತಿಕ ಇಂಧನ ಪೂರೈಕೆ, ವ್ಯಾಪಾರ ಜಾಲಗಳು ಅಸ್ತವ್ಯಸ್ತಗೊಂಡಿವೆ. ಮಾತುಕತೆ, ರಾಜತಾಂತ್ರಿಕತೆ ಮುಖೇನ ಪ.ಏಷ್ಯಾದ ಸಂಘರ್ಷಕ್ಕೆ ಪರಿಹಾರ ಕಂಡುಕೊಳ್ಳುವಂತೆ ಭಾರತ ಈಗಲೂ ಕರೆ ನೀಡುತ್ತದೆ ಎಂದು ಭಾರತದ ವಿದೇಶಾಂಗ ಖಾತೆ ಹೇಳಿದೆ.

ಹಾರ್ಮುಜ್ ಜಲಸಂಧಿಯನ್ನು ಹಡಗುಗಳ ಸಂಚಾರಕ್ಕೆ ಮುಕ್ತಗೊಳಿಸುವುದು ಸೇರಿದಂತೆ ಹಲವು ಶರ್ತಬದ್ಧ ಕದನ ವಿರಾಮಕ್ಕೆ ಇರಾನ್, ಅಮೆರಿಕಗಳು ಒಪ್ಪಿಕೊಂಡಿವೆ. ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಕದನ ವಿರಾಮ ಘೋಷಿಸುತ್ತಲೇ ಜಾಗತಿಕ ಕಚ್ಚಾತೈಲ ದರಗಳು ದಿಢೀರ್ ಏರಿಕೆಯಾಗಿವೆ. ಈ ಹಿಂದೆ ಇರಾನ್ ಹೋರ್ಮುಜ್ ಜಲಸಂಧಿಯನ್ನು ಮುಚ್ಚಿದ ಬೆನ್ನಲ್ಲೇ ಕಚ್ಚಾತೈಲ ದರಗಳು ಏರಿಕೆಯಾಗಿದ್ದವು. ಜಲಸಂಧಿ ಮುಚ್ಚುಗಡೆ ಕ್ರಮದಿಂದ ಭಾರತ ಸಹಿತ ಜಗತ್ತಿನ ವಿವಿಧ ರಾಷ್ಟ್ರಗಳ ತೈಲ ಪೂರೈಕೆ ವ್ಯವಸ್ಥೆ ಗಂಭೀರವಾಗಿ ಅಸ್ತವ್ಯಸ್ತಗೊಂಡಿತ್ತು. ಭಾರತದ ಇಂಧನ ಖರೀದಿಗೆ ಪ.ಏಷ್ಯಾ ಪ್ರಧಾನ ಮೂಲವಾಗಿದೆ.

ಮಿಲಿಟರಿ ನಿಗಾದಲ್ಲಿ ನೌಕಾ ಸಂಚಾರಕ್ಕೆ ಅವಕಾಶ: ಈ ಮಧ್ಯೆ, ಇರಾನ್‌ನ ಮಿಲಿಟರಿ ನಿಗಾಕ್ಕೊಳಪಟ್ಟು ಹಾರ್ಮುಜ್ ಜಲಸಂಧಿ ಮುಖೇನ ನೌಕೆಗಳ ಸಂಚಾರಕ್ಕೆ ಅನುವು ಮಾಡಿಕೊಡಲಾಗುವುದು. ಇರಾನ್‌ನ ಸಶಸ್ತ್ರ ಪಡೆಗಳೊಂದಿಗೆ ಸಮನ್ವಯತೆಯಲ್ಲಿ ಮತ್ತು ತಾಂತ್ರಿಕ ಇತಿಮಿತಿಗೊಳಪಟ್ಟು ಎರಡು ವಾರ ಕಾಲ ಹೋರ್ಮುಜ್ ಜಲಸಂಧಿಯಲ್ಲಿ ನೌಕೆಗಳ ಸುರಕ್ಷಿತ ಯಾನಕ್ಕೆ ಅವಕಾಶವಿರುವುದು ಎಂದು ಇರಾನ್‌ನ ವಿದೇಶಾಂಗ ಸಚಿವ ಅಬ್ಬಾಸ್ ಅರಗ್ಚಿ ಹೇಳಿದ್ದಾರೆ.

10 ಗ್ರಾಂ. ಚಿನ್ನದ ಬೆಲೆ 4 ಸಾವಿರ ರೂ. ಏರಿಕೆ!

ಹೊಸದಿಲ್ಲಿ: ಮುಂದಿನ ಎರಡು ವಾರದವರೆಗೆ ಹಾರ್ಮುಜ್ ಜಲಸಂಧಿಯಲ್ಲಿ ವ್ಯಾಪಾರ ಹಡಗುಗಳ ಮುಕ್ತ ಸಂಚಾರಕ್ಕೆ ಇರಾನ್ ಒಪ್ಪಿಕೊಂಡ ಹಿನ್ನೆಲೆ ಕೆಲವೇ ಗಂಟೆಗಳಲ್ಲಿ 10 ಗ್ರಾಂ. 24 ಕ್ಯಾರೆಟ್ ಚಿನ್ನದ ದರ 3,980 ರೂ. ಏರಿಕೆ ಕಂಡಿದೆ. ಕಳೆದ 10 ದಿನಗಳಲ್ಲಿ ಇದು ಈ ತಿಂಗಳ ಅತ್ಯಧಿಕ ಬೆಲೆ ಏರಿಕೆಯಾಗಿದೆ. 100 ಗ್ರಾಂ. 24 ಕ್ಯಾರೆಟ್ ಚಿನ್ನದ ಬೆಲೆ 39,800 ರೂ. ಏರಿಕೆಯೊಂದಿಗೆ 15,38,200 ರೂ. ತಲುಪಿದೆ. 10 ಗ್ರಾಂ. ಬೆಳ್ಳಿ ಬೆಲೆ 100 ರೂ. ಏರಿಕೆಯಾಗಿದ್ದು, 2,600 ರೂ. ತಲುಪಿದೆ. 100 ಗ್ರಾಂ. ಬೆಳ್ಳಿ ದರ 1,000 ರೂ. ಏರಿಕೆಯಿಂದ 26,000 ರೂ. ತಲುಪಿದೆ.



ಕದನ ವಿರಾಮದ ನಿಯಮಗಳು

ಇದರೊಂದಿಗೆ, ಫೆ.28 ರಂದು ಅಮೆರಿಕ–ಇಸ್ರೇಲ್ ದಾಳಿಯ ನಂತರ ಪ್ರಾರಂಭವಾದ ಐದು ವಾರಗಳ ಸಂಘರ್ಷ ತಾತ್ಕಾಲಿಕವಾಗಿ ಸ್ಥಗಿತಗೊಂಡಿದೆ. ನಿಯಮಗಳ ಪ್ರಕಾರ, ಇರಾನ್‌ನ ವಿದ್ಯುತ್ ಜಾಲ ಮತ್ತು ಸೇತುವೆಗಳ ಮೇಲೆ ಯೋಜಿಸಲಾಗಿದ್ದ ದಾಳಿಯನ್ನು ಅಮೆರಿಕ ಅಮಾನತುಗೊಳಿಸಲಿದೆ. ಬದಲಾಗಿ, ಇರಾನ್ ತನ್ನ ಜಲಮಾರ್ಗವಾದ ಹಾರ್ಮುಜ್ ಜಲಸಂಧಿ ಯನ್ನು ಸಮುದ್ರ ಸಂಚಾರಕ್ಕೆ ಮುಕ್ತಗೊಳಿಸಲಿದೆ. ಜಲಮಾರ್ಗದ ಮೇಲಿನ ನಿಯಂತ್ರಣವನ್ನು ತನ್ನಲ್ಲೇ ಉಳಿಸಿಕೊಂಡು, ಹಡಗುಗಳ ಸಂಚಾರವನ್ನು ಇರಾನ್ ಸೇನೆ ಸಂಯೋಜಿಸಲಿದೆ ಎಂದು ವಿದೇಶಾಂಗ ಸಚಿವ ಅಬ್ಬಾಸ್ ಅರಾಘ್ಚಿ ತಿಳಿಸಿದ್ದಾರೆ.

ಇರಾನ್ ಬೇಡಿಕೆಗಳು

ಕದನ ವಿರಾಮಕ್ಕೆ ಪ್ರಾಥಮಿಕ ಮತ್ತು ದ್ವಿತೀಯ ಹಂತದ ನಿರ್ಬಂಧಗಳನ್ನು ತೆಗೆದುಹಾಕುವುದು ಹಾಗೂ ಪರಮಾಣು ಪುಷ್ಟೀಕರಣಕ್ಕೆ ಅಂಗೀಕಾರ ನೀಡಬೇಕು, ಎಂದು ಇರಾನ್‌ನ ಸುಪ್ರೀಂ ನ್ಯಾಷನಲ್ ಸೆಕ್ಯುರಿಟಿ ಕೌನ್ಸಿಲ್ ಹೇಳಿದೆ. ಅಂತಿಮ ಒಪ್ಪಂದವನ್ನು ಅಂತರಾಷ್ಟ್ರೀಯ ಕಾನೂನಿನಲ್ಲಿ ಕಡ್ಡಾಯಗೊಳಿಸಲು ವಿಶ್ವಸಂಸ್ಥೆಯ ಭದ್ರತಾ ಮಂಡಳಿಯ ನಿರ್ಣಯವನ್ನು ಈ ಯೋಜನೆ ಬಯಸಿದೆ.

ಇರಾನ್‌ನ 10 ಅಂಶಗಳ ಷರತ್ತುಗಳು

1. ಆಕ್ರಮಣರಹಿತ ನೀತಿ
2. ಸ್ಟ್ರೈಟ್ ಆಫ್ ಹಾರ್ಮುಜ್ ಮೇಲೆ ಇರಾನ್‌ನ ನಿರಂತರ ನಿಯಂತ್ರಣ
3. ಪರಮಾಣು ಪುಷ್ಟೀಕರಣಕ್ಕೆ ಅಂಗೀಕಾರ
4. ಎಲ್ಲಾ ಪ್ರಾಥಮಿಕ ನಿರ್ಬಂಧಗಳ ರದ್ದತಿ
5. ಎಲ್ಲಾ ದ್ವಿತೀಯಕ ನಿರ್ಬಂಧಗಳ ರದ್ದತಿ
6. ವಿಶ್ವಸಂಸ್ಥೆಯ ಭದ್ರತಾ ಮಂಡಳಿಯ ಎಲ್ಲಾ ನಿರ್ಣಯಗಳ ರದ್ದತಿ
7. ಐಎಇಎ ಬೋರ್ಡ್ ಆಫ್ ಗವರ್ನರ್ಸ್‌ನ ಎಲ್ಲಾ ನಿರ್ಣಯಗಳ ರದ್ದತಿ
8. ಇರಾನ್‌ಗೆ ಪರಿಹಾರ ಧನ ಪಾವತಿ
9. ಇರಾನ್ ಪ್ರಾಂತ್ಯದಿಂದ ಅಮೆರಿಕದ ಯುದ್ಧ ಪಡೆಗಳ ಹಿಂತೆಗೆತ
10. ಎಲ್ಲಾ ರಂಗಗಳಲ್ಲಿ ಯುದ್ಧದ ನಿಲುಗಡೆ



ಹೆಜ್ಬೊಲ್ಲಾ ವಿರುದ್ಧ ಕಾರ್ಯಾಚರಣೆ ಮುಂದುವರಿಯಲಿದೆ: ಇಸ್ರೇಲ್

ಜೆರುಸಲೇಂ: ಲೆಬನಾನ್‌ನ ಹೆಜ್ಬೊಲ್ಲಾ ಉಗ್ರಗಾಮಿ ಸಂಘಟನೆಯ ವಿರುದ್ಧ ತನ್ನ ಯುದ್ಧ ಮತ್ತು ಭೂ ಕಾರ್ಯಾಚರಣೆಗಳು ಮುಂದುವರಿಯಲಿವೆ ಎಂದು ಇಸ್ರೇಲ್ ಮಿಲಿಟರಿ ಬುಧವಾರ ತಿಳಿಸಿದೆ. ಇರಾನ್ ಜೊತೆಗಿನ ಕದನ ವಿರಾಮವನ್ನು ಇಸ್ರೇಲ್ ಗೌರವಿಸಲಿದೆ, ಆದರೆ ಹೆಜ್ಬೊಲ್ಲಾ ವಿರುದ್ಧದ ಹೋರಾಟವನ್ನು ಮುಂದುವರಿಸಲಿದೆ ಎಂದು ಇಸ್ರೇಲ್ ಪ್ರಧಾನಿ ಬೆಂಜಮಿನ್ ನೆತನ್ಯಾಹು ಹೇಳಿದ್ದಾರೆ. ಈ ಕುರಿತು ಹೆಜ್ಬೊಲ್ಲಾ ಇದುವರೆಗೆ ಯಾವುದೇ ಪ್ರತಿಕ್ರಿಯೆ ನೀಡಿಲ್ಲ. ಇರಾನ್, ಅಮೆರಿಕ ಮತ್ತು ಇಸ್ರೇಲ್ ಬುಧವಾರ ಎರಡು ವಾರಗಳ ಕದನ ವಿರಾಮ ಒಪ್ಪಂದಕ್ಕೆ ಬಂದಿವೆ.

ಇರಾನ್‌ಗೆ ಶಸ್ತ್ರಾಸ್ತ್ರ ನೆರವು ನೀಡಿದರೆ ಶೇ.50 ಸುಂಕ

ವಾಷಿಂಗ್ಟನ್: ಇರಾನ್‌ಗೆ ಯಾವುದಾದರೂ ರಾಷ್ಟ್ರಗಳು ಆಯುಧ ಪೂರೈಕೆ ಮಾಡಿದರೆ, ಅವುಗಳ ಎಲ್ಲಾ ರಫ್ತುಗಳ ಮೇಲೆ ಶೇ.50 ಸುಂಕ ಹೇರುವುದಾಗಿ ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಎಚ್ಚರಿಕೆ ನೀಡಿದ್ದಾರೆ. ಕದನ ವಿರಾಮ ಒಪ್ಪಂದದ ಪ್ರಕಾರ, ಇರಾನ್ ಯುರೇನಿಯಂ ಅಭಿವೃದ್ಧಿ ಯೋಜನೆ ನಿಲ್ಲಿಸಲು ಒಪ್ಪಿಕೊಂಡಿದ್ದಾಗಿ ಟ್ರಂಪ್ ಹೇಳಿಕೊಂಡಿದ್ದಾರೆ. ಇರಾನ್‌ಗೆ ಯಾವುದೇ ರಾಷ್ಟ್ರ ಆಯುಧ ಪೂರೈಕೆ ಮಾಡಿದರೂ ವಿನಾಯಿತಿ ನೀಡುವುದಿಲ್ಲ. ಅಮೆರಿಕದಲ್ಲಿ ಮಾರಾಟವಾಗುವ ಅವರ ಸರಕುಗಳ ಮೇಲೆ ಶೇ.50 ಸುಂಕ ಹೇರಲಾಗುತ್ತದೆ ಎಂದು ಟ್ರಂಪ್ ಎಚ್ಚರಿಕೆ ನೀಡಿದ್ದಾರೆ.

ಇರಾನ್ ಭಾಗವಹಿಸುವಿಕೆ ಖಚಿತ

ಇಸ್ಲಾಮಾಬಾದ್: ಪಾಕಿಸ್ತಾನದ ಮಧ್ಯಸ್ಥಿಕೆಯಲ್ಲಿ ಪಾಕಿಸ್ತಾನದಲ್ಲಿ ನಡೆಯಲಿರುವ ಅಮೆರಿಕದೊಂದಿಗಿನ ಶಾಂತಿ ಮಾತುಕತೆಯಲ್ಲಿ ಇರಾನ್ ಭಾಗವಹಿಸಲಿದೆ, ಎಂದು ಇರಾನ್ ಅಧ್ಯಕ್ಷ ಮಸೂದ್ ಪೆಜೆಶ್ಕಿಯಾನ್ ಖಚಿತಪಡಿಸಿದ್ದಾರೆ ಎಂದು ಪ್ರಧಾನಿ ಶೆಹಬಾಜ್ ಶರೀಫ್ ಬುಧವಾರ ತಿಳಿಸಿದ್ದಾರೆ. ಉಭಯ ನಾಯಕರ ನಡುವೆ ನಡೆದ 45 ನಿಮಿಷಗಳ ದೂರವಾಣಿ ಸಂಭಾಷಣೆಯ ನಂತರ ಈ ಮಾಹಿತಿ ಹೊರಬಿದ್ದಿದೆ. ಹಾರ್ಮುಜ್ ಜಲಮಾರ್ಗವನ್ನು ಪುನಃ ತೆರೆಯುವುದೂ ಸೇರಿದಂತೆ, ಅಮೆರಿಕ ಮತ್ತು ಇರಾನ್ ನಡುವೆ ಎರಡು ವಾರಗಳ ಕದನ ವಿರಾಮ ಏರ್ಪಟ್ಟ ಬೆನ್ನಲ್ಲೇ ಈ ಮಾತುಕತೆಗಳು ನಡೆಯುತ್ತಿವೆ. ಪ್ರಾದೇಶಿಕ ಶಾಂತಿಗಾಗಿ ಇರಾನ್ ನಾಯಕತ್ವ ತೆಗೆದುಕೊಂಡ ನಿರ್ಧಾರವನ್ನು ಪ್ರಧಾನಿ ಶರೀಫ್ ಶ್ಲಾಘಿಸಿದ್ದಾರೆ. ಫೆ. 28 ರಂದು ಅಮೆರಿಕ ಮತ್ತು ಇಸ್ರೇಲ್ ಇರಾನ್ ಮೇಲೆ ನಡೆಸಿದ ದಾಳಿಯಿಂದ ಈ ಸಂಘರ್ಷ ಉಂಟಾಗಿತ್ತು. ಆ ದಾಳಿಯಲ್ಲಿ ಪರಮೋಚ್ಚ ನಾಯಕ ಅಯತೊಲ್ಲಾ ಅಲಿ ಖಮೇನಿ ಮತ್ತು ಹಲವು ಕಮಾಂಡರ್‌ಗಳು ಮೃತಪಟ್ಟಿದ್ದು, ಇದು ಪ್ರಾದೇಶಿಕ ಯುದ್ಧಕ್ಕೆ ಕಾರಣವಾಗಿತ್ತು.

ರಾಣಾ ವಿರುದ್ಧ ಕ್ರಮಕ್ಕೆ ಹೈ ಸೂಚನೆ

ಹೊಸದಿಲ್ಲಿ: ಹಿಂದು ದೇವತೆಗಳನ್ನು ಅವಮಾನಿಸುವ ಮತ್ತು ಸಾವರ್ಕರ್ ವಿರುದ್ಧ ಅವಹೇಳನಕಾರಿ ಪೋಸ್ಟ್ ಮಾಡಿದ್ದ ಪತ್ರಕರ್ತೆ ರಾಣಾ ಅಯೂಬ್ ಅವರ ಮೇಲೆ ಕ್ರಮ ಕೈಗೊಳ್ಳುವಂತೆ ದಿಲ್ಲಿ ಹೈಕೋರ್ಟ್ ಕೇಂದ್ರ ಸರ್ಕಾರ, ದಿಲ್ಲಿ ಪೊಲೀಸ್ ಮತ್ತು ಎಕ್ಸ್‌ಗೆ ಆದೇಶಿಸಿದೆ. ಎಕ್ಸ್‌ನಲ್ಲಿ ಅವಹೇಳನಕಾರಿ, ಪ್ರಚೋದನಕಾರಿ ಮತ್ತು ಕೋಮುವಾದ ಹರಡುತ್ತಿದೆ ಎಂದು ಆರೋಪಿಸಿ ಅವುಗಳನ್ನು ಅಳಿಸುವಂತೆ ಕೋರಿ ಅಮಿತಾ ಸಚ್‌ದೇವಾ ಅವರು ಸಲ್ಲಿಸಿದ್ದ ಅರ್ಜಿ ವಿಚಾರಣೆಯನ್ನು ನ್ಯಾಯಮೂರ್ತಿ ಪುರುಷೇಂದ್ರ ಕುಮಾರ್ ಕೌರವ್ ನಡೆಸಿದ್ದಾರೆ.

ಅಧೀರ್ ರಂಜನ್ ಕಾರಿಗೆ ಟ್ರಕ್ ಡಿಕ್ಕಿ

ಮುರ್ಶಿದಾಬಾದ್: ಪಶ್ಚಿಮ ಬಂಗಾಳದ ಮುರ್ಶಿದಾಬಾದ್‌ನಲ್ಲಿ ಚುನಾವಣಾ ಪ್ರಚಾರದಿಂದ ಹಿಂದಿರುಗುತ್ತಿದ್ದ ವೇಳೆ ಕಾಂಗ್ರೆಸ್ ಅಭ್ಯರ್ಥಿ ಅಧೀರ್ ರಂಜನ್ ಚೌಧರಿ ಅವರ ಕಾರಿಗೆ ಟ್ರಕ್ ಡಿಕ್ಕಿ ಹೊಡೆದಿದ್ದು, ಹಲವು ಭದ್ರತಾ ಸಿಬ್ಬಂದಿ ಗಾಯಗೊಂಡಿದ್ದಾರೆ. ಕಂಡಿ ಕ್ಷೇತ್ರದಲ್ಲಿ ಚುನಾವಣಾ ಪ್ರಚಾರದಲ್ಲಿ ಭಾಗವಹಿಸಿ ಬೆಹರಾಮ್‌ಪುರ್‌ಗೆ ಹಿಂದಿರುಗಿತ್ತಿದ್ದಾಗ ದುರ್ಘಟನೆ ನಡೆದಿದೆ. ಏ.4ರಂದು ಬೆಹರಾಮ್‌ಪುರ್ ರ‍್ಯಾಲಿ ವೇಳೆ ಅಧೀರ್ ಮೇಲೆ ಟಿಎಂಸಿ ಕಾರ್ಯಕರ್ತರು ಹಲ್ಲೆಗೆ ಯತ್ನಿಸಿದ್ದರು.

ಚುನಾವಣಾ ವೀಕ್ಷಣಾಧಿಕಾರಿ ವಜಾ

ಕೋಲ್ಕತ್ತಾ: ಕೂಚ್ ಬೆಹಾರ್ ದಕ್ಷಿಣದ ಚುನಾವಣಾ ವೀಕ್ಷಕ ಅನುರಾಗ್ ಯಾದವ್ ಅವರಿಗೆ ವಿಧಾನಸಭಾ ಕ್ಷೇತ್ರದ ಮತದಾನ ಕೇಂದ್ರಗಳ ಸಂಖ್ಯೆ ತಿಳಿದಿಲ್ಲ ಎಂಬ ಮಾಹಿತಿ ಬಹಿರಂಗೊಂಡ ಬೆನ್ನಲ್ಲೇ ಚುನಾವಣಾ ಆಯೋಗ ವರನ್ನು ವಜಾ ಗೊಳಿಸಿದೆ. ವೀಕ್ಷಕರ ವಿವರಣೆ ವೇಳೆ, ಯಾದವ್ ಅವರು ತಮ್ಮ ಕ್ಷೇತ್ರದ ಮತದಾನ ಕೇಂದ್ರಗಳ ಸಂಖ್ಯೆಯನ್ನು ಹೇಳಲು ವಿಫಲರಾಗಿದ್ದಾರೆ. ಸಿಇಸಿ ಜ್ಞಾನೇಶ್ ಕುಮಾರ್ ಅವರು ತಮ್ಮ ಕ್ಷೇತ್ರದ ಮತಗಟ್ಟೆಗಳ ಸಂಖ್ಯೆಯ ಬಗ್ಗೆ ಕೇಳಿದ ವೇಳೆ, ದಕ್ಷಿಣದಲ್ಲಿ 125 ಮತಗಟ್ಟೆಗಳಿವೆ ಎಂದು ಉತ್ತರಿಸಲು ತಡವರಿಸಿದ್ದಾರೆ.

ಉದ್ದಿಮೆಗಳ ಬಲಪಡಿಸುವಲ್ಲಿ ಮುದ್ರಾ ಯೋಜನೆ ಯಶಸ್ವಿ

ಹೊಸದಿಲ್ಲಿ: ಉದ್ದಿಮೆಗಳ ಸುಗಮತೆಗಿದ್ದ ಅಡೆತಡೆ ನಿವಾರಿಸಿ, ಜನರ ಆಶೋತ್ತರಗಳಲ್ಲಿ ದೃಢ ವಿಶ್ವಾಸ ಕಾಯ್ದುಕೊಳ್ಳುವ ಮುಖೇನ, ದೇಶಾದ್ಯಂತ ಉದ್ದಿಮೆಗಳ ಸ್ಫೂರ್ತಿ ಬಲಪಡಿಸುವಲ್ಲಿ ಮುದ್ರಾ ಯೋಜನೆ ಯಶಸ್ವಿಯಾಗಿದೆ ಎಂದು ಪ್ರಧಾನಿ ನರೇಂದ್ರ ಮೋದಿ ಹೇಳಿದ್ದಾರೆ.

ಆತ್ಮವಿಶ್ವಾಸದೊಂದಿಗೆ ಕನಸು ಕಾಣಲು ಮತ್ತು ಕನಸಿನ ಸಾಕಾರಕ್ಕೆ ಅಗತ್ಯ ಮೂಲಗಳನ್ನು ಒದಗಿಸುವ ಮೂಲಕ , ಮಿಲಿಯಂತರ ಜನರ ಸಬಲೀಕರಣ, ತನ್ಮೂಲಕ ಸಾಲಸೌಲಭ್ಯದ ಲಭ್ಯತೆಯನ್ನು ಮುದ್ರಾ ಯೋಜನೆ ಮರು ವ್ಯಾಖ್ಯಾನಿಸಿದೆ ಎಂದು ಪ್ರಧಾನಿ ಮೋದಿ ಎಕ್ ‍ಗೆ ಹಾಕಿರುವ ಪೋಸ್ಟ್‌ನಲ್ಲಿ ಬಣ್ಣಿಸಿದ್ದಾರೆ. ಮುದ್ರಾ ಯೋಜನೆಗೆ 11ವರುಷಗಳು ತುಂಬಿದ ಸಂದರ್ಭದಲ್ಲಿ ಪ್ರಧಾನಿ ಮೋದಿ ಯೋಜನೆಯಿಂದ ದೇಶವಾಸಿಗಳಿಗೆ ಆಗಿರುವ ತುಂಬು ಪ್ರಯೋಜನಗಳತ್ತ ಗಮನ ಸೆಳೆದಿದ್ದಾರೆ.

ಆರ್ಥಿಕ ಆಶೋತ್ತರಗಳ ಪ್ರತಿಫಲಿಸಿದೆ ಮುದ್ರಾ: ಸುಗಮವಾಗಿ ಅವಕಾಶಗಳ ಲಭ್ಯತೆ, ಯೋಜನೆಗಳಿಗೆ ಉತ್ತೇಜನ ಮತ್ತು ಪ್ರತಿಯೊಂದು ಕನಸಿನ ಸಾಕಾರಕ್ಕೆ ತುಂಬು ಬೆಂಬಲವಿರುವಂತಹ ಆರ್ಥಿಕ ಆಶೋತ್ತರಗಳನ್ನು ಪಿಎಂ ಮುದ್ರಾ ಪ್ರತಿಫಲಿಸಿದೆ. ಮುದ್ರಾ ಯೋಜನೆಯ ಪರಿವರ್ತನಾತ್ಮಕ ಸಾಮರ್ಥ್ಯದತ್ತ ಬೆಳಕು ಚೆಲ್ಲಿರುವ ಪ್ರಧಾನಿ ಮೋದಿ, ಯೋಜನೆಯು ಯುವಶಕ್ತಿ , ನಾರೀ ಶಕ್ತಿ ಮೇಲೆ ಬೀರಿರುವ ಪ್ರಭಾವವನ್ನು ಬಣ್ಣಿಸಿದ್ದಾರೆ ಮತ್ತು ಮುದ್ರಾ ಯೋಜನೆಗೆ ಸಂಬಂಧಪಟ್ಟಂತೆ, ಸರಕಾರದ ಮೈ ಗವರ್ನ್‌ಮೆಂಟ್ ಇಂಡಿಯಾ ಜಾಲತಾಣದ ಪೋಸ್ಟ್‌ನ್ನು ಟ್ಯಾಗ್ ಮಾಡಿದ್ದಾರೆ.

ನಿಜವಾದ ಆರ್ಥಿಕ ಪರಿವರ್ತನೆಗಳು ಬೋರ್ಡ್ ‍ರೂಮ್‌ಗಳಿಂದ ಶುರುವಾಗುವುದಲ್ಲ. ಹಲವು ಸಂದರ್ಭಗಳಲ್ಲಿ ಇದು ಸಣ್ಣ ಸಾಲ, ಸ್ಥಳೀಯ ಚಿಂತನೆ ಮತ್ತು ಧೈರ್ಯದಿಂದ ಶುರುವಾಗುತ್ತದೆ. ಮುದ್ರಾ ಯೋಜನೆ ಭಾರತದ ಆರ್ಥಿಕತೆಯ ಬುನಾದಿಯನ್ನು ಮರುನಿರ್ಮಿಸಿದೆ. ಆಧಾರ–ಭದ್ರತೆಗಳ ಆವಶ್ಯಕತೆರಹಿತ ಮುಕ್ತ ಸಾಲಸೌಲಭ್ಯ ಮುಖೇನ ಅನೌಪಚಾರಿಕ ಸಾಲಗಳ ಮೇಲಿನ ಅವಲಂಬನೆ ಕುಗ್ಗಿಸಿದೆ. ವಿತ್ತೀಯ ಅಂತರ್ಗತತೆಯನ್ನು ವಿಸ್ತರಿಸಿದೆ ಮತ್ತು ತಳಮಟ್ಟಗಳಿಂದಲೇ ವಿತ್ತೀಯ ಅನುಶಾಸನವನ್ನು ಬಲಪಡಿಸಿದೆ ಎಂದು ಮೈ ಗವರ್ನ್‌ಮೆಂಟ್ ಇಂಡಿಯಾ ಎಕ್ಸ್‌ಗೆ ಹಾಕಿರುವ ಪೋಸ್ಟ್‌ನಲ್ಲಿ ವಿಶ್ಲೇಷಿಸಿದೆ.

ಕದನ ವಿರಾಮ: ಸೆನ್ಸೆಕ್ಸ್ 2,900 ಅಂಕಗಳ ಏರಿಕೆ

ಮುಂಬೈ: ಹಾರ್ಮುಜ್‌ನಲ್ಲಿ ಹಡಗುಗಳ ಸುರಕ್ಷಿತ ಸಂಚಾರಕ್ಕೆ ಇರಾನ್ ಒಪ್ಪಿಕೊಂಡಿದ್ದು, ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಕದನವಿರಾಮ ಘೋಷಣೆ ಬೆನ್ನಲ್ಲೇ ಬ್ಯಾರೆಲ್‌ಗೆ100 ಡಾಲರ್ ತೈಲ ಬೆಲೆ ಕುಸಿಯಿತು. ಇದರಿಂದಾಗಿ ಬುಧವಾರ ಮಾರುಕಟ್ಟೆ ತೆರೆದಾಗ ಸೆನ್ಸೆಕ್ಸ್ 2,674.05 ಅಂಕಗಳ ಮತ್ತು ನಿಫ್ಟಿ 731.5 ಅಂಕಗಳ ಏರಿಕೆ ಕಂಡಿವೆ. ಬಿಎಸ್‌ಇ ಸೆನ್ಸೆಕ್ಸ್ ಶೇ.3.58 ಏರಿಕೆಯೊಂದಿಗೆ 77,290.63 ಅಂಕಗಳೊಂದಿಗೆ ವ್ಯವಹಾರ ಆರಂಭಿಸಿತ್ತು. ಎನ್‌ಎಸ್‌ಇ ನಿಫ್ಟಿ50 ಶೇ.3.16 ಏರಿಕೆ ಕಂಡು 23,855.15 ಅಂಕಗಳೊಂದಿಗೆ ವಹಿವಾಟು ಆರಂಭಿಸಿತ್ತು. ಜಾಗತಿಕ ಅನಿಶ್ಚಿತತೆ ಸಮಯದಲ್ಲಿ ಆರ್‌ಬಿಐ ರೆಪೋ ದರವೂ ಶೇ.5.25ರೊಂದಿಗೆ ಸ್ಥಿರತೆ ಕಾಯ್ದುಕೊಂಡಿದೆ. ದಿನದ ವಹಿವಾಟು ಮುಕ್ತಾಯದ ವೇಳೆಗೆ ಸೆನ್ಸೆಕ್ಸ್ 2,946.32 ಅಂಕಗಳ ಏರಿಕೆ ಕಂಡು 77,562.9 ಅಂಕಗಳನ್ನು ಮತ್ತು ನಿಫ್ಟಿ 873.7 ಅಂಕಗಳ ಏರಿಕೆಯೊಂದಿಗೆ 23,997.35 ಅಂಕಗಳನ್ನು ತಲುಪಿದೆ. ಹೂಡಿಕೆದಾರರಿಗೆ 16ಲ.ಕೋ.ರೂ.ಲಾಭವಾಗಿದೆ.



15 ಲಕ್ಷ ಕೋಟಿ ರೂ. ಹೂಡಿಕೆ: ಅಮೆರಿಕ–ಇರಾನ್ ಕದನ ವಿರಾಮವನ್ನು ಘೋಷಿಸಿದ ಕೆಲವೇ ಗಂಟೆಗಳಲ್ಲಿ ಬಿಎಸ್‌ಇ ಸೆನ್ಸೆಕ್ಸ್ ಹೂಡಿಕೆದಾರರು 15 ಲಕ್ಷ ಕೋಟಿ ರೂ. ಹೂಡಿಕೆ ಮಾಡಿದ್ದಾರೆ. ಕದನವಿರಾಮ ಘೋಷಣೆಯಿಂದಾಗಿ ಭಾರತೀಯ ಮಾರುಕಟ್ಟೆ ಶೇ.65ರಷ್ಟು ನಷ್ಟವನ್ನು ಸುಧಾರಿಸಿದೆ.

ಆರ್‌ಬಿಐ ಕಾದುನೋಡುವ ತಂತ್ರ, ಬಡ್ಡಿದರ ಯಥಾಸ್ಥಿತಿ

ಮುಂಬೈ: ಭಾರತೀಯ ರಿಸರ್ವ್ ಬ್ಯಾಂಕ್ (ಆರ್‌ಬಿಐ) ತನ್ನ ಬಡ್ಡಿದರವನ್ನು ಯಥಾಸ್ಥಿತಿಯಲ್ಲಿ ಕಾಯ್ದುಕೊಂಡಿದೆ. ಮಧ್ಯಪ್ರಾಚ್ಯ ಯುದ್ಧ ಆರನೇ ವಾರ ಪ್ರವೇಶಿಸಿದ ಹಿನ್ನೆಲೆ ತೈಲ ಪೂರೈಕೆ, ದರ ಏರಿಕೆ ಮತ್ತು ಆರ್ಥಿಕ ವೃದ್ಧಿಯ ಮೇಲಿನ ಪರಿಣಾಮಗಳನ್ನು ಮೌಲ್ಯಮಾಪನ ಮಾಡಿಕೊಂಡು ಕಾದುನೋಡುವ ತಂತ್ರವನ್ನು ಅನುಸರಿಸಿದೆ. ಆರ್‌ಬಿಐನ ಆರು ಸದಸ್ಯರ ಹಣಕಾಸು ನೀತಿ ಸಮಿತಿ (ಎಂಪಿಸಿ) ಏಕಮತದಿಂದ ರೆಪೋ ದರವನ್ನು ಶೇ.5.25ದಲ್ಲಿ ಸ್ಥಿರತೆ ಕಾಯ್ದುಕೊಳ್ಳಲು ತೀರ್ಮಾನಿಸಿದೆ. ಪಶ್ಚಿಮ ಏಷ್ಯಾ ಸಂಘರ್ಷದ ಪರಿಣಾಮ ಕಚ್ಚಾ ತೈಲ ಬೆಲೆ ಏರಿಕೆಯಿಂದ ರೂಪಾಯಿ ಮೌಲ್ಯ ದುರ್ಬಲಗೊಂಡು, ವ್ಯಾಪಾರ ಹರಿವುಗಳಿಗೆ ಅಡಚಣೆಯಾದ ಕಾರಣ ಅನಿಶ್ಚಿತತೆ ಹೆಚ್ಚಿದೆಯೆಂದು ಸಮಿತಿ ಸೂಚಿಸಿದೆ.



ಜಿಡಿಪಿ ಶೇ.6.9ಕ್ಕೆ ಇಳಿಕೆ ಸಾಧ್ಯತೆ: ಪ್ರಸ್ತುತ ವಿತ್ತೀಯ ವರ್ಷದಲ್ಲಿ ಭಾರತ ಶೇ.6.9ರ ಜಿಡಿಪಿ ಪ್ರಗತಿ ದರವನ್ನು ಆರ್‌ಬಿಐ ಬುಧವಾರ ಅಂದಾಜಿಸಿದ್ದು, ಯುದ್ಧ ಹಿನ್ನೆಲೆ 2026–26ನೇ ಸಾಲಿಗೆ ನಿರೀಕ್ಷಿಸಿದ್ದ ಜಿಡಿಪಿ ದರ ಶೇ.7.6ರಿಂದ ಇಳಿಕೆಯಾಗಲಿದೆ. ಭಾರತೀಯ ಆರ್ಥಿಕತೆ ಬಹಳ ಬಲಿಷ್ಠ ಮತ್ತು ದೃಢವಾಗಿದೆ. ನಾವು ತಟಸ್ಥ ಸ್ಥಿತಿ ಕಾಯ್ದುಕೊಂಡಿದ್ದೇವೆ ಎಂದು ಆರ್‌ಬಿಐ ಗವರ್ನರ್ ಸಂಜಯ್ ಮಲ್ಹೋತ್ರ ಹೇಳಿದ್ದಾರೆ.

ಕಾರು ವೀಲಿಂಗ್ : ಓರ್ವನ ಬಂಧನ

ಬಂಟ್ವಾಳ: ರಾಷ್ಟ್ರೀಯ ಹೆದ್ದಾರಿಯ ಬಿ.ಸಿ.ರೋಡಿಗೆ ಸಮೀಪದ ತಲಪಾಡಿಯಲ್ಲಿ ಕಾರು ವೀಲಿಂಗ್ ಮಾಡಿದ ಬಳಿಕ ಅದರ ವಿಡಿಯೋವನ್ನು ಸಾಮಾಜಿಕ ಜಾಲತಾಣದಲ್ಲಿ ವೈರಲ್ ಮಾಡಿರುವಾತನನ್ನು ಬಂಟ್ವಾಳ ಸಂಚಾರಿ ಪೊಲೀಸರು ಬಂಧಿಸಿ ವೀಲಿಂಗ್‌ಗೆ ಬಳಸಿದ ಕಾರನ್ನು ವಶಪಡಿಸಿದ್ದಾರೆ.

ಕಾರು ವೀಲಿಂಗ್ ಮಾಡಿರುವಾತನನ್ನು ಸರ್ಫುದ್ದೀನ್ ಎಂದು ಹೆಸರಿಸಲಾಗಿದ್ದು, ಈತ ವೀಲಿಂಗ್ ಗೆ ಬಳಸಿದ ಕೆಎಲ್ – 09–ಆರ್– 6971 ನೋಂದಾಯಿತ ಸಂಖ್ಯೆಯ ಕಪ್ಪು ಬಣ್ಣದ ವಾಹನವನ್ನು ವಶಪಡಿಸಿರುವ ಸಂಚಾರಿ ಪೊಲೀಸರು ಭಾರತೀಯ ಮೋಟಾರು ವಾಹನ ಕಾಯ್ದೆಯಡಿ ಪ್ರಕರಣ ದಾಖಲಿಸಿಕೊಂಡಿದ್ದಾರೆ.

ಈ ವೀಲಿಂಗ್ ದೃಶ್ಯ ಸಾಮಾಜಿಕ ಜಾಲತಾಣದಲ್ಲಿ ವೈರಲ್ ಆಗುತ್ತಿದ್ದಂತೆ ಈ ವಾಹನ ವಶಪಡಿಸಿ ಪ್ರಕರಣ ದಾಖಲಿಸಬೇಕು, ಇಲ್ಲದಿದ್ದರೆ ಅನಾಹುತ ತಪ್ಪಿದ್ದಲ್ಲ ಎಂದು ನೆಟ್ಟಿಗರು ಕಾಮೆಂಟ್ಸ್ ಹಾಕಿ ಒತ್ತಾಯಿಸಿ ಶೇರ್ ಮಾಡಿದ್ದರು.

2025 ರಲ್ಲಿ ಈ ಘಟನೆ ನಡೆದಿದ್ದು, ಬಳಿಕ ಕಾರ್ಯಾಚರಣೆಗಿಳಿದಿದ್ದ ಸಂಚಾರಿ ಪೊಲೀಸರಿಗೆ ವೀಲಿಂಗ್ ಮಾಡಲಾದ ವಾಹನ ಪತ್ತೆಯಾಗಿದ್ದು, ಅದನ್ನು ವಶಪಡಿಸಿದ್ದಲ್ಲದೆ ಚಾಲಕ ಸರ್ಫುದ್ದೀನ್ ಎಂಬಾತನನ್ನು ಬಂಧಿಸಿದ್ದಾರೆ.

BEFORE THE NOMINEE OF DEPUTY REGISTRAR OF CHITS, MANGALORE REGION MANGALORE

DISPUTE NO: DRP/CFS/63/2025-26

BETWEEN:

M/S SHREE KURAL CHITS PVT LTD. ...*DISPUTANTS*

AND

MR. HARIPRASAD AND OTHER ...*OPPONENTS*

TO:

1.Mr. Hariprasad, S/o.Lakshmana Salian, 2-19B, Harsha Nivasa Haleyangadi Thokur (10) Dakshina Kannada-574146

2. Mr.Sudhir B.S., S/o.Shantharama B., #2-142(G) 2E Sri Sannidhi 3rd Cross Krishna Nagara, Saralaya Gudde, Kumpala Post Mangalore-22

3.Mr. Thomas D'Souza, S/o. Robert D'Souza, #1-377/3, Bhatra Kodi Pedamale Post Neermarga-575029

4.Mr. Charan Kumar, S/o. K. Raviraj Hegde, 501/2, Santhrabettu Tellar Road, 3rd Cross Karkala Udupi-574104

NOTICE

Take notice that the above dispute is filed against you for recovery of chit amount by the Disputant. Now the above case stands posted to **20-04.2026 at 11.00 AM** for your appearance at the office address of the Disputant at M/S.Shree Kural Chits Pvt Ltd, D. No-3W-29-2360/9, 2nd Floor, Adarsh Castle Building Kadri Road, Mallikatte Kadri Mangalore-575003

If you fail to appear on that day at the Disputant office, the matter will be decided in your absence.

Given under my hand & seal on this 7th day of April 2026 at Mangalore.

Sd/- SUKESH KUMAR SHETTY
Honourable Arbitratior for Co-op. Societies
Advocate, Carstreet Mangalore.

IN THE COURT OF PRL'L CIVIL JUDGE (JR.DN.) & J.M.F.C MADIKERI, KODAGU
CR.M.C.NO.107/2026

Petitioner:
Smt. A. G. Kamala
Aged 80 years,
D/o. Late Sri. Idyadka Subraya & Late Smt. S. Akkamma,
W/o. late Ganapathi
Resident of Katakeri Village, Made Post, Madikeri Taluk Kodagu District-571201
Adhar No-368826903063
Mobile No-7676752430

V/s

Respondent:
The Registrar of Birth & Death Rep: By the Thashildar, Madikeri Taluk, Kodagu.

PUBLIC NOTICE

Take notice that the above named Petitioner has filed the above petition to obtain the Death Certificate of her Mother Smt. S. Akkamma who died on 25-05-1983 at her residence situated at 2nd Monnangeri Village, Made Post, Madikeri Taluk, Kodagu District.

Whoever having any objections to the above petition may appear before this Hon'ble Principal Civil Judge and JMFC Court at Madikeri, Kodagu on. **25-05-2026 at 11:00 A.M.** either personally or through duly instructed Advocate, failing to which the case will be heard and decided exparte as per law.

Dated on this 08.04.2026, at Madikeri, Kodagu District, Karnataka.

(By Order of the Court)
Sd/- Chief Ministerial Officer
Prl Civil Judge & JMFC Court
Madikeri, Kodagu
Sd/- Sri. K.K.Ranju, BBM LLB
KAR1496/2003
Advocate, Madikeri-571201
Mobile: 9448433118
(Advocate for Petitioner)

ಕೆ.ಎಂ.ಎಫ್ ಕರ್ನಾಟಕ ಸಹಕಾರ ಹಾಲು ಉತ್ಪಾದಕರ ಮಹಾಮಂಡಳ ನಿಯಮಿತ
ಕಹಾಮ ಸಂಕೀರ್ಣ ಡಾ: ಎಂ. ಹೆಚ್. ಮರೀಗೌಡ ರಸ್ತೆ ಬೆಂಗಳೂರು–560 029
ಫೋನ್: 26096832/910/877 ಫ್ಯಾಕ್ಸ್: 080–25536105
ಇ–ಮೇಲ್: purchase@kmf.coop

ಕಹಾಮ/ಖರೀದಿ/ಟೆಂಡರ್–903/2026–27 ದಿನಾಂಕ: 08.04.2026

ಅಲ್ಪಾವಧಿ ಟೆಂಡರ್ ಪ್ರಕಟಣೆ

ಕಹಾಮದ ನಂದಿನಿ ಹಾಲು ಉತ್ಪನ್ನ ಘಟಕ ಬೆಂಗಳೂರು ಘಟಕದ ಉಪಯೋಗಕ್ಕೆ ಅಗತ್ಯವಿರುವ ಪ್ಯಾಕಿಂಗ್ ಸಾಮಗ್ರಿಗಳನ್ನು ಖರೀದಿಸಲು ಟೆಂಡರ್‌ನ್ನು ಆಹ್ವಾನಿಸಲಾಗಿದೆ.

Sl. No.	Tender Nos	Particulars	Approx. Qty. & EMD Details
01	KMF/PUR/Tender-903/2026-27 (KMF/2025-26/IND2141)	Supply of Packing Materials to Nandini Milk Products Plant, Bangalore for a Period of Three Months	Please refer the tender document

ಇ–ಪ್ರೊಕ್ಯೂರ್‌ಮೆಂಟ್ https://kppp.karnataka.gov.in ಮೂಲಕ ಟೆಂಡರ್ ಅನ್ನು ದಿನಾಂಕ **17.04.2026** ರಂದು **05.00** ಗಂಟೆಯ ಒಳಗೆ ಸಲ್ಲಿಸಬಹುದಾಗಿದೆ. ಇಎಂಡಿ, ಪರಿಮಾಣ ಹಾಗೂ ಇನ್ನಿತರ ವಿವರಗಳನ್ನು ಟೆಂಡರ್ ದಾಖಲಾತಿಯಲ್ಲಿ ನೋಡಬಹುದು.

ಕರ್ನಾಟಕ ಸಹಕಾರ ಹಾಲು ಮಹಾಮಂಡಳ ಪರವಾಗಿ
ಸಹಿ/– ನಿರ್ದೇಶಕರು (ಖರೀದಿ)

ಪುತ್ತೂರು ಮಾರುಕಟ್ಟೆ ಧಾರಣೆ

08-04-2026
ಅಡಿಕೆ ಧಾರಣೆ ಕೆ.ಜಿ.ಗೆ

ಹೊಸ ಅಡಿಕೆ	:	460 - 500
ಚೋಲ್ ಅಡಿಕೆ	:	530 - 555
ಡಬಲ್ ಚೋಲ್	:	530 - 555
ಹೊಸ ಪಠೋರ	:	350 - 400
ಹಳೆ ಪಠೋರ	:	380 - 410
ಹೊಸ ಉಳ್ಳಿ	:	120 - 290
ಹಳೆ ಉಳ್ಳಿ	:	105 - 290
ಹೊಸ ಕೋಕಾ	:	325 - 345
ಹಳೆ ಕೋಕಾ	:	325 - 345
ಹೊಸ ಕರಿಗೋಟು	:	235 - 265
ಹಳೆ ಕರಿಗೋಟು	:	235 - 265
ಹಸಿ ಕೊಕ್ಕೋ	:	70 - 100
ಒಣ ಕೊಕ್ಕೋ	:	270 - 300

ಕಾಳುಮೆಣಸು ಧಾರಣೆ

ಕಾಳುಮೆಣಸು	:	450 - 670

ರಬ್ಬರ್ ಧಾರಣೆ : ಗ್ರೇಡ್

ಆರ್‌ಎಸ್‌ಎಸ್ 1	-	228.00
ಆರ್‌ಎಸ್‌ಎಸ್ 2	-	196.00
ಸ್ರಾಪ್ 1	-	138.00
ಸ್ರಾಪ್ 2	-	125.00

ಕರ್ನಾಟಕ ಸರಕಾರ

ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರರ ಕಛೇರಿ
ಲೋಕೋಪಯೋಗಿ ಇಲಾಖೆ
ನಂ. 4 ಉಪವಿಭಾಗ, ಪುತ್ತೂರು

ನಂ:ಟಿಎನ್‌ಡಿ(01)/ಸಕಾಇಂ.ಲೋ.ಇ/ಪು.ಉ.ವಿ/ಶೇ.ಕೊ./ಟೆಂ.ಪ್ರ/26–27/ಜೆ.ಇ–1/23/ ದಿ: 07.04.2026

ಟೆಂಡರ್ ಪ್ರಕಟಣೆ

ಲೋಕೋಪಯೋಗಿ ಇಲಾಖೆ ನಂ. 4 ಪುತ್ತೂರು ಉಪವಿಭಾಗಕ್ಕೆ ಸಂಬಂಧಿಸಿದಂತೆ, 8443–ಠೇವಣಿ ಕೊಡುಗೆ ಯೋಜನೆಯಡಿಯಲ್ಲಿ 02 ಕಾಮಗಾರಿಗೆ ಟೆಂಡರನ್ನು ಕರ್ನಾಟಕ ಸರಕಾರದ ರಾಜ್ಯಪಾಲರ ಪರವಾಗಿ ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರರು, ಲೋಕೋಪಯೋಗಿ ಇಲಾಖೆ, ನಂ. 4 ಉಪ ವಿಭಾಗ, ಪುತ್ತೂರು ಇವರು ಅರ್ಹ ಗುತ್ತಿಗೆದಾರರಿಂದ ಆಹ್ವಾನಿಸಿರುತ್ತಾರೆ. ಟೆಂಡರುದಾರರು ಟೆಂಡರ್ ನಿಯಮಾವಳಿಯ ಕ್ಲಾಜ್ 3 ರಂತೆ ಕನಿಷ್ಠ ಅರ್ಹತೆಯನ್ನು ಪಡೆದಿರಬೇಕು ಎಂಬುದನ್ನು ಗಮನಿಸಲು ಸೂಚಿಸಲಾಗಿದೆ. ಟೆಂಡರ್‌ಗಳನ್ನು ಸ್ವೀಕರಿಸುವ ಕೊನೆಯ ದಿನಾಂಕ: 23.04.2026 ರ ಸಂಜೆ 4.00ರ ವರೆಗೆ ಸ್ವೀಕರಿಸಲಾಗುವುದು. ಹೆಚ್ಚಿನ ವಿವರಗಳನ್ನು ಕಛೇರಿ ವೇಳೆಯಲ್ಲಿ ಈ ಕಛೇರಿಯಿಂದ ಪಡೆಯಬಹುದಾಗಿದೆ.

ಸಹಿ/–
ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರರು
ಲೋಕೋಪಯೋಗಿ ಇಲಾಖೆ, ನಂ.4 ಉಪವಿಭಾಗ, ಪುತ್ತೂರು

DIPR/DK/MPL/48/26-27

ಪುರಸಭೆ ಕಾರ್ಯಾಲಯ, ನವಲಗುಂದ–582208
ಜಿಲ್ಲೆ : ಧಾರವಾಡ, ರಾಜ್ಯ : ಕರ್ನಾಟಕ
Phone : 08380-229247,
Website: www.navalgundtown.mrc.gov.in
email ID: ka.navalagund.tmc@gmail.com

ಕ್ರ.ಸಂ:ಪುಸನ/ಅಭಿವೃದ್ಧಿ/ಟೆಂಡರ್/ವಹಿ/2026–27 ದಿನಾಂಕ: 08–04–2026

ಟೆಂಡರ್ ಪ್ರಕಟಣೆ
(ಕರ್ನಾಟಕ ಪಬ್ಲಿಕ ಪ್ರೊಕ್ಯೂರಮೆಂಟ್ ಪೋರ್ಟಲ್ ಮೂಲಕ)

ನವಲಗುಂದ ಪುರಸಭೆಯಿಂದ ಕೇಂದ್ರ ಪುರಸ್ಕೃತ ಅಮೃತ 2.0 ಅನುದಾನದಲ್ಲಿ ರೂ. **269.00** ಲಕ್ಷಗಳ ಇಂಡೆಂಟ ನಂ 1) DMA/2026-27/OW/WORK_INDENT56996 (ಇತರೆ), ನೇದ್ದರ ಕಾಮಗಾರಿಯನ್ನು ಅನುಷ್ಠಾನ ಗೊಳಿಸಲು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯಲ್ಲಿ ಪಾರದರ್ಶಕತೆ ಅದ್ಯಾದೇಶ 1999–2000 ಪ್ರಕಾರ ಆಕ್ಟ 2000ರ ನಿಯಮದಂತೆ ಸ್ಟ್ಯಾಂಡರ್ಡ ಟೆಂಡರ್ ಡಾಕ್ಯುಮೆಂಟ್‌ನ ನಿಯಮದನ್ವಯ ಟೆಂಡರ್ ಸಲ್ಲಿಸುವ ಕೊನೆಯ ದಿನಾಂಕ : **07–05–2026** ರಂದು ನಿಗದಿಪಡಿಸಿ ಕರ್ನಾಟಕ ಪಬ್ಲಿಕ ಪ್ರೊಕ್ಯೂರಮೆಂಟ್ ಮುಖಾಂತರ ದ್ವಿ–ಲಕೋಟೆ ಟೆಂಡರ್ ಆಹ್ವಾನಿಸಲಾಗಿದೆ. ಕರ್ನಾಟಕ ಪಬ್ಲಿಕ ಪ್ರೊಕ್ಯೂರಮೆಂಟ್ ಪೋರ್ಟಲ್ ಟೆಂಡರನಲ್ಲಿ ಭಾಗವಹಿಸಲು ಇಚ್ಛಿಸುವ ಕರ್ನಾಟಕ ಲೋಕೋಪಯೋಗಿ ಇಲಾಖೆಯಲ್ಲಿ ನೋಂದಾಯಿತರಾದ ಆಸಕ್ತಿಯುಳ್ಳ ಗುತ್ತಿಗೆದಾರರು ವಿವರಗಳನ್ನು ವೆಬ್‌ಸೈಟ್ http://kppp.karnataka.gov.in ನಲ್ಲಿ ಪಡೆದುಕೊಳ್ಳಬಹುದು.

ಸೂಚನೆ : ಹೆಚ್ಚಿನ ವಿವರಗಳನ್ನು ಕರ್ನಾಟಕ ಪಬ್ಲಿಕ ಪ್ರೊಕ್ಯೂರಮೆಂಟ್ ಪೋರ್ಟಲ್ ಮುಖಾಂತರ ಪಡೆಯಬಹುದು ಮತ್ತು ಇತರೆ ವಿವರಗಳನ್ನು ಕಛೇರಿ ವೇಳೆಯಲ್ಲಿ ಪಡೆಯಬಹುದಾಗಿದೆ. ಹಾಗೂ ಯಾವುದೇ ತಿದ್ದುಪಡಿ ಅಥವಾ ಬದಲಾವಣೆಯನ್ನು ಕರ್ನಾಟಕ ಪಬ್ಲಿಕ ಪ್ರೊಕ್ಯೂರಮೆಂಟ್ ಪೋರ್ಟಲ್ ಮೂಲಕ ತಿಳಿಸಲಾಗುತ್ತದೆ.

ಸಹಿ/– (ಎಸ್.ಪಿ. ಪೂಜಾರ)
ಮುಖ್ಯಾಧಿಕಾರಿ, ಪುರಸಭೆ, ನವಲಗುಂದ

ವಾಸಾಸಂಇ/ಧಾರವಾಡ/ಕೆಎಸ್‌ಎಂಸಿಎ/34/2026–27

IN THE COURT OF PRINCIPAL SENIOR CIVIL JUDGE AT PUTTUR D.K.
G & WC. No:31/2026

Between,
Vinod B Nayak ...Petitioner
And
Nil ...Respondent

PUBLIC NOTICE

Whereas above Petitioner has filed Petition under section 7,8,9 r/w section 29 of guardian and wards act 1890 for declare him Guardian to the minor children and property and grant permission to the petitioner to sell the property described in the schedule.

If anyone has got any claim, right/title etc, can file their objection before the Hon'ble Court at Puttur D.K. on **21-05-2026 at 11:00 A.M.,** either in person or through a counsel to answer the same, failing which, the petition will be disposed off.

A Schedule

Immovable Property situated at Kemminje Village of Puttur Taluk, D.K.

Survey No.	Kissam	Extent
238/15	Converted	209.42 Sqr Mtr

PID No.24-2-512-102/8

Above property along with residential building measuring of 209.42 Sqr.mts with amenities and allappurtenant rights thereto.

Given under my hand and seal of this court on this date
(By Order of Court)
Sd/- Chief Ministerial Officer
Court of Senior Civil Judge & ADDL. CJM, Puttur, D.K.
Sd/- Rakesh J Mascarenhas
Advocate Puttur, D.K.
Advocate for Petitioner

ಕಾರ್ಯಪಾಲಕ ಅಭಿಯಂತರರವರ ಕಛೇರಿ,
ಲೋಕೋಪಯೋಗಿ ಇಲಾಖೆ, ವಿದ್ಯುತ್ ವಿಭಾಗ, ಕೆ.ಆರ್. ವೃತ್ತ, ಬೆಂಗಳೂರು.
ದೂರವಾಣಿ ಸಂಖ್ಯೆ: 080–22112809
ಸಂ.ಕಾ.ಇಂ(ವಿ)/ಲೋ.ಇ/ವಿದ್ಯುತ್/2026–27/47 ದಿನಾಂಕ: 08.04.2026

ಅಲ್ಪಾವಧಿ ಟೆಂಡರ್ ಪ್ರಕಟಣೆ

ಕಾರ್ಯಪಾಲಕ ಅಭಿಯಂತರರು (ವಿದ್ಯುತ್), ಲೋಕೋಪಯೋಗಿ ವಿದ್ಯುತ್ ವಿಭಾಗ, ಬೆಂಗಳೂರು ಇವರ ವತಿಯಿಂದ ಈ ಕೆಳಕಂಡ ಕಾಮಗಾರಿಗಳನ್ನು **KW-4 STD** ಷರತ್ತುಗೊಳಪಟ್ಟಂತೆ ಅಲ್ಪಾವಧಿ ಟೆಂಡರ್‌ನ ಮೊದಲನೇ ಕರೆಯನ್ನು ಕೆ.ಪಿ.ಪಿ.ಪಿ ಮೂಲಕ ಆಹ್ವಾನಿಸಲಾಗಿದೆ. ಕಾಮಗಾರಿಯ ವಿವರ ಈ ಕೆಳಕಂಡಂತಿವೆ.

Sl. No.	Name of Work	Work Value (Rs. in Lakhs)
1	Providing VRF Air Conditioning facility to 28 Nos Court Halls in the District Court Complex Building at Mangalore Taluk in D.K District PWD/2026-27/EL/WORK_INDENT35489	226.21 Lakhs

ಮೇಲಿನ ಟೆಂಡರ್‌ನಲ್ಲಿ ಭಾಗವಹಿಸಲು ಇಚ್ಛಿಸುವವರು ವೆಬ್‌ಸೈಟ್ **https://kppp.karnataka.gov.in** ನಲ್ಲಿ ಟೆಂಡರ್ ಡಾಕ್ಯೂಮೆಂಟ್‌ಗಳನ್ನು ಡೌನ್‌ಲೋಡ್ ಮಾಡಿಕೊಳ್ಳಲು ದಿನಾಂಕ: **08.04.2026** ರಿಂದ **16.04.2026, 16:00 ಗಂಟೆಯವರೆಗೆ** ಹಾಗೂ ಭರ್ತಿ ಮಾಡಿದ ಟೆಂಡರ್ ಹಿಂತಿರುಗಿಸುವ ದಿನಾಂಕ: **16.04.2026 ರಂದೆ 16:00 ಗಂಟೆಯವರೆಗೆ** ನಿಗದಿಪಡಿಸಲಾಗಿದೆ. ಹಾಗೂ ಪೂರ್ವಭಾವಿ ಸಭೆಯನ್ನು ದಿನಾಂಕ: **10.04.2026** ರಂದು **12:00 ಗಂಟೆಗೆ** ಸದರಿ ಟೆಂಡರ್ ವಿವರಗಳನ್ನು **Karnataka Public Procurement Portal** ನಲ್ಲಿ ಪಡೆಯಬಹುದಾಗಿದೆ. ಹೆಚ್ಚಿನ ವಿವರಗಳಿಗೆ ಈ ಕೆಳಗೆ ಸಹಿ ಮಾಡಿರುವ ಅಧಿಕಾರಿಗಳ ಕಛೇರಿಯಲ್ಲಿ ಕೆಲಸದ ವೇಳೆಯಲ್ಲಿ ಸಂಪರ್ಕಿಸಬಹುದು.

ಸಹಿ/– ಕಾರ್ಯಪಾಲಕ ಅಭಿಯಂತರರು(ವಿ).
ವಾಸಾಸಂಇ/ಉನಿ–ಸಿ.ಪಿ/109/ಕೆಎಸ್‌ಎಂಸಿಎ/2026–27

ನಗರಸಭಾ ಕಾರ್ಯಾಲಯ, ಉಡುಪಿ

ಸಂಖ್ಯೆ: ಉನಸ:ಬಿ4:ಸಿಆರ್:2026–27 ದಿನಾಂಕ: 07.04.2026

ಟೆಂಡರು ಪ್ರಕಟಣೆ

2025–26ನೇ ಸಾಲಿನ ನೀರು ಸರಬರಾಜು ಮತ್ತು ಒಳಚರಂಡಿ ನಿಧಿ ಮತ್ತು ಉದ್ಯಮ ನಿಧಿಯಡಿ ಈ ಕೆಳಗಿನ ಕಾಮಗಾರಿಯನ್ನು ಕೈಗೊಳ್ಳುವ ಬಗ್ಗೆ ನಿಗಧಿತ ನಮೂನೆಯಲ್ಲಿ ಪ್ರತ್ಯೇಕ ಮೊಹರಾದ ಐಟಂವಾರು ಟೆಂಡರನ್ನು, ನಗರಸಭೆಯಲ್ಲಿ ನೊಂದಾಯಿತ ಗುತ್ತಿಗೆದಾರರಿಂದ ದ್ವಿಪ್ರತಿಯಲ್ಲಿ ಆಹ್ವಾನಿಸಲಾಗಿದ್ದು, ದಿನಾಂಕ: 21.04.2026 ರಂದು ಸಂಜೆ 4.00 ಗಂಟೆಯವರೆಗೆ ಅರ್ಜಿ ಸಲ್ಲಿಸುವುದು. ದಿನಾಂಕ: 22.04.2026 ರಂದು ಸಂಜೆ 4.00 ಗಂಟೆಯವರೆಗೆ ಪೌರಾಯುಕ್ತರು ಅಥವಾ ಅವರಿಂದ ಅಧಿಕಾರ ಹೊಂದಿದವರು ಟೆಂಡರನ್ನು ಸ್ವೀಕರಿಸಲಿರುವರು. ಬಂದಿರುವ ಟೆಂಡರನ್ನು ದಿನಾಂಕ: 23.04.2026 ರಂದು ಸಂಜೆ 5.00 ಗಂಟೆಗೆ ಸರಿಯಾಗಿ ಅಥವಾ ಸೂಕ್ತ ದಿನದಂದು ಹಾಜರಿರುವ ಟೆಂಡರುದಾರರ ಸಮಕ್ಷಮದಲ್ಲಿ ತೆರೆಯಲಾಗುವುದು. ಹೆಚ್ಚಿನ ವಿವರಗಳನ್ನು ಕಚೇರಿ ವೇಳೆಯಲ್ಲಿ ಸಂಬಂಧಿಸಿದವರಿಂದ ಪಡೆದುಕೊಳ್ಳಬಹುದು

ಕ್ರ ಸಂ	ಕಾಮಗಾರಿಯ ಹೆಸರು	ಅಂದಾಜು ಮೊತ್ತ	ಇ.ಎಂ.ಡಿ
	ನೀರು ಸರಬರಾಜು ಮತ್ತು ಒಳಚರಂಡಿ ನಿಧಿ		
1	ಉಡುಪಿ ನಗರಸಭಾ ವ್ಯಾಪ್ತಿಯ ನಿಟ್ಟೂರು ವಾರ್ಡಿನ ದುಗ್ಗಣಬೆಟ್ಟು ರಸ್ತೆಯಲ್ಲಿ ಆಳುಗುಂಡಿ ಎತ್ತರಿಸುವ ಕಾಮಗಾರಿ	130000.00	3250.00
2	ಉಡುಪಿ ನಗರಸಭಾ ವ್ಯಾಪ್ತಿಯ ತೆಂಕಪೇಟೆ ವಾರ್ಡಿನ ಮುಕುಂದ ಕೃಪಾ ಶಾಲೆ ರಸ್ತೆಯಲ್ಲಿ 2 ಕಾಂಕ್ರಿಟ್ ಆಳುಗುಂಡಿ ನಿರ್ಮಾಣ ಮಾಡುವ ಕಾಮಗಾರಿ	95000.00	2375.00
3	ಉಡುಪಿ ನಗರಸಭಾ ವ್ಯಾಪ್ತಿಯ ನಿಟ್ಟೂರು ಕೊಳಚೆ ನೀರು ಶುದ್ಧೀಕರಣ ಘಟಕದಲ್ಲಿ (ಸಂಖ್ಯೆ –7 ಪ್ರವೇಶ ದ್ವಾರದ ಬಳಿ) 400 ಎಂ.ಎಂ ವ್ಯಾಸದ ಕೊಳವೆ ದುರಸ್ಥಿಪಡಿಸುವ ಕಾಮಗಾರಿ	400000.00	10000.00
	ಉದ್ಯಮ ನಿಧಿಯಡಿ		
1	ಉಡುಪಿ ನಗರಸಭಾ ಅಧೀನದ ಮಲ್ಪೆ ಪೋಲಿಸ್ ಠಾಣಾ ಬಳಿ ಇರುವ ಐಡಿಎಸ್‌ಎಮ್‌ಟಿ ಅಂಗಡಿಕೋಣೆ ನಂಬ್ರ 4–89ಬಿ–3, 4–89ಬಿ–4, 4–89ಬಿ–5, 4–89ಬಿ6, 4–89ಬಿ7, 4–89ಬಿ8, 4–89ಬಿ9, 4–89ಬಿ10, 4–89ಬಿ11, 4–89ಬಿ12 ರ ದುರಸ್ಥಿ (ಕಂಪೌಂಡ್ ವಾಲ್‌ನ ಮುಂದುವರೆದ ಭಾಗ ಹಾಗೂ ಬಾವಿಯ ಮೆಶ್ ಮತ್ತು ಇಂಟರ್‍ಲಾಕ್ ಅಳವಡಿಸುವುದು) ಕಾಮಗಾರಿ	495000.00	12375.00

ಷರತ್ತುಗಳು: (1) ಕಾಮಗಾರಿಗಳು ಪೂರ್ತಿಗೊಳಿಸುವ ಅವಧಿ – 2 ತಿಂಗಳು (2) ಟೆಂಡರು ನಮೂನೆ ಬೆಲೆ – ರೂ. 590 (ಜಿ.ಎಸ್.ಟಿ ಸೇರಿ) (3) ಯಾವುದೇ ಟೆಂಡರನ್ನು ಯಾ ಎಲ್ಲಾ ಟೆಂಡರುಗಳನ್ನು ಯಾವುದೇ ಕಾರಣ ನೀಡದೆ ತಿರಸ್ಕರಿಸುವ ಅಥವಾ ಅಂಗೀಕರಿಸುವ ಹಕ್ಕನ್ನು ಕಾದಿರಿಸಲಾಗಿದೆ. (4) ಇ.ಎಂ.ಡಿ.ಯನ್ನು ಫಿಕ್ಸೆಡ್ ಡೆಪಾಸಿಟ್ ರಿಸಿಪ್ಟ್ (FDR) ರೂಪದಲ್ಲಿ ಇರಿಸತಕ್ಕದ್ದು, ನಿಗದಿಪಡಿಸಿದ ಇ.ಎಂ.ಡಿ.ಯನ್ನು ಇರಿಸದ ಟೆಂಡರನ್ನು ಪರಿಗಣಿಸಲಾಗುವುದಿಲ್ಲ.

ಸಹಿ/– ಪೌರಾಯುಕ್ತರು,
ಉಡುಪಿ ನಗರಸಭೆ

ವಾಸಾಇ/ಸನಿಉ/ಕೆಎಸ್‌ಎಂಸಿಎ/22/26–27 ದಿ: 08.04.2026

ಕೇರಳ ರಾಜ್ಯ ಲಾಟರಿ ಫಲಿತಾಂಶ ವಿವರ ಪ್ರಕಟ

ತಿರುವನಂತಪುರಂ: ಕೇರಳ ರಾಜ್ಯ ಲಾಟರಿಯ ಧನಲಕ್ಷ್ಮೀ (ನಂ.DL-47) ಡ್ರಾ ಏಪ್ರಿಲ್ 8ರಂದು ತಿರುವನಂತಪುರಂನ ಬೇಕರಿ ಜಂಕ್ಷನ್ ಬಳಿಯ ಗೋರ್ಕಿ ಭವನದಲ್ಲಿ ನಡೆದಿದ್ದು, ಫಲಿತಾಂಶ ವಿವರ ಇಂತಿದೆ.

1st Prize Rs.1,00,00,000/- [1 Crore]
DL 572496 (THRISSUR)

Consolation Prize Rs.5,000/-
DA 572496 DB 572496 DC 572496 DD 572496
DE 572496 DF 572496 DG 572496 DH 572496
DJ 572496 DK 572496 DM 572496

2nd Prize Rs.30,00,000/- [30 Lakhs]
DJ 219045 (KOLLAM)

3rd Prize Rs.5,00,000/- [5 Lakhs]
DF 587824 (KOTTAYAM)

FOR THE TICKETS ENDING WITH THE FOLLOWING NUMBERS

4th Prize Rs.5,000/-
0558 1183 2257 3210 3578 4427 4895 4911 5459 5799
5803 6790 7220 7238 7488 7988 8632 8957 9884

5th Prize Rs.2,000/-
1236 2110 5469 6193 7235 7695

6th Prize Rs.1,000/-
1006 1100 2456 3580 4533 4693 4715 4860 4891 5610
6016 6437 6523 6900 6949 7270 7747 7914 7922 8257
8363 8966 9115 9223 9729

7th Prize Rs.500/-
0155 0208 0238 0283 0342 0630 0705 0736 0760 0795
0909 0956 1018 1086 1226 1323 1327 1501 1730 1754
1866 2168 2221 2410 2545 2680 2925 2934 3345 3438
3486 3896 4029 4158 4339 4362 4368 4641 4652 4688
4776 4903 4939 4965 5229 5282 5325 5411 5421 5439
5505 5552 5594 5889 6349 6363 6538 6876 6933 7041
7447 7706 8107 8117 8139 8486 8570 8722 8766 8792
8858 8911 8964 9016 9142 9252

8th Prize Rs.200/-
0062 0123 0158 0585 0609 0722 0878 0888 0907 0972
0990 1187 1300 1336 1421 1434 1585 1598 1648 1740
1867 1922 2150 2201 2315 2375 2603 2705 2736 2879
3182 3224 3316 3539 3547 3777 3845 3918 4036 4076
4315 4541 4728 4833 4900 5022 5207 5210 5318 5324
5330 5522 5550 5605 5607 5663 5664 5977 6182 6187
6510 6607 6632 6719 6814 7110 7125 7222 7223 7293
7318 7489 7543 7672 7708 7756 8104 8111 8502 8623
8659 8780 8848 8941 9006 9213 9318 9404 9480 9510
9526 9654 9792 9804 9814 9817

9th Prize Rs.100/-
0181 0274 0313 0385 0392 0417 0437 0499 0504 0520
0629 0651 0727 0804 0824 0832 0857 1113 1296 1360
1373 1491 1511 1519 1544 1550 1643 1650 1705 1883
2001 2083 2128 2130 2137 2161 2255 2340 2346 2406
2526 2713 2717 2785 2877 2920 3092 3101 3174 3192
3601 3621 3772 3887 3958 3970 4015 4045 4049 4096
4099 4109 4136 4166 4273 4276 4334 4346 4390 4426
4452 4465 4521 4662 4705 4737 4760 4796 4889 4920
4996 5068 5163 5234 5433 5481 5510 5623 5804 5842
5980 6038 6073 6383 6503 6581 6663 6747 6765 6857
6864 6915 6948 7095 7106 7300 7316 7673 7707 7716
7749 7907 7943 8003 8035 8040 8071 8072 8076 8279
8340 8443 8596 8629 8777 8923 9029 9170 9331 9396
9397 9413 9463 9543 9544 9573 9598 9715

ಮಾನ್ಯ ಹೆಚ್ಚುವರಿ ಮತ್ತು ಪ್ರಥಮ ದರ್ಜೆ ದಂಡಾಧಿಕಾರಿಯವರ ನ್ಯಾಯಾಲಯ ಬೆಳ್ತಂಗಡಿ
ಕ್ರಿಮಿನಲ್ ಎಮ್.ಸಿ. ನಂಬ್ರ: 70/2026
ಮುಂದಿನ ದಿನಾಂಕ : 24–04–2026

ಇವರೊಳಗೆ:
ಕೀರ್ತನ್, ಪ್ರಾಯ ಸುಮಾರು 22 ವರ್ಷ
ಬಿನ್: ದಿ। ಶೇಖರ ಪೂಜಾರಿ
ವಿಳಾಸ: ಮುಡಿಪಿರೆ ಮನೆ,
ಸುಲ್ಕೇರಿ ಗ್ರಾಮ
ಬೆಳ್ತಂಗಡಿ ತಾಲೂಕು, ದ.ಕ ...ಅರ್ಜಿದಾರರು

ಮತ್ತು

ಜನನ ಮತ್ತು ಮರಣಗಳ ರಿಜಿಸ್ಟ್ರಾರರು,
ತಾಲೂಕು ತಹಶೀಲ್ದಾರರು,
ಬೆಳ್ತಂಗಡಿ, ದ.ಕ. ...ಎದುರುದಾರರು

ನೋಟೀಸು

ಈ ಮೇಲೆ ಕಾಣಿಸಿದ ಹೆಸರು, ವಿಳಾಸ ಅರ್ಜಿದಾರರ ತಾಯಿಯಾದ **ವಸಂತಿ** ಕೋಂ: ದಿ। ಶೇಖರ ಪೂಜಾರಿ ಇವರು **ದಿನಾಂಕ:10–12–2015** ರಂದು ವಿಳಾಸ: ಮುಡಿಪಿರೆ ಮನೆ, ಸುಲ್ಕೇರಿ ಗ್ರಾಮ, ಬೆಳ್ತಂಗಡಿ ತಾಲೂಕು, ದ.ಕ. ಇಲ್ಲಿ ಮೃತಪಟ್ಟ ಬಗ್ಗೆ ಮರಣ ರಿಜಿಸ್ಟರ್ ನಲ್ಲಿ ನೋಂದಾವಣೆಗೊಳಿಸುವಂತೆ ಎದ್ರಿದಾರರ ವಿರುದ್ಧ ಅರ್ಜಿದಾರರು ಈ ಮೇಲ್ಕಾಣಿಸಿದ ನ್ಯಾಯಾಲಯದಲ್ಲಿ ಕೇಸು ದಾಖಲಿಸಿದ್ದು, ಸದ್ರಿ ಕೇಸಿನಲ್ಲಿ ಆಸಕ್ತಿಯುಳ್ಳ ವ್ಯಕ್ತಿಗಳು ಖುದ್ದಾಗಿ ಇಲ್ಲವೇ ವಕೀಲರ ಮುಖಾಂತರ ಹಾಜರಾಗಲು **ದಿನಾಂಕ: 24–04–2026 ರಂದು ಬೆಳಿಗ್ಗೆ 11.00 ಗಂಟೆಗೆ** ನ್ಯಾಯಾಲಯದಲ್ಲಿ ಕೇಸನ್ನು ಕರೆಯಲಾಗುವುದು. ಒಂದು ವೇಳೆ ಆಸಕ್ತಿಯುಳ್ಳ ವ್ಯಕ್ತಿಗಳು ಹಾಜರಾಗದೇ ಇದ್ದ ಪಕ್ಷದಲ್ಲಿ ತಮ್ಮ ಅನುಪಸ್ಥಿತಿಯಲ್ಲಿ ಕಾನೂನು ಪ್ರಕಾರ ಮುಂದಿನ ಕ್ರಮವನ್ನು ಕೈಗೊಳ್ಳಲಾಗುವುದು.

2026ನೇ ಇಸ್ವಿಯ ಏಪ್ರಿಲ್ ತಿಂಗಳ 6ನೇ ದಿನಾಂಕದಂದು ನ್ಯಾಯಾಲಯದ ಮೊಹರು ಮತ್ತು ಸಹಿಯೊಂದಿಗೆ ಕೊಡಲಾಗಿದೆ.

(ನ್ಯಾಯಾಲಯದ ಆದೇಶದ ಮೇರೆಗೆ)
ಸಹಿ/– ಶಿರಸ್ತೇದಾರರು
ಮಾನ್ಯ ಹೆಚ್ಚುವರಿ ಮತ್ತು ಪ್ರಮ ಪ್ರಥಮ ದರ್ಜೆ ದಂಡಾಧಿಕಾರಿಯವರ ನ್ಯಾಯಾಲಯ, ಬೆಳ್ತಂಗಡಿ
ಸಹಿ/– (ಶ್ರೀನಿವಾಸ ಗೌಡ ಎ. ವಕೀಲರು)
ಅರ್ಜಿದಾರರ ಪರ ವಕೀಲರು

ಕರ್ನಾಟಕ ಸರ್ಕಾರ
ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿಗಳ ಕಛೇರಿ, ಸಕಲೇಶಪುರ ಉಪ–ವಿಭಾಗ, ಸಕಲೇಶಪುರ.
ಲಕ್ಷ್ಮೀಪುರಂ, ಸಕಲೇಶಪುರ–573134 ಇ–ಮೇಲ್: **acfskp.sub@gmail.com**
ಸಂಖ್ಯೆ ಃ ಸಅಸಂ/ ಸಕಮ/ ಉವಿ/ ಜಿಎಲ್– /2026–27
ದಿನಾಂಕಃ 08.04.2026

ಸಂಕ್ಷಿಪ್ತ ಟೆಂಡರ್ ಪ್ರಕಟಣೆ

(ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ ಮುಖಾಂತರ) 2026–27ನೇ ಸಾಲಿನಲ್ಲಿ ಹಾಸನ ಪ್ರಾದೇಶಿಕ ವಿಭಾಗದ ಸಕಲೇಶಪುರ, ಯಸಳೂರು ಮತ್ತು ಅರಕಲಗೂಡು ಪ್ರಾದೇಶಿಕ ವಲಯಗಳಲ್ಲಿ ವಿವಿಧ 40 ಕಾಮಗಾರಿಗಳನ್ನು ನಿರ್ವಹಿಸಲು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ ಮುಖಾಂತರ ಸಂಕ್ಷಿಪ್ತ ಟೆಂಡರ್ ಕರೆಯಲಾಗಿದೆ. ದಿನಾಂಕಃ 21.04.2026 ರಂದು 16.00 (ಸಂಜೆ 5.00 ಗಂಟೆ) ಗಂಟೆಯವರೆವಿಗೆ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ ಮುಖಾಂತರ ಟೆಂಡರ್ ಸಲ್ಲಿಸಬಹುದಾಗಿದೆ. ಹೆಚ್ಚಿನ ವಿವರಗಳನ್ನು ಈ ಕಛೇರಿಯಲ್ಲಿ ಕಛೇರಿ ಕೆಲಸದ ದಿವಸಗಳಲ್ಲಿ ಅಥವಾ ಅಂತರ್ಜಾಲದಲ್ಲಿ http://KPPP.karnataka.gov.in ಮೂಲಕ ಪಡೆದುಕೊಳ್ಳಬಹುದಾಗಿದೆ.

ಸಹಿ/–ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ,
ಸಕಲೇಶಪುರ ಉಪ ವಿಭಾಗ, ಸಕಲೇಶಪುರ

ವಾಸಾಸಂಇ/ಹಿಸನಿ/ಹಾಸನ/22/ಕೆಎಸ್‌ಎಂಸಿಎ/2026–27

ಕರ್ನಾಟಕ ಸರ್ಕಾರ (ಕೃಷಿ ಇಲಾಖೆ)
ಜಂಟಿ ಕೃಷಿ ನಿರ್ದೇಶಕ ಕಾರ್ಯಾಲಯ, ವಿಜಯನಗರ
ಸೆಂಟರ್ ಆಫ್ ಎಕ್ಸೆಲೆನ್ಸ್ ಕಟ್ಟಡ, ನ್ಯಾಷನಲ್ ಕಾಲೇಜ್ ಹಿಂಭಾಗ, ಎನ್.ಸಿ.ಕಾಲೋನಿ, ಹರಿಹರ ರಸ್ತೆ, ಹೊಸಪೇಟೆ–583 203.ದೂ.ಸಂ.: 08394–200240 ಇ–ಮೇಲ್:jdavijayanagar@gmail.com

ಸಂ: ಜಕೃನಿ.ವಿನ/ಸಿ/08/2026–27 ದಿನಾಂಕ: 07.04.2026

ಇ–ಟೆಂಡರ್ ಪ್ರಕಟಣೆ

ಕರ್ನಾಟಕ ರಾಜ್ಯಪಾಲರ ಪರವಾಗಿ ವಿಜಯನಗರ ಜಿಲ್ಲೆಯ ಜಂಟಿ ಕೃಷಿ ನಿರ್ದೇಶಕರ ಅಧೀನದಲ್ಲಿ ಬರುವ ಎಲ್ಲಾ ರೈತ ಸಂಪರ್ಕ ಕೇಂದಗಳಲ್ಲಿ ಹೊರಗುತ್ತಿಗೆ ಆಧಾರದ ಮೇಲೆ ಕಾರ್ಯನಿರ್ವಹಿಸಲು ಕೃಷಿ ನಿರ್ದೇಶನಾಲಯ ಯೋಜನೆಯಡಿಯಲ್ಲಿ **RSK SMA (Stock Managemant Assistant)** ಸಿಬ್ಬಂದಿಗಳನ್ನು ಒದಗಿಸಲು ಅರ್ಹ ಮಾನವ ಸಂಪನ್ಮೂಲ ಸೇವೆಯನ್ನು ಒದಗಿಸುವ ಸಂಸ್ಥೆಯವರಿಂದ ಇ–ಟೆಂಡರ್ ಕರೆಯಲಾಗಿದ್ದು, ಸದರಿ ಇ–ಟೆಂಡರ್ ಬಗ್ಗೆ ಹೆಚ್ಚಿನ ಮಾಹಿತಿಗಾಗಿ **kppp.karnataka.gov.in** ವೆಬ್‌ಸೈಟನ್ನು ಸಂಪರ್ಕಿಸಲು ಕೋರಿದೆ. ಭರ್ತಿ ಮಾಡಿದ ಇ–ಟೆಂಡರ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ: 15.04.2026 ರಂದು ಸಂಜೆ: 04:00 ಗಂಟೆಗೆ ನಿಗದಿಪಡಿಸಲಾಗಿದೆ.
ಹೆಚ್ಚಿನ ವಿವರಗಳಿಗಾಗಿ ಮೇಲ್ಕಂಡ ಕಛೇರಿಯನ್ನು ಸಂಪರ್ಕಿಸಬಹುದು.

Tender No. AD/2025-26/SE0489

ಸಹಿ/– ಜಂಟಿ ಕೃಷಿ ನಿರ್ದೇಶಕರು, ವಿಜಯನಗರ.

ವಾ.ಸಾ.ಸಂ.ಇ/ವಿಜಯನಗರ/2026–27/ಕೆಎಸ್‌ಎಂಸಿಎ/ಆರ್.ಓ.ಸಂಖ್ಯೆ/16

ಕರ್ನಾಟಕ ಸರ್ಕಾರ
ಕೊಡಗು ಜಿಲ್ಲಾ ಪಂಚಾಯತ್
ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ,
ಮಡಿಕೇರಿ, ಕೊಡಗು –571201
ಇಮೇಲ್ : dhokodagu@gmail.com ಫೋನ್ ನಂ: 08272–225443
ಸಂಖ್ಯೆ/ಅನುದಾನ/01/2026–27 ದಿನಾಂಕ : 07/04/2026

ಅಲ್ಪಾವಧಿ ಟೆಂಡರ್ ಪ್ರಕಟಣೆ (ಕೆಪಿಪಿ ವೇದಿಕೆ ಮೂಲಕ)

ವಿಷಯ: ಕೊಡಗು ಜಿಲ್ಲೆಯಲ್ಲಿ ಮಾನಸಧಾರ ಹಗಲು ಆರೈಕೆ ಕೇಂದ್ರವನ್ನು ತೆರೆಯಲು ಟೆಂಡರ್ ಕರೆದಿರುವ ಬಗ್ಗೆ

ಕೊಡಗು ಜಿಲ್ಲೆಯಲ್ಲಿ ಮಾನಸಧಾರ ಹಗಲು ಆರೈಕೆ ಕೇಂದ್ರವನ್ನು ಆಸಕ್ತ ಸ್ಥಳೀಯ ಸ್ವಯಂಸೇವಾ ಸಂಸ್ಥೆಗಳ ಸಹಯೋಗದೊಂದಿಗೆ ಒದಗಿಸಲು ಟೆಂಡರನ್ನು ಆಹ್ವಾನಿಸಲಾಗಿದೆ. ಟೆಂಡರ್ ಸಲ್ಲಿಸಲು ಇಚ್ಛಿಸುವ ಸ್ವಯಂಸೇವಾ ಸಂಸ್ಥೆಗಳು ಟೆಂಡರಿನ ದಾಖಲಾತಿಗಳನ್ನು ಪಡೆಯಲು ಹಾಗೂ ಸಲ್ಲಿಸುವ ವಿವರಗಳನ್ನು www.https://kpp.karnataka.gov.inನಲ್ಲಿ ಪಡೆಯಬಹುದು. ಟೆಂಡರನ್ನು ಡೌನ್‌ಲೋಡ್ ಮಾಡಲು ದಿನಾಂಕ:07/04/2026 ರಿಂದ 27/04/2026 ರ ಪೂರ್ವಾಹ್ನ 10.30 ವರೆಗೆ ಅಗಿರುತ್ತದೆ. ಟೆಂಡರ್ ತೆರೆಯುವ ದಿನಾಂಕ: 28/04/2026ರ ಪೂರ್ವಾಹ್ನ 11.00 ಗಂಟೆ ಅಗಿರುತ್ತದೆ.

ಹೆಚ್ಚಿನ ವಿವರಗಳನ್ನು ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಗಳ ಕಚೇರಿಯಲ್ಲಿ ಕಚೇರಿ ವೇಳೆಯಲ್ಲಿ ಪಡೆಯಬಹುದು.

ಸಹಿ/– ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ,
ಮಡಿಕೇರಿ ಕೊಡಗು ಜಿಲ್ಲೆ

ವಾಯವ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆ
ಕಾಮಗಾರಿ ಇಲಾಖೆ, ಕೇಂದ್ರ ಕಚೇರಿ, ಹುಬ್ಬಳ್ಳಿ.

ಸಂ:ವಾಕರಸಾಸಂ:ಕಾನಿಅ:ನಕ್ಷೆ:ಹು: 15 :2026–27 ದಿನಾಂಕ: 08–04–2026.

ಟೆಂಡರ್ ಪ್ರಕಟಣೆ

ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯಲ್ಲಿ ಪಾರದರ್ಶಕತೆ ನಿಯಮ 1999 ಮತ್ತು ನಿಯಮಾವಳಿ 2000 ರ ಪ್ರಕಾರ ಇಡಿಗಂಟು (Lumpsum) ಟೆಂಡರ್ ದ್ವಿ–ಲಕೋಟೆ ಆಧಾರದ ಮೇಲೆ ಈ ಕೆಳಕಂಡ ಕೆಲಸಕ್ಕಾಗಿ ಅರ್ಹ ಕನ್ಸಲ್ಟಂಟ್ (Third party Consultant) ರವರ ನೇಮಕಕ್ಕಾಗಿ ದಿನಾಂಕ : **08.04.2026**ರಂದು ಟೆಂಡರ್ ಬಿಡುಗಡೆಯಾಗಿರುವಂತೆ, ನೊಂದಾಯಿತ ಅರ್ಹ ಕನ್ಸಲ್ಟಂಟ್ಸ್ ಟೆಂಡರ್‌ನ ವಿವರಗಳಿಗಾಗಿ ವೆಬ್‌ಸೈಟ್‌ಗೆ **(https://kppp.karnataka.gov.in)** ಲಾಗಿನ್ ಆಗಿ ಟೆಂಡರ್‌ನ್ನು ಅರ್ಹ ದಸ್ತಾವೇಜ್‌ನೊಂದಿಗೆ ನಿಗದಿತ ದಿನಾಂಕ ಮತ್ತು ವೇಳೆಯಲ್ಲಿ ಅಪ್–ಲೋಡ್ ಮಾಡಬೇಕಾಗಿರುತ್ತದೆ

ಟೆಂಡರ್ ಇಂಡೆಂಟ್ ಸಂಖ್ಯೆ	ಕೆಲಸದ ಹೆಸರು	ಇ.ಎಂ.ಡಿ ಮೊತ್ತ ರೂಗಳಲ್ಲಿ	ಕಾಲಮಿತಿ	ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ ಮತ್ತು ಸಮಯ
NWKRTC/2025-26/SE2617	Third party inspection services for the work of Improvement works to Depot at Dharwad	33,885/-	09 Months or till the completion of project.	23-04-2026 & 16.00hr
NWKRTC/2025-26/SE2245	Providing Third Party Inspection Services for the Work Of Construction of Assistant Regional Traffic office building at Honnavar.	21,045/-	09 Months or till the completion of project.	23-04-2026 & 16.00hr
NWKRTC/2025-26/SE2246	Third Party Inspection for the work of Construction of Automated Driving test track in Existing RTO Premises at Honnavar	24,636/-	09 Months or till the completion of project.	23-04-2026 & 16.00hr

ಇನ್ನುಳಿದ ವಿವರಗಳನ್ನು ವಿವರವಾದ ಟೆಂಡರ್ ಪ್ರಕಟಣೆಯಲ್ಲಿರುವಂತೆ ಖಚಿತ ಪಡಿಸಿಕೊಂಡು ಟೆಂಡರ್‌ನಲ್ಲಿ ಭಾಗವಹಿಸುವುದು. ಹೆಚ್ಚಿನ ವಿವರಗಳನ್ನು ಈ ಕಛೇರಿಯಿಂದ ಪಡೆಯಬಹುದಾಗಿದೆ ಮತ್ತು ಈ ಕಛೇರಿ ದೂರವಾಣಿ ಸಂ. **0836–2332383** ಗೆ ಸಂಪರ್ಕಿಸಬಹುದಾಗಿದೆ ಹಾಗೂ ಸಹಾಯವಾಣಿ **(help desk) : -+91-8046010000, +91-8068948777** ಸಂಪರ್ಕಿಸಬಹುದಾಗಿದೆ. ಯಾವುದೇ ದಿನಾಂಕಗಳಲ್ಲಿನ ಮುಂದೂಡಿಕೆ ಮತ್ತು ತಿದ್ದುಪಡಿಗಳಿದ್ದಲ್ಲಿ ಕೆ.ಪಿ.ಪಿ.ಪಿ. ಪೋರ್ಟಲ್‌ನಲ್ಲಿ ಮಾತ್ರ ಪ್ರಕಟಿಸಲಾಗುವುದು. ಪ್ರತ್ಯೇಕವಾಗಿ ಪತ್ರಿಕಾ ಪ್ರಕಟಣೆಯನ್ನು ಹೊರಡಿಸಲಾಗುವುದಿಲ್ಲ.

ಸಹಿ/
ಕಾರ್ಯನಿರ್ವಾಹಕ ಅಭಿಯಂತರರು
ವಾ.ಕ.ರ.ಸಾ. ಸಂಸ್ಥೆ, ಕಾಮಗಾರಿ ಇಲಾಖೆ, ಕೇಂದ್ರ ಕಛೇರಿ, ಹುಬ್ಬಳ್ಳಿ.

ವಾ.ಸಾ.ಇ./ಧಾರವಾಡ/38/2026–27/ದೇಶಪಾಂಡೆಪಬ್ಲಿಸಿಟಿ

ಕರ್ನಾಟಕ ಸರ್ಕಾರ
ಪಂಚಾಯತ ರಾಜ್ ಇಂಜನೀಯರಿಂಗ್ ವಿಭಾಗ, ಕಾರವಾರ, ಉತ್ತರ ಕನ್ನಡ
ದೂರವಾಣಿ: 08382–220556 ಇ–ಮೇಲ್: predkarwar@gmail.com
ಕ್ರ.ಸಂ:ಪಂರಾ.ಇಂ/ಕಾ/ಪಿಬಿ–1/2026–27/01 ದಿ: 07.04.2026

ಟೆಂಡರ್ ಪ್ರಕಟಣೆ–01/2026–27 (ಕೆ.ಪಿ.ಪಿ.ಪಿ ಮೂಲಕ)

ಕರ್ನಾಟಕ ರಾಜ್ಯಪಾಲರ ಪರವಾಗಿ ಕಾರ್ಯನಿರ್ವಾಹಕ ಅಭಿಯಂತರರು, ಪಂಚಾಯತ್ ರಾಜ್ ಇಂಜನೀಯರಿಂಗ್ ವಿಭಾಗ ಕಾರವಾರ ಇವರಿಂದ ಲೋಕೋಪಯೋಗಿ ಇಲಾಖೆಯಲ್ಲಿ ನೋಂದಾಯಿಸಿದ ಅರ್ಹ ಹಾಗೂ ಕೆ.ಪಿ.ಪಿ.ಪಿ. ಸಂಸ್ಥೆಯಿಂದ ನೋಂದಾಯಿಸಲ್ಪಟ್ಟ ಗುತ್ತಿಗೆದಾರರಿಂದ ವಿವಿಧ ಲೆಕ್ಕಶೀರ್ಷಿಕೆಯಡಿಯ ಕಾಮಗಾರಿಗಳಿಗೆ ಕರ್ನಾಟಕ ಸರ್ಕಾರದ ಸಾರ್ವಜನಿಕ ಖರೀದಿ ಪಾರದರ್ಶಕತೆ ಕಾನೂನು ಹಾಗೂ ನಿಯಮಾವಳಿ 2000 ಹಾಗೂ Standard Tender Document ನ K.W-1 ರ ತತ್ಸಂಬಂಧ ಕಾಲಕಾಲಕ್ಕೆ ಹೊರಡಿಸಲಾದ ತಿದ್ದುಪಡಿ ಆದೇಶಗಳನ್ವಯ ನಿಬಂಧನೆಗೆ ಒಳಪಟ್ಟು ಈ ಕೆಳಗಿನಂತೆ ಐಟಂವಾರು ಟೆಂಡರ ಕರೆಯಲಾಗಿದೆ. ಅರ್ಹ ಗುತ್ತಿಗೆದಾರರು ಇ–ಆಡಳಿತ ಕೇಂದ್ರ ಅಥವಾ ವೆಬ್‌ಸೈಟ್ https://kppp.karnataka.gov.in ನಲ್ಲಿ ಪ್ರಕಟಿಸಿದಂತೆ ದಿನಾಂಕ ಹಾಗೂ ಇನ್ನುಳಿದ ವಿವರಗಳನ್ನು ಖಚಿತಪಡಿಸಿಕೊಂಡು ಟೆಂಡರಿಗಾಗಿ ಭಾಗವಹಿಸಬಹುದು. ಹೆಚ್ಚಿನ ವಿವರಗಳಿಗೆ ಈ ಕಛೇರಿಯಿಂದ ಕಛೇರಿ ವೇಳೆಯಲ್ಲಿ ಮಾಹಿತಿ ಪಡೆಯಬಹುದು ಟೆಂಡರ್ ವಿವರಗಳು ಈ ಕೆಳಗಿನಂತಿವೆ.

ಕಾಮಗಾರಿಯ ಹೆಸರು: (ಮೀಸಲಾತಿ: ಸಾಮಾನ್ಯ) (1) 2025–26ನೇ ಸಾಲಿನ ಸನ್ಮಾನ್ಯ ಮುಖ್ಯಮಂತ್ರಿಯವರ ಮೂಲ ಸೌಕರ್ಯ ಅಭಿವೃದ್ಧಿ ಅನುದಾನದಡಿ ಹೊನ್ನಾವರ ತಾ: ಕೆಳಗಿನೂರು ಗ್ರಾಮ ಪಂಚಾಯತದ ಮುಗಳಿ ದೇವಸ್ಥಾನ ಹತ್ತಿರದಿಂದ ಕೇರಿಗೆ ಹೋಗುವ ರಸ್ತೆ ಕಾಂಕ್ರೀಟೀಕರಣ. RDPR/2025-26/RD/WORK_INDENT24958/CALL-2, ಅಂದಾಜು ಮೊತ್ತ: ರೂ. 20.00 ಲಕ್ಷ, ಮುಂಗಡ ಠೇವಣಿ: ರೂ. 50,000.00, ಕಾಲಮಿತಿ (ಮಳೆಗಾಲ ಸಹಿತ): 02 ತಿಂಗಳು

(2) 2024–25 ನೇ ಸಾಲಿನ ಐ.ಸಿ.ಡಿ.ಎಸ್ ಹಾಗೂ ನರೇಗಾ ಅನುದಾನದ ಕ್ರೀಯಾ ಯೋಜನೆಯಡಿ ಭಟ್ಕಳ ತಾಲೂಕಿನ ಬೇಂಗ್ರೆ ಗ್ರಾ.ಪಂ ಕೋಗ್ತಿ ಅಂಗನವಾಡಿ ಕಟ್ಟಡ ನಿರ್ಮಾಣ. RDPR/2025-26/BD/WORK_INDENT24592/Call-3, ಅಂದಾಜು ಮೊತ್ತ: ರೂ. 12.00 ಲಕ್ಷ, ಮುಂಗಡ ಠೇವಣಿ: ರೂ. 30,000.00, ಕಾಲಮಿತಿ (ಮಳೆಗಾಲ ಸಹಿತ): 03 ತಿಂಗಳು

(3) ––ಸದರ–– ಭಟ್ಕಳ ತಾಲೂಕಿನ ಶಿರಾಲಿ ಗ್ರಾಪಂ ನೀರಕಂಠ– 2 ಅಂಗನವಾಡಿ ಕಟ್ಟಡ ನಿರ್ಮಾಣ. RDPR/2025-26/BD/WORK_INDENT24586/Call-3, ಅಂದಾಜು ಮೊತ್ತ: ರೂ. 12.00 ಲಕ್ಷ, ಮುಂಗಡ ಠೇವಣಿ: ರೂ. 30,000.00, ಕಾಲಮಿತಿ (ಮಳೆಗಾಲ ಸಹಿತ): 03 ತಿಂಗಳು

(ಮೀಸಲಾತಿ: ಪರಿಶಿಷ್ಟ ಜಾತಿ) (4) 2025–26ನೇ ಸಾಲಿನ ಸನ್ಮಾನ್ಯ ಮುಖ್ಯಮಂತ್ರಿಯವರ ಮೂಲ ಸೌಕರ್ಯ ಅಭಿವೃದ್ಧಿ ಅನುದಾನದಡಿ ಹೊನ್ನಾವರ ತಾಲೂಕಿನ ಇಡಗುಂಜಿ ಗ್ರಾಮ ಪಂಚಾಯತದ ಮಾಳಕೋಡ ದೊಡ್ಡಶಾಲೆ ಕೇರಿಯಿಂದ ಆಚಾರಿ ಕೇರಿಗೆ ಹೋಗುವ ರಸ್ತೆ ಕಾಂಕ್ರೀಟೀಕರಣ. RDPR/2025-26/RD/WORK_INDENT25022/CALL-2, ಅಂದಾಜು ಮೊತ್ತ: ರೂ. 20.00 ಲಕ್ಷ, ಮುಂಗಡ ಠೇವಣಿ: ರೂ. 25,000.00, ಕಾಲಮಿತಿ (ಮಳೆಗಾಲ ಸಹಿತ): 02 ತಿಂಗಳು

(1) ಕಾಮಗಾರಿಯ ಟೆಂಡರ್ ಶೆಡ್ಯೂಲ್–ಬಿಗಳನ್ನು ಮತ್ತು Technical Bid ನ್ನು ವೆಬ್ ಸೈಟ್‌ನಲ್ಲಿ ತುಂಬಿ ಮರಳಿ ಸಲ್ಲಿಸುವ ಕೊನೆಯ ದಿನಾಂಕ: 21.04.2026 ರ ಮದ್ಯಾಹ್ನ 16.30 ಘಂಟೆವರೆಗೆ. (2) ಕಾಮಗಾರಿಯ Technical Bid ನ್ನು ತೆರೆಯುವ ದಿನಾಂಕ: 22.04.2026 ಮದ್ಯಾಹ್ನ 16.31 ಘಂಟೆಗೆ. (3) ಆರ್ಥಿಕ ಬಿಡ್ ತೆರೆಯುವ ದಿನಾಂಕವನ್ನು ತಾಂತ್ರೀಕ ಬಿಡ್‌ನಲ್ಲಿ ಯಶಸ್ವಿಯಾದ ಅರ್ಹ ಗುತ್ತಿಗೆದಾರರಿಗೆ ನಂತರದಲ್ಲಿ ತಿಳಿಸಲಾಗುವುದು.

ಸಹಿ/– ಕಾರ್ಯನಿರ್ವಾಹಕ ಇಂಜನೀಯರು,
ಪಂಚಾಯತ ರಾಜ್ ಇಂಜನೀಯರಿಂಗ್ ವಿಭಾಗ, ಕಾರವಾರ

DIPR/KWR/KSMCA/30/26-27 dt. 08.04.2026

ಕಿರುಸುದ್ದಿ

ಏ. 12: ಭರತಾಂಜಲಿ ಕಿಂಕಿಣಿ ತ್ರಿಂಶತ್ ಸಮಾರೋಪ

ಮಂಗಳೂರು: ಕೊಟ್ಟಾರದ ಭರತಾಂಜಲಿ ನೃತ್ಯ ಸಂಸ್ಥೆಯ 30 ರ ಸಂಭ್ರಮ ಕಿಂಕಿಣಿ ತ್ರಿಂಶತ್ ಸಮಾರೋಪ ಸಂಭ್ರಮ ಕಾರ್ಯಕ್ರಮವು ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಬೆಂಗಳೂರು ಇವರ ಸಹಯೋಗದಲ್ಲಿ ಏ. 12 ರಂದು ಮಂಗಳೂರಿನ ಪುರ ಭವನದಲ್ಲಿ ಸಂಜೆ 4.30 ರಿಂದ ಆಯೋಜಿಸಲಾಗಿದೆ. ಎಡನೀರು ಮಠದ ಶ್ರೀ ಸಚ್ಚಿದಾನಂದ ಭಾರತಿ ಶ್ರೀಪಾದಂಗಳವರು ಆಶೀರ್ವಚನ ಮಾಡಲಿರುವರು. ನಟರಾಜ ದೀಪ ಪ್ರಜ್ವಲನವನ್ನು ಗುರುಗಳಾದ ಉಳ್ಳಾಲ ಮೋಹನ್ ಕುಮಾರ್ ಮಾಡಲಿದ್ದು, ಮುಖ್ಯ ಅಭ್ಯಾಗತರಾಗಿ ಕ್ಯಾಂಪ್ಕೋ ಸಂಸ್ಥೆಯ ಡಾ. ಸತ್ಯನಾರಾಯಣ ಬಿ. ವಿ., ಸಾಲಿಗ್ರಾಮ ಶ್ರೀ ಗುರು ನರಸಿಂಹ ದೇವಸ್ಥಾನದ ಆಡಳಿತ ಮಂಡಳಿಯ ಅಧ್ಯಕ್ಷ ಪ್ರಕಾಶ್ ಕಾರಂತ್ ನರಿಕೊಂಬು, ಜಿಲ್ಲಾ ಧಾರ್ಮಿಕ ಪರಿಷತ್ತಿನ ಸದಸ್ಯ ಸುಬ್ರಮಣ್ಯ ಪ್ರಸಾದ್ ಕೊರ್ಯಾರ್ ಭಾಗವಹಿಸಲಿರುವರು. ಸಾಂಸ್ಕೃತಿಕ ಕಾರ್ಯಕ್ರಮವಾಗಿ ಬೆಂಗಳೂರಿನ ಪ್ರಸಿದ್ಧ ಕಲಾವಿದೆ ವಿದುಷಿ ಗೌರಿ ಸಾಗರ್ ಅವರಿಂದ ಹಾಸ್ಯಾಧಾರಿತ ಭರತನಾಟ್ಯ ಪ್ರದರ್ಶನ, ವಿನೋದ ಹಾಗೂ ಸಂಸ್ಥೆಯ ಹೊರ ಜಿಲ್ಲೆಗಳ ಹಿರಿಯ ವಿದ್ಯಾರ್ಥಿನಿಯರಿಂದ ಶ್ರೀ ರಾಮಾಯಣಂ ಪ್ರಸ್ತುತಿಗಳು ಜರುಗಲಿವೆ ಎಂದು ಸಂಸ್ಥೆಯ ನಿರ್ದೇಶಕಿ ವಿದುಷಿ ಪ್ರತಿಮಾ ಶ್ರೀಧರ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಇಬ್ಬರು ಬಾಲಕರಿಗೆ ಕಿರುಕುಳ: ವ್ಯಕ್ತಿಯ ವಿರುದ್ಧ ಪ್ರಕರಣ

ಕಾಸರಗೋಡು: 10 ಹಾಗೂ 15 ವರ್ಷ ಪ್ರಾಯದ ಇಬ್ಬರು ಬಾಲಕರಿಗೆ ಸಲಿಂಗರತಿ ಕಿರುಕುಳ ನೀಡಿದ ಆರೋಪದಂತೆ 55ರ ಹರೆಯದ ವ್ಯಕ್ತಿ ವಿರುದ್ಧ ಮೇಲ್ಪರಂಬ ಪೊಲೀಸರು ಪೋಕ್ಸೋ ಪ್ರಕಾರ ಕೇಸು ದಾಖಲಿಸಿಕೊಂಡಿದ್ದಾರೆ. ಈ ಬಾಲಕರು ಕಾಸರಗೋಡು ನಗರ ಪೊಲೀಸ್ ಠಾಣೆ ವ್ಯಾಪ್ತಿಯ ನಿವಾಸಿಗಳಾಗಿದ್ದಾರೆ. ಈ ಇಬ್ಬರು ಹತ್ತಿರದ ಸಂಬಂಧಿಕನಾದ 55ರ ಹರೆಯದ ವ್ಯಕ್ತಿಯ ಮನೆಗೆ ಹೋದ ಸಂದರ್ಭದಲ್ಲಿ ಹಲವು ಬಾರಿ ಕಿರುಕುಳ ನೀಡಿರುವುದಾಗಿ ದೂರಲಾಗಿದೆ. ಆದರೆ ಭಯದಿಂದ ಕಿರುಕುಳ ಘಟನೆ ಬಗ್ಗೆ ಮಕ್ಕಳು ಯಾರಲ್ಲೂ ತಿಳಿಸಿರಲಿಲ್ಲ. ಇತ್ತೀಚೆಗೆ ಆರೋಪಿ ಮತ್ತೆ ಕಿರುಕುಳಕ್ಕೆ ಯತ್ನಿಸಿದ್ದು, ಅದನ್ನು ಬಾಲಕರು ವಿರೋಧಿಸಿದಾಗ ಆತ ಹಲ್ಲೆಗೈದಿದ್ದನೆನ್ನಲಾಗಿದೆ. ಈ ಹಲ್ಲೆಗೆ ಸಂಬಂಧಿಸಿ ಪೊಲೀಸರು ವ್ಯಕ್ತಿ ವಿರುದ್ಧ ಕೇಸು ದಾಖಲಿಸಿ ತನಿಖೆಗೊಳಪಡಿಸಿದಾಗ ಕಿರುಕುಳ ಮಾಹಿತಿ ಬೆಳಕಿಗೆ ಬಂದಿದೆ.

ಕುಡಿಯುವ ನೀರಿನ ವಿದ್ಯುತ್ ವಾಹಕ ಕೇಬಲ್ ಕಳವು

ಬಂಟ್ವಾಳ: ತಾಲೂಕಿನ ಉಳಿ ಗ್ರಾಮ ಪಂಚಾಯತ್ ಹಾಗೂ ಬಡಗಕಜೆಕಾರು ಗ್ರಾಮ ಪಂಚಾಯತ್ ವ್ಯಾಪ್ತಿಯ ಪ್ರತ್ಯೇಕ ಎರಡು ಕಡೆಗಳಲ್ಲಿ ಸಾರ್ವಜನಿಕ ಕುಡಿಯುವ ನೀರಿನ 4 ಎಂಎಂ ದಪ್ಪದ ವಿದ್ಯುತ್ ವಾಹಕ ಕೇಬಲ್‌ನ್ನು ಕಳವುಗೈದ ಘಟನೆ ನಡೆದಿದೆ. ಉಳಿಗ್ರಾಮದ ಪಂಚದುರ್ಗ ಹೈಸ್ಕೂಲ್ ಬಳಿಯ ಸಾರ್ವಜನಿಕ ಕುಡಿಯುವ ನೀರಿನ ಸುಮಾರು 35 ಮೀ.ಉದ್ದದ ಹಾಗೂ ಬಡಗಕಜೆಕಾರು ಗ್ರಾಮ ಪಂಚಾಯತ್ ಸ್ವಾಧೀನದ ಕರ್ಲ ಶಾಲಾ ಬಳಿಯ ಕುಡಿಯುವ ನೀರಿನ ಸ್ಥಾವರದ ಸುಮಾರು 100 ಮೀ ಉದ್ದದ ವಿದ್ಯುತ್ ವಾಹಕ ಕೇಬಲ್‌ನ್ನು ಯಾರೋ ಕಳ್ಳರು ಕತ್ತರಿಸಿ ಕಳವುಗೈದು ಪರಾರಿಯಾಗಿದ್ದಾರೆ. ಈ ಬಗ್ಗೆ ಪಿಡಿಒ ವಿದ್ಯಾಶ್ರೀ ಕೆ. ಅವರ ದೂರಿನಂತೆ ಪುಂಜಾಲಕಟ್ಟೆ ಠಾಣೆಯಲ್ಲಿ ಕೇಸು ದಾಖಲಾಗಿದೆ.

ನದಿಗೆ ಹಾರಿದ ಯುವಕ

ಕೈಕಂಬ: ಯುವಕನೋರ್ವ ಗುರುಪುರದ ಪಲ್ಗುಣಿ ನದಿಗೆ ಹಾರಿ ಕಣ್ಮರೆಯಾದ ಘಟನೆ ಬುಧವಾರ ಸಂಜೆ ನಡೆದಿದೆ. ಕಂದಾವರ ಗ್ರಾಮ ಪಂಚಾಯತ್ ವ್ಯಾಪ್ತಿಯ ಕಜೆ ಪಡ್ಡಾಯಿ ಬೆಟ್ಟು ಎಂಬಲ್ಲಿನ ನಿವಾಸಿ ಕೌಶಿಕ್ (30) ಎಂಬಾತನೇ ನದಿಗೆ ಹಾರಿದ ಯುವಕ. ಬುಧವಾರ ಸಂಜೆ ಗುರುಪುರ ಪಲ್ಗುಣಿ ನದಿಯ ಬಳಿ ಬಂದ ಕೌಶಿಕ್ ತಾನು ಬಂದಿದ್ದ ಸ್ಕೂಟರನ್ನು ಸೇತುವೆಯ ಮೇಲ್ಗಡೆ ಇಟ್ಟು ಸೇತುವೆಯಿಂದ ನೀರಿಗೆ ಹಾರಿದ್ದಾನೆ ಎಂದು ಪ್ರತ್ಯಕ್ಷದರ್ಶಿ ವಾಹನ ಸವಾರರೊಬ್ಬರು ಮಾಹಿತಿ ನೀಡಿದ್ದಾರೆ. ಈ ಕುರಿತಂತೆ ಸ್ಥಳೀಯರು ಬಜಪೆ ಪೊಲೀಸ್ ಠಾಣೆಗೆ ಮಾಹಿತಿ ನೀಡಿದ್ದು, ಪೊಲೀಸರು ಸ್ಥಳಕ್ಕೆ ಭೇಟಿ ನೀಡಿ ಯುವಕನ ಶೋಧ ಕಾರ್ಯ ನಡೆಸುತ್ತಿದ್ದಾರೆ.

ಹಲ್ಲೆ: ಮೂವರ ವಿರುದ್ಧ ಕೇಸು

ಕುಂಬಳೆ: ಯುವಕನಿಗೆ ಹಲ್ಲೆ ನಡೆಸಿದ ದೂರಿನಂತೆ ಮೂವರ ವಿರುದ್ಧ ಕುಂಬಳೆ ಪೊಲೀಸರು ಪ್ರಕರಣ ದಾಖಲಿಸಿಕೊಂಡಿದ್ದಾರೆ. ಬಂಬ್ರಾಣ ಬೀರಂಟಿಕೆರೆ ನಿವಾಸಿ ಸಂಜಯ್ (27) ನೀಡಿದ ದೂರಿನಂತೆ ವಿನೀಶ್, ಸಂದೀಪ್ ಶೆಟ್ಟಿ,. ಸುಧೀಶ್ ಎಂಬವರ ವಿರುದ್ಧ ಪ್ರಕರಣ ದಾಖಲಿಸಲಾಗಿದೆ. ಪೂರ್ವದ್ವೇಷವೇ ಹಲ್ಲೆಗೆ ಕಾರಣವೆನ್ನಲಾಗಿದೆ.



ಕಾರ್ಕಳ ತಾಲೂಕಿನ ಸಾಣೂರು ಗ್ರಾಮ ಪಂಚಾಯತ್ ವ್ಯಾಪ್ತಿಯ ಅವಿನಾಶ್ ನಿವಾಸ ಬಳಿ (ರಾ.ಹೆ. 169) ಸೋಫಿಯಾ ಆಸ್ಪತ್ರೆಯ ಪಕ್ಕದಲ್ಲಿರುವ ಕಲ್ಲು ಬಂಡೆಯ ಎದುರಿನ ಟ್ರಾನ್ಸಫಾರ್ಮರ್ ಹತ್ತಿರ ಆಕಸ್ಮಿಕ ಬೆಂಕಿ ಬಿದ್ದ ಘಟನೆ ಬುಧವಾರ ಬೆಳಿಗ್ಗೆ ನಡೆದಿದೆ. ಪರಿಸರದ ಗಿಡ ಗಂಟೆಗಳನ್ನು ಸುಡುತ್ತಾ ಬೆಂಕಿಯ ಜ್ವಾಲೆ ವ್ಯಾಪಕವಾಗಿ ವ್ಯಾಪಿಸಿದೆ. ಮಾಹಿತಿ ಸಿಕ್ಕ ತಕ್ಷಣವೇ ಸ್ಥಳಕ್ಕಾಗಮಿಸಿದ ಅಗ್ನಿಶಾಮಕ ದಳದ ಸಿಬ್ಬಂದಿಯ ತ್ವರಿತ ಕಾರ್ಯಾಚರಣೆಯಿಂದಾಗಿ ಹೆಚ್ಚಿನ ಅನಾಹುತ ತಪ್ಪಿದೆ ಎನ್ನಲಾಗುತ್ತಿದೆ. ಸ್ಥಳೀಯರಾದ ವಿಶ್ವನಾಥ್ ಶೆಟ್ಟಿ ಅವರು ಅಗ್ನಿಶಾಮಕ ದಳಕ್ಕೆ ಮಾಹಿತಿ ನೀಡಿದ್ದರು.

ವಿಶ್ವ ಕೊಂಕಣಿ ಸಂಗೀತ ಮಹಾ ಸಮಾವೇಶ: ನಾಳೆ ಲಾಂಛನ ಬಿಡುಗಡೆ ಕಾರ್ಯಕ್ರಮ

ಮಂಗಳೂರು: ಕೊಂಕಣಿಯ ಪ್ರಮುಖ ಸಾಂಸ್ಕೃತಿಕ ಸಂಘಟನೆ ಮಾಂಡ್ ಸೊಭಾಣ್ 40ನೆ ವರ್ಷದ ಸಂಭ್ರಮದಲ್ಲಿದ್ದು, ಇದರ ಅಂಗವಾಗಿ ನವೆಂಬರ್ 3ರಿಂದ 15ರವರೆಗೆ ಪ್ರಥಮ ವಿಶ್ವ ಕೊಂಕಣಿ ಸಂಗೀತ ಮಹಾ ಸಮಾವೇಶವನ್ನು ಆಯೋಜಿಸಲಾಗುತ್ತಿದೆ. ಈ ಕಾರ್ಯಕ್ರಮದ ಮುಹೂರ್ತ ಮತ್ತು ಲಾಂಛನ ಬಿಡುಗಡೆ ಕಾರ್ಯಕ್ರಮ ಏ.10ರಂದು ಸಂಜೆ 4ಕ್ಕೆ ಶಕ್ತಿನಗರದ ಕಲಾಂಗಣದಲ್ಲಿ ನಡೆಯಲಿದೆ.

ಕಾರ್ಯಕ್ರಮದಲ್ಲಿ ವಿಧಾನಸಭೆಯ ಸಭಾಧ್ಯಕ್ಷ ಯು.ಟಿ. ಖಾದರ್ ಮುಖ್ಯ ಅತಿಥಿಯಾಗಿ ಭಾಗವಹಿಸುವರು. ದ.ಕ. ಜಿಲ್ಲಾ ಉಸ್ತುವಾರಿ ಸಚಿವ ದಿನೇಶ್ ಗುಂಡೂರಾವ್ ಲಾಂಛನ ಬಿಡುಗಡೆಗೊಳಿಸುವರು. ಶಾಸಕರಾದ ವೇದವ್ಯಾಸ ಕಾಮತ್, ಐವನ್ ಡಿಸೋಜ ಹಾಗೂ ಗೋವಾದ ಕಲಾವಿದ ಮೈಕಲ್ ಗ್ರೇಶಿಯಸ್ ಭಾಗವಹಿಸಲಿದ್ದಾರೆ ಎಂದು ಮಾಂಡ್ ಸೊಭಾಣ್ ಅಧ್ಯಕ್ಷ ಲುವಿ ಜೆ. ಪಿಂಟೊ ಬುಧವಾರ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

ಸಂಗೀತ ಮಹಾ ಸಮಾವೇಶದಲ್ಲಿ 12 ದಿನ, 12 ಗಂಟೆ, 12 ನಿಮಿಷಗಳ, ಸಮೂಹ ಗಾಯನದ ಅತೀ ದೀರ್ಘ ಸಮಯದ ಗಿನ್ನೆಸ್ ದಾಖಲೆ ರಚಿಸಲು ಪ್ರಯತ್ನಿಸಲಾಗುವುದು. ಈ ಪ್ರಯತ್ನದಲ್ಲಿ ಕರ್ನಾಟಕ, ಗೋವಾ, ಮಹಾರಾಷ್ಟ್ರ, ಕೇರಳ ಮತ್ತಿತರ ರಾಜ್ಯಗಳಿಂದಲೂ ಹಾಗೂ ವಿದೇಶಗಳಿಂದಲೂ 6000ಕ್ಕೂ ಮಿಕ್ಕಿ ಹಾಡುಗಾರರು ಭಾಗವಹಿಸಲಿದ್ದಾರೆ. ಈ ದಾಖಲೆಯಲ್ಲಿ ಕ್ರೈಸ್ತ, ಜಿಎಸ್‌ಬಿ, ದಾಲ್ದಿ, ಕುಡ್ಮಿ, ಖಾರ್ವಿ, ಸಿದ್ದಿ, ಸಿರಿಯನ್ ಆರ್ಥೊಡಾಕ್ಸ್ ಮತ್ತಿತರ ಸಮುದಾಯಗಳ ಗಾಯಕರು ಸುಮಾರು 5000 ಕೊಂಕಣಿ ಹಾಡುಗಳನ್ನು ಹಾಡಲಿದ್ದಾರೆ. ಕೊಂಕಣಿ ಸಂಗೀತಕ್ಕೆ ಮಹೋನ್ನತ ಕೊಡುಗೆ ನೀಡಿದ ಎರಿಕ್ ಒಝೇರಿಯೊ ಅವರಿಗೆ ಅರ್ಪಣೆಯಾಗಿ ಈ ಕಾರ್ಯಕ್ರಮವನ್ನು ನಡೆಸಲಾಗುವುದು ಎಂದು ಅವರು ವಿವರಿಸಿದರು.

ಕಲಾಂಗಣ್ ಪ್ರಮುಖರಾದ ರಾಯ್ ಕ್ಯಾಸ್ತಲಿನೊ, ಸಂಗೀತ ನಿರ್ದೇಶಕ ಜೊಯೆಲ್ ಪಿರೇರಾ, ಮಾಂಡ್ ಸೊಭಾಣ್ ಸಂಘಟಕ ಸ್ಟ್ಯಾನಿ ಅಲ್ವಾರಿಸ್, ಉಪಾಧ್ಯಕ್ಷ ನವೀನ್ ಲೋಬೊ, ಕಾರ್ಯದರ್ಶಿ ರೊನಾಲ್ಡ್ ಕ್ರಾಸ್ತಾ ಉಪಸ್ಥಿತರಿದ್ದರು.

ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಜಿಪಂ ಸಿಇಒ ಸೂಚನೆ ಖಡಕ್ ಪಾಲನೆ

ತ್ಯಾಜ್ಯ ಎಸೆತಕ್ಕೆ ಬಿತ್ತು ಕೇಸ್!

ಮಂಗಳೂರು: ಎಲ್ಲೆಂದರಲ್ಲಿ ತ್ಯಾಜ್ಯ ಎಸೆಯುವವರ ವಿರುದ್ಧ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಕಟ್ಟುನಿಟ್ಟಿನ ಕ್ರಮವಾಗುತ್ತಿದೆ. ಬುಧವಾರ ಸುಳ್ಯ ತಾಲೂಕು ಐವರ್ನಾಡು ಗ್ರಾಮಪಂಚಾಯತ್ ವ್ಯಾಪ್ತಿಯ ಬೆಳ್ಳಾರೆ–ಸುಳ್ಯ ರಸ್ತೆಯ ಬೆಂಗಮಲೆ ಎಂಬಲ್ಲಿ ರಸ್ತೆಯ ಬದಿ ತ್ಯಾಜ್ಯ ಎಸೆದ ಅಂಗಡಿ ಮಾಲಕರ ವಿರುದ್ಧ ಬೆಳ್ಳಾರೆ ಪೊಲೀಸ್ ಠಾಣೆಯಲ್ಲಿ ಎಫ್‌ಐಆರ್ ದಾಖಲಾಗಿದೆ.

ಜಿಲ್ಲೆಯಲ್ಲಿ ಸ್ವಚ್ಛತೆಗೆ ವಿಶೇಷ ಒತ್ತು ನೀಡಲಾಗಿದ್ದು, ಎಲ್ಲೆಂದರಲ್ಲಿ ತ್ಯಾಜ್ಯ ಎಸೆಯುವವರ ವಿರುದ್ಧ ದಂಡ ವಿಧಿಸಲಾಗುತ್ತಿದೆ. ದಂಡ ಪಾವತಿಸದಿದ್ದರೆ ಎಫ್‌ಐರ್ ದಾಖಲಿಸಲು ಜಿಲ್ಲಾ ಪಂಚಾಯತ್ ಮುಖ್ಯಕಾರ್ಯನಿರ್ವಹಣಾಧಿಕಾರಿನರ್ವಾಡೆ ವಿನಾಯಕ ಕಾರ್ಭಾರಿ ಸೂಚನೆ ನೀಡಿದ್ದಾರೆ. ಅದರಂತೆ ಜಿಲ್ಲೆಯಲ್ಲಿ ಕಾರ್ಯಾಚರಣೆ ಚುರುಕುಗೊಂಡಿದೆ.

ಯಾಕಾಗಿ ಎಫ್‌ಐಆರ್

ಎಲ್ಲೆಂದರಲ್ಲಿ ತ್ಯಾಜ್ಯ ಎಸೆಯುವುದು ಕಂಡು ಬಂದರೆ ಆಯಾ ಪಂಚಾಯತ್ ಸಂಬಂಧಪಟ್ಟವರಿಗೆ ಸೂಚನೆ ನೀಡುವ ಮೂಲಕ ಖುದ್ದಾಗಿ ಅವರೇ ತ್ಯಾಜ್ಯ ವಿಲೇವಾರಿ ಮಾಡುವಂತೆಮಾಡುತ್ತದೆ. ಅಲ್ಲದೆ ದಂಡವನ್ನೂ ವಿಧಿಸುತ್ತದೆ. ಒಂದು ವೇಳೆ ದಂಡ ಪಾವತಿಸದೆ ಉಡಾಫೆ ವರ್ತನೆ ತೋರಿದರೆ ಅಂತಹವರ ವಿರುದ್ಧ ಸ್ಥಳೀಯ ಪೊಲೀಸ್ ಠಾಣೆಯಲ್ಲಿ ಎಫ್ ಐಆರ್ ದಾಖಲಿಸಲಾಗುತ್ತದೆ.



ಸುಳ್ಯ ತಾಲೂಕು ಐವರ್ನಾಡು ಗ್ರಾಮಪಂಚಾಯತ್ ವ್ಯಾಪ್ತಿಯ ಬೆಳ್ಳಾರೆ–ಸುಳ್ಯ ರಸ್ತೆಯ ಬೆಂಗಮಲೆ ಎಂಬಲ್ಲಿ ರಸ್ತೆಯ ಬದಿ ತ್ಯಾಜ್ಯ ಎಸೆದಿರುವ ಅಂಗಡಿ ಮಾಲಿಕರ ಮೇಲೆ ಬೆಳ್ಳಾರೆ ಪೊಲೀಸ್ ಠಾಣೆಯಲ್ಲಿ ಎಫ್‌ಐಆರ್ ದಾಖಲಾಗಿದೆ.

ಬೇಂಗಮಲೆಯ 3 ಕಡೆಗಳಲ್ಲಿ ತ್ಯಾಜ್ಯದ ಚೀಲಗಳನ್ನು ಎಸೆದಿರುವುದು ಕಂಡು ಬಂದಿದ್ದು, ತೆರೆದು ಪರಿಶೀಲಿಸಿದಾಗ ಎಲ್ಲಾ ಮೂರೂ ತ್ಯಾಜ್ಯದ ಚೀಲಗಳಲ್ಲಿ ಸುಳ್ಯ ಗಾಂಧಿನಗರದ ಅಯೋಧ್ಯಾ ಮೆನ್ಸ್ ಡ್ರೆಸ್ ಆ್ಯಂಡ್ ಸ್ಪೋರ್ಟ್ಸ್ ಜೆರ್ಸಿ ಶಾಪ್ ಎಂಬ ವಸ್ತ್ರ ಮಳಿಗೆಗೆ ಸೇರಿದ ತ್ಯಾಜ್ಯಗಳಿರುವುದು ಕಂಡುಬಂದಿರುತ್ತದೆ. ಚೀಲಗಳಲ್ಲಿ ವಸ್ತ್ರ ಮಳಿಗೆಗೆ ಸಂಬಂಧಿಸಿದ ಹಲವು ಬಿಲ್ಲುಗಳು, ಮಳಿಗೆಯ ಹೆಸರಿಗೆ ನೀಡಲಾದ ಜಾತ್ರೆಯ ಆಮಂತ್ರಣಗಳು ಹಾಗೂ ಮಳಿಗೆಯ ವಿದ್ಯುತ್ ಸಂಪರ್ಕದ ಮೆಸ್ಕಾಂ ಬಿಲ್ಲು ಲಭಿಸಿದ್ದು, ತ್ಯಾಜ್ಯಗಳು ಕೂಡ ವಸ್ತ್ರ ಮಳಿಗೆಯದ್ದೆಂಬುದಾಗಿ ಕಂಡುಬಂದಿತ್ತು.

ಈ ಬಗ್ಗೆ ಅಂಗಡಿ ಮಾಲಿಕರಿಗೆ ದೂರವಾಣಿ ಕರೆ ಮಾಡಿ ತ್ಯಾಜ್ಯದ ಚೀಲಗಳು ಸಿಕ್ಕಿರುವ ಬಗ್ಗೆ ತಿಳಿಸಿ ಗ್ರಾಮಪಂಚಾಯತ್ ಕಚೇರಿಗೆ ಬಂದು ನಿಗದಿತ ದಂಡವನ್ನು ಪಾವತಿಸುವಂತೆ ಸೂಚಿಸಲಾಗಿತ್ತು. ಆದರೆ ಅಂಗಡಿ ಮಾಲಿಕ ಅಕ್ಷಯ್ ರಜಪೂತ್ ಕಲ್ಲಡ್ಕ ಅವರು ತಾನು ತ್ಯಾಜ್ಯ ಎಸೆದಿರುವುದಿಲ್ಲವೆಂದು ವಾದಿಸಿ, ದಂಡದ ಮೊತ್ತವನ್ನು ಕಡಿಮೆ ಮಾಡುವಂತೆ ದಂಡ ಪಾವತಿಸಲು ನಿರಾಕರಿಸಿದ್ದರು.

ಸಾರ್ವಜನಿಕ ಸ್ಥಳಗಳಲ್ಲಿ ತ್ಯಾಜ್ಯವನ್ನು ಎಸೆಯುವುದು ಸಾಂಕ್ರಾಮಿಕ ರೋಗಗಳಿಗೆ ಕಾರಣವಾಗಿ ಸಾರ್ವಜನಿಕ ಆರೋಗ್ಯಕ್ಕೆ ಅಪಾಯಕಾರಿಯಾಗಿರುವುದರಿಂದಲೂ, ತ್ಯಾಜ್ಯ ಎಸೆದ ವ್ಯಕ್ತಿಗಳಿಗೆ ಸೂಕ್ತ ದಂಡ ಅಥವಾ ಶಿಕ್ಷೆಯನ್ನು ವಿಧಿಸದೇ ಇದ್ದಲ್ಲಿ ಸಾರ್ವಜನಿಕ ಸ್ವಚ್ಛತೆಯನ್ನು ಕಾಯ್ದುಕೊಳ್ಳುವುದು ದುಸ್ತರವಾಗುವುದರಿಂದ, ವಿಚಾರವನ್ನು ಐವರ್ನಾಡು ಗ್ರಾಮಪಂಚಾಯತ್ ಆಡಳಿತ ಮಂಡಳಿಯು ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಯವರ ಗ್ರಾಮಪಂಚಾಯತ್ ಭೇಟಿಯ ಸಂದರ್ಭದಲ್ಲಿ ಗಮನಕ್ಕೆ ತಂದಿದ್ದು, ಈ ಕುರಿತು ಜಿಲ್ಲಾಮಟ್ಟದ ಅಧಿಕಾರಿಗಳೊಂದಿಗೆ ಸಮಾಲೋಚಿಸಿ ಪ್ರಕರಣ ದಾಖಲಿಸಲು ದೂರು ಸಲ್ಲಿಸುವಂತೆ ಸೂಚಿಸಿದ್ದರು. ಈ ಹಿನ್ನೆಲೆಯಲ್ಲಿ ಐವರ್ನಾಡು ಪಿ.ಡಿ.ಒ ಶ್ಯಾಮಪ್ರಸಾದ್ ಅವರು ಬೆಳ್ಳಾರೆ ಪೊಲೀಸ್ ಠಾಣೆಯಲ್ಲಿ ದೂರು ಸಲ್ಲಿಸಿದ್ದಾರೆ.

ಆ್ಯಸಿಡ್ ಎರಚಿ ಕೊಲೆಯತ್ನ ಆರೋಪ ಸಾಬೀತು

ಹೆಬ್ರಿ: ಇಲ್ಲಿನ ಚಾರಾ ಗ್ರಾಮದ ಮಂಡಾಡಿಜೆಡ್ಡುವಿನ ಕಾರಾಡಿ ಎಂಬಲ್ಲಿ ಆ್ಯಸಿಡ್ ಎರಚಿ ಕೊಲೆ ಮಾಡಲು ಯತ್ನಿಸಿದ ಪ್ರಕರಣದ ಆರೋಪಿಯನ್ನುಎರಡನೇಹೆಚ್ಚುವರಿಜಿಲ್ಲಾಮತ್ತುಸತ್ರನ್ಯಾಯಾಲಯ ಸಂಚಾರಿ ಪೀಠ ಕಾರ್ಕಳ ನ್ಯಾಯಾಲಯದ ನ್ಯಾಯಾಧೀಶ ಸಮೀವುಲ್ಲಾ ಅವರು ದೋಷಿ ಎಂದು ಆದೇಶಿಸಿದ್ದು, ಶಿಕ್ಷೆಯ ಪ್ರಮಾಣವನ್ನು ಏ.21 ರಂದು ಪ್ರಕಟಿಸುವುದಾಗಿ ಕಾಯ್ದಿರಿಸಿದ್ದಾರೆ. ರತೀಶ್ ಕೆ.ಟಿ., ಶಿಕ್ಷೆಗೆ ಗುರಿಯಾದ ಆರೋಪಿ.

ಶಿಕ್ಷೆಯ ಪ್ರಮಾಣವನ್ನು ಏ.21 ರಂದು ಪ್ರಕಟಿಸುವುದಾಗಿ ಕಾಯ್ದಿರಿಸಿದ್ದಾರೆ.

ಪ್ರಕರಣದ ಹಿನ್ನಲೆ

ಆರೋಪಿ ರತೀಶ್ ಕೆ.ಟಿ. ಮತ್ತು ಸುಧೀರ್ ಪಿ.ಎ. ಸ್ನೇಹಿತರಾಗಿದ್ದು ರಬ್ಬರ್ ಟ್ಯಾಪಿಂಗ್ ಕೆಲಸ ಮಾಡಿಕೊಂಡಿದ್ದರು. 2022 ರ ಫೆ. 28 ರಂದು ಚಾರಾ ಗ್ರಾಮದ ಮಂಡಾಡಿಜೆಡುವಿನ ಕಾರಾಡಿಗೆ ಬಂದಿದ್ದು ಆ ಸಮಯದಲ್ಲಿ ಅವರಿಬ್ಬರು ಮದ್ಯಪಾನ ಮಾಡಿದ್ದರು.

ಆಗ ಸುಧೀರ್, ಆರೋಪಿ ರತೀಶ್‌ನು ಅಜಿತ್ ಅಗಸ್ಟಿನ್ ಒಳ್ಳೆಯ ರೀತಿಯಲ್ಲಿ ರಬ್ಬರ್ ಟ್ಯಾಪಿಂಗ್ ಮಾಡುತ್ತಾರೆ. ನೀನು ಮುಂದಕ್ಕೆ ಸರಿಯಾಗಿ ರಬ್ಬರ್ ಟ್ಯಾಪಿಂಗ್ ಕೆಲಸ ಮಾಡುವಂತೆ ತಿಳಿಸಿದಾಗ, ನಶೆಯಲಿದ್ದ ಆರೋಪಿ, ಹಲ್ಲೆ ನಡೆಸಿದ್ದನು. ಆಗ ಸ್ನೇಹಿತರು ಜಗಳವನ್ನು ಬಿಡಿಸಿದ್ದರು.

ನಂತರ 2022 ರ ಮಾ.1 ರಂದು ಸಂಜೆ ಸ್ನೇಹಿತರ ಹುಟ್ಟುಹಬ್ಬವನ್ನು ಆಚರಿಸಿ, ರೂಮಿನ ಹೊರಗಡೆ ಮೆಟ್ಟಲಿನ ಬದಿಯಲ್ಲಿ, ಮಲಗಿದ್ದ ಸುಧೀರ್ ಅವರ ಮೇಲೆ ಆರೋಪಿ ರತೀಶ್, ಕೊಲ್ಲುವ ಉದ್ದೇಶದಿಂದ ರಬ್ಬರ್ ಟ್ಯಾಪಿಂಗ್‌ಗೆ ಬಳಸುವ ಫೊರ್ ಮಿಕ್ ಆಸೀಡ್‌ನ್ನು ಮಗ್‌ನಲ್ಲಿ ಹಾಕಿಕೊಂಡು ಮುಖಕ್ಕೆ ಹಾಗೂ ಮೈ ಮೇಲೆ ಎಸೆದು ಕೊಲೆ ಮಾಡಲು ಪ್ರಯತ್ನಿಸಿದ್ದರು. ಈ ಬಗ್ಗೆ ಹೆಬ್ರಿ ಠಾಣಾಧಿಕಾರಿ ನ್ಯಾಯಾಲಯ ದೋಷಾರೋಪಣಾ ಪಟ್ಟಿಯನ್ನು ಸಲ್ಲಿಸಿದ್ದರು.

ಸರಕಾರದ ಪರವಾಗಿ ಸರಕಾರಿ ಅಭಿಯೋಜಕ ಬೇಳೂರು ಪ್ರಕಾಶ್ಚಂದ್ರ ಶೆಟ್ಟಿ ವಾದಿಸಿದ್ದರು.

ಕೊಂಗ್ಗಿಬೈಲ್ ಅರ್ತಿವೊಡಲು ಶ್ರೀ ವಿಷ್ಣು ದೇವಸ್ಥಾನದಲ್ಲಿ ಬ್ರಹ್ಮಕಲಶೋತ್ಸವ

ಧಾರ್ಮಿಕ ಕ್ಷೇತ್ರ ಸಂಸ್ಕಾರ ಕಲಿಸುವ ಕೇಂದ್ರ: ಶ್ರೀ

ಮಂಗಳೂರು: ಧಾರ್ಮಿಕ ಶ್ರದ್ಧಾಕೇಂದ್ರಗಳ ಮೂಲಕ ವ್ಯಕ್ತಿ ನಿರ್ಮಾಣದ ಕಾರ್ಯವಾಗಲಿ. ಸಂಸ್ಕಾರ ಕಲಿಸುವ ಕೇಂದ್ರವಾಗಲಿ ಎಂದು ಒಡಿಯೂರು ಶ್ರೀ ಗುರುದೇವಾನಂದ ಸ್ವಾಮೀಜಿ ಹೇಳಿದರು.

ಕುಂಜತ್ತಬೈಲು ಕೊಂಗ್ಗಿಬೈಲ್ ಅರ್ತಿ ವೊಡಲು ಶ್ರೀ ವಿಷ್ಣು ದೇವಸ್ಥಾನದಲ್ಲಿ ನಡೆಯುತ್ತಿರುವ ಅಷ್ಟಬಂಧ ಬ್ರಹ್ಮಕಲಶೋತ್ಸವದ ಸಂದರ್ಭ ಬುಧವಾರ ನಡೆದ ಧಾರ್ಮಿಕ ಸಭೆಯಲ್ಲಿ ಅವರು ಆಶೀರ್ವಚನ ನೀಡಿದರು.

ಅರ್ತಿವೊಡಲು ಎಂದರೇ ಪ್ರೀತಿ. ಈ ಕ್ಷೇತ್ರ ಅವಿನಾಶಿ. ಊರಿನ ಭಕ್ತರೆಲ್ಲರೂ ಕ್ಷೇತ್ರದ ಅಭಿವೃದ್ಧಿಗೆ ಒತ್ತು ನೀಡಬೇಕು. ಧಾರ್ಮಿಕ ಕ್ಷೇತ್ರಗಳು ಬೆಳಗಿದಾಗ ಭಕ್ತರ ಬದುಕು ಕೂಡ ಬೆಳಗುತ್ತದೆ. ಸಂಬಂಧಗಳು ವ್ಯವಹಾರ ಆಗಬಾರದು ಎಂದರು.

ಪ್ರಮುಖರಾದ ಬಾಲಕೃಷ್ಣ ಕೊಟ್ಟಾರಿ ಮಾತನಾಡಿ, ತ್ಯಾಗ ಇದ್ದಲ್ಲಿ ಮಾತ್ರ ಅಭಿವೃದ್ಧಿ ಸಾಧ್ಯ. ತ್ಯಾಗ ಇಲ್ಲದಿದ್ದರೆ ಅಭಿವೃದ್ಧಿ ಕಷ್ಟ. ಆಡಳಿತ ಮಂಡಳಿ, ಅರ್ಚಕರು, ಭಕ್ತರು ಒಟ್ಟಿಗೆ ಜೊತೆಗೂಡಿ ಕೆಲಸ ಮಾಡಿದರೆ ದೇವಸ್ಥಾನಗಳು ಉಳಿಯುತ್ತವೆ ಎಂದರು.

ಸಮಾಜದಲ್ಲಿ ಶಾಂತಿ ನೆಲೆಸಲು ದೇವಸ್ಥಾನಗಳು ಬೇಕು. ಮಕ್ಕಳಿಗೆ ಸನ್ಮಾರ್ಗ, ಸಂಸ್ಕಾರ ಬೋಧಿಸುವ ಕೆಲಸ ಹೆತ್ತವರಿಂದ ಆಗಬೇಕು. ಧಾರ್ಮಿಕ ಶಿಕ್ಷಣ ನೀಡುವ ದೇವಸ್ಥಾನಗಳಿಗೆ ಮಕ್ಕಳನ್ನು ಕಳಿಸುವ ಕೆಲಸ ಆಗಬೇಕು ಎಂದರು.



ಜೀರ್ಣೋದ್ದಾರ ಸಮಿತಿಯ ಅಧ್ಯಕ್ಷ ವಿಠಲ ಆಳ್ವ ಅಧ್ಯಕ್ಷತೆ ವಹಿಸಿದ್ದರು. ಬಜರಂಗದಳ ಮುಖಂಡ ಭುಜಂಗ ಕುಲಾಲ್ ಅದ್ಯಪಾಡಿ, ಕರ್ನಾಟಕ ರಾಜ್ಯ ಆಹಾರ ಆಯೋಗದ ಸದಸ್ಯ ಸುಮಂತ್ ರಾವ್, ಕಾವೂರು ಬಂಟರ ಸಂಘದ ಅಧ್ಯಕ್ಷ ಆನಂದ ಶೆಟ್ಟಿ ಅಡ್ಯಾರ್, ಕೊಂಚಾಡಿ ಶ್ರೀ ದುರ್ಗಾಪರಮೇಶ್ವರಿ ನಾಗಕನ್ನಿಕಾ ದೇವಸ್ಥಾನದ ಮೊಕ್ತೇಸರ ಬಾಲಕೃಷ್ಣ ಕೊಟ್ಟಾರಿ, ಕಾವೂರು ಪೊಲೀಸ್ ಠಾಣೆಯ ಪೊಲೀಸ್ ನಿರೀಕ್ಷಕ ರಾಘವೇಂದ್ರ ಬೈಂದೂರ್, ಪ್ರಸೂತಿ ತಜ್ಞೆ ಡಾ. ಸಂಗೀತಾ ಅಜಯ್ ಕೋಟ್ಯಾನ್, ಉಪ ತಹಶೀಲ್ದಾರ್ ನವೀನ್ ಕುಮಾರ್, ಕಾವೂರ್ ವ್ಯವಸಾಯ ಸೇವಾ ಸಹಕರಿಸಿ ಸಂಘದ ಅಧ್ಯಕ್ಷ ಲೋಕೇಶ್ ಭಂಡಾರಿ, ಪ್ರಮುಖರಾದ ಎಂ. ಎಸ್. ಸರಪಾಡಿ, ಡಾ. ಸತೀಶ್ ಕಲ್ಲಿಮಾರ್, ಕೊರಗಪ್ಪ ಶೆಟ್ಟಿ ಆಕಾಶಭವನ, ಸಂದೀಪ್ ಪಚ್ಚನಾಡಿ, ಮೈನಾ ಜಿ. ರೈ ದೆವ್ಪುಣಿಗುತ್ತು, ಸಂಗೀತಾ ನಾಯಕ್ ಪಚ್ಚನಾಡಿ, ಕ್ಷೇತ್ರದ ಆಡಳಿತ ಮೊಕ್ತೇಸರ ಡಾ. ನರೇಶ್ ರೈ, ಬ್ರಹ್ಮಕಲಶ ಸಮಿತಿಯ ಅಧ್ಯಕ್ಷ ಆಶಿಕ್ ಬಲ್ಲಾಳ್ ಹಾಜರಿದ್ದರು.

ವೇದಿಕೆ ನಿರ್ವಹಣಾ ಸಮಿತಿಯ ಸಂಚಾಲಕ ಬಾಲಕೃಷ್ಣ ಆಳ್ವ ಸ್ವಾಗತಿಸಿದರು. ಡಾ.ಪ್ರಿಯ ಹರೀಶ್ ರೈ, ಸುರೇಖಾ, ಶಿಲ್ಪಾ ಕಾರ್ಯಕ್ರಮ ನಿರೂಪಿಸಿದರು.



ರೆಡ್‌ಕ್ರಾಸ್ ಸೊಸೈಟಿಯ ದ.ಕ.ಜಿಲ್ಲಾ ಘಟಕದ ಚೇರ್ಮನ್ ಆಗಿ ಸತತ 4ನೇ ಅವಧಿಗೆ ಆಯ್ಕೆಯಾದ ಸಿಎ ಶಾಂತಾರಾಮ ಶೆಟ್ಟಿ ಅವರನ್ನು ಮಂಗಳೂರು ವಿ.ವಿ.ಯ ಯೂತ್ ರೆಡ್‌ಕ್ರಾಸ್ ನೋಡಲ್ ಅಧಿಕಾರಿ ಡಾ.ಗಾಯತ್ರಿ ಎನ್. ರೆಡ್‌ಕ್ರಾಸ್ ಕಚೇರಿಯಲ್ಲಿ ಅಭಿನಂದಿಸಿದರು. ಜಿಲ್ಲಾ ಘಟಕದ ಖಜಾಂಜಿ ಗುರುದತ್ ನಾಯಕ್, ನಿರ್ದೇಶಕರಾದ ಡಾ.ಸತೀಶ್ ರಾವ್, ಪಿ.ಬಿ.ಹರೀಶ್ ರೈ, ಡಾ.ಸುಮನ .ಬಿ. , ನಿಟ್ಟೆ ಪರಿಗಣಿತ ವಿ.ವಿ.ಯ ರೆಡ್ ಕ್ರಾಸ್ ನೋಡಲ್ ಅಧಿಕಾರಿ ಡಾ.ಶಂತನು ಸಹಾ, ವಿವಿಧ ಕಾಲೇಜುಗಳ ಯೂತ್ ರೆಡ್‌ಕ್ರಾಸ್ ಯೋಜನಾಧಿಕಾರಿಗಳಾದ ಇಮ್ತಿಯಾಜ್ ಆಲಿ, ದೀಕ್ಷಿತಾ, ನಿಮಿತಾ.ಕೆ., ಶಿಲ್ಪಾ ಶೆಟ್ಟಿ, ರೆಡ್‌ಕ್ರಾಸ್ ಕಾರ್ಯದರ್ಶಿ ಕಿಶೋರ್‌ಚಂದ್ರ ಹೆಗ್ಡೆ ಉಪಸ್ಥಿತರಿದ್ದರು.

ಮತದಾರರ ಪಟ್ಟಿ ಪರಿಷ್ಕರಣೆ ಪ್ರಮುಖರ ಸಭೆ

ಮಂಗಳೂರು: ಬಿಜೆಪಿ ದಕ್ಷಿಣ ಕನ್ನಡ ಜಿಲ್ಲೆಯ ಮತದಾರರ ಪಟ್ಟಿ ಪರಿಷ್ಕರಣೆ (ಎಸ್ ಐಆರ್) ಜಿಲ್ಲಾ ಮಟ್ಟದ ವಿಶೇಷ ಸಭೆಯು ಮಂಗಳೂರಿನ ಗಂಜಿಮಠದಲ್ಲಿರುವ ಒಡ್ಡೂರು ಫಾರ್ಮ್ಸ್ ಹೌಸ್‌ನಲ್ಲಿ ಬುಧವಾರ ನಡೆಯಿತು.

ಬಂಟ್ವಾಳ ಶಾಸಕ ರಾಜೇಶ್ ನ್ಯಾಕ್ ಮತ್ತು ಮಹಾರಾಷ್ಟ್ರದ ಪನ್ವೇಲ್‌ನ ಶಾಸಕ ಮಟ್ಟು ಪ್ರಶಾಂತ್ ಠಾಕೂರ್ ಭಾರತ ಮಾತೆಗೆ ಪುಷ್ಪಾರ್ಚನೆ ಮಾಡುವ ಮೂಲಕ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದರು. ಸಭೆಯ ಅಧ್ಯಕ್ಷತೆ ವಹಿಸಿ ಬಿಜೆಪಿ ಜಿಲ್ಲಾಧ್ಯಕ್ಷ ಸತೀಶ್ ಕುಂಪಲ ಅವರು ಎಸ್‌ಐಆರ್ ಬಗ್ಗೆ ಮಾತನಾಡಿದರು. ವಿಭಾಗ ಪ್ರಭಾರಿ ಭಾರತೀಶ್ ಸಭೆಯನ್ನು ಉದ್ದೇಶಿಸಿ ಮಾತನಾಡಿದರು. ಎಸ್‌ಐಆರ್ ಬಗ್ಗೆ ಜಿಲ್ಲಾ ಸಂಚಾಲಕ ಪ್ರೇಮಾನಂದ ಶೆಟ್ಟಿ ಮಾಹಿತಿ ನೀಡಿದರು ಹಾಗೂ ಮಂಡಲಗಳಿಂದ ಎಸ್‌ಐಆರ್ ಬಗ್ಗೆ ವರದಿ ಪಡೆದುಕೊಂಡರು. ಜಿಲ್ಲಾ ಪ್ರಧಾನ ಕಾರ್ಯದರ್ಶಿ ಯತೀಶ್ ಆರ್ವಾರ್ ಪ್ರಶಿಕ್ಷಣದ ಬಗ್ಗೆ ಮಂಡಲಗಳಿಂದ ದಿನಾಂಕವನ್ನು ಪಡೆದುಕೊಂಡರು.



ವಿಭಾಗ ಸಹಪ್ರಭಾರಿ ಜಯಂತ್ ಕೋಟ್ಯಾನ್, ಶಾಸಕರಾದ ಭಾಗೀರಥಿ ಮುರುಳ್ಯ, ಪ್ರತಾಪಸಿಂಹ ನಾಯಕ್, ಮಾಜಿ ಶಾಸಕ ಗಣೇಶ್ ಕಾರ್ಣಿಕ್ ಉಪಸ್ಥಿತರಿದ್ದರು. ಜಿಲ್ಲಾ ಉಪಾಧ್ಯಕ್ಷೆ ಪೂಜಾ ಪ್ರಶಾಂತ್ ಪೈ ಸ್ವಾಗತಿಸಿದರು. ಜಿಲ್ಲಾ ಉಪಾಧ್ಯಕ್ಷ ರಾಕೇಶ್ ರೈ ಕೆಡೆಂಜಿ ಕಾರ್ಯಕ್ರಮ ನಿರ್ವಹಿಸಿದರು. ಜಿಲ್ಲಾ ಕಾರ್ಯದರ್ಶಿ ದಿನೇಶ್ ಅಮ್ಟೂರು ವಂದಿಸಿದರು. ಜಿಲ್ಲಾ ವಕ್ತಾರ ಅರುಣ್ ಶೇಟ್ ವಂದೇ ಮಾತರಂ ಹಾಡಿದರು. ಮಾಜಿ ಶಾಸಕರಾದ ಸಂಜೀವ ಮಠಂದೂರು, ಎ. ರುಕ್ಮಯ್ಯ ಪೂಜಾರಿ, ಜಿಲ್ಲಾ ಪದಾಧಿಕಾರಿಗಳು, ಮಂಡಲ ಅಧ್ಯಕ್ಷ ಮತ್ತು ಪ್ರಧಾನ ಕಾರ್ಯದರ್ಶಿಗಳು, ಮೋರ್ಚಾ ಪದಾಧಿಕಾರಿಗಳು, ಎಸ್‌ಐಆರ್ ಜಿಲ್ಲಾ ಹಾಗೂ ಮಂಡಲ ತಂಡ ಪ್ರಮುಖರು, ಪಂಡಿತ್ ದೀನ್‌ದಯಾಳ್ ಜೀ ಉಪಾಧ್ಯಾಯರ ಪ್ರಶಿಕ್ಷಣ ವರ್ಗದ ಜಿಲ್ಲಾ ಮತ್ತು ಮಂಡಲ ತಂಡದ ಪ್ರಮುಖರು ಭಾಗವಹಿಸಿದ್ದರು.

ಕಿರುಸುದ್ದಿ

ರಾಮಕುಂಜ: 'ಮನೆಯಂಗಳ ನೆನಪುಗಳ ಬುತ್ತಿ' ಬೇಸಿಗೆ ಶಿಬಿರ ಸಮಾರೋಪ

ಕಡಬ: ರಾಮಕುಂಜದ ಶ್ರೀ ರಾಮಕುಂಜೇಶ್ವರ ಆಂಗ್ಲ ಮಾಧ್ಯಮ ವಿದ್ಯಾಸಂಸ್ಥೆಗಳ ವತಿಯಿಂದ ಆಯೋಜಿಸಲಾಗಿದ್ದ 'ಮನೆಯಂಗಳ ನೆನಪುಗಳ ಬುತ್ತಿ' ಬೇಸಿಗೆ ಶಿಬಿರ ಸಮಾರೋಪ ಸಮಾರಂಭವು ಶಾಲಾ ಸಭಾಂಗಣದಲ್ಲಿ ಜರಗಿತು. ಸಮಾರಂಭದ ಅಧ್ಯಕ್ಷತೆ ವಹಿಸಿದ್ದ ಸಂಸ್ಥೆಯ ಕಾರ್ಯದರ್ಶಿ ಕೆ. ಸೇಸಪ್ಪ ರೈ ಮಾತನಾಡಿ, ಸಂಸ್ಥೆಯು ಕಳೆದ 30 ವರ್ಷಗಳಿಂದ ಬೇಸಿಗೆ ಶಿಬಿರವನ್ನು ವಿವಿಧ ಸಂಪನ್ಮೂಲ ವ್ಯಕ್ತಿಗಳ ಮೂಲಕ ನಡೆಸಿಕೊಂಡು ಬರುತ್ತಿದೆ. ವಿದ್ಯಾರ್ಥಿಗಳೆಲ್ಲರೂ ಈ ಶಿಬಿರದ ಪ್ರಯೋಜನವನ್ನು ಪಡೆದು ಈ ಮನೆಯಂಗಳ ನೆನಪಿನ ಬುತ್ತಿಯನ್ನು ತಮ್ಮ ಜೀವನದಲ್ಲಿ ಅಳವಡಿಸಿಕೊಳ್ಳಬೇಕು ಎಂದು ಹೇಳಿದರು.

ಮುಖ್ಯ ಅತಿಥಿಯಾಗಿದ್ದ ಸಂಸ್ಥೆಯ ಶಿಕ್ಷಕ ರಕ್ಷಕ ಸಂಘದ ಅಧ್ಯಕ್ಷ ಗಿರೀಶ್ ಎ.ಪಿ. ಮಾತನಾಡಿ, ದೇವರು ಎಲ್ಲರಿಗೂ ಪ್ರತಿಭೆಯನ್ನು ಕೊಟ್ಟಿರುತ್ತಾರೆ. ಪ್ರತಿಭೆಗಳು ಜೀವನಕ್ಕೆ ದಾರಿ ದೀಪವಾಗುತ್ತದೆ. ಇಂತಹ ಶಿಬಿರಗಳು ಹಾಗೂ ಶಿಕ್ಷಣ ಸಂಸ್ಥೆಗಳು ವಿದ್ಯಾರ್ಥಿಗಳ ಪ್ರತಿಭೆಯನ್ನು ಹೊರಹಾಕಲು ಅವಕಾಶ ಮಾಡಿ ಕೊಡುತ್ತದೆ. ವಿದ್ಯಾರ್ಥಿಗಳು ಇಂತಹ ಅವಕಾಶಗಳನ್ನು ಉಪಯೋಗಿಸಿಕೊಂಡಾಗ ತಮ್ಮಲ್ಲಿರುವ ಶಕ್ತಿ ಏನೆಂಬುದು ಅರಿವಾಗುತ್ತದೆ ಎಂದರು. ಸಂಸ್ಥೆಯ ಆಡಳಿತಾಧಿಕಾರಿ ಆನಂದ ಎಸ್.ಟಿ., ಪ್ರೌಢ ಶಾಲಾ ಮುಖ್ಯ ಶಿಕ್ಷಕಿ ಗಾಯತ್ರಿ ಯು.ಎನ್. ಉಪಸ್ಥಿತರಿದ್ದರು. ಶ್ರೀ ರಾಮಕುಂಜೇಶ್ವರ ವಿದ್ಯಾಲಯದ ಪ್ರಾಂಶುಪಾಲ ಪ್ರವೀದ್ ಸ್ವಾಗತಿಸಿ, ಪ್ರಾಥಮಿಕ ಶಾಲಾ ಮುಖ್ಯ ಶಿಕ್ಷಕಿ ಲೋಹಿತಾ ಎ. ವಂದಿಸಿದರು. ಸಹಶಿಕ್ಷಕಿ ಸಂಧ್ಯಾ ಕಾರ್ಯಕ್ರಮ ನಿರ್ವಹಿಸಿದರು. ಸಂಸ್ಥೆಯ ವ್ಯವಸ್ಥಾಪಕ ರಮೇಶ್ ರೈ, ಶಿಬಿರ ಸಂಘಟಕರಾದ ರಾಧಾಕೃಷ್ಣ ಬಿ. ಹಾಗೂ ಸರಿತಾ ಸಹಕರಿಸಿದರು.

ಕುಕ್ಕೆ: ಉಚಿತ ನೇತ್ರ ತಪಾಸಣಾ ಶಿಬಿರ

ಸುಬ್ರಹ್ಮಣ್ಯ: ಕುಕ್ಕೆ ಶ್ರೀ ಸುಬ್ರಹ್ಮಣ್ಯೇಶ್ವರ ಕಾಲೇಜಿನ ಆಂತರಿಕ ಗುಣಮಟ್ಟ ಭರವಸಾ ಕೋಶ, ರಾಷ್ಟ್ರೀಯ ಸೇವಾ ಯೋಜನಾ ಘಟಕ, ಯುವ ರೆಡ್ ಕ್ರಾಸ್ ಘಟಕ, ಲಯನ್ಸ್ ಕ್ಲಬ್ ಸುಬ್ರಹ್ಮಣ್ಯ, ಹಾಗೂ ಪ್ರಸಾದ್ ನೇತ್ರಾಲಯ ಮಂಗಳೂರು ಇವುಗಳ ಜಂಟಿ ಆಶ್ರಯದಲ್ಲಿ ಬುಧವಾರ ಉಚಿತ ನೇತ್ರ ತಪಾಸಣಾ ಶಿಬಿರ ನಡೆಯಿತು.

ಪ್ರಸಾದ ನೇತ್ರಾಲಯದ ಮೆಡಿಕಲ್ ಆಫೀಸರ್ ಡಾ. ಆಶ್ರಿತಾ ಕಾರ್ಯಕ್ರಮ ಉದ್ಘಾಟಿಸಿದರು. ಶ್ರೀ ಸುಬ್ರಹ್ಮಣ್ಯೇಶ್ವರ ಕಾಲೇಜಿನ ಪ್ರಾಂಶುಪಾಲ ಡಾ. ದಿನೇಶ ಪಿ.ಟಿ. ಅಧ್ಯಕ್ಷತೆ ವಹಿಸಿದ್ದರು. ಸುಬ್ರಹ್ಮಣ್ಯ ಲಯನ್ಸ್ ಕ್ಲಬ್ ಅಧ್ಯಕ್ಷೆ ವಿಮಲಾ ರಂಗಯ್ಯ, ಲಯನ್ಸ್ ವಲಯ ಸಂಚಾಲಕ ಪ್ರೊ. ರಂಗಯ್ಯ ಶೆಟ್ಟಿಗಾರ್, ಲಯನ್ಸ್ ಕ್ಲಬ್ ಸದಸ್ಯೆ ಶೋಭಾ ಗಿರಿಧರ್, ಕಾಲೇಜಿನ ಐ.ಕ್ಯೂಎಸಿ ಸಂಯೋಜಕಿ ಲತಾ ಬಿ.ಟಿ,. ರಾಷ್ಟ್ರೀಯ ಸೇವಾ ಯೋಜನಾಕಾರಿ ಆರತಿ ಕೆ., ಯುವ ರೆಡ್ ಕ್ರಾಸ್ ಘಟಕದ ಅಧಿಕಾರಿ ಸ್ವಾತಿ ಕೆ. ಉಪಸ್ಥಿತರಿದ್ದರು. ಎನ್ನೆಸ್ಸೆಸ್ ಘಟಕದ ಯೋಜನಾಧಿಕಾರಿ ಸುಮಿತ್ರ ಕುಮಾರಿ ಎ. ಸ್ವಾಗತಿಸಿ, ವಿದ್ಯಾರ್ಥಿನಿ ಕಾರುಣ್ಯ ವಂದಿಸಿದರು. ಸ್ವಾತಿ ರೈ ಕಾರ್ಯಕ್ರಮ ನಿರ್ವಹಿಸಿದರು.

ಇಂದು ಯಕ್ಷಗಾನ

ಶ್ರೀ ಕಟೀಲು ಯಕ್ಷಗಾನ ಮೇಳ

1. ವಿಠಲದಾಸ್, 'ಕೃಷ್ಣ ತೇಜಸ್', ಮಾಸ್ತಿಕಟ್ಟೆ ಹೌಸ್, ಬೆಳ್ಳಾರೆ – ಅಜಪಿಲ ಶ್ರೀ ಮಹಾಲಿಂಗೇಶ್ವರ ದೇವಸ್ಥಾನ ವಠಾರದಲ್ಲಿ.
2. ಸುಂದರಾಮ್ ಶೆಟ್ಟಿಗಾರ್, 'ದೇವಿಕೃಪಾ', ಪದ್ಮನೂರು, ಕಿನ್ನಿಗೋಳಿ.
3. ಪ್ರಾಣೇಶ್, ಶಾಂತಾಳ್ವ ಕಂಪೌಂಡು, ಮಂಕಿಸ್ಟ್ಯಾಂಡ್ ಅತ್ತಾವರ, ಮಂಗಳೂರು (ತಾ).
4. ಶಾರದಾ ಶಂಕರ ಭಂಡಾರಿ ಮತ್ತು ಮಕ್ಕಳು, 'ಶ್ರೀ ಶಾರದಾ', ರೆಡ್‌ಕ್ರಾಸ್ ಹಿಲ್ ಟೋಪ್ ಲೇಔಟ್, ಈಶ್ವರ ಕಟ್ಟೆ, ಕಿನ್ನಿಕಂಬಳ.
5. ಶ್ರೀ ದುರ್ಗಾಪರಮೇಶ್ವರೀ ಯಕ್ಷಗಾನ ಬಯಲಾಟ ಸಮಿತಿ, ಕುರಾಯ, ಬಂದಾರು, ಬೆಳ್ತಂಗಡಿ (ತಾ).
6. ದಿ। ಗಿರಿಯಪ್ಪ ನಾಯ್ಕರ ಸ್ಮರಣಾರ್ಥ ಮಕ್ಕಳು, ಎರ್ಮೆನಡು ಹೌಸ್, ಮೂಡುಪಡುಕೋಡಿ, ಬಂಟ್ವಾಳ(ತಾ).
7. ರಾಜೇಂದ್ರ ಶೆಟ್ಟಿ, ಕುಡ್ತಿಮಾರುಗುತ್ತು, ಕಿಲೆಂಜೂರು, ನಡುಗೋಡು

ಶ್ರೀ ಧರ್ಮಸ್ಥಳ ಮೇಳ
ಹೊಸಂಗಡಿ ಭದ್ರಾಪುರದಲ್ಲಿ
ಶ್ರೀ ಮಹಾಬಲ ಗೊಲ್ಲ ಮತ್ತು ಮಕ್ಕಳು ಹಾಗೂ ಕುಟುಂಬಸ್ಥರು

ಶ್ರೀ ಸಾಲಿಗ್ರಾಮ ಮೇಳ
ಹೊಸಪಟ್ಟಣದಲ್ಲಿ– **ಶ್ರೀ ದೇವಿ ಮಹಾತ್ಮೆ**

ಶ್ರೀ ಪೆರ್ಡೂರು ಮೇಳ
ಕೊಡಿಬೆಟ್ಟುವಿನಲ್ಲಿ
ಶ್ರೀ ಪೆರ್ಡೂರು ಕ್ಷೇತ್ರ ಮಹಾತ್ಮೆ

ಶ್ರೀ ಹನುಮಗಿರಿ ಮೇಳ
ಆರ್ತಿಪೊಡಲುನಲ್ಲಿ

ಶ್ರೀ ಪಾವಂಜೆ ಮೇಳ
ಮಹತೋಭಾರ ಶ್ರೀ ಮಹಾಲಿಂಗೇಶ್ವರ ದೇವಸ್ಥಾನ, ಬ್ರಹ್ಮಾವರ –ದಕ್ಷಯಜ್ಞ, ತಾರಕಾಸುರ ವಧೆ



ಹಾಸನದ ಸೋಮು ಅವರ ನೇತೃತ್ವದಲ್ಲಿ ಯುವಜನ ಸೇನಾ ಪ್ರತಿಷ್ಠಾನ, 'ಕುಡುಮಶ್ರೀ' ಧರ್ಮಸ್ಥಳ ಪಾದಯಾತ್ರೆ ಸೇವಾಸಮಿತಿ, ಭಕ್ತವೃಂದ, ಏಕಲವ್ಯ ಜೀವಜಲ ಪ್ರತಿಷ್ಠಾನದ ಸದಸ್ಯರು ಹಾಗೂ ಇತರ ಸಂಘಟನೆಗಳ ಸಹಯೋಗದಲ್ಲಿ ಮಂಗಳವಾರ ಧರ್ಮಸ್ಥಳದಲ್ಲಿ ನೇತ್ರಾವತಿ ಸ್ನಾನಘಟ್ಟದಲ್ಲಿ ಸ್ವಚ್ಛತಾಕಾರ್ಯವನ್ನು ಸೇವೆಯಾಗಿ ಮಾಡಿದರು. ಮೂವತ್ತು ಪುರುಷರು ಹಾಗೂ ಮಹಿಳೆಯರು ಸೇರಿದಂತೆ ಒಟ್ಟು ನಲ್ವತ್ತು ಮಂದಿ ಸ್ವಚ್ಛತಾಕಾರ್ಯದಲ್ಲಿ ಭಾಗವಹಿಸಿದರು. ಧರ್ಮಾಧಿಕಾರಿ ಡಿ. ವೀರೇಂದ್ರ ಹೆಗ್ಗಡೆ ಭಕ್ತರ ಸೇವಾಕಾರ್ಯವನ್ನು ಶ್ಲಾಘಿಸಿ, ಅಭಿನಂದಿಸಿದರು.

ಕುಡಿಯಲು ನೀರು ಕೊಡದ್ದಕ್ಕೆ ಕಾರ್ಮಿಕನ ಕೊಲೆ

ಇಬ್ಬರು ಆರೋಪಿಗಳಿಗೆ ಜೀವಾವಧಿ ಶಿಕ್ಷೆ

ಮಡಿಕೇರಿ: ಕುಡಿಯಲು ನೀರು ಕೊಡದಿರುವುದನ್ನೇ ನೆಪವಾಗಿಟ್ಟುಕೊಂಡು ಕಾರ್ಮಿಕನೊಬ್ಬನನ್ನು ಹತ್ಯೆ ಮಾಡಿದ ಆರೋಪ ಸಾಬೀತಾದ ಹಿನ್ನೆಲೆಯಲ್ಲಿ ನ್ಯಾಯಾಲಯವು ಅಪರಾಧಿಗಳಿಬ್ಬರಿಗೆ ವೀರಾಜಪೇಟೆಯ ಎರಡನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯವು ಜೀವಾವಧಿ ಶಿಕ್ಷೆ ಹಾಗೂ ದಂಡ ವಿಧಿಸಿ ತೀರ್ಪು ನೀಡಿದೆ.

ಮೂಲತಃ ಕುಶಾಲನಗರ ರಾಣಿಗೇಟ್ ನಿವಾಸಿಯಾಗಿದ್ದು, ಕುಟ್ಟಂದಿ ಗ್ರಾಮದ ನಾಮೇರ ಪ್ರಸನ್ನ ಅವರ ಲೈನ್‌ಮನೆಯಲ್ಲಿ ವಾಸವಿದ್ದ ಜೇನು ಕುರುಬರ ರವಿ ಅಲಿಯಾಸ್ ಮಂಜು (21) ಹಾಗೂ ಕುಟ್ಟಂದಿ ಗ್ರಾಮದ ನಿವಾಸಿ ಅಮ್ಮೆಕಂಡ ಡಾಲಿ ಎಂಬವರ ಲೈನ್ ಮನೆಯಲ್ಲಿ ವಾಸವಿರುವ ಜೇನುಕುರುಬರ ವಿನೋದ್ ಅಲಿಯಾಸ್ ವಿನು (22) ಜೀವಾವಧಿ ಶಿಕ್ಷೆಗೆ ಗುರಿಯಾದವರಾಗಿದ್ದಾರೆ.

ಬಿ.ಶೆಟ್ಟಿಗೇರಿ ಗ್ರಾಮದಲ್ಲಿರುವ ತೋಟದ ಲೈನ್ ಮನೆಯಲ್ಲಿ ವಾಸವಿದ್ದ ಜೇನು ಕುರುಬರ ರಾಜು ಅಲಿಯಾಸ್ ದೇವು (30) ಹತ್ಯೆಯಾದ ವ್ಯಕ್ತಿ.





» ಕಾರ್ಮಿಕನೊಬ್ಬನನ್ನು ಹತ್ಯೆ ಮಾಡಿದ ಆರೋಪ ಸಾಬೀತು, ಸತ್ರ ನ್ಯಾಯಾಲದಿಂದ ಜೀವಾವಧಿ ಶಿಕ್ಷೆ ಹಾಗೂ ದಂಡ ವಿಧಿಸಿ ತೀರ್ಪು

ಪ್ರಕರಣದ ಕುರಿತು ತನಿಖಾಧಿಕಾರಿಗಳು ಸಲ್ಲಿಸಿದ್ದ ದೋಷಾರೋಪಣ ಪಟ್ಟಿಯ ವಿಚಾರಣೆ ನಡೆಸಿದ ವೀರಾಜಪೇಟೆಯ ಎರಡನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯದ ನ್ಯಾಯಾಧೀಶರಾದ ಎಸ್.ನಟರಾಜು ಅವರು, ಆರೋಪಿಗಳ ಮೇಲಿನ ದೋಷಾರೋಪ ಸಾಕ್ಷ್ಯಾಧಾರಗಳಿಂದ ದೃಢಪಟ್ಟ ಹಿನ್ನೆಲೆಯಲ್ಲಿ ವಿನೋದ್ ಮತ್ತು ರವಿಗೆ ಕಠಿಣ ಜೀವಾವಧಿ ಶಿಕ್ಷೆ ಹಾಗೂ 35000ರೂ.ದಂಡ ವಿಧಿಸಿ ತೀರ್ಪು ನೀಡಿದ್ದಾರೆ. ಸರ್ಕಾರದ ಪರವಾಗಿ ಸರ್ಕಾರಿ ಅಭಿಯೋಜಕ ಯಾಸಿನ್ ಅಹಮದ್ ಅವರು ವಾದ ಮಂಡಿಸಿದರು.

ಮಾಜಿ ಸೈನಿಕರು–ಅವಲಂಬಿತರ ಅಹವಾಲು ಆಲಿಸಿದ ಕೊಡಗು ಜಿಲ್ಲಾಧಿಕಾರಿ

ಸೌಲಭ್ಯ ಕಲ್ಪಿಸಲು ಪ್ರಾಮಾಣಿಕ ಪ್ರಯತ್ನ

ಮಡಿಕೇರಿ: ಮಾಜಿ ಸೈನಿಕರು ಹಾಗೂ ಅವರ ಅವಲಂಬಿತರ ಅಹವಾಲುಗಳನ್ನು ಸುದೀರ್ಘ ಎರಡು ಗಂಟೆಗೂ ಹೆಚ್ಚು ಕಾಲ ಆಲಿಸಿದ ಜಿಲ್ಲಾಧಿಕಾರಿ ಎಸ್.ಜೆ. ಸೋಮಶೇಖರ್ ಅವರು, ಹಲವು ಸೌಲಭ್ಯಗಲಬ್ನು ಕಲ್ಪಿಸಲು ಪ್ರಾಮಾಣಿಕ ಪ್ರಯತ್ನ ಮಾಡುವುದಾಗಿ ಭರವಸೆ ನೀಡಿದರು.

ನಗರದ ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿ ನಡೆದ ಜಿಲ್ಲೆಯ ಮಾಜಿ ಸೈನಿಕರು ಹಾಗೂ ಅವರ ಅವಲಂಬಿತರ ಕುಂದುಕೊರತೆಗಳನ್ನು ಆಲಿಸಿದ ಅವರು, ಜಿಲ್ಲೆಯಲ್ಲಿ ಮಾಜಿ ಸೈನಿಕರಿಗಾಗಿ ಕ್ಯಾಂಟೀನ್, ಸಮುದಾಯ ಭವನ, ಆಸ್ಪತ್ರೆ ಸೇರಿದಂತೆ ಹಲವು ಮೂಲ ಸೌಲಭ್ಯಕ್ಕೆ ಆದ್ಯತೆ ಮೇಲೆ ಜಾಗ ಒದಗಿಸಲಾಗುವುದು ಎಂದರಯ

ಮಡಿಕೇರಿ ಮತ್ತು ಪೊನ್ನಂಪೇಟೆಯಲ್ಲಿ ಮಾಜಿ ಸೈನಿಕರ ಸಮುದಾಯ ಭವನ ನಿರ್ಮಾಣಕ್ಕೆ ಜಾಗ ಕಾಯ್ದಿರಿಸಲಾಗುವುದು. ಫೀಲ್ಡ್ ಮಾರ್ಷಲ್ ಕೆ.ಎಂ.ಕಾರ್ಯಪ್ಪ ಮತ್ತು ಜನರಲ್ ಕೆ.ಎಸ್. ತಿಮ್ಮಯ್ಯ ಅವರ ಜನ್ಮ ದಿನ ಕಾರ್ಯಕ್ರಮಕ್ಕೆ ಮಾಜಿ ಸೈನಿಕರನ್ನು ಆಹ್ವಾನಿಸಲಾಗುವುದು ಸೋಮಶೇಖರ್ ತಿಳಿಸಿದರು.

ಎರಡು ತಿಂಗಳಿಗೊಮ್ಮೆ ಅದಾಲತ್

ಮಾಜಿ ಸೈನಿಕರು ಹಾಗೂ ಅವರ ಅವಲಂಬಿತರ ಕುಂದುಕೊರತೆ ಆಲಿಸುವ ನಿಟ್ಟಿನಲ್ಲಿ ತಾಲೂಕು ಮಟ್ಟದಲ್ಲಿ ಉಪ ವಿಭಾಗಾಧಿಕಾರಿ ಅವರ ಉಪಸ್ಥಿತಿಯಲ್ಲಿ ಸಭೆ ನಡೆಸಲಾಗುವುದು. ಅದರಂತೆ ಪ್ರತಿ ಎರಡು ತಿಂಗಳಿಗೊಮ್ಮೆ ಮಾಜಿ ಸೈನಿಕರ ಅದಾಲತ್ ನಡೆಸಬೇಕೆಂದು ತಹಶೀಲ್ದಾರರಿಗೆ ನಿರ್ದೇಶನ ನೀಡಿದರು.

ಮಾಜಿ ಸೈನಿಕರು ಪೈಸಾರಿ ಜಾಗದಲ್ಲಿ ಒಂದೆರಡು ಎಕರೆ ಅನುಭವಿಸುತ್ತಿರುವ ಭೂಮಿಯನ್ನು ಅವರ ಹೆಸರಿಗೆ ಆರ್ಟಿಸಿ ಮಾಡುವ ಸಂಬಂಧ ನಿಯಮಾನುಸಾರ ಕ್ರಮ ಕೈಗೊಳ್ಳಲಾಗುವುದು ಎಂದು ಜಿಲ್ಲಾಧಿಕಾರಿ ಹೇಳಿದರು.



ಮಾಜಿ ಸೈನಿಕರಿಗೆ ಭೂಮಿ ಒದಗಿಸುವ ಸಂಬಂಧ ನಿಯಮಗಳನ್ನು ಸಡಿಲಿಕೆ ಮಾಡಲು ಸರ್ಕಾರಕ್ಕೆ ಮನವಿ ಮಾಡಲಾಗುವುದು. ಭೂಮಿ ದಾಖಲೆ ಸಂಬಂಧ ವೈಯಕ್ತಿಕ ಕಡತಗಳನ್ನು ಹಂತ ಹಂತವಾಗಿ ನಿಯಮಾನುಸಾರ ಪರಿಶೀಲಿಸಿ ನ್ಯಾಯ ಒದಗಿಸಲಾಗುವುದು. ನಿವೇಶನ ಹಾಗೂ ಮನೆ ಇಲ್ಲದ ಮಾಜಿ ಸೈನಿಕರಿಗೆ ನಿವೇಶನ ಹಾಗೂ ಮನೆ ಕಲ್ಪಿಸುವ ಸಂಬಂಧ ಪರಿಶೀಲಿಸಲಾಗುವುದು. ಈ ಬಗ್ಗೆ ಸರ್ಕಾರದ ಗಮನ ಸೆಳೆಯಲಾಗುವುದು. ಜಿಲ್ಲೆಯ ವಿವಿಧ ಕಡೆಗಳಲ್ಲಿ ಖಾಸಗಿ ಬಡಾವಣೆ ನಿರ್ಮಾಣ ಸಂದರ್ಭದಲ್ಲಿ ಮಾಜಿ ಸೈನಿಕರಿಗೆ ನಿವೇಶನ ಮೀಸಲಿಡಲು ಸಂಬಂಧಪಟ್ಟವರ ಜೊತೆ ಚರ್ಚಿಸಲಾಗುವುದು ಎಂದು ಭರವಸೆ ನೀಡಿದರು.

ಜಾಗ ಒದಗಿಸಿ

ಮಾಜಿ ಸೈನಿಕರಿಗಾಗಿ ಜಿಲ್ಲಾ ಕೇಂದ್ರ ಮಡಿಕೇರಿ ಮತ್ತು ದಕ್ಷಿಣ ಕೊಡಗಿನ ಪೊನ್ನಂಪೇಟೆಯಲ್ಲಿ ಸಮುದಾಯ ಭವನ ನಿರ್ಮಾಣಕ್ಕೆ ಜಾಗ ಕಾಯ್ದಿರಿಸಬೇಕು. ಆಸ್ಪತ್ರೆ, ಕ್ಯಾಂಟೀನ್ ಮತ್ತಿತರ ಸೌಲಭ್ಯಕ್ಕೆ ಕನಿಷ್ಠ 20 ಸೆಂಟ್ ಜಾಗವನ್ನಾದರೂ ನೀಡುವಂತಾಗಬೇಕು. ಫೀಲ್ಡ್ ಮಾರ್ಷಲ್ ಕಾರ್ಯಪ್ಪ ಮತ್ತು ಜನರಲ್ ತಿಮ್ಮಯ್ಯ ಅವರ ಹುಟ್ಟು ಹಬ್ಬಕ್ಕೆ ಮಾಜಿ ಸೈನಿಕರನ್ನು ಆಹ್ವಾನಿಸಬೇಕು ಎಂದು ಸಲಹೆ ಮಾಡಿದರು.

ಜಿಲ್ಲೆಯ ಹಲವು ಕಡೆಗಳಲ್ಲಿ ಸರ್ಕಾರಿ ಭೂಮಿಯನ್ನು ಅತಿಕ್ರಮಣ ಮಾಡಿಕೊಂಡಿದ್ದು, ಇಂತಹ ಒತ್ತುವರಿ ಭೂಮಿಯನ್ನು ಗುರುತಿಸಿ ಸರ್ಕಾರದ ಸೌಲಭ್ಯಗಳು ಹಾಗೂ ಮಾಜಿ ಸೈನಿಕರಿಗೆ ಕನಿಷ್ಠವನ್ನಾದರೂ ಒದಗಿಸಬೇಕು ಎಂದು ಬಿ.ಎ.ಕಾರ್ಯಪ್ಪ ಅವರು ಹೇಳಿದರು.

ಶೇ.50ರಷ್ಟು ಮಂದಿಗೆ ಮನೆ ಇಲ್ಲ

ನಿವೃತ್ತ ಮೇಜರ್ ಚಂಗಪ್ಪ ಅವರು ಮಾತನಾಡಿ, ಮಾಜಿ ಸೈನಿಕರು ಅವರ ಊರಿನ ಬಳಿ ಒಂದೆರಡು ಎಕರೆಯಲ್ಲಿ ತೋಟ ಮಾಡಿಕೊಂಡು ಜೀವನ ಸಾಗಿಸುತ್ತಿದ್ದಾರೆ. ಇಂತಹವರಿಗೆ ಆದ್ಯತೆ ಮೇಲೆ ಆರ್ಟಿಸಿ ಮಾಡಿಕೊಡುವಂತಾಗಬೇಕು. ಶೇ.50 ರಷ್ಟು ಮಾಜಿ ಸೈನಿಕರಿಗೆ ಮತ್ತು ಅವರ ಅವಲಂಬಿತರಿಗೆ ಮನೆ ಇಲ್ಲ. ಹಾಗಾಗಿ ಅಂತಹವರನ್ನು ಗುರುತಿಸಿ ಕನಿಷ್ಠ ಮೂಲ ಸೌಲಭ್ಯ ನಿವೇಶನ/ ಮನೆ ನಿರ್ಮಿಸಿಕೊಡುವಂತಾಗಬೇಕು ಎಂದು ಚಂಗಪ್ಪ ಸಲಹೆ ಮಾಡಿದರು. ಮಾಜಿ ಸೈನಿಕ ವೀರೇಶ್ ಅವರು ಮಾತನಾಡಿ, ಕೆಲವು ಮಾಜಿ ಸೈನಿಕರು ಹಾಗೂ ಅವಲಂಬಿತ ಕುಟುಂಬಗಳು ಇಂದಿಗೂ ಸಹ ಬಾಡಿಗೆ ಮನೆಯಲ್ಲಿ ವಾಸ ಮಾಡುತ್ತಿದ್ದಾರೆ. ಇವರಿಗೆ ಆದಷ್ಟು ಆದ್ಯತೆ ಮೇಲೆ ನಿವೇಶನ ಒದಗಿಸಬೇಕು ಎಂದರು.

ಮಾಜಿ ಸೈನಿಕರೊಬ್ಬರು ಮಾತನಾಡಿ, ಮಾಜಿ ಸೈನಿಕರಾಗಿ ಕೆಲಸ ಮಾಡುತ್ತಿದ್ದ ಸಂದರ್ಭದಲ್ಲಿ ಕುಟುಂಬದವರೇ ನನಗೆ ಪಾಲು ನೀಡದೆ ಸತಾಯಿಸುತ್ತಿದ್ದು, ಈ ಸಂಬಂಧ ನನಗೆ ಪಾಲು ದೊರೆಯುವಂತಾಗಬೇಕು ಎಂದು ಕೋರಿದರು.

ಬಡ ಮಾಜಿ ಸೈನಿಕನಾಗಿ ಮೈಸೂರು, ಬೆಂಗಳೂರಿನಲ್ಲಿ ಸೆಕ್ಯೂರಿಟಿ ಕೆಲಸ ಮಾಡಿ ಜೀವನ ದೂಡುತ್ತಿದ್ದೇನೆ. ಪಿತ್ರಾರ್ಜಿತ ಆಸ್ತಿ ಸಂಬಂಧ ಸಹೋದರರನ್ನು ಕರೆಸಿ ಮಾತನಾಡು ವಂತಾಗಬೇಕು ಎಂದು ಜಿಲ್ಲಾಧಿಕಾರಿ ಅವರಲ್ಲಿ ಅವಲತ್ತುಕೊಂಡರು.

ಮಾಜಿ ಸೈನಿಕ ಐ.ಕೆ.ಮಂದಣ್ಣ ಅವರು ಮಾತನಾಡಿ, ಮಾಜಿ ಸೈನಿಕರ ಮತ್ತು ಅವಲಂಬಿತರ ಅದಾಲತನ್ನು ಕಾಲ ಕಾಲಕ್ಕೆ ನಡೆಸಬೇಕು. ಮಾಜಿ ಸೈನಿಕರಿಗಾಗಿ ದಕ್ಷಿಣ ಕೊಡಗಿನ ಪೊನ್ನಂಪೇಟೆಯಲ್ಲಿ ಸಮುದಾಯ ಭವನ ನಿರ್ಮಾಣ ಮಾಡಬೇಕು ಎಂದು ಕೋರಿದರು. ಈ ಸಂದರ್ಭ ಮಾತನಾಡಿದ ಜಿಲ್ಲಾಧಿಕಾರಿ, ಭಾರತ ಸರ್ಕಾರದಿಂದ ಏ. 15 ರವರೆಗೆ ಮನೆ ಮನೆ ಸಮೀಕ್ಷೆ ಕಾರ್ಯ ನಡೆಯಲಿದ್ದು, ಈ ಕಾರ್ಯದಲ್ಲಿ ಸ್ವಯಂ ಗಣತಿ ಮಾಡುವಂತಾಗಬೇಕು. ಏ.16 ರಿಂದ ಮನೆ ಮನೆ ಸಮೀಕ್ಷೆ ನಡೆಯಲಿದೆ ಎಂದರು.

ಅಪರ ಜಿಲ್ಲಾಧಿಕಾರಿ ಆರ್.ಐಶ್ವರ್ಯ ಅವರು ಮಾತನಾಡಿ, ಎಲ್ಲಾ ಮಾಜಿ ಸೈನಿಕರು ಸಮೀಕ್ಷಾ ಕಾರ್ಯದಲ್ಲಿ ತೊಡಗಿಸಿಕೊಂಡು ಸಮೀಕ್ಷೆ ಕಾರ್ಯದಲ್ಲಿ ಸ್ವಯಂ ಪ್ರೇರಣೆಯಿಂದ ಪಾಲ್ಗೊಳ್ಳುವಂತಾಗಬೇಕು ಎಂದು ಮನವಿ ಮಾಡಿದರು.

ಸೈನಿಕರ ಮತ್ತು ಅವಲಂಬಿತರ ಕುಂದುಕೊರತೆ ಸಭೆಯಲ್ಲಿ 50ಕ್ಕೂ ಹೆಚ್ಚು ಅರ್ಜಿಗಳು ಸಲ್ಲಿಕೆಯಾದವು. ಸೈನಿಕ ಕಲ್ಯಾಣ ಇಲಾಖೆಯ ಜಂಟಿ ನಿರ್ದೇಶಕ ಬಿ.ಆರ್.ಶೆಟ್ಟಿ, ತಹಶೀಲ್ದಾರರಾದ ಪ್ರವೀಣ್ ಕುಮಾರ್, ಕೃಷ್ಣಮೂರ್ತಿ, ಸಂಜನಾ, ಮಾಜಿ ಸೈನಿಕರು, ಇತರರು ಇದ್ದರು.

ಗೌರವದಿಂದ ನಡೆಸಿಕೊಳ್ಳಿ

ಸರ್ಕಾರಿ ಕಚೇರಿಗೆ ಬರುವ ಮಾಜಿ ಸೈನಿಕರನ್ನು ಗೌರವದಿಂದ ನಡೆಸಿಕೊಳ್ಳುವಂತಾಗಬೇಕು ಎಂದು ಜಿಲ್ಲಾಧಿಕಾರಿ ಇದೇ ಸಂದರ್ಭ ಅಧಿಕಾರಿಗಳಿಗೆ ಸಲಹೆ ಮಾಡಿದರು. ಮಾಜಿ ಸೈನಿಕರ ಜಿಲ್ಲಾ ಅಧ್ಯಕ್ಷ ಮೇಜರ್ ಜನರಲ್ (ನಿವೃತ್ತ) ಬಿ.ಎ.ಕಾರ್ಯಪ್ಪ ಅವರು ಮಾತನಾಡಿ, ಮಾಜಿ ಸೈನಿಕರು ಜಮ್ಮು ಮತ್ತು ಕಾಶ್ಮೀರದಂತಹ ಎತ್ತರ ಪ್ರದೇಶದಲ್ಲಿ ಕರ್ತವ್ಯ ನಿರ್ವಹಿಸಿ ಬಂದಿದ್ದಾರೆ. ಇಂತಹ ಮಾಜಿ ಸೈನಿಕರಿಗೆ ಕನಿಷ್ಠ ಮೂಲ ಸೌಲಭ್ಯ ಕಲ್ಪಿಸುವಂತಾಗಬೇಕು ಎಂದು ಮನವಿ ಮಾಡಿದರು.

ಕೆನರಾ ಕಾಲೇಜಿನಲ್ಲಿ ಎರಡು ದಿನಗಳ ವಿಜ್ಞಾನ–ತಂತ್ರಜ್ಞಾನ ರಾಷ್ಟ್ರೀಯ ಸಮ್ಮೇಳನ



ಮಂಗಳೂರು: ಮಂಗಳೂರಿನ ಕೆನರಾ ಕಾಲೇಜು (ಸ್ವಾಯತ್ತ) ಮೂಲ ವಿಜ್ಞಾನ ಹಾಗೂ ಕಂಪ್ಯೂಟರ್ ವಿಜ್ಞಾನ ಮತ್ತು ಅನ್ವಯಿಕೆಗಳ ವಿಭಾಗದ ವತಿಯಿಂದ ಆಂತರಿಕ ಗುಣಮಟ್ಟ ಭರವಸೆ ಕೋಶ ಮುಂದಾಳತ್ವದಲ್ಲಿ ಇಂಟರ್‌ಡಿಸಿಪ್ಲಿನರಿ ಅಡ್ವಾನ್ಸಸ್ ಇನ್ ಸೈನ್ಸ್ ಆ್ಯಂಡ್ ಟೆಕ್ನಾಲಜಿ ಎಂಬ ವಿಷಯದ ಬಗ್ಗೆ 2 ದಿನಗಳ ರಾಷ್ಟ್ರೀಯ ಸಮ್ಮೇಳನ ಸೋಮವಾರ ಉದ್ಘಾಟನೆಗೊಂಡಿತು.

ಸಮ್ಮೇಳನ ಉದ್ಘಾಟಿಸಿ ಮಾತನಾಡಿದ ಎಜೆ ಇನ್ಸ್ಟಿಟ್ಯೂಟ್ ಆಫ್ ಇಂಜಿನಿಯರಿಂಗ್ ಆ್ಯಂಡ್ ಟೆಕ್ನಾಲಜಿ ಡೀನ್ ಡಾ. ಪಿ. ಮಹಾಬಲೇಶ್ವರಪ್ಪ, ಇಂದಿನ ವಿಜ್ಞಾನ–ತಂತ್ರಜ್ಞಾನ ಯುಗದಲ್ಲಿ ವಿವಿಧ ಶಾಸ್ತ್ರಗಳ ಸಂಯೋಜನೆಯೇ ನವೀನ ಆವಿಷ್ಕಾರಗಳಿಗೆ ದಾರಿ ಮಾಡಿಕೊಡುತ್ತದೆ ಎಂದರು.

ಮುಖ್ಯ ಭಾಷಣಕಾರರಾಗಿದ್ದ ಇಸ್ರೋದ ನಿವೃತ್ತ ಹಿರಿಯ ವಿಜ್ಞಾನಿ ಸುಮನ್ ಆರ್. ವಾಲ್ಕೆ, ವಿಜ್ಞಾನ ಕ್ಷೇತ್ರದಲ್ಲಿ ಸಂಶೋಧನಾ ಮನೋಭಾವ ಮತ್ತು ತಾಂತ್ರಿಕ ಕೌಶಲಗಳ ಅಭಿವೃದ್ಧಿಯ ಅಗತ್ಯತೆ ಬಗ್ಗೆ ತಿಳಿಸಿದರು.

ಕೆನರಾ ಆಡಳಿತ ಮಂಡಳಿಯ ಗವರ್ನಿಂಗ್ ಕೌನ್ಸಿಲ್ ಸದಸ್ಯ ಡಿ. ವಿಕ್ರಂ ಪೈ ಅಧ್ಯಕ್ಷತೆ ವಹಿಸಿದ್ದರು. ಸಂಸ್ಥೆಯ ಸಂಚಾಲಕ ಸಿಎ ಎಂ. ಜಗನ್ನಾಥ್ ಕಾಮತ್, ಉಪಸ್ಥಿತರಿದ್ದರು. ನಂತರ ವಿವಿಧ ವಿಚಾರ ಗೋಷ್ಠಿಗಳು, ಸಂಶೋಧನಾ ಪ್ರಬಂಧಗಳ ಮಂಡನೆ ನಡೆಯಿತು.

ಪ್ರಾಂಶುಪಾಲರಾದ ಡಾ. ಪ್ರೇಮಲತಾ ವಿ. ಸ್ವಾಗತಿಸಿದರು. ವಿಜ್ಞಾನ ವಿಭಾಗದ ಸಹಪ್ರಾಧ್ಯಾಪಕಿ ಹಾಗೂ ಮುಖ್ಯಸ್ಥೆ ಡಾ. ಆಶಾಕಿರಣ ಪಕ್ಕಳ ಅತಿಥಿ ಪರಿಚಯ ಮಾಡಿದರು. ಸಹ ಪ್ರಾಧ್ಯಾಪಕಿ ಬಬಿತ ವಂದಿಸಿದರು. ಸಹ ಪ್ರಾಧ್ಯಾಪಕಿ ಪ್ರತಿಮಾ ಕಾರ್ಯಕ್ರಮ ನಿರೂಪಿಸಿದರು.

ಬೆಂದೂರ್‌ವೆಲ್ ಆತ್ಮಶಕ್ತಿ ಶಾಖೆಯಿಂದ ಆರೋಗ್ಯ ತಪಾಸಣೆ ಶಿಬಿರ, ದಂತ ಚಿಕಿತ್ಸೆ



ಮಂಗಳೂರು: ವಿಶ್ವ ಆರೋಗ್ಯ ದಿನಾಚರಣೆಪ್ರಯುಕ್ತಆತ್ಮಶಕ್ತಿವಿವಿಧೋದ್ದೇಶ ಸಹಕಾರಿ ಸಂಘ ಶಾಖೆಯ ಬೆಂದೂರ್‌ವೆಲ್ ವತಿಯಿಂದ ಜಪ್ಪಿನಮೊಗರು ಕಸಿಹಿತ್ಲುವಿನ ಕೆ.ವಿ.ಕೆ. ಮೈದಾನದಲ್ಲಿ ವೈದ್ಯಕೀಯ, ನೇತ್ರ ತಪಾಸಣಾ, ದಂತ ಚಿಕಿತ್ಸಾ ಶಿಬಿರ ಜರುಗಿತು.

ಕಾರ್ಮಿಕ ಇಲಾಖೆಯ ಕಾರ್ಮಿಕಾಽಕಾರಿ ವಿಲ್ಮ ತಾವ್ರೊ ಶಿಬಿರ ಉದ್ಘಾಟಿಸಿ ಮಾತನಾಡಿದರು. ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ಬಿಸಿ ಟ್ರಸ್ಟ್ ಸಿ.ಎಸ್.ಸಿ. ಮಂಗಳೂರು ಇದರ ನೋಡೆಲ್ ಅಽಕಾರಿ ಪ್ರಶಾಂತ್, ಕೇಂದ್ರ ಸರ್ಕಾರದ ಯೋಜನೆಗಳ ಬಗ್ಗೆ ಮಾಹಿತಿ ನೀಡಿದರು. ಲಯನ್ಸ್ ಕ್ಲಬ್ ಮಂಗಳೂರು ಕಲ್ಪವೃಕ್ಷ ಇದರ ಅಧ್ಯಕ್ಷ ಉಮೇಶ್ ಅಕಾರಿ, ಸಮುದಾಯ ದಂತ ಆರೋಗ್ಯ ವಿಭಾಗ, ಯೆನೆಪೋಯ ದಂತ ಕಾಲೇಜು ಮತ್ತು ಆಸ್ಪತ್ರೆಯ ಮುಖ್ಯಸ್ಥ ಡಾ. ರೇಖಾ ಪಿ. ಶೆಣೈ ಮಾತನಾಡಿದರು. ಆತ್ಮಶಕ್ತಿ ವಿವಿಧೋದ್ದೇಶ ಸಹಕಾರಿ ಸಂಘದ ಅಧ್ಯಕ್ಷ ಚಿತ್ತರಂಜನ್ ಬೋಳಾರ್ ಅಧ್ಯಕ್ಷತೆ ವಹಿಸಿದ್ದರು. ಆತ್ಮಶಕ್ತಿ ಸಂಘದ ಉಪಾಧ್ಯಕ್ಷ ನೇಮಿರಾಜ್ ಪಿ, ನಿರ್ದೇಶಕ ರಾಮನಾಥ್ ಸನಿಲ್, ಗೋಪಾಲ್ ಎಂ., ಮುಖ್ಯ ಕಾರ್ಯ ನಿರ್ವಹಣಾಧಿಕಾರಿ ಸೌಮ್ಯ ವಿಜಯ್, ಲಯನ್ಸ್ ಕ್ಲಬ್ ಮಂಗಳೂರು ಕಲ್ಪವೃಕ್ಷ ಇದರ ಸ್ಥಾಪಕಾಧ್ಯಕ್ಷ ಲಯನ್ ರಾಜೇಶ್, ದಕ್ಷಿಣ ಮಂಡಲದ ಅಧ್ಯಕ್ಷ ರಮೇಶ್ ಕಂಡೆಟ್ಟು, ಶಕ್ತಿ ಕೇಂದ್ರದ ಪ್ರಧಾನ ಕಾರ್ಯದರ್ಶಿ ರಾಮ್ ಪ್ರಸಾದ್, ಮಂಗಳಾ ಆಸ್ಪತ್ರೆ ಮತ್ತು ಕಾಲೇಜು ಕದ್ರಿ ಮಂಗಳೂರು ಇದರ ಕಣ್ಣಿನ ತಜ್ಞರಾದ ಸುಷ್ಮಾ, ಸಾರ್ವಜನಿಕ ಸಂಪರ್ಕ ಅಽಕಾರಿ ವಿಜೇಶ್, ಯೆನೆಪೋಯ ದಂತ ಕಾಲೇಜಿನ ಸಾರ್ವಜನಿಕ ಸಂಪರ್ಕ ಅಧಿಕಾರಿ ಭರತ್ ಕುಮಾರ್ ಮತ್ತಿತ್ತರರು ಉಪಸ್ಥಿತರಿದ್ದರು.

ವಿಶ್ವ ಆರೋಗ್ಯ ದಿನದ ಅಂಗವಾಗಿ ಮಾನಸಿಕ ಆರೋಗ್ಯ ಜಾಗೃತಿ ಕಾರ್ಯಕ್ರಮ



ಬೆಳ್ತಂಗಡಿ: ವಿಶ್ವ ಆರೋಗ್ಯ ದಿನದ ಅಂಗವಾಗಿ ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಬೆಳ್ತಂಗಡಿ ಇಲ್ಲಿನ ಐಕ್ಯೂಎಸಿ, ಯುವ ರೆಡ್ ಕ್ರಾಸ್ ಘಟಕ, ರಾಷ್ಟ್ರೀಯ ಸೇವಾ ಯೋಜನಾ ಘಟಕ, ರೊವರ್ಸ್–ರೇಂಜರ್ಸ್ ಘಟಕಗಳ ಸಹಯೋಗದಲ್ಲಿ ಮಾನಸಿಕ ಆರೋಗ್ಯ ಜಾಗೃತಿ ಕಾರ್ಯಕ್ರಮವನ್ನು ಆನ್ ಲೈನ್‌ನಲ್ಲಿ ಕಾಲೇಜು ಶಿಕ್ಷಣ ಇಲಾಖೆ ಸಂಯುಕ್ತಾಶ್ರಯದಲ್ಲಿ ಆಯೋಜಿಸಲಾಯಿತು.

ಕಾರ್ಯಕ್ರಮದಲ್ಲಿ ಖ್ಯಾತ ಮಾನಸಿಕ ತಜ್ಞರಾದ ಡಾ. ಸಿ.ಆರ್. ಚಂದ್ರಶೇಖರ್ ರವರು ಸಂಪನ್ಮೂಲ ವ್ಯಕ್ತಿಗಳಾಗಿದ್ದು, ವಿದ್ಯಾರ್ಥಿಗಳು ಮಾನಸಿಕ ಖಿನ್ನತೆಯಿಂದ ಆತ್ಮಹತ್ಯೆಗೆ ಒಳಗಾಗುತ್ತಿರುವುದು ಅತ್ಯಂತ ನೋವಿನ ಸಂಗತಿ ಆಗಿದೆ. ಹಾಗಾಗಿ ಅಧ್ಯಾಪಕರು ವಿದ್ಯಾರ್ಥಿಗಳಿಗೆ ಕೌನ್ಸಿಲಿಂಗ್ ಮಾಡಬೇಕು ಅವರೊಂದಿಗೆ ಆತ್ಮೀಯವಾಗಿ ಮಾತಾನಾಡಿಸುವ ಮೂಲಕ ಖಿನ್ನತೆಯಿಂದ ಬಳಲುತ್ತಿರು ವಿದ್ಯಾರ್ಥಿಗಳನ್ನು ಅದರಿಂದ ಹೊರಗೆ ತರಬೇಕು. ಸಮಾಜದಲ್ಲಿ ಪ್ರಸ್ತುತ ವಿದ್ಯಾಮಾನದಲ್ಲಿ ನಡೆಯುತ್ತಿರುವ ಜಾತಿ ವ್ಯವಸ್ಥೆ, ಭಷ್ಟಾಚಾರ, ಮೇಲು ಕೀಳು, ವ್ಯವಸ್ಥೆಗಳು ವಿದ್ಯಾರ್ಥಿಗಳಲ್ಲಿ ಖಿನ್ನತೆಯನ್ನು ಉಂಟು ಮಾಡುತ್ತಿದೆ ಎಂದು ತಿಳಿಸಿದರು.

ಕಾರ್ಯಕ್ರಮದಲ್ಲಿ ಕಾಲೇಜಿನ ಪ್ರಾಚಾರ್ಯ ಪ್ರೊ. ಸುರೇಶ್ ವಿ., ರಾಷ್ಟ್ರೀಯ ಸೇವಾ ಯೋಜನಾ ಅಧಿಕಾರಿಗಳಾದ ಪ್ರೊ. ರೊನಾಲ್ಡ್ ಪ್ರವೀಣ್ ಕೊರಾಯ, ಯುವ ರೆಡ್ ಕ್ರಾಸ್ ಅಧಿಕಾರಿ ಹಾಗೂ ರೊವರ್ ಸ್ಕೌಟ್ ಲೀಡರ್ ಡಾ.ರವಿ ಎಂ.ಎನ್., ಕಾರ್ಯಕ್ರಮಸಂಯೋಜಕ ಡಾ. ದಿವ್ಯಪ್ರಭು ಮತ್ತು ಕಾಲೇಜಿನ ಅಧ್ಯಾಪಕರು ಮತ್ತು ವಿದ್ಯಾರ್ಥಿಗಳು ಭಾಗವಹಿಸಿದ್ದರು.

ಆರು ದಶಕಗಳಿಗೂ ಮಿಕ್ಕಿ ಸಂಸ್ಕಾರಯುತ ಶಿಕ್ಷಣ ನೀಡುತ್ತಿರುವ ಪುತ್ತೂರಿನ ವಿವೇಕಾನಂದ ಪ. ಪೂ. ಕಾಲೇಜ್

ಪುತ್ತೂರು: ಆಸುಪಾಸಿನ ಗ್ರಾಮೀಣ ಮತ್ತು ಹಿಂದುಳಿದ ತಾಲೂಕುಗಳ ಪ್ರತಿಯೊಬ್ಬ ವಿದ್ಯಾರ್ಥಿಯ ಸರ್ವತೋಮುಖ ಬೆಳವಣಿಗೆಗೆ ಪೂರಕವಾದ ಶಿಕ್ಷಣವನ್ನು ನೀಡುವ ಉದ್ದೇಶದಿಂದ 1915ರಲ್ಲಿ ಹುಟ್ಟಿಕೊಂಡ ಸಂಸ್ಥೆ ಪುತ್ತೂರು ಎಜ್ಯುಕೇಶನ್ ಸೊಸೈಟಿ. 2009ರಲ್ಲಿ 'ವಿವೇಕಾನಂದ ವಿದ್ಯಾವರ್ಧಕ ಸಂಘ' ಎಂದು ಮರುನಾಮಕರಣಗೊಂಡು ವಿಶಾಲವಾಗಿ ಮತ್ತು ಸದೃಢವಾಗಿ ಪುತ್ತೂರಿನಲ್ಲಿ ತಲೆಯೆತ್ತಿ ನಿಂತಿದೆ. 1916ರಿಂದ ಪ್ರಾರಂಭವಾದ ಈ ಸಂಘವು ಕಾಲಕ್ಕೆ ತಕ್ಕಂತೆ ಸಮಾಜಕ್ಕೆ ಬೇಕಾದ ಶೈಕ್ಷಣಿಕ ಅಗತ್ಯತೆಯನ್ನು ಪೂರೈಸುತ್ತಾ ಬಂದಿದೆ. ಈ ಹಿನ್ನೆಲೆಯಲ್ಲಿ ಗ್ರಾಮೀಣ ಪ್ರದೇಶದ ಜನತೆಯ ಶೈಕ್ಷಣಿಕ ಕನಸುಗಳನ್ನು ಸಾಕಾರಗೊಳಿಸುವ ಉದ್ದೇಶದಿಂದ 1965ರಲ್ಲಿ ಪುತ್ತೂರಿನ ಜನತೆಯ ಪ್ರೋತ್ಸಾಹದಿಂದ ರೂಪುಗೊಂಡ ಪುತ್ತೂರು ವಿವೇಕಾನಂದ ವಿದ್ಯಾವರ್ಧಕ ಸಂಘದ ಮೊದಲ ಸಂಸ್ಥೆ ವಿವೇಕಾನಂದ ಪದವಿ ಪೂರ್ವ ಕಾಲೇಜ್. 60 ಸಂವತ್ಸರಗಳನ್ನು ಅತ್ಯಂತ ಯಶಸ್ವಿಯಾಗಿ ಪೂರೈಸಿರುವ ಸಂಸ್ಥೆಯು ಇಂದು, ಮೌಲ್ಯಾಧಾರಿತ ಕಲಿಕೆ ಮತ್ತು ಉತ್ತಮ ಫಲಿತಾಂಶಗಳನ್ನು ನೀಡುವ ಪ್ರತಿಷ್ಠಿತ ಸಂಸ್ಥೆಗಳಲ್ಲೊಂದಾಗಿ ನಾಡಿನಾದ್ಯಂತ ಗುರುತಿಸಿಕೊಂಡಿದೆ.

ಉತ್ತಮ ಫಲಿತಾಂಶ

2024–25ನೇ ಶೈಕ್ಷಣಿಕ ವರ್ಷದ ದ್ವಿತೀಯ ಪಿಯುಸಿ ವಾರ್ಷಿಕ ಪರೀಕ್ಷೆಯಲ್ಲಿ 362 ವಿದ್ಯಾರ್ಥಿಗಳು ವಿಶಿಷ್ಟ ಶ್ರೇಣಿಯಲ್ಲಿ ಹಾಗೂ 391 ವಿದ್ಯಾರ್ಥಿಗಳು ಪ್ರಥಮ ಶ್ರೇಣಿಯಲ್ಲಿ ತೇರ್ಗಡೆ ಹೊಂದಿದ್ದಾರೆ. ವಾಣಿಜ್ಯ ವಿಭಾಗದಲ್ಲಿ ಅನುಶ್ರೀ 597 ಅಂಕಗಳೊಂದಿಗೆ ರಾಜ್ಯಕ್ಕೆ 3ನೇ, ಪುತ್ತೂರು ತಾಲೂಕಿಗೆ ಪ್ರಥಮ ಸ್ಥಾನವನ್ನು ಗಳಿಸಿದ್ದಾರೆ. ಕಲಾ ವಿಭಾಗದಲ್ಲಿ 593 ಅಂಕಗಳನ್ನು ಗಳಿಸುವ ಮೂಲಕ ಯುಕ್ತಶ್ರೀ ಪಿ. ರಾಜ್ಯಕ್ಕೆ 5ನೇ, ದ.ಕ. ಜಿಲ್ಲೆಗೆ ಪ್ರಥಮ ಸ್ಥಾನ ಪಡೆದಿದ್ದಾರೆ. ವಿಜ್ಞಾನ ವಿಭಾಗದಲ್ಲಿ ಅನಘ ಡಿ. ಶೆಟ್ಟಿ 597 ಅಂಕಗಳನ್ನು ಪಡೆಯುವುದರ ಮೂಲಕ ರಾಜ್ಯಕ್ಕೆ 4ನೇ, ತಾಲೂಕಿಗೆ ಪ್ರಥಮ ಸ್ಥಾನ ಗಳಿಸಿದ್ದಾರೆ. ವೈದ್ಯಕೀಯ ಶಿಕ್ಷಣಕ್ಕಾಗಿ ಕೇಂದ್ರ ಸರಕಾರ ನಡೆಸಿದ 2025ರ ನೀಟ್ ಪ್ರವೇಶ ಪರೀಕ್ಷೆಯಲ್ಲಿ ಸಾಯಿ ಮಹೇಶ್‌ಕೆ ಎಸ್. 720ಕ್ಕೆ 523 ಅಂಕಗಳೊಂದಿಗೆ ಅಖಿಲ ಭಾರತ ಮಟ್ಟದಲ್ಲಿ ಕೆಟಗರಿ ವಿಭಾಗದಲ್ಲಿ 13568ನೇ ರಾಂಕ್ ಗಳಿಸಿದ್ದಾರೆ. ಅದೇ ರೀತಿ ಐಐಟಿ ಹಾಗೂ ಎನ್‌ಐಟಿಗಳಿಗೆ ಪ್ರವೇಶ ಕಲ್ಪಿಸುವ 2025ನೇ ಸಾಲಿನ ಜೆಇಇ ಮೈನ್ಸ್ ಪರೀಕ್ಷೆಯಲ್ಲಿ ಸಹನ್ ಕೆ.ಎಲ್. 99.27 ಪರ್ಸಂಟೈಲ್ ಅಂಕ ಗಳಿಸುವುದರ ಮೂಲಕ ಅಖಿಲ ಭಾರತ ಮಟ್ಟದಲ್ಲಿ 2545ನೇ ರ್‍ಯಾಂಕ್ ಪಡೆದು ಅತ್ಯುತ್ತಮ ಸಾಧನೆಯನ್ನು ಮಾಡಿದ್ದಾರೆ. ಕರ್ನಾಟಕ ಪರೀಕ್ಷಾ ಪ್ರಾಧಿಕಾರ ನಡೆಸಿದ ಸಿಇಟಿ–2025ನೇ ಸಾಲಿನಲ್ಲಿ ಸಹನ್ ಕೆ.ಎಲ್. ಇಂಜಿನಿಯರಿಂಗ್‌ನಲ್ಲಿ 542ನೇ ರ್‍ಯಾಂಕ್ ಗಳಿಸಿ ತಾಲೂಕಿಗೆ ಪ್ರಥಮ ಸ್ಥಾನ ಪಡೆದಿದ್ದಾರೆ.



ವಿದ್ಯಾರ್ಥಿಗಳ ಅಚ್ಚುಮೆಚ್ಚಿನ ಆಯ್ಕೆ

ಪ್ರಸ್ತುತ ಸಾಲಿನಲ್ಲಿ ಸುಮಾರು 1600 ವಿದ್ಯಾರ್ಥಿಗಳಿಗೆ ವಿದ್ಯಾದಾನ ಮಾಡುತ್ತಿರುವ ಈ ಶಿಕ್ಷಣ ಸಂಸ್ಥೆ ಎಸ್.ಎಸ್.ಎಲ್.ಸಿ. ಅಥವಾ ತತ್ಸಮಾನ ಪರೀಕ್ಷೆಯಲ್ಲಿ ಶೇ.95ಕ್ಕಿಂತ ಹೆಚ್ಚಿನ ಅಂಕಗಳನ್ನು ಗಳಿಸುವ ವಿದ್ಯಾರ್ಥಿಗಳಿಗೆ ವಿಶೇಷ ಶುಲ್ಕ ವಿನಾಯಿತಿ ಹಾಗೂ ಶೇ.98ಕ್ಕಿಂತ ಹೆಚ್ಚು ಅಂಕಗಳನ್ನು ಗಳಿಸುವ ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಉಚಿತ ಶಿಕ್ಷಣವನ್ನು ನೀಡುತ್ತಾ ಬಂದಿದೆ.

ಸ್ಪರ್ಧಾತ್ಮಕಪರೀಕ್ಷಾ ತರಬೇತಿ

ಸ್ಪರ್ಧಾತ್ಮಕ ಪರೀಕ್ಷಾ ಘಟಕದ ವತಿಯಿಂದ ಸಿ.ಇ.ಟಿ, ನೀಟ್, ಜೆ.ಇ.ಇ. ಮತ್ತು ಇತರ ರಾಷ್ಟ್ರ ಮಟ್ಟದ ವೈದ್ಯಕೀಯ, ಇಂಜಿನಿಯರಿಂಗ್ ಪ್ರವೇಶ ಪರೀಕ್ಷೆಗಳಿಗೆ ಬೇಕಾದ ಮಾಹಿತಿ ಮತ್ತು ನುರಿತ ಅಧ್ಯಾಪಕರಿಂದ ವಿವಿಧ ರೀತಿಯ ತರಬೇತಿಗಳ ಸೌಲಭ್ಯಗಳಿದ್ದು ಇದಕ್ಕಾಗಿ ಅಡ್ವಾನ್ಸ್ಡ್ ಬ್ಯಾಚ್, ಇಂಟರ್ ಮೀಡಿಯೇಟ್ ಬ್ಯಾಚ್ ಹಾಗೂ ಬೇಸಿಕ್ ಬ್ಯಾಚ್ ಎಂಬ 3 ಪ್ರತ್ಯೇಕ ಇಂಟಿಗ್ರೇಟೆಡ್ ಬಾಚ್‌ಗಳು ಲಭ್ಯವಿದೆ.

ಕಾಲೇಜು ವಾಹನ ಸೌಲಭ್ಯ

ವಿದ್ಯಾರ್ಥಿಗಳ ಸುಗಮ ಸಂಚಾರಕ್ಕಾಗಿ ಪೆರ್ಲ, ಕಾಟುಕುಕ್ಕೆ–ಪಾಣಾಜೆ, ಕಾವು ಹಾಗೂ ಕಲ್ಲೇರಿ–ಉಪ್ಪಿನಂಗಡಿ ಭಾಗದಿಂದ 4 ಕಾಲೇಜ್ ವಾಹನಗಳ ಸೌಲಭ್ಯವಿದೆ.

ಹೆಚ್ಚಿನ ಮಾಹಿತಿಗಳಿಗಾಗಿ ಕಾಲೇಜಿನ ಜಾಲತಾಣ ಅಥವಾ ಮೊಬೈಲ್ ಸಂಖ್ಯೆ: 8073700468, 8105072386 ಸಂಪರ್ಕಿಸಬಹುದು.

ವಿಶೇಷತೆಗಳು

ವಿಶಾಲವಾದ ಕ್ರೀಡಾಂಗಣವನ್ನು ಹೊಂದಿರುವ ಕಾಲೇಜ್ ತನ್ನ ಆರಂಭದ ದಿನಗಳಿಂದಲೂ ಕ್ರೀಡೆಗೆ ಹೆಚ್ಚಿನ ಪ್ರೋತ್ಸಾಹವನ್ನು ನೀಡುತ್ತಾ ಬಂದಿದ್ದು, ಹಲವಾರು ರಾಷ್ಟ್ರ ಮತ್ತು ಅಂತಾರಾಷ್ಟ್ರೀಯ ಮಟ್ಟದ ಕ್ರೀಡಾಪಟುಗಳನ್ನು ನೀಡಿದ ಕೀರ್ತಿಗೆ ಭಾಜನವಾಗಿದೆ. ದೂರದ ವಿದ್ಯಾರ್ಥಿ, ವಿದ್ಯಾರ್ಥಿನಿಯರಿಗಾಗಿ ಕಾಲೇಜಿನ ಆವರಣದಲ್ಲೇ ಪ್ರತ್ಯೇಕವಾದ ಹಾಸ್ಟೆಲ್ ವ್ಯವಸ್ಥೆಯನ್ನು ಕಲ್ಪಿಸಲಾಗಿದೆ. ದೇಶ ಪ್ರೇಮವನ್ನು ಬೆಳೆಸುವುದರೊಂದಿಗೆ ಸೈನಿಕ ಶಿಕ್ಷಣವನ್ನು ಪಡೆಯುವುದಕ್ಕಾಗಿ ಎನ್.ಸಿ.ಸಿ. ವಿಭಾಗ ಸಕ್ರಿಯವಾಗಿ ಕಾರ್ಯಾಚರಿಸುತ್ತಿದೆ.

ವಿಶೇಷ ಸರ್ಟಿಫಿಕೇಟ್ ಕೋರ್ಸ್

ವಾಣಿಜ್ಯ ವಿಭಾಗದ ವಿದ್ಯಾರ್ಥಿಗಳಿಗೆ ಸಿ. ಎ. ಫೌಂಡೇಶನ್ ಹಾಗೂ ಸಿಎಸ್‌ಇಇಟಿ ತರಬೇತಿ ವ್ಯವಸ್ಥೆಯಿದೆ. ಇಂತಹ ಪರೀಕ್ಷೆಗಳಿಗೆ ವಿದ್ಯಾರ್ಥಿಗಳನ್ನು ಅಣಿಗೊಳಿಸುವ ನಿಟ್ಟಿನಲ್ಲಿ ಸಂಸ್ಥೆಯು ಹೆಚ್ಚಿನ ಶ್ರಮ ವಹಿಸುತ್ತಿದೆ. ಕಾಲೇಜಿನ ವಾಣಿಜ್ಯ ವಿಭಾಗದಲ್ಲಿ ವಿಶೇಷವಾಗಿ ಸರ್ಟಿಫಿಕೇಟ್ ಕೋರ್ಸ್‌ಗಳನ್ನು ಪರಿಚಯಿಸಿದೆ. ಪ.ಪೂ. ಶಿಕ್ಷಣ ಇತಿಹಾಸದಲ್ಲಿಯೇ ಪ್ರಥಮ ಬಾರಿಗೆ ಈ ವಿನೂತನ ಪ್ರಯೋಗವನ್ನು ವಿವೇಕಾನಂದ ಕಾಲೇಜ್ ಆರಂಭಿಸುತ್ತಿದ್ದು, ವಿದ್ಯಾರ್ಥಿಗಳಿಗೆ ವೃತ್ತಿಪರ ಕೌಶಲ್ಯಗಳನ್ನು ಪರಿಚಯಿಸಲು ಹಾಗೂ ವಾಣಿಜ್ಯ ವಿದ್ಯಾರ್ಥಿಗಳು ತಿಳಿದುಕೊಳ್ಳಲೇಬೇಕಾದ ಶೇರು ವಹಿವಾಟು, ಟ್ಯಾಲಿ, ಡಿಜಿಟಲ್ ಬ್ಯಾಂಕಿಂಗ್ ವ್ಯವಹಾರ ಮುಂತಾದ ವಿಷಯಗಳ ಬಗ್ಗೆ ವ್ಯಾವಹಾರಿಕ ಹಾಗೂ ಪ್ರಾಯೋಗಿಕ ಜ್ಞಾನ ನೀಡಲು ಈ ಕೋರ್ಸ್ ಸಹಕಾರಿಯಾಗಲಿದೆ.

ಕಿರುಸುದ್ದಿ



ಬಾಂಗ್ಲಾ ಕ್ರಿಕೆಟ್ ಸಂಸ್ಥೆಗೆ ತಮಿಮ್ ಇಕ್ಬಾಲ್ ಅಧ್ಯಕ್ಷ

ಢಾಕಾ: ಮಾಜಿ ಕ್ರಿಕೆಟಿಗ ತಮಿಮ್ ಇಕ್ಬಾಲ್ ಅವರು ಬಾಂಗ್ಲಾದೇಶ ಕ್ರಿಕೆಟ್ ಸಂಸ್ಥೆಯ ಹೊಸ ಅಧ್ಯಕ್ಷರಾಗಿ ನೇಮಕಗೊಂಡಿದ್ದಾರೆ. ಬದಲಾಗಿರುವ ಸರ್ಕಾರ ಮಂಗಳವಾರದಂದು ಹಳೆಯ ಅಧ್ಯಕ್ಷ ಅಮಿನುಲ್ ಇಸ್ಲಾಮ್ ಅವರನ್ನು ಸರ್ಕಾರ ಅಮಾನತುಗೊಳಿಸಿದ ನಂತರ ಅವರ ಜಾಗಕ್ಕೆ ನೇಮಕ ಮಾಡಲಾಗಿದೆ. ಅಲ್ಲಿನ ರಾಷ್ಟ್ರೀಯ ಕ್ರೀಡಾ ಇಲಾಖೆ ಈ ಬಗ್ಗೆ ಘೋಷಣೆ ಮಾಡಿದೆ.

ಟಿ20 ವಿಶ್ವಕಪ್ ಪಂದ್ಯಾವಳಿಯಿಂದ ಹೊರ ಬಿದ್ದ ವಿಚಾರಕ್ಕೆ ಸಂಬಂಧಿಸಿದಂತೆ ಹಳೆಯ ಆಡಳಿತ ಮಂಡಳಿಯನ್ನು ತೆಗೆದುಹಾಕಲಾಗಿದೆ ಎಂದು ಹೇಳಲಾಗುತ್ತಿದೆ. ಹೀಗಿರುವಾಗ ಹೊಸ ಅಧ್ಯಕ್ಷ ನಾನು ಬಾಂಗ್ಲಾ ಕ್ರಿಕೆಟ್ ಏಳಿಗಾಗಿ ಶತಪ್ರಯತ್ನ ನಡೆಸುತ್ತೇನೆ ಎಂದು ಹೇಳಿದ್ದಾರೆ. ಬಿಸಿಸಿಐನೊಂದಿಗೆ ಎಲ್ಲಾ ಸಮಸ್ಯೆ ಬಗೆಹರಿಸಿಕೊಳ್ಳಲು ಬಾಂಗ್ಲಾದೇಶ ಕ್ರಿಕೆಟ್ ಸಂಸ್ಥೆ ಬಿಸಿಸಿಐಗೆ ಪತ್ರ ಬರೆದಿದ್ದು ಇಕ್ಬಾಲ್ ಅವರ ನೇತೃತ್ವದಲ್ಲೇ ಬಿಸಿಬಿ, ಬಿಸಿಸಿಐನೊಂದಿಗೆ ಮಾತುಕತೆ ನಡೆಸಲಿದೆ ಎನ್ನಲಾಗುತ್ತಿದೆ.

ಶೂಟಿಂಗ್: ಭಾರತಕೆ ನಿರಾಶೆಯ ದಿನ

ಹೊಸದಿಲ್ಲಿ: ಐಎಸ್ಎಸ್ಎಫ್ ಪಿಸ್ತೂಲ್/ರೈಫಲ್ ವಿಶ್ವಕಪ್‌ನಲ್ಲಿ ಪುರುಷರ 10 ಮೀಟರ್ ಏರ್ ಪಿಸ್ತೂಲ್ ಸ್ಪರ್ಧೆಯಲ್ಲಿ ಭಾರತೀಯ ಶೂಟರ್‌ಗಳಿಗೆ ನಿರಾಶಾದಾಯಕ ದಿನ ಎದುರಾಯಿತು. ಮಿಶ್ರ ತಂಡದಲ್ಲಿ ವಿಶ್ವ ದಾಖಲೆ ಸಾಧಿಸಿ ಚಿನ್ನ ಗೆದ್ದ ನಂತರದ ದಿನವೇ ಮೂವರು ಭಾರತೀಯರು ಫೈನಲ್‌ಗೆ ಅರ್ಹತೆ ಪಡೆಯಲು ವಿಫಲರಾದರು.

ವಿಶ್ವ ದಾಖಲೆ ಸಾಧಿಸಿದ ಮುಖೇಶ್ ನೆಲಾವಲ್ಲಿ 579 ಅಂಕಗಳೊಂದಿಗೆ 14ನೇ ಸ್ಥಾನದಲ್ಲಿ ಅಂತ್ಯಗೊಳಿಸಿ, ಅಂತಿಮ ಎಂಟು ಮಂದಿಯ ಪಟ್ಟಿಗೆ ಸೇರುವಲ್ಲಿ ವಿಫಲರಾದರು. ಆರಂಭ ಮತ್ತು ಅಂತಿಮ ಸರಣಿಗಳಲ್ಲಿ 94 ಹಾಗೂ 95 ಅಂಕಗಳನ್ನು ಗಳಿಸಿದ್ದು ಅವರಿಗೆ ಹಿನ್ನಡೆಯಾಯಿತು. ಮಧ್ಯದ ಸರಣಿಗಳಲ್ಲಿ 98, 98, 97, 97 ಅಂಕಗಳೊಂದಿಗೆ ಉತ್ತಮ ಪ್ರದರ್ಶನ ನೀಡಿದರೂ, ಅದು ಸಾಕಾಗಲಿಲ್ಲ. ಚೀನಾದ ವಿಶ್ವ ನಂ.1 ಹೂ ಕೈ ಕೂಡ 578 ಅಂಕಗಳೊಂದಿಗೆ 15ನೇ ಸ್ಥಾನದಲ್ಲೇ ತೃಪ್ತಿಪಟ್ಟಿದ್ದು, ದಿನದ ಸ್ಪರ್ಧೆ ಕಠಿಣವಾಗಿತ್ತು. ಪ್ಯಾರಿಸ್ ಒಲಿಂಪಿಕ್ ಚಿನ್ನ ಪದಕ ವಿಜೇತ ಯು ಷಿಯೆ 588 ಅಂಕಗಳೊಂದಿಗೆ ಅರ್ಹತಾ ಸುತ್ತಿನಲ್ಲಿ ಅಗ್ರಸ್ಥಾನ ಪಡೆದು ಫೈನಲ್‌ಗೆ ಪ್ರವೇಶಿಸಿದರು. ಇನ್ನೊಬ್ಬ ಭಾರತೀಯ ಉಜ್ವಲ್ ಮಲಿಕ್ 577 ಅಂಕಗಳೊಂದಿಗೆ 22ನೇ ಸ್ಥಾನ ಪಡೆದರೆ, ಪ್ರಮೋದ್ 574 ಅಂಕಗಳೊಂದಿಗೆ 39ನೇ ಸ್ಥಾನದಲ್ಲಿ ಅಂತ್ಯಗೊಳಿಸಿದರು. ಒಟ್ಟು 86 ಸ್ಪರ್ಧಿಗಳ ನಡುವೆ ನಡೆದ ಈ ಕಠಿಣ ಸ್ಪರ್ಧೆಯಲ್ಲಿ ಭಾರತೀಯರಿಗೆ ನಿರೀಕ್ಷಿತ ಫಲಿತಾಂಶ ದೊರೆಯಲಿಲ್ಲ.

ಮಿಂಚಿದ ಗಿಲ್, ಬಟ್ಲರ್ | ವಾಷಿಂಗ್ಟನ್ ಅರ್ಧ ಶತಕ

ದಿಲ್ಲಿಗೆ ಕಠಿಣ ಗುರಿ

ಹೊಸದಿಲ್ಲಿ: ಬಟ್ಲರ್, ಗಿಲ್ ಹಾಗೂ ವಾಷಿಂಗ್ಟನ್ ಸುಂದರ್ ಅವರ ಸ್ಫೋಟಕ ಬ್ಯಾಟಿಂಗ್ ನೆರವಿನಿಂದ ದೊಡ್ಡ ಮೊತ್ತ ಕಲೆ ಹಾಕಿರುವ ಗುಜರಾತ್ ಟೈಟಾನ್ಸ್ ತಂಡವು ಇಂಡಿಯನ್ ಪ್ರೀಮಿಯರ್ ಲೀಗ್ ಪಂದ್ಯಾವಳಿಯ 14ನೇ ಪಂದ್ಯದಲ್ಲಿ ದಿಲ್ಲಿ ಕ್ಯಾಪಿಟಲ್ಸ್‌ಗೆ ಕಠಿಣ ಗುರಿ ನೀಡಿತು.

ಆರಂಭಿಕ ಓವರ್‌ಗಳಲ್ಲಿ ಬಟ್ಲರ್ ಸ್ಫೋಟಕ ಬ್ಯಾಟಿಂಗ್ ಮಾಡಿ ಮಿಂಚಿದರೆ, ಮಧ್ಯಮ ಓವರ್‌ಗಳಲ್ಲಿ ಗಿಲ್ ಮತ್ತು ಸುಂದರ್ ಕಮಾಲ್ ನಡೆಯಿತು. ಎರಡು ಪಂದ್ಯಗಳಲ್ಲಿ ಸತತ ಸೋಲು ಕಂಡಿರುವ ಗುಜರಾತ್ ತನ್ನ ಪಂದ್ಯದಲ್ಲಿ ಬರೋಬ್ಬರಿ 211 ರನ್ ಗುರಿ ನೀಡಿತು. ಗಿಲ್, ಬಟ್ಲರ್ ಮತ್ತು ಸುಂದರ್ ಭರ್ಜರಿ ಬ್ಯಾಟಿಂಗ್ ಮಾಡಿ ರೂವಾರಿ ಅನ್ನಿಸಿಕೊಂಡರು. ಗುಜರಾತ್ 4 ಮಾತ್ರ ವಿಕೆಟ್ ಕಳಸಿತು. ಲುಂಗಿ ಎನ್ ಗಿಡಿ 4 ಓವರ್‌ಗಳಲ್ಲಿ 24 ರನ್ ಮಾತ್ರ ನೀಡಿ 1 ವಿಕೆಟ್ ಪಡೆದುಕೊಂಡರು.

ಬಟ್ಲರ್ ಅಬ್ಬರ: ಮೊದಲು ಬ್ಯಾಟಿಂಗ್ ಮಾಡಿದ ಗುಜರಾತ್‌ಗೆ ಭರ್ಜರಿ ಆರಂಭ ಸಿಕ್ಕಿತು. ಸ್ಫೋಟಕ ಬ್ಯಾಟರ್ ಸಾಯಿ ಸುದರ್ಶನ್ ಮೊದಲನೇ ಎಸೆತದಲ್ಲೇ ಬೌಂಡರಿಯಿಂದ ಪಂದ್ಯವನ್ನು ಶುರು ಮಾಡಿದರು. ಆದಾಗ್ಯೂ ಅವರು 12 ರನ್‌ಗೆ ವಿಕೆಟ್ ಒಪ್ಪಿಸಿದರು. ಮೂರನೇ ಕ್ರಮಾಂಕದಲ್ಲಿ ಬಂದ ಬಟ್ಲರ್ ತಮ್ಮ ಅಸಲು ಲಯಕ್ಕೆ ಬಂದರು. ಮೊದಲನೇ ಓವರ್‌ನಿಂದಲೂ ದಂಡಿಸಲಾರಂಭಿಸಿದ ಅವರು, ಬಂದ ಎಸೆತಗಳನ್ನೆಲ್ಲಾ ಬೌಂಡರಿಯಾಚೆಗಟ್ಟಿ ನಿರ್ಧಾರ ಸ್ಪಷ್ಟಪಡಿಸಿದರು. ಶುಭಮನ್ ಗಿಲ್ ಅವರಿಗೆ ಸಾಥ್ ನೀಡುತ್ತಾ ಸಿಂಗಲ್‌ಗಳ ಮೂಲಕ ಸೆಟ್ ಆಗುವ ಚಿಐಪಾರಿಕೆಗೆ ಬಿದ್ದರು. ಪವರ್‌ಪ್ಲೇ ಮುಗಿಯುವಷ್ಟರಲ್ಲಿ ಬಟ್ಲರ್ 27 ಬಾಲ್‌ಗಳಲ್ಲಿ ಅರ್ಧಶತಕ ಬಾರಿಸಿದರು. ಕುಲ್ದೀಪ್ ಯಾದವ್ ಬಟ್ಲರ್ ವಿಕೆಟ್ ಕಿತ್ತರು. ಶುಭಮನ್ ಗಿಲ್ ತಮ್ಮ ಸ್ವಾಭಾವಿಕ ಆಟದೊಂದಿಗೆ ಮಿಂಚಿದರು. ನಾಲ್ಕನೇ ಕ್ರಮಾಂಕದಲ್ಲಿ ಬ್ಯಾಟಿಂಗ್‌ಗಿಳಿದ ವಾಷಿಂಗ್ಟನ್ ಸುಂದರ್ ಬಿರುಸಿನ ಬ್ಯಾಟಿಂಗ್ ಮಾಡಲಾರಂಭಿಸಿದರು. ಮೊದಲಿನಿಂದಲೂ ದಂಡಿಸಿದ ಅವರು ಯಾವುದೇ ಮುಲಾಜಿಗೆ ಬೀಳಲೇ ಇಲ್ಲ. ಗಿಲ್ ಹಾಗೂ ಸುಂದರ್ ಭರ್ಜರಿ ಬ್ಯಾಟಿಂಗ್ ಮಾಡಿದರು.



ಶತಕದ ಜೊತೆಯಾಟ

ಶುಭಮನ್ ಗಿಲ್ ಮತ್ತು ವಾಷಿಂಗ್ಟನ್ ಸುಂದರ್ 104 ರನ್‌ಗಳ ಜೊತೆಯಾಟ ನಿರ್ಮಿಸಿದರು. ಸಿಂಗಲ್‌ಗಳ ನಂತರ ಸ್ಫೋಟಕ ಬ್ಯಾಟಿಂಗ್ ಶುರುಮಾಡಿದ ಗಿಲ್ 33 ಬಾಲ್‌ಗಳಲಿ ಅರ್ಧಶತಕ ಮುಗಿಸಿಕೊಂಡು. 40 ಬಾಲ್‌ಗಳಲ್ಲಿ 70 ರನ್ ಗಳಿಸಿದರು. ವಾಷಿಂಗ್ಟನ್ ಸುಂದರ್ ಸ್ಲಾಗ್ ಓವರ್‌ಗಳಲ್ಲಿ ಸ್ಫೋಟಕ ಬ್ಯಾಟಿಂಗ್ ಶುರು ಮಾಡಿದರು. 31 ಬಾಲ್‌ಗಳಲ್ಲಿ ಅರ್ಧಶತಕ ಬಾರಿಸಿದ ಅವರು 55 ರನ್‌ಗಳಿಗೆ ವಿಕೆಟ್ ಒಪ್ಪಿಸಿದರು. ಉಳಿದಂತೆ ಫಿಲಿಪ್ಸ್ 14 ರನ್ ಗಳಿಸಿದರು.

ಕೋಲ್ಕತ್ತಾಗೆ ಲಖನೌ ಸವಾಲು

ಕೋಲ್ಕತ್ತಾ: ಪಂದ್ಯಾವಳಿಯಲ್ಲಿ ಮೊದಲ ಗೆಲುವು ಸಾಧಿಸಿರುವ ಲಖನೌ ಸೂಪರ್ ಜೇಂಟ್ಸ್ ಹಾಗೂ ಎರಡು ಸೋಲು ಒಂದು ರದ್ದಿನ ನಂತರ ಒಂದು ಅಂಕದೊಂದಿಗೆ ಆಡುತ್ತಿರುವ ಕೆಕೆಆರ್ ತಂಡಗಳು ಗುರುವಾರ ನಡೆಯಲಿರುವ ಇಂಡಿಯನ್ ಪ್ರೀಮಿಯರ್ ಲೀಗ್ ಪಂದ್ಯಾವಳಿಯ ಪಂದ್ಯದಲ್ಲಿ ಮುಖಾಮುಖಿಯಾಗಲಿವೆ.

ಮೊದಲ ಪಂದ್ಯದಲ್ಲಿ ಸೋತ ನಂತರ ಎರಡನೇ ಪಂದ್ಯದಲ್ಲಿ ಪಂತ್ ಅವರ ಆಟದ ಬಲದಿಂದ ಗೆಲುವು ಸಾಧಿಸಿರುವ ಲಖನೌ ಸೂಪರ್ ಜೇಂಟ್ಸ್ ತನ್ನ ಗೆಲುವಿನೋಟವನ್ನು ಮುಂದುವರಿಸುವ ಯೋಜನೆಯಲ್ಲಿದ್ದರೆ ಇತ್ತ ಕೆಕೆಆರ್ ಸೋಲಿನಿಂದ ಹೊರಬಂದು ಗೆಲುವಿನ ಹಳಿಗೆ ಮರಳಲು ಸಿದ್ಧವಾಗಿದೆ. ಮೊದಲೆರಡು ಪಂದ್ಯಗಳಲ್ಲಿ ಸೋತ ನಂತರ ಮೂರನೇ ಪಂದ್ಯ ರದ್ದಾಗಿತ್ತು. ಈ ನಿಟ್ಟಿನಲ್ಲಿ ಕೆಕೆಆರ್ 1 ಮಾತ್ರ ಅಂಕದೊಂದಿಗೆ ಹಿನ್ನಡೆಯಲ್ಲಿದೆ. ಇತ್ತ ಲಖನೌ ಆಡಿರುವ ಪಂದ್ಯಗಳಲ್ಲಿ ಸೋಲು ಮತ್ತು ಗೆಲುವು ಸಾಧಿಸಿ ಸಮಾನ ಫಲಿತಾಂಶ ಹೊಂದಿದೆ.

ಲಖನೌಗೆ ಪಂತ್ ಲಯದ ಬಲ: ಸೂಪರ್ ಜೇಂಟ್ಸ್ ತಂಡಕ್ಕೆ ರಿಷಭ್ ಪಂತ್ ಲಯಕ್ಕೆ ಮರಳಿರುವ ವಿಶ್ವಾಸವಿದೆ. ಕಳೆದ ಕೂಟದಲ್ಲಿ ಭಾರೀ ಹಿನ್ನಡೆ ಅನುಭವಿಸಿರುವ ಪಂತ್ ಕೇವಲ ಒಂದೇ ಪಂದ್ಯಲ್ಲಿ ಮಿಂಚಿದ್ದರು. ಪಂದ್ಯಾವಳಿಯ ಆರಂಭಿಕ ಪಂದ್ಯದಲ್ಲಿ ಬೇಗನೆ ವಿಕೆಟ್ ಒಪ್ಪಿಸಿದರೂ ಪಂತ್ ಎರಡನೇ ಪಂದ್ಯದಲ್ಲಿ ಮಿಂಚಿನಾಟದೊಂದಿಗೆ ಪಂದ್ಯ ಗೆಲ್ಲಿಸಿದ್ದರು. ಅವರಲ್ಲದೆ ಮಾಕ್ರಂ, ಮಾರ್ಷ್ ಕೂಡ ರನ್ ಮಾಡಿದ್ದಾರೆ.



ಬೌಲಿಂಗ್ ವಿಭಾಗದಲ್ಲಿ ಶಮಿ ಅತ್ಯುತ್ತಮ ಪ್ರದರ್ಶನ ನೀಡುತ್ತಿದ್ದು ಅವರಿಗೆ ಪ್ರಿನ್ಸ್ ಯಾದವ್, ರಾಥಿ ಸಾಥ್ ಕೂಡ ಸಿಗುತ್ತಿದೆ.

ಕೆಕೆಆರ್‌ಗೆ ಗೆಲುವಿನ ಹಂಬಲ: ಇನ್ನು ಕೋಲ್ಕತ್ತಾ ತಂಡದಲ್ಲಿ ಗೆಲುವಿನ ಹಂಬಲವಿದೆ. ಕಳೆದ ಮೂರು ಪಂದ್ಯಗಳ ಪೈಕಿ ಎರಡರಲ್ಲಿ ಭಾರೀ ಹಿನ್ನಡೆ ಅನುಭವಿಸಿದೆ. ಮೂರನೇ ಪಂದ್ಯದಲ್ಲೂ ಬ್ಯಾಟಿಂಗ್ ವಿಭಾಗ ಆರಂಭಿಕ ಹಿನ್ನಡೆ ಅನುಭವಿಸಿತ್ತು. ಅಜಿಂಕ್ಯಾ ರಹಾನೆ ಬ್ಯಾಟ್‌ನಿಂದ ರನ್ ಬರಬೇಕಿದೆ. ಅಲೆನ್ ಸ್ಫೋಟಕ ಬ್ಯಾಟಿಂಗ್ ಮಾಡಿದರೂ ನಿಲ್ಲುತ್ತಿಲ್ಲ. ಇತ್ತ ಮಧ್ಯಮ ಕ್ರಮಾಂಕದಲ್ಲಿ ಗ್ರೀನ್ ಸೇರಿದಂತೆ ವಿವಿಧ ಆಟಗಾರರು ಹಿನ್ನಡೆ ಅನುಭವಿಸಿದ್ದಾರೆ.

ಏಷ್ಯನ್ ಬ್ಯಾಡ್ಮಿಂಟನ್: ಸೇನ್, ಶ್ರೀಕಾಂತ್‌ಗೆ ಸೋಲು

ಆಯುಷ್, ಪ್ರಣೋಯ್ ಶುಭಾರಂಭ





ನಿಂಗ್ಬೊ(ಚೀನಾ): ಭಾರತದ ಭರವಸೆಯ ಷಟ್ಲರ್‌ಗಳಾದ ಆಯುಷ್ ಶೆಟ್ಟಿ, ಪ್ರಣೋಯ್ ಎಚ್.ಎಸ್ ಗೆಲುವಿನೊಂದಿಗೆ ಮಿಂಚಿದರೆ, ಕಿಡಂಬಿ ಶ್ರೀಕಾಂತ್, ಲಕ್ಷ್ಯ ಸೇನ್ ಸೋತು ನಿರಾಸೆ ಮೂಡಿಸಿದರು.

ಬುಧವಾರದಂದು ಶುರುವಾಗಿರುವ ಏಷ್ಯನ್ ಬ್ಯಾಡ್ಮಿಂಟನ್ ಚಾಂಪಿಯನ್‌ಶಿಪ್ ಪಂದ್ಯಾವಳಿಯ ಮುಖ್ಯ ಡ್ರಾ ಪಂದ್ಯಗಳು ಶುರುವಾದವು. ನಾಲ್ವರು ಭಾರತೀಯ ಷಟ್ಲರ್‌ಗಳು ಕಣದಲ್ಲಿದ್ದರು. ಮೊದಲಿಗೆ ಪ್ರಣೋಯ್ ವಿಯೇಟ್ನಾಂನ ಡಾಂಗ್ ಅವರನ್ನು ಎದುರಿಸಿದರು. ಮೊದಲಿನಿಂದಲೂ ನಿಯಂತ್ರಣ ಪ್ರದರ್ಶನ ನೀಡಿ ನೇರ ಸೆಟ್ ಗೆಲುವು ದಾಖಲಿಸಿದರು. ಮೊದಲನೇ ಸುತ್ತಿನ ಪಂದ್ಯದಲ್ಲಿ ಎದುರಾಳಿ ಡಾಂಗ್ ತಮ್ಮ ಸರ್ವ್‌ಗಳ ಮೂಲಕ ಪ್ರಣೋಯ್ ಅವರ ಮೇಲೆ ಒತ್ತಡ ಹೇರಿದರೂ ಸ್ಮ್ಯಾಷ್‌ಗಳ ಮೂಲಕ ಮಿಂಚಿದ ಭಾರತೀಯ 24-22ರಿಂದ ಗೆಲುವು ಸಾಧಿಸಿದರು. ಎರಡನೇ ಸೆಟ್‌ನಲ್ಲೂ ಅದೇ ಪ್ರದರ್ಶನ ಮುಂದುವರಿಸುತ್ತಾ 21-12ರಿಂದ ಗೆಲುವು ಸಾಧಿಸಿದ್ದಾರೆ.

ಎರಡನೇ ಪಂದ್ಯದಲ್ಲಿ ಅನುಭವಿ ಕಿಡಂಬಿ ಶ್ರೀಕಾಂತ್ ಅವರು ಸಿಂಗಾಪುರದ ಕೆ. ವೈ. ಲೋಹ್ ಅವರೊಂದಿಗೆ ಆಡಿದರು. ಮೊದಲನೇ ಸೆಟ್‌ನಲ್ಲಿ ಮುನ್ನಡೆ. ಕಿಡಂಬಿ ಶ್ರೀಕಾಂತ್ ಎದುರಾಳಿ ಮೇಲೆ ನಿರಂತರ ಹಿಡಿತ ಸಾಧಿಸುತ್ತಾ 21-18ರಿಂದ ಗೆದ್ದರು. ಆದರೆ ಈ ಬಳಿಕ ಪುಟಿದೆದ್ದ ಎದುರಾಳಿ ಎರಡನೇ ಸೆಟ್‌ನಲ್ಲಿ ಅತ್ಯುತ್ತಮ ಸರ್ವ್‌ಗಳೊಂದಿಗೆ 21-9 ರಿಂದ ಗೆದ್ದು ಸಮಬಲ ಸಾಧಿಸಿದರು. ಪಂದ್ಯ ರೋಚಕವಾಯಿತು. ನಿರ್ಣಾಯಕ ಸೆಟ್‌ನಲ್ಲಿ ಸಿಂಗಾಪುರ ಆಟಗಾರ ಯಾವುದೇ ಮುನ್ನಡೆ ಬಿಟ್ಟುಕೊಡದೆ 21-11 ರಿಂದ ಗೆದ್ದು 16ರ ಸುತ್ತಿಗೆ ಲಗ್ಗೆ ಹಾಕಿದರು. ಇನ್ನೊಂದು ಪಂದ್ಯದಲ್ಲಿ ಭಾರತದ ಭರವಸೆಯ ಆಟಗಾರ ಲಕ್ಷ್ಯ ಸೇನ್ ಸಿ. ವೈ. ಲೀ ವಿರುದ್ಧ 21-12, 21-19ರಿಂದ ಗೆಲುವು ಸಾಧಿಸಿದರು.

7ನೇ ಶ್ರೇಯಾಂಕದ ಆಟಗಾರನನ್ನು ಸೋಲಿಸಿದ ಆಯುಷ್: ಇನ್ನು ದಿನದ ಮತ್ತೊಂದು ಪಂದ್ಯದಲ್ಲಿ ಭಾರತದ ರೈಸಿಂಗ್ ಸ್ಟಾರ್ ಆಯುಷ್ ಶೆಟ್ಟಿ ಚೀನಾದ ಲಿ ಶಿಫೆಂಗ್ ಅವರನ್ನು ಎದುರಿಸಿದ್ದರು. ಮೊದಲಿನಿಂದಲೂ ಹಿಡಿತ ಸಾಧಿಸಿದ ಅವರು, ಎದುರಾಳಿಗೆ ಯಾವುದೇ ಅವಕಾಶ ಬಿಟ್ಟುಕೊಡಲಿಲ್ಲ. ವಿಶ್ವ ಶ್ರೇಯಾಂಕದಲ್ಲಿ ತನಗಿಂತ ಮುಂದಿರುವ ಆಟಗಾರನ ವಿರುದ್ಧ ಶೆಟ್ಟಿ ತಮ್ಮ ಅತ್ಯುತ್ತಮ ಪ್ರದರ್ಶನ ನೀಡಿದರು. ಮೊದಲನೇ ಸೆಟ್ ಅನ್ನು 21-13ರಿಂದ ಗೆದ್ದ ಅವರು ಎರಡನೇ ಸೆಟ್‌ನಲ್ಲಿ 21-21ರಿಂದ ಗೆಲ್ಲುವತ್ತ ಸಾಗುವಾಗ ಎದುರಾಳಿ ನಿವೃತ್ತಿಯಾದರು. ಶೆಟ್ಟಿ ಪ್ರೀಕ್ವಾರ್ಟರ್ ಫೈನಲ್ ತಲುಪಿದರು.

ಸಿಂಧುಗೆ ಮುನ್ನಡೆ

ಇನ್ನು ಭಾರತದ ಮಹಿಳಾ ಆಟಗಾರ್ತಿ ಪಿ.ವಿ. ಸಿಂಧು ವೊಂಗ್ ಅವರೊಂದಿಗಿನ ಪಂದ್ಯದಲ್ಲಿ 15-21, 21-11, 21-11ರಿಂದ ಭರ್ಜರಿ ಗೆಲುವು ಸಾಧಿಸಿದರು. ಮೊದಲನೇ ಸುತ್ತಿನ ಪಂದ್ಯದಲ್ಲಿ ಸೋತರೂ ಮುಂದಿನ ಎರಡು ಸುತ್ತಿನ ಪಂದ್ಯಗಳಲ್ಲಿ ಸಿಂಧು ಗೆಲುವು ಸಾಧಿಸಿದರು. ಉದಯೋನ್ಮುಖ ತಾರೆ ತಸ್ವಿ ಕಾರುಪತ್ತೇವನ್ ಅವರೊಂದಿಗೆ ಸೋತರೆ, ಬಸ್ಲೋಡ್ ಇಂಟಾನೋನ್ ಅವರೊಂದಿಗೆ ಸೋತರು. ಮಹಿಳೆಯರ ಡಬಲ್ಸ್ ಪಂದ್ಯದಲ್ಲಿ ಭಟ್ ಹಾಗೂ ಶಿಖಾ ಗೌತಂ, ಮಿಜಾದ್-ತುಂಗ್ಕಾಸತಾನ್ ಅವರೊಂದಿಗಿನ ಪಂದ್ಯದಲ್ಲಿ ಸೋತರು.

ಫುಟ್‌ಬಾಲ್: ಕಿರಿಯರ ತಂಡಕ್ಕೆ ಜಯ

ಹೊಸದಿಲ್ಲಿ: ತೈವಾನ್ ವಿರುದ್ಧದ ಪಂದ್ಯದಲ್ಲಿ ಉತ್ತಮ ಪ್ರದರ್ಶನ ನೀಡಿರುವ ಭಾರತ ಅಂಡರ್-20 ಮಹಿಳಾ ಫುಟ್‌ಬಾಲ್ ತಂಡವು ಎಎಫ್‌ಸಿ ಅಂಡರ್-20 ಮಹಿಳೆಯರ ಏಷ್ಯನ್ ಕಪ್ ಪಂದ್ಯಾವಳಿಯ ಅರ್ಹತೆ ಆಸೆ ಜೀವಂತವಾಗಿರಿಸಿಕೊಂಡಿತು.

ಥೈಲ್ಯಾಂಡಿನ ಪಾಥುಮ್ ಥಾನಿ ಕ್ರೀಡಾಂಗಣದಲ್ಲಿ ಬುಧವಾರ ನಡೆದ ಪಂದ್ಯದಲ್ಲಿ ತೈವಾನ್ ವಿರುದ್ಧ 3-1ರ ಭರ್ಜರಿ ಜಯ ಸಾಧಿಸಿದೆ. ಈ ಗೆಲುವಿನ ಮೂಲಕ ಮುನ್ನಡೆ ಸಾಧಿಸಿರುವ ಭಾರತ ಬಿ ಗುಂಪಿನಲ್ಲಿ ನಡೆಯಲಿರುವ ಉಜ್ಬೇಕಿಸ್ತಾನ ಮತ್ತು ಜಾರ್ಡನ್ ನಡುವೆ ನಡೆಯುವ ಪಂದ್ಯದ ಫಲಿತಾಂಶಕ್ಕಾಗಿ ಕಾಯುತ್ತಿದೆ. ಅಲ್ಲಿನ ಪಂದ್ಯ ಭಾರತದ ಪ್ಲೇಆಫ್ ಭವಿಷ್ಯವನ್ನು ನಿರ್ಧರಿಸಲಿದೆ. 2004ರಲ್ಲಿ ಕೊನೆಯ ಬಾರಿಗೆ ಭಾರತ ಅರ್ಹತಾ ಸುತ್ತಿನ ಕ್ವಾರ್ಟರ್ ಫೈನಲ್‌ಗೇರಿತ್ತು. ಅದೇ ವರ್ಷ ಕೊನೆಯ ಬಾರಿಗೆ ಏಷ್ಯನ್ ಫುಟ್‌ಬಾಲ್ ಚಾಂಪಿಯನ್‌ಶಿಪ್ ಪಂದ್ಯಾವಳಿಯಲ್ಲಿ ಭಾಗವಹಿಸಿತ್ತು. ಬುಧವಾರದ ಪಂದ್ಯದಲ್ಲಿ ಭಾರತದ ಭೂಮಿಕಾ ದೇವಿ 26ನೇ ನಿಮಿಷ ಮತ್ತು ಸಿವಾನಿ ದೇವಿ 32, 87ನೇ ನಿಮಿಷದಲ್ಲಿ ಗೋಲು ಗಳಿಸಿದರು. ಎದುರಾಳಿ ತಂಡದ ಪರ ಕಾವೊ 90+3ನೇ ನಿಮಿಷದಲ್ಲಿ ಗೋಲು ಗಳಿಸಿದರು.



- ಮಹಿಳೆಯರ ಅಂಡರ್-20 ಫುಟ್‌ಬಾಲ್ ಏಷ್ಯನ್ ಕಪ್ ಅರ್ಹತಾ ಸುತ್ತು
- ಕ್ವಾರ್ಟರ್‌ಫೈನಲ್ ಆಸೆ ಇನ್ನೂ ಜೀವಂತ
- ತೈವಾನ್ ವಿರುದ್ಧ 3-1ರಿಂದ ಗೆಲುವು
- ಜಾರ್ಡನ್-ಉಜ್ಬೇಕಿಸ್ತಾನ ಪಂದ್ಯ ನಿರ್ಣಾಯಕ

ರಾಜಸ್ಥಾನಕ್ಕೆ ಹ್ಯಾಟ್ರಿಕ್ ಗೆಲುವಿನ ಯಶ

ಗುವಾಹಟಿ: ಮುಂಬೈ ತಂಡದ ದಿಗ್ಗಜ ಬೌಲರ್‌ಗಳನ್ನು ದಂಡಿಸಿದ ನಂತರ ಹಾರ್ದಿಕ್ ಪಡೆಯ ಪ್ರಮುಖ ಬ್ಯಾಟರ್‌ಗಳ ಬೆವರಿಳಿಸಿದ ರಾಜಸ್ಥಾನ ರಾಯಲ್ಸ್ ತಂಡವು ಇಂಡಿಯನ್ ಪ್ರೀಮಿಯರ್ ಲೀಗ್ ಪಂದ್ಯಾವಳಿಯ 19ನೇ ಆವೃತ್ತಿಯಲ್ಲಿ ಸತತ ಮೂರನೇ ಗೆಲುವು ಸಾಧಿಸಿದೆ. ಚೆನ್ನೈ, ಗುಜರಾತ್ ತಂಡಗಳನ್ನು ಸೋಲಿಸಿದ ನಂತರ ಮುಂಬೈ ತಂಡವನ್ನು ಸೋಲಿಸಿರುವ ತಂಡವು ದಾಖಲೆಯ ಹ್ಯಾಟ್ರಿಕ್ ಸಾಧನೆ ಮಂಗಳವಾರ ತಡರಾತ್ರಿ ಮಾಡಿತು.


ಮಳೆ ಬಂದ ಕಾರಣ 11 ಓವರ್‌ಗಳ ಮಟ್ಟಕ್ಕೆ ಇಳಿಸಲಾಗಿದ್ದ ಪಂದ್ಯದಲ್ಲಿ ಮುಂಬೈ ಮೊದಲು ಬೌಲಿಂಗ್ ಮಾಡುವ ನಿರ್ಧಾರ ಮಾಡಿಕೊಂಡಿತು. ಯಶಸ್ವಿ ಜೈಸ್ವಾಲ್ ಮತ್ತು ವೈಭವ್ ಸೂರ್ಯವಂಶಿ ದಂಡಿಸಲಾರಂಭಿಸಿದರು. ಪರಿಣಾಮ 11 ಓವರ್‌ಗಳಲ್ಲಿ ಆರ್‌ಆರ್ ಬರೋಬ್ಬರಿ 150 ರನ್ ಚಚ್ಚಿತು. ಗುರಿ ಬೆನ್ನಟ್ಟಿದ ಮುಂಬೈ ವಿವಿಧ ಪ್ರಯತ್ನಗಳನ್ನು ಮಾಡಿದ ನಂತರ 123 ರನ್ ಮಾತ್ರ ಗಳಿಸಿ ಸೋಲೊಪ್ಪಿಕೊಂಡಿತು. ತಂಡದ ಪರ ರುದರ್‌ಫೋರ್ಡ್ 25, ನಮನ್ ಧಿರ್ 25 ರನ್ ಗಳಿಸಿದರು. ರಾಜಸ್ಥಾನ ಪರ ನಾಂದ್ರೆ, ಸಂದೀಪ್ ಹಾಗೂ ಬಿಷ್ಣೋಯ್ ತಲಾ 2 ವಿಕೆಟ್ ಕಿತ್ತರು. 32 ಬಾಲ್ ಮಾತ್ರದಲ್ಲಿ ಅಜೇಯ 77 ರನ್ ಬಾರಿಸಿದ ಜೈಸ್ವಾಲ್ ಪಂದ್ಯದ ಹೀರೋ ಅನ್ನಿಸಿಕೊಂಡು ಪಂದ್ಯಶ್ರೇಷ್ಠ ಪ್ರಶಸ್ತಿ ಗೆದ್ದುಕೊಂಡರು. ವೈಭವ್ 39 ರನ್ ಗಳಿಸಿದರು. 26 ರನ್ ನೀಡಿ 6 ವಿಕೆಟ್ ಪಡೆದ ಸಂದೀಪ್ ಬೆಸ್ಟ್ ಬೌಲರ್ ಅನ್ನಿಸಿಕೊಂಡರು. ಮುಂಬೈ ಪರ ಯಾವುದೇ ಬ್ಯಾಟರ್ ಗೆಲುವಿನ ಇನ್ನಿಂಗ್ಸ್ ಆಡಲಿಲ್ಲ. ಮಧ್ಯಮ ಕ್ರಮಾಂಕದಲ್ಲಿ ನಮನ್ ಹಾಗೂ ರುದರ್‌ಫೋರ್ಡ್ ಸ್ವಲ್ಪ ಪ್ರಯತ್ನ ಪಟ್ಟರು. ಅವರಿಬ್ಬರ ವಿಕೆಟ್ ಬಿದ್ದ ನಂತರ ಪಂದ್ಯ ರಾಜಸ್ಥಾನದ ಕಡೆ ಹೋಯಿತು.

ಬೂಮ್ರಾ, ಬಾಲ್‌ಗೆ ವೈಭವ್ ಸಿಕ್ಸರ್: ಪಂದ್ಯದ ಅತ್ಯಂತ ಗಮನಾರ್ಹ ವಿಷಯದಲ್ಲಿ ಜಸ್‌ಪ್ರೀತ್ ಬೂಮ್ರಾ ಅವರ ಮೊದಲನೇ ಬಾಲ್‌ನಲ್ಲೇ 15 ವರ್ಷದ ವೈಭವ್ ಸಿಕ್ಸರ್ ಬಾರಿಸಿದರು. ಒಟ್ಟು ಆ ಓವರ್‌ನಲ್ಲಿ ಎರಡು ಸಿಕ್ಸರ್‌ಗಳನ್ನು ಬಾರಿಸಿ ಗಮನ ಸೆಳೆದಿದ್ದಾರೆ. ಇತ್ತ ಜೈಸ್ವಾಲ್ ಕೂಡ ಟ್ರೆಂಟ್ ಬೋಲ್ಟ್ ಅವರ ಬೌಲಿಂಗ್‌ನಲ್ಲಿ 22 ರನ್ ಚಚ್ಚಿದ್ದೂ ವಿಶೇಷವಾಗಿತ್ತು.



ಪದಬಂಧ 5948

ರಾಜಾ ಸಂಗಮೇಶ ಹಿರೇಮಠ



ಎಡದಿಂದ ಬಲಕ್ಕೆ

3.ಬಲಿಷ್ಠ ಆನೆಯನ್ನು ಹೀಗೂ ಹೇಳುತ್ತೇವೆ (4)
5.ಕಬ್ಬಿನ ರಸದಿಂದ ಮಾಡಿದ ಸಿಹಿ ಪದಾರ್ಥ (3)
7.ಸಸ್ಯ ಸಂಪತ್ತಿನ ಬಣ್ಣ (3)
8.ಈಕೆ ಸಶಕ್ತಳಾದವಳು (3)
10.ಪಟ್ಟದ ಬಗ್ಗೆ ಆಡುತ್ತಿರುವ ಒಣಮಾತು (3)
11.ಮನೆಯ ಮೇಲಿನ ಅಂತಸ್ತು (3)
14.ಕಿಟಕಿಯ ಬಳಿ ನಿಂತು ಆಡಿದ ಚುಚ್ಚು ಮಾತು (3)
16.ಶೋಭೆ-ಕಂಗೊಳಿಸುವ ಸ್ಥಿತಿ (3)
17.ನಮ್ಮದೇ ದೇಶಕ್ಕೆ ಸಂಬಂಧಿಸಿದುದು (3)
18.ಊರೂರುಗಳನ್ನು ತಿರುಗುವುದು (4)

ಮೇಲಿನಿಂದ ಕೆಳಕ್ಕೆ

1.ಹಾಲಲ್ಲಿ ಅಡಗಿದ ತೀಕ್ಷ್ಣವಾದ ವಿಷ (4)
2.ಹಾಲಿನಿಂದಾದ ಬಿಳಿ ಮೃದು ಆಹಾರ (3)
4.ಆ ದಿವಸ ತಂದ ಕಾಳುಕಡಿ (3)
6.ಒಂದು ಬಗೆಯ ಜಲಪುಷ್ಪ ತಲೆಕೆಳಗಾಗಿದೆ (3)
9.ಬಗೆಯ ನಡುವೆ ದೋಣಿಯಡಗಿದೆ (3)
10.ಪಟದ ನಡುವೆ ಆದ ಬದಲಾವಣೆ (3)
12.ತನ್ನದೇ ಮನೆ ತಲೆಕೆಳಗಾಗಿದೆ (3)
13.ಈತ ಆನೆಯನ್ನು ನಡೆಸುವವನು (4)
15.ರತ್ನಖಚಿತ ಶಿರೋಭೂಷಣ (3)
16.ವಿಶೇಷತೆ-ಹೆಚ್ಚುಗಾರಿಕೆಯಿದು (3)

5947 ಉತ್ತರ

ಎಡದಿಂದ ಬಲಕ್ಕೆ:
1.ಯಮಕ 3.ಗಾಯನ
5.ರಕ್ಷಣಾದಳ
6.ಗರಗಸ 8.ರಂದಣಿಗ
9.ದೃಢಕಾಯ
10.ಕತ್ತರಿಸು
12.ಮೌಲ್ಯಮಾಪನ
14.ಲಶುನ 15.ಗಣಿತ

ಮೇಲಿನಿಂದ ಕೆಳಕ್ಕೆ :
1.ಯವ್ವನಗ 2.ಕರ 3.ಗಾಳ
4.ನವರಂಗ 7.ಸಹಾಯ
8.ರಂಜಕ 9.ದೃಗುಜಲ
11.ಸುಲಲಿತ 12.ಮೌನ
13.ನಗ

ಎಲ್ಲಿ ಜಾರಿತೋ ಮನವು... ಎಲ್ಲೆ ಮೀರಿತೋ ...

ಆಪ್ತ ಸಲಹೆ
ಮಧುರ ಪ್ರಸಾದ್.
ಆಪ್ತ ಸಮಾಲೋಚಕರು

ಪ್ರತಿಷ್ಠಿತ ಸಂಸ್ಥೆಯಲ್ಲಿ ಉದ್ಯೋಗಿಯಾಗಿರುವ 31 ವರ್ಷದ ಹರೀಶ ಸಹೋದ್ಯೋಗಿಯಾದ ಪ್ರಿಯಾಳನ್ನು ಪ್ರೀತಿಸಿ ವಿವಾಹವಾಗಲು ಯೋಚಿಸುತ್ತಿದ್ದಾನೆ. ಒಬ್ಬರೊನ್ನೊಬ್ಬರು ಅರ್ಥ ಮಾಡಿಕೊಳ್ಳುವ ಪ್ರಕ್ರಿಯೆಯಲ್ಲಿ ಹರೀಶ ತನ್ನ ಬಾಲ್ಯದ ಗೆಳತಿ ಸುಮಾಳನ್ನು ಪ್ರಿಯಾಳಿಗೆ ಪರಿಚಯಿಸುತ್ತಾನೆ. ಹರೀಶ-ಸುಮಾಳ ಸಲಿಗೆ, ಒಡನಾಟ ನೋಡಿ ಪ್ರಿಯಾಳಿಗೆ ಮುಜುಗರವಾಗಿ, ಅವರಿಬ್ಬರ ಸಂಬಂಧದ ಬಗ್ಗೆ ನೇರವಾಗಿ ಪ್ರಶ್ನಿಸುತ್ತಾಳೆ. ಆಗ, ಹರೀಶ 'ಸುಮಾ ನನ್ನ ಬಾಲ್ಯದ ಸಹಪಾಠಿ, ನಮ್ಮ ಪಾಲಕರೂ ಸ್ನೇಹಿತರು. ಹಾಗಾಗಿ ನನ್ನಲ್ಲಿ ಅವಳಿಗೆ ಸಲಿಗೆ ಅಷ್ಟೇ. ಅವಳು ಮುಕ್ತ ಸ್ವಭಾವದವಳು. ಯಾವುದನ್ನೂ ಮುಚ್ಚು ಮರೆ ಇಲ್ಲದೆ ನೇರವಾಗಿ ಹೇಳಿಬಿಡುತ್ತಾಳೆ. ನಾನೂ ಹಾಗೆ ಇರಬೇಕೆಂದು ಅವಳ ಆಸೆ. ನಮ್ಮಿಬ್ಬರಿಗೂ ಬೇರೆ ಯಾವುದೇ ರೀತಿಯ ಸಂಬಂಧವಿಲ್ಲ ಎಂದು ಸ್ಪಷ್ಟೀಕರಣ ಕೊಡುತ್ತಾನೆ. ಪ್ರಿಯಾಳಿಗೆ ಸಮಾಧಾನವಾಗದೆ, ಸುಮಾಳ ಜತೆ ಒಡನಾಟ ಕಡಿಮೆ ಮಾಡುವಂತೆ ಒತ್ತಾಯಿಸುತ್ತಾಳೆ. ಹರೀಶ ಸಮ್ಮತಿಸುತ್ತಾನೆ. ಆದರೆ ತಿಂಗಳ ನಂತರ, ಹೀಗೆ ಒಮ್ಮೆ ಹರೀಶನ ಮೊಬೈಲ್ ನಲ್ಲಿ ಸುಮಾಳ ಚಾಟ್ ನೋಡಿದಾಗ , ಪ್ರಿಯಾಳಿಗೆ ಆಘಾತವಾಗುತ್ತದೆ. ದಿನಂಪ್ರತಿ ಸುಮಾಳ ಮೆಸೇಜ್ 'ನಿನ್ನ ಹಾಗೂ ಪ್ರಿಯಾಳ ಸಂಬಂಧ ಎಲ್ಲಿವರೆಗೆ ಬಂತು, ಏನೇನು ನಡೆಯುತ್ತಿದೆ' ಇತ್ಯಾದಿ. ಅದಕ್ಕೆ ಹರೀಶನೂ ಮುಚ್ಚು ಮರೆಯಿಲ್ಲದೆ ಉತ್ತರಿಸಿದ್ದಾನೆ. ಇದನ್ನು ಓದಿದ ಪ್ರಿಯಾಳ ಸಹನೆಯ ಕಟ್ಟೆ ಒಡೆಯಿತು. ಕೋಪದಿಂದ ಸ್ಪಷ್ಟೀಕರಣ ಕೇಳಿದಾಗ, ಹರೀಶ 'ನಾನೇನು ಅವಳನ್ನು ಮಾತಾಡಿಸಿಕೊಂಡು ಹೋಗಲಿಲ್ಲ. ಅವಳು ನನ್ನ ಬಗ್ಗೆ ಕೇಳಿದ್ದಕ್ಕೆ ನಾನು ಉತ್ತರಿಸಿದ್ದೇನೆ ಅಷ್ಟೇ' ಎಂದು ಹೇಳುತ್ತಾನೆ. ಅಕ್ಕೆ ಪ್ರಿಯಾ 'ನೀನು ಸ್ನೇಹ ಸಂಬಂಧ ಕಡಿಯಬೇಕೆಂದು ನಾನು ಹೇಳುತ್ತಿಲ್ಲ. ಆದರೆ ನಮ್ಮ ಖಾಸಗಿ ವಿಷಯವನ್ನು ಬೇರೆಯವರೊಂದಿಗೆ ಹಂಚಿಕೊಳ್ಳುವುದು ನನಗೆ ಇಷ್ಟವಿಲ್ಲ. ಈ ವಿಷಯದಲ್ಲಿ ನೀನು ಅವಳಿಂದ ದೂರವಿರಬೇಕು' ಎನ್ನುತ್ತಾಳೆ. ಹರೀಶ 'ನೀನು ಸಿಟ್ಟು ಮಾಡಿಕೊಳ್ಳಬೇಡ. ನಾನು ಸುಮಾಳೊಂದಿಗೆ ಮಾತಾಡಿ ಗೊಂದಲ ಬಗೆಹರಿಸುತ್ತೇನೆ' ಎನ್ನುತ್ತಾನೆ.

ತನ್ನ ಕೆಲಸದಲ್ಲಿ ದೃಢ ಹಾಗೂ ಕೆಲವೊಮ್ಮೆ ನಿಷ್ಠುರವಾದ ನಿರ್ಧಾರಗಳನ್ನು ತೆಗೆದುಕೊಳ್ಳುವ ಹರೀಶ, ಭಾವನಾತ್ಮಕವಾದ ಸಂಬಂಧಗಳಲ್ಲಿ ಬದ್ಧ ನಿಲುವು ತೆಗೆದುಕೊಳ್ಳಲು ಹಿಂಜರಿಯುತ್ತಾನೆ. ತನ್ನ ನಿರ್ಧಾರದಿಂದ ಯಾರಿಗೂ ನೋವು, ಬೇಜಾರಗಬಾರದೆಂದು ಅವನ ಅನಿಸಿಕೆ. ಸಂಬಂಧಗಳಲ್ಲಿ ಯಾವುದೇ ಸಂಘರ್ಷವಿರಬಾರದು ಎಂಬುದು ಅವನ ಉದ್ದೇಶ. ಈ ಪ್ರಕ್ರಿಯೆಯಲ್ಲಿ ಪ್ರಿಯಾಳನ್ನು ಕಳೆದುಕೊಳ್ಳಬಹುದು ಎಂಬ ಭಯದಿಂದ ಅವಳಿಗೆ ತಾನು ಸುಮಾಳಿಂದ ದೂರವಿರುತ್ತೇನೆ ಎಂದು ಹೇಳಿದ್ದಾನೆ . ಆದರೆ,'ಸುಮಾ ನನ್ನ ಬಾಲ್ಯದ ಗೆಳತಿ, ಅವಳನ್ನು ನಾನು ದೂರ ಮಾಡಿದರೆ, ಅವಳು ಕೋಪದಿಂದ ತನ್ನ ಮತ್ತು ನನ್ನ ತಂದೆ ತಾಯಿಯರಿಗೂ ಹೇಳಿ ದೊಡ್ಡ ರಂಪ ಮಾಡುತ್ತಾಳೆ. ಪರಿಣಾಮವಾಗಿ ಪಾಲಕರ ನಡುವೆ ಮೂಡುವ ವೈಮನಸ್ಯಕ್ಕೆ ನಾನೇ ಕಾರಣನಾಗುತ್ತೇನೆ, ಇದನ್ನೆಲ್ಲಾ ಹೇಗೆ ಸಹಿಸಿಕೊಳ್ಳಲಿ' ಎಂದು ಯೋಚಿಸಿ ಹತಾಶನಾಗುತ್ತಾನೆ; ಸುಮಾಳೊಂದಿಗೆ ಈ ವಿಷಯವನ್ನು ಚರ್ಚಿಸಲು ಧೈರ್ಯ ಬರುವುದಿಲ್ಲ. ಇದೇ ತೊಳಲಾಟದಲ್ಲಿ ಮನಸ್ಸು ಖಿನ್ನತೆಗೆ ಜಾರುತ್ತದೆ.

ಈ ಪ್ರಕರಣದಲ್ಲಿ ಬರುವ ಪಾತ್ರಗಳು, ಸಂಬಂಧಗಳ ಮಿತಿಯನ್ನು ನಿಭಾಯಿಸುವುದರಲ್ಲಿ ಎಡವಿರುವುದು ಗೋಚರವಾಗುತ್ತದೆ. ಪ್ರತಿ ವ್ಯಕ್ತಿಗೂ ತನ್ನ ವ್ಯಕ್ತಿತ್ವವನ್ನು ಸ್ಪಷ್ಟವಾಗಿ ರೂಪಿಸಿಕೊಳ್ಳಲು ಎಲ್ಲೆಗಳನ್ನು ಹಾಕಿಕೊಳ್ಳುವುದು ಅಗತ್ಯ. ಭೌತಿಕ, ಬೌದ್ಧಿಕ, ಭಾವನಾತ್ಮಕ ಮಿತಿಗಳೊಂದಿಗೆ ಪ್ರಸ್ತುತ ಕಾಲಕ್ಕೆ ಅತ್ಯಗತ್ಯವಾದ ಡಿಜಿಟಲ್ ಪರಿಮಿತಿ , ಕಾಲಮಿತಿ ಹೀಗೆ ಹಲವಾರು ವಿಧದ ಸೀಮೆಗಳನ್ನು ನಿರ್ಧರಿಸುವುದು ವ್ಯಕ್ತಿಯ ಕರ್ತವ್ಯ.

ಮನೆಯ ಸುತ್ತಲೂ ನಮ್ಮ ಗಡಿಯನ್ನು ಗುರುತಿಸಲು ಸುತ್ತುಗೋಡೆಗಳನ್ನು ಕಟ್ಟುತ್ತೇವೆ. ಇದು ನಮ್ಮನ್ನು ಅನಗತ್ಯ ಮನುಷ್ಯರು, ಪ್ರಾಣಿಗಳಿಂದ ರಕ್ಷಿಸುತ್ತದೆ. ನಮಗೆ ಮತ್ತು ನಮ್ಮನ್ನು ಸಂಪರ್ಕಿಸುವ ಆಗತ್ಯವಿರುವವರಿಗೆ ಅನುಕೂಲವಾಗುವಂತೆ ಗೋಡೆಗೆ ದ್ವಾರ ಇಟ್ಟಿರುತ್ತೇವೆ. ಮನೆಯ ಸುರಕ್ಷತೆಗಾಗಿ ಗಡಿಯನ್ನು ಹಾಕಿದ ಹಾಗೆ, ಮನದ ಸುರಕ್ಷತೆಗಾಗಿ ನಾವು ಸಂಬಂಧಗಳಲ್ಲಿ ಎಲ್ಲೆಗಳನ್ನು ನಿರ್ಮಿಸುವುದು ಅವಶ್ಯ.

ಬಾಲ್ಯದಿಂದಲೇ ವ್ಯಕ್ತಿ ತನ್ನ ಎಲ್ಲೆಗಳನ್ನು ಗುರುತಿಸಿಕೊಳ್ಳಲು ಆರಂಭಿಸುತ್ತಾನೆ. ಮಕ್ಕಳು ತಮ್ಮ ವ್ಯಕ್ತಿತ್ವ ಬೆಳೆಸಿಕೊಳ್ಳುವ ಹಂತದಲ್ಲಿ ಆಗತ್ಯವಾಗಿರುವ ಎಲ್ಲೆಗಳನ್ನು ನಿರ್ವಹಿಸಲು ಸಹಕರಿಸಬೇಕಾದದ್ದು ಪಾಲಕರ ಕರ್ತವ್ಯ. ಇನ್ನೊಬ್ಬರ ವಸ್ತುಗಳನ್ನು ಅನುಮತಿಯಿಲ್ಲದೆ ಬಳಸುವುದು, ಹಿರಿಯರೊಂದಿಗೆ ಅಗೌರವದಿಂದ ಮಾತನಾಡುವುದು, ಸುರಕ್ಷತಾ ನಿಯಮಗಳನ್ನು ನಿರ್ಲಕ್ಷಿಸುವುದು; 'ಬೇಡ' ಎಂದ ಮೇಲೂ ಅದೇ ಕೆಲಸವನ್ನು ಮಾಡುವುದು; ತನ್ನ ಒಡಹುಟ್ಟಿದವರನ್ನು ನಿಯಂತ್ರಿಸಲು ಪ್ರಯತ್ನಿಸುವುದು, ಪ್ರೌಢ ಮಕ್ಕಳು 'ಪಾಲಕರಾಗಿ ನನ್ನ ಬೇಕು ಬೇಡಗಳನ್ನು ನೀವು ಗಮನಿಸುವುದೇ ಇಲ್ಲ ' ಎಂದು ಪಾಲಕರನ್ನು ತಪ್ಪಿತಸ್ಥರನ್ನಾಗಿ ಮಾಡಿ ಹಣಕ್ಕಾಗಿ ಪೀಡಿಸುವುದು... ಹೀಗೆ ಕಿರಿಯರು ಎಲ್ಲೆ ಮೀರಿ ವರ್ತಿಸುತ್ತಾರೆ. ಹಿರಿಯರು ಅವರ ನಡತೆಯನ್ನು ತಿದ್ದಿಕೊಳ್ಳುವ ಹಾಗೆ ನೋಡಿಕೊಳ್ಳಬೇಕು. ಮಿತಿಮೀರಿದ ವರ್ತನೆಗಳನ್ನು ಹಿರಿಯರಲ್ಲೂ ನಾವು ಕಾಣುತ್ತೇವೆ. ಉದಾ: ಹದಿಹರೆಯದ ಮಗ ತನ್ನ ಏಕಾಂತತೆಗೆ ಭಂಗವಾಗುತ್ತೆ, ಬಾಗಿಲು ತಟ್ಟಿ ಕೊಠಡಿಗೆ ಬನ್ನಿ ಎಂದು ತಾಯಿಗೆ ಹೇಳಿದರೆ, ಮಗನ ಮಾತನ್ನು ನಿರ್ಲಕ್ಷಿಸಿ ,'ನಾನು ನಿನ್ನ ತಾಯಿ. ನಾನು ಯಾವಾಗ ಬೇಕಾದರೂ ಒಳಗೆ ಬರಬಹುದು' ಎನ್ನುವುದು; ಹಿರಿಯರು ಮಕ್ಕಳ ವೃತ್ತಿ, ಸಂಬಂಧ ಅಥವಾ ಜೀವನಶೈಲಿಯ ಆಯ್ಕೆಗಳನ್ನು ನಿರಂತರವಾಗಿ ಟೀಕಿಸುವುದು; ಮಕ್ಕಳ ಆಲೋಚನೆಗಳು, ಭಾವನೆಗಳು ಅಥವಾ ಅಭಿಪ್ರಾಯಗಳನ್ನು ತಳ್ಳಿಹಾಕುವುದು; 'ನಾನು ನಿನಗೋಸ್ಕರ ಇಷ್ಟೆಲ್ಲಾ ಮಾಡಿದರೂ, ನೀನು ಮಾತ್ರ....' ಹೀಗೆ ನಕಾರಾತ್ಮಕ ಮಾತುಗಳ ಮೂಲಕ ತಪ್ಪಿತಸ್ಥ ಭಾವನೆಯನ್ನು ಮೂಡಿಸುವುದನ್ನು ನಾವು ಕಾಣುತ್ತೇವೆ. ಇಂತಹ ಸನ್ನಿವೇಶಗಳಲ್ಲಿ ಮಿತಿಗಳ ಆಗತ್ಯವನ್ನು ಅರ್ಥ ಮಾಡಿಕೊಳ್ಳದ ಸಾಕಷ್ಟು ಜನರಿಗೆ ದ್ವಂದ್ವ ಮೂಡುವುದು ಸಹಜ. ತಾನು ನಿರ್ಮಿಸಿದ ಮಿತಿಯನ್ನು, ಇತರರು ಗೌರವಿಸದಿದ್ದರೆ, ತಾನು ಅವರಿಗೆ ಅಗೌರವ ತೋರಿಸಿದಂತೆಯೇ? ನಾನು ಹಾಕಿಕೊಂಡ ಚೌಕಟ್ಟು ಅಸಮಂಜಸವೇ? ನನಗೆ ಯಾವುದು ಒಪ್ಪಿಗೆ, ಯಾವುದಲ್ಲ ಎಂದು ನಿರ್ಧರಿಸುವ ಹಕ್ಕು ನನಗಿಲ್ಲವೇ? ಇಂತಹ ಪ್ರಶ್ನೆಗಳು ಮೂಡಿ, ಇತರರನ್ನು ತೃಪ್ತಿ ಪಡಿಸಲು ಸಾಕಷ್ಟು ಬಾರಿ ನಮ್ಮ ಮಿತಿಗಳನ್ನು ನಾವೇ ದುರ್ಬಲಗೊಳಿಸುತ್ತೇವೆ. ಇದರಿಂದ ತಾತ್ಕಾಲಿಕವಾಗಿ ಸಮಸ್ಯೆ ಬಗೆಹರಿದಿದೆ ಎನಿಸಬಹುದು. ಆದರೆ ಪ್ರಕ್ರಿಯೆಯಲ್ಲಿ ನಮ್ಮ ಆದ್ಯತೆಗಳನ್ನು ಕಡೆಗಣಿಸುತ್ತೇವೆ. ಇಂತಹ ಘಟನೆಗಳು ಪುನರಾವರ್ತಿಸಿದಾಗ ಗೊಂದಲ, ಮನಸ್ತಾಪವಾಗುತ್ತದೆ. ಸಂಬಂಧಗಳನ್ನು ಕಳೆದುಕೊಳ್ಳುವ ಭಯ, ಪಾಪ ಪ್ರಜ್ಞೆ, ದೃಢ ನಿಶ್ಚಯದ ಕೊರತೆ, ಹಿಂದಿನ ಅನುಭವಗಳು, ಸಾಮಾಜಿಕ ಕಟ್ಟುಪಾಡುಗಳು ಹೀಗೆ ಹಲವಾರು ಕಾರಣಗಳಿಂದ ವ್ಯಕ್ತಿ ತನ್ನ ಎಲ್ಲೆಗಳನ್ನು ನಿರ್ಮಿಸಲು ಹೆಣಗುತ್ತಾನೆ. ಮೇಲಿನ ಪ್ರಕರಣದಲ್ಲಿ ಪ್ರಿಯಳು ತನ್ನ ಅನಿಸಿಕೆಗಳನ್ನು ಹರೀಶನ ಮೇಲೆ ಹೇರುವ ಪ್ರಯತ್ನದಿಂದ ಮಿತಿ ಮೀರುತ್ತಿದ್ದರೆ, ಹರೀಶನಿಗೆ ತನ್ನ ಇತಿ ಮಿತಿಗಳನ್ನು ತಾನೇ ನಿರ್ಧರಿಸಲು ಸಾಧ್ಯವಾಗುತ್ತಿಲ್ಲ.

ಸ್ನೇಹ, ಪ್ರೀತಿಯಿದೆ ಎಂದ ಮಾತ್ರಕ್ಕೆ ಎಲ್ಲ ಖಾಸಗಿ ವಿಷಯಗಳನ್ನು ಯಾರ ಹತ್ತಿರವೂ ಹಂಚಿಕೊಳ್ಳಬೇಕೆಂಬುದು ನಿಯಮವೂ ಅಲ್ಲ, ಅನಿವಾರ್ಯವೂ ಅಲ್ಲ. ಯಾವುದನ್ನು, ಯಾರ ಹತ್ತಿರ, ಎಷ್ಟು ಹೇಳಬೇಕೆಂದು ವ್ಯಕ್ತಿ ತಾನಾಗಿಯೇ ನಿರ್ಧರಿಸಬೇಕು. ಎಲ್ಲೆಗಳನ್ನು ನಿರ್ಮಿಸುವ ಹಂತದಲ್ಲಿ ಮತ್ತೊಬ್ಬರಿಗೆ ಬೇಸರವಾಗುವುದು ಸಹಜವೇ. ಮಿತಿಯ ಅಗತ್ಯ ಅವರಿಗೆ ತಿಳಿದಿರುವುದಿಲ್ಲ. ನಿಮ್ಮನ್ನು ಗೌರವಿಸುವ ಮಂದಿ ನಿಮ್ಮ ಮಿತಿಗಳನ್ನು ಅರ್ಥ ಮಾಡಿಕೊಳ್ಳಲು, ಗೌರವಿಸುವ ಪ್ರಯತ್ನ ಮಾಡುತ್ತಾರೆ.

ಅದೇ ರೀತಿ ಎಲ್ಲೆಗಳು ಕಠಿಣ ಗೋಡೆಗಳಲ್ಲ. ಅವು ವ್ಯಕ್ತಿ, ಸಮಯ, ಸಂದರ್ಭಗಳಿಗೆ ಅನುಗುಣವಾಗಿ ಹೊಂದಿಕೊಳ್ಳಬಹುದಾದ ಸುರಕ್ಷಾ ಕವಚದಂತೆ. ಎಲ್ಲೆಗಳನ್ನು ನಿರ್ಮಿಸುವುದು ಎಂದರೆ ಸಂಬಂಧಗಳನ್ನು ನಿರ್ಬಂಧಿಸುವುದಲ್ಲ, ಬದಲಾಗಿ ವ್ಯಕ್ತಿಯ ಆಗತ್ಯಗಳನ್ನು ಆರೋಗ್ಯಕರವಾಗಿ ನಿಭಾಯಿಸುವುದು. ಹಿರಿಯರಿರಲಿ, ಕಿರಿಯರಿರಲಿ, ಮತ್ತೊಬ್ಬರ ಮಿತಿಯನ್ನು ಅರ್ಥ ಮಾಡಿಕೊಳ್ಳುವ ಪ್ರಯತ್ನದಿಂದ ಸಂಬಂಧಗಳು ಗಟ್ಟಿಯಾಗುತ್ತವೆ. ಮಿತಿಗಳನ್ನು ಗುರುತಿಸುವಾಗ ಮೊದಲಿಗೆ ಕಷ್ಟವೆನಿಸಿದರೂ, ಸಂಬಂಧಗಳಲ್ಲಿ ನಿಧಾನವಾಗಿ ಗೌರವ ಹೆಚ್ಚುವುದು, ಸುರಕ್ಷೆಯ ಭಾವನೆಯನ್ನು ಮೂಡಿಸುವುದು, ಪರಸ್ಪರ ನಿರೀಕ್ಷೆಗಳಲ್ಲಿ ಸ್ಪಷ್ಟತೆ ಮೂಡುವುದು, ಋಣಾತ್ಮಕ ಪರಾವಲಂಬನೆಯನ್ನು ತಡೆಯುವುದು ಸಾಧ್ಯವಾಗುತ್ತದೆ. ಇದರಿಂದ ಮಾನಸಿಕ ನೆಮ್ಮದಿ ಪಡೆಯುವುದು ಖಚಿತ. ಇಂತಹ ಸಮಸ್ಯೆಗಳ ಬಗ್ಗೆ ಸಲಹೆ ಸೂಚನೆಗಳ ಅಗತ್ಯವಿದ್ದಲ್ಲಿ ನಮ್ಮ ಉಚಿತ ಸಹಾಯವಾಣಿಯನ್ನು ಸಂಪರ್ಕಿಸಬಹುದು.

ವಿ.ಸೂ. : ಇಲ್ಲಿ ಬರುವ ಪಾತ್ರಗಳ ಹೆಸರುಗಳನ್ನು ಬದಲಾಯಿಸಲಾಗಿದೆ,
ಉಚಿತ ಸಹಾಯವಾಣಿ ಸಂಖ್ಯೆ: 6362066380

ಶ್ರೀ ಕೋದಂಡರಾಮ ಪಂಚಮುಖಿ ಆಂಜನೇಯ ಕ್ಷೇತ್ರ, ಹನುಮಗಿರಿ

ಹನುಮಗಿರಿ, ಪುತ್ತೂರು ತಾಲೂಕು, ದ.ಕ. ಕರ್ನಾಟಕ

ಇಂದು ಹನುಮಗಿರಿಯಲ್ಲಿ ಕೋದಂಡರಾಮನಿದ್ದಾರೆ, ಹನುಮನಿದ್ದಾನೆ, ಭಾರತಮಾತೆಯಿದ್ದಾಳೆ. ಭಕ್ತಾಂಜನೇಯ, ಬಾಲ ಗಣಪತಿ, ನಾಗಸಾನಿಧ್ಯ, ಯೋಧ ಸ್ಮಾರಕವಿದೆ. ಸುಂದರವಾದ ಪ್ರಕೃತಿ ರೂಪದಲ್ಲಿ ಸೀತಾಮಾತೆ ನೆಲೆಸಿದ್ದಾಳೆ. ಶನಿದೋಷ ನಿವಾರಣೆ ಸೇರಿದಂತೆ ನಿತ್ಯ ನಿರಂತರವಾಗಿ ಹಲವಾರು ಸೇವೆಗಳು ಕ್ಷೇತ್ರದಲ್ಲಿ ನಡೆಯುತ್ತಾ ಬರುತ್ತಿವೆ. ರಾಜ ಮಹಾರಾಜರಿಂದ ಹಿಡಿದು ಶ್ರೀಸಾಮಾನ್ಯರ ತನಕ ಲಕ್ಷಾಂತರ ಭಕ್ತರು ಪ್ರತಿನಿತ್ಯ ಕ್ಷೇತ್ರಕ್ಕೆ ಆಗಮಿಸಿ ದೇವರ ಅನುಗ್ರಹಕ್ಕೆ ಪಾತ್ರರಾಗುತ್ತಿದ್ದಾರೆ.





ಸನಾತನ ಸಂಸ್ಕೃತಿಯ ತವರೂರಾದ ಕರಾವಳಿಯ ಪ್ರಶಾಂತ ವಾತಾವರಣ, ಸಹ್ಯಾದ್ರಿ ಬೆಟ್ಟಗಳ ಹಸಿರ ಸಾಲು, ಮಲೆನಾಡಿನ ನಿಸರ್ಗರಮಣೀಯ ದೃಶ್ಯಕಾವ್ಯ, ಹಚ್ಚಹಸುರಿನ ಗಿರಿವನಗಳ ಮಧ್ಯೆ ಪ್ರಕಾಶಮಯ ಪರಿಸರದಲ್ಲಿ ನೆಲೆಸಿರುವ ರಾಮಹನುಮರ ಪುಣ್ಯಕ್ಷೇತ್ರವೇ ಶ್ರೀ ಕೋದಂಡರಾಮ, ಪಂಚಮುಖಿ ಆಂಜನೇಯ ಕ್ಷೇತ್ರ ಹನುಮಗಿರಿ.

ಪೌರಾಣಿಕ ಕಥೆಗಳ ಪ್ರಕಾರ ರಾಮಾಯಣದ ಯುದ್ಧದ ಸಂದರ್ಭದಲ್ಲಿ ರಾವಣನ ಮಗನಾದ ಇಂದ್ರಜಿತು ಲಕ್ಷ್ಮಣನ ಮೇಲೆ ಪ್ರಬಲ ಅಸ್ತ್ರವನ್ನು ಪ್ರಯೋಗಿಸಿದಾಗ ಲಕ್ಷ್ಮಣನು ಮೂರ್ಛೆಗೊಳಗಾಗುತ್ತಾರೆ. ಈ ಸಂದರ್ಭದಲ್ಲಿ ಹಿಮಾಲಯದಲ್ಲಿನ ದ್ರೋಣಗಿರಿ ಪರ್ವತದಿಂದ ಸಂಜೀವಿನಿ, ವಿಶಲ್ಯಕರಣಿ ಮುಂತಾದ ವಿಶೇಷ ಔಷಧ ಮೂಲಿಕೆಯನ್ನು ತರಲು ಹನುಮಂತನಿಗೆ ಹೇಳಲಾಗುತ್ತದೆ.

ರಾಜ್ಯಪಾಲರು, ಗಣ್ಯರು, ಸಂತರ ಭೇಟಿ
ಕರ್ನಾಟಕ ರಾಜ್ಯದ ರಾಜ್ಯಪಾಲ ಥಾವರ್ ಚಂದ್ ಗೆಹ್ಲೋಟ್ ಏ.10 ರಂದು ಹನುಮಗಿರಿ ಕ್ಷೇತ್ರಕ್ಕೆ ಬೆಳಗ್ಗೆ 11 ಗಂಟೆಗೆ ಭೇಟಿ ನೀಡಲಿದ್ದಾರೆ. ಕ್ಷೇತ್ರದ ಮುಖ ಮಂಟಪ ಮತ್ತು ಪವಿತ್ರ ವನ ಮರು ನಿರ್ಮಿಸಲಾಗಿದ್ದು, ರಾಜ್ಯಪಾಲರು ಉದ್ಘಾಟಿಸಲಿದ್ದಾರೆ. ಏ.11 ರಂದು ಕಂಚಿ ಕಾಮಕೋಟಿ ಸ್ವಾಮೀಜಿಯವರು ಆಗಮಿಸಲಿದ್ದಾರೆ. ಸುಬ್ರಹ್ಮಣ್ಯಶ್ರೀ, ಎಡನೀರುಶ್ರೀ, ಒಡಿಯೂರುಶ್ರೀ, ಶೃಂಗೇರಿ ಶ್ರೀಗಳ ಸಹಿತ ನಾಡಿನ ಪ್ರಮುಖ ಮಠಗಳ ಸ್ವಾಮಿಗಳು, ಸಂತರು, ಜಗದ್ಗುರುಗಳು, ಅರಸು ವಂಶದವರು, ಬ್ರಹ್ಮಕಲಶೋತ್ಸವದಲ್ಲಿ ಭಾಗವಹಿಸಲಿದ್ದಾರೆ.

ದ್ರೋಣಗಿರಿ ಪರ್ವತವನ್ನು ತಲುಪಿದಾಗ ಹನುಮಂತನು ಆ ಮೂಲಿಕೆಯನ್ನು ಗುರುತಿಸಲಾಗದೆ ಇಡೀ ಪರ್ವತವನ್ನೇ ಎತ್ತಿಕೊಂಡು ಬರುತ್ತಾನೆ. ಈ ಪರ್ವತವನ್ನು ಎತ್ತಿ ತಂದಾಗ ಅದರ ಕೆಲ ಭಾಗಗಳು ಕೆಲವು ಪ್ರದೇಶಗಳಲ್ಲಿ ಬೀಳುತ್ತವೆ. ರಣರಂಗದಿಂದ ಮತ್ತೆ ಪರ್ವತವನ್ನು ಎತ್ತಿಕೊಂಡು ಹಿಂತಿರುಗಿದಾಗ ಪರ್ವತದ ಕೆಲ ಭಾಗಗಳು ಇಲ್ಲದಿರುವುದು ಹನುಮಂತನಿಗೆ ತಿಳಿಯುತ್ತದೆ. ಅದನ್ನು ಹುಡುಕಿಕೊಂಡು ಹನುಮಂತನು ವಸು ಮಹರ್ಷಿಯ ತಪೋ ಭೂಮಿಗೆ ಬರುತ್ತಾನೆ. ವಸು ಮಹರ್ಷಿಯ ಅಪೇಕ್ಷೆಯಂತೆ ರಾಕ್ಷಸನಿಗ್ರಹ ಮಾಡಿ ಲೋಕಕಲ್ಯಾಣಾರ್ಥವಾಗಿ ಇಲ್ಲಿ ನೆಲೆಸುತ್ತಾನೆ. ಮುಂದೆ ಹನುಮ ನೆಲೆಸಿದ ಈ ಪುಣ್ಯಭೂಮಿಯೇ ಹನುಮಗಿರಿಯಾಗುತ್ತದೆ.

ಧರ್ಮಶ್ರೀ ಪ್ರತಿಷ್ಠಾನದ ನೇತೃತ್ವದಲ್ಲಿ ದೈವಜ್ಞರ ಚಿಂತನೆಯೊಂದಿಗೆ 2011ರಲ್ಲಿ ನರಸಿಂಹ, ಗರುಡ, ವರಾಹ, ಹಯಗ್ರೀವ ಮತ್ತು ಆಂಜನೇಯನ ಐಕ್ಯಭಾವದೊಂದಿಗೆ 11 ಅಡಿ ಎತ್ತರದ ಏಕ ಕೃಷ್ಣಶಿಲಾ ಶ್ರೀ ಪಂಚಮುಖಿ ಆಂಜನೇಯ ವಿಗ್ರಹವನ್ನು ಶ್ರೀಕ್ಷೇತ್ರದಲ್ಲಿ ಪ್ರತಿಷ್ಠಾಪಿಸಲಾಯಿತು. ಜಗತ್ತಿನ ಶ್ರೇಷ್ಠ ಕಾವ್ಯ ರಾಮಾಯಣವನ್ನು ಪ್ರತಿ ವ್ಯಕ್ತಿಗೂ ಸರಳ ರೂಪದಲ್ಲಿ ತಿಳಿಯಪಡಿಸಬೇಕೆಂದು ಶಿಲಾ ರೂಪದ ಕೆತ್ತನೆಗಳೊಂದಿಗೆ ರಾಮಾಯಣ ಮಾನಸೋದ್ಯಾನವನ ಮತ್ತು ಹನುಮಾನ್ ಮಾನಸೋದ್ಯಾನವು ಇದೇ ಸಂದರ್ಭದಲ್ಲಿ ನಿರ್ಮಿಸಲಾಯಿತು. ವಿವಿಧ ಜಾತಿಯ ನೆಲಮೂಲ ಸತ್ವವನ್ನೊಳಗೊಂಡ ಫಲ-ಪುಷ್ಪಗಳ ಸಂಜೀವಿನಿ ವನ, ಭಾರತೀಯ ದೇಸಿ ತಳಿಗಳನ್ನು ಒಳಗೊಂಡ ಕಲಾಶ್ರಮ ಗೋಶಾಲೆ, ತಲೆ, ಸಾರ್ವಜನಿಕರಿಗೆ ಕಾರ್ಯಕ್ರಮಗಳನ್ನು ನೆರವೇರಿಸಲು ಸಹಕಾರವಾಗುವಂತೆ ವೈದೇಹಿ ಸಭಾಭವನ ಆರಂಭಿಸಲಾಯಿತು. ಸಹ್ಯಾದ್ರಿಯ ತಪ್ಪಲಿನಲ್ಲಿರುವ ಹನುಮಗಿರಿಯ ಶ್ರೀ ಪಂಚಮುಖಿ ಆಂಜನೇಯ ಭಕ್ತರ ಬರುತ್ತಿದ್ದಂತೆ ಭಕ್ತರ ಸಂಖ್ಯೆ ಸಾಗರೋಪಾದಿಯಲ್ಲಿ ಕ್ಷೇತ್ರದತ್ತ ಬರತೊಡಗಿತು.

ಎಲ್ಲಿ ಹನುಮನಿರುವನೋ ಅಲ್ಲಿ ರಾಮನಿರಬೇಕು. ರಾಮಾ ಹನುಮರದ್ದು ಅವಿನಾಭಾವ ಸಂಬಂಧ. ಶ್ರೀ ಪಂಚಮುಖಿ ಆಂಜನೇಯನ ಮನಸೋಭೀಷ್ಟದಂತೆ ದೈವಜ್ಞರ ಸೂಚನೆಯೊಂದಿಗೆ 2017ರಲ್ಲಿ ಪಾಣಿಪೀಠ ಸಹಿತ 26 ಅಡಿ ಎತ್ತರದ ಹೊಯ್ಸಳ ಭಂಗಿಯಲ್ಲಿರುವ ವಿಶ್ವದಲ್ಲೇ ಅತಿ ಎತ್ತರವಾದ ಏಕ ಕೃಷ್ಣಶಿಲಾ ಶ್ರೀ ಕೋದಂಡರಾಮನ ವಿಗ್ರಹವನ್ನು ಬಾಲಗಣಪತಿ, ಭಕ್ತಾಂಜನೇಯ ಹಾಗೂ ನಾಗ ಸಾನಿಧ್ಯದೊಂದಿಗೆ ಗಣ್ಯಾತಿಗಣ್ಯರ ಉಪಸ್ಥಿತಿಯಲ್ಲಿ ಪ್ರತಿಷ್ಠಾಪಿಸಲಾಯಿತು. ದೈವ ಭಕ್ತಿಯೊಂದಿಗೆ ದೇಶಭಕ್ತಿಯೂ ಅತ್ಯಗತ್ಯ ಎಂಬ ಉದ್ದೇಶವನ್ನಿಟ್ಟುಕೊಂಡು 2023ರಲ್ಲಿ ರಾಷ್ಟ್ರದ ಗೌರವಾನ್ವಿತ ಗೃಹ ಮಂತ್ರಿಗಳಾದ ಶ್ರೀ ಅಮಿತ್ ಷಾ ಅವರ ದಿವ್ಯ ಉಪಸ್ಥಿತಿಯಲ್ಲಿ ಅಮೃತಶಿಲೆಯ ಭಾರತ ಮಾತಾ ಮಂದಿರ ಹಾಗೂ ಅಮರ ಜ್ಯೋತಿ, ಯೋಧ ಸ್ಮಾರಕವನ್ನೊಳಗೊಂಡ ''ಅಮರಗಿರಿ''ಯನ್ನು ಲೋಕಾರ್ಪಣೆಗೊಳಿಸಲಾಯಿತು. ಇಂದು ಭಾರತದ ಅಪರೂಪದ ಭಾರತ ಮಾತಾ ಇರುವುದು ಇರುವುದು ಹನುಮಗಿರಿಯಲ್ಲಿ ಎನ್ನುವುದು ಹೆಮ್ಮೆಯ ವಿಚಾರ. ರಾಮ ಹನುಮರ ಅನುಗ್ರಹದೊಂದಿಗೆ ಶ್ರೀ ಕ್ಷೇತ್ರದ ನೇತೃತ್ವದಲ್ಲಿ ಧಾರ್ಮಿಕ, ಸಾಮಾಜಿಕ ಸಾಂಸ್ಕೃತಿಕ, ಶೈಕ್ಷಣಿಕ, ಆರೋಗ್ಯ ಸೇವೆಗಳು ನಿರಂತರವಾಗಿ ನಡೆಯುತ್ತಾ ಬರುತ್ತಿವೆ.

ಹನುಮಗಿರಿ ಬ್ರಹ್ಮಕಲಶೋತ್ಸವ

2026 ಏಪ್ರಿಲ್
9 | 10 | 11 | 12

ಬ್ರಹ್ಮಶ್ರೀ ವೇದಮೂರ್ತಿ ಶ್ರೀ ವಾಸುದೇವ ತಂತ್ರಿ ಕುಂಟಾರು ಮತ್ತು ಬ್ರಹ್ಮಶ್ರೀ ವೇದಮೂರ್ತಿ ರವೀಶ ತಂತ್ರಿ ಕುಂಟಾರು ಇವರ ಆಚಾರ್ಯತ್ವದಲ್ಲಿ ಶ್ರೀ ಕೋದಂಡರಾಮ ಹಾಗೂ ಶ್ರೀಪಂಚಮುಖಿ ಆಂಜನೇಯ ದೇವರಿಗೆ ಏಕಕಾಲದಲ್ಲಿ ಅಷ್ಟಬಂಧ ಬ್ರಹ್ಮಕಲಶೋತ್ಸವ ವಿವಿಧ ಧಾರ್ಮಿಕ ಕಾರ್ಯಕ್ರಮಗಳೊಂಗಿಗೆ ಜರಗಲಿರುವುದು. ವಿಶೇಷವಾಗಿ ಕೋಟಿ ಶ್ರೀರಾಮ ತಾರಕ ಮಂತ್ರ ಮಹಾಯಜ್ಞ ನಡೆಯಲಿದೆ. ಇದರೊಂದಿಗೆ ರಾಮ ಜನ್ಮಭೂಮಿ ಅಯೋಧ್ಯೆ ಶ್ರೀರಾಮ ಮಂದಿರದಿಂದ ಆಗಮಿಸುವ ದಿವ್ಯಜ್ಯೋತಿ, ಅಂಜನಾದ್ರಿಯ ಜ್ಯೋತಿ ಜೊತೆ ರಾಮ-ಹನುಮ ಜ್ಯೋತಿ ರಥಯಾತ್ರೆಯು ಗ್ರಾಮದಿಂದ ಗ್ರಾಮಕ್ಕೆ ಸಂಚರಿಸಿ, ಪವಿತ್ರ ಕ್ಷೇತ್ರವಾದ ಹನುಮಗಿರಿಗೆ ಆಗಮಿಸಲಿದೆ. ಕ್ಷೇತ್ರದಲ್ಲಿ ಲಕ್ಷೋತ್ತರ ನಾರಿಕೇಳ ಸಮರ್ಪಣಾ ಯಜ್ಞ ಮತ್ತು ಭಜನಾ ಸಂಕೀರ್ತನೆಯು ನೆರವೇರಲಿದೆ. ವಿವಿಧ ಧಾರ್ಮಿಕ ಹಾಗೂ ಸಾಂಸ್ಕೃತಿಕ ಕಾರ್ಯಕ್ರಮಗಳೊಂದಿಗೆ ಬ್ರಹ್ಮಕಲಶೋತ್ಸವ ಸಂಪನ್ನಗೊಳ್ಳಲಿದೆ. ಈ ಶುಭ ಸಂದರ್ಭದಲ್ಲಿ ಭಗವದ್ಭಕ್ತರಾದ ತಾವೆಲ್ಲರೂ ಭಾಗವಹಿಸಿ, ಪ್ರಸಾದ ಸ್ವೀಕರಿಸಿ, ಶ್ರೀ ದೇವರ ಅನುಗ್ರಹಕ್ಕೆ ಪಾತ್ರರಾಗಬೇಕಾಗಿ ವಿನಂತಿ.

ಕರಾವಳಿಯಲ್ಲಿ ಅತ್ಯಂತ ಜನಪ್ರಿಯವಾಗಿರುವ ಕ್ಷೇತ್ರ ಹನುಮಗಿರಿ. ಹನುಮಗಿರಿ ಕ್ಷೇತ್ರದ ಬ್ರಹ್ಮಕಲಶೋತ್ಸವವು ಕೇವಲ ಧಾರ್ಮಿಕವಾಗಿ ನಡೆಯದೆ, ಸಮಾಜದ ಸೇವೆಯೊಂದಿಗೆ ವಿಶ್ವಕಲ್ಯಾಣ, ದೇಶದ ಸುಭೀಕ್ಷೆಯ ಉದ್ದೇಶಗಳೊಂದಿಗೆ ಸಂಯೋಜಿಸಲಾಗಿದೆ. ಬ್ರಹ್ಮಕಲಶೋತ್ಸವದಲ್ಲಿ ದಕ್ಷಿಣ ಕನ್ನಡ ಜಿಲ್ಲೆ ಮತ್ತು ಪಕ್ಕದ ಕಾಸರಗೋಡು ಜಿಲ್ಲೆಯ ಭಾಗದಿಂದ ಸುಮಾರು ಒಂದು ಲಕ್ಷ ಭಕ್ತರು ಭಾಗವಹಿಸಿ ದೇವರ ಕೃಪೆಗೆ ಪಾತ್ರರಾಗಲಿದ್ದಾರೆ.
■ **ನಳಿನ್ ಕುಮಾರ್ ಕಟೀಲ್**
ಅಧ್ಯಕ್ಷರು, ಬ್ರಹ್ಮಕಲಶೋತ್ಸವ ಸಮಿತಿ



ನಳಿನ್‌ಕುಮಾರ್ ಕಟೀಲ್
ಅಧ್ಯಕ್ಷರು, ಶ್ರೀ ಕೋದಂಡರಾಮ ಪಂಚಮುಖಿ ಆಂಜನೇಯ ಕ್ಷೇತ್ರ ಬ್ರಹ್ಮಕಲಶೋತ್ಸವ ಸಮಿತಿ



ಡಾ. ರವೀಶ ಪಡುಮಲೆ
ಅಧ್ಯಕ್ಷರು ಶ್ರೀ ಕೋದಂಡರಾಮ ಪಂಚಮುಖಿ ಆಂಜನೇಯ ಕ್ಷೇತ್ರ, ಸ್ವಾಗತ ಸಮಿತಿ



ಜಿ.ಕೆ. ಮಹಾಬಲೇಶ್ವರ ಭಟ್
ಮಹಾಪೋಷಕರು, ಧರ್ಮಶ್ರೀ ಪ್ರತಿಷ್ಠಾನ (ರಿ.) ಹನುಮಗಿರಿ



ನನ್ಯ ಅಚ್ಚುತ ಮೂಡೆತ್ತಾಯ
ಆಡಳಿತ ಧರ್ಮದರ್ಶಿಗಳು, ಧರ್ಮಶ್ರೀ ಪ್ರತಿಷ್ಠಾನ (ರಿ.)

ಧರ್ಮದರ್ಶಿ ಮಂಡಳಿ, ಧರ್ಮಶ್ರೀ ಪ್ರತಿಷ್ಠಾನ (ರಿ.) ಹನುಮಗಿರಿ, ಬ್ರಹ್ಮಕಲಶೋತ್ಸವ ಸಮಿತಿ, ಸ್ವಾಗತ ಸಮಿತಿ ಮತ್ತು ಊರ ಹತ್ತು ಸಮಸ್ತರು

ವೈದಿಕ ಕಾರ್ಯಕ್ರಮ

ದಿನಾಂಕ: 09.04.2026 ಗುರುವಾರ

ಸಾಯಂಕಾಲ 5.00: **ತಂತ್ರಿಗಳ ಮತ್ತು ವೈದಿಕರ ಅಗಮನ ಪೂರ್ಣಕುಂಭ ಸ್ವಾಗತ.** ಸಾಯಂಕಾಲ 6.00: **ಸುದರ್ಶನ ಹವನ ಪ್ರಾರಂಭ, ಯಾಗ ಮಂಟಪದಲ್ಲಿ ದೀಪ ಪ್ರಜ್ವಲನೆ, ವಾಸ್ತು ರಾಕ್ಷೋಘ್ನ ಹವನ, ಮಂಟಪ ಸಂಸ್ಕಾರ, ವಾಸ್ತುಬಲಿ**

ದಿನಾಂಕ: 10.04.2026 ಶುಕ್ರವಾರ

ಪ್ರಾತಃಕಾಲ 6.00: **ಸಾಮೂಹಿಕ ಪ್ರಾರ್ಥನೆ, ಯಾಗ ಶಾಲಾ ಪ್ರವೇಶ, ಮಹಾ ಸಂಕಲ್ಪ, ಕ್ರಚ್ಛಾಚರಣೆ, ಪುಣ್ಯಾಹ, ದೇವತಾ ನಾಂದಿ, ಕಂಕಣ ಬಂಧನ, ಪ್ರಧಾನ ಪೀಠದಲ್ಲಿ ಕಲಶ ಸ್ಥಾಪನೆ, 100 ವೈದಿಕರಿಂದ ಜಪ ಪ್ರಾರಂಭ. ಬೆಳಿಗ್ಗೆ 8.00: ಅಷ್ಟೋತ್ತರ ಶತನಾರಿಕೇಳ (108) ಗಣಹವನ.** ಬೆಳಿಗ್ಗೆ 11.30: **ಪೂರ್ಣಾಹುತಿ.** ಮಧ್ಯಾಹ್ನ 12.00: **ಮಹಾಪೂಜೆ (ಯಾಗ ಮಂಟಪದಲ್ಲಿ) ಪ್ರಸಾದ ವಿತರಣೆ.** ಸಾಯಂಕಾಲ 5.00: **ಜಪ ಮುಂದುವರಿಕೆ.** ಸಾಯಂಕಾಲ 6.00: **ದೇವತಾಪ್ರಾರ್ಥನೆ, ಆಚಾರ್ಯವರಣ, ಪುಣ್ಯಾಹವಾಚನ, ಪ್ರಾಸಾದಶುದ್ಧಿ, ರಾಕ್ಷೋಘ್ನ ಹೋಮ, ವಾಸ್ತು ಹೋಮ, ವಾಸ್ತುಬಲಿ, ವಾಸ್ತು ಪುಣ್ಯಾಹಂತ, ಅಷ್ಟಾವಧಾನ ಸೇವೆ, ಮಹಾಪೂಜೆ, ಪ್ರಸಾದ ವಿತರಣೆ**

ದಿನಾಂಕ: 11.04.2026 ಶನಿವಾರ

ಬೆಳಗ್ಗೆ 5.00: **ಗಣಪತಿ ಹೋಮ, ಪ್ರಾಯಶ್ಚಿತ್ತ ಹೋಮ, ಶಾಂತಿ ಹೋಮ, ತತ್ವಹೋಮ, ತತ್ವಕಲಶ ಪೂಜೆ, ಕುಂಬೇಶಕರ್ಕರಿ ಪೂಜೆ, ಶಯ್ಯಾಪೂಜೆ, ತತ್ವಕಲಶಾಭಿಷೇಕ, ಜೀವೋದ್ವಾಸನೆ, ಜೀವಕಲಶ, ಶಯ್ಯೋನ್ನಯನ, ಮಹಾಪೂಜೆ.** ಬೆಳಿಗ್ಗೆ 6.00: **ಪ್ರಾರ್ಥನೆ, ಪುಣ್ಯಾಹ, ಅರಣೀಮಥನ ಪ್ರಧಾನ ಕುಂಡದಲ್ಲಿ ಅಗ್ನಿ ಸ್ಥಾಪನೆ, ಅಗ್ನಿವಿಹರಣ, ಶ್ರೀ ರಾಮ ತಾರಕ ಯಾಗ ಆರಂಭ, ಪ್ರಾಯಶ್ಚಿತ್ತಾದಿಗಳು.** ಬೆಳಿಗ್ಗೆ 11.30: **ಮಹಾಪೂರ್ಣಾಹುತಿ, ಮಹಾಪೂಜೆ, ಮಂತ್ರಾಕ್ಷತೆ, ಪ್ರಸಾದ ವಿತರಣೆ.** ಸಾಯಂಕಾಲ 6.00: **ಧ್ಯಾನಾಧಿವಾಸ, ಅಧಿವಾಸ ಹೋಮ, ಕುಂಬೇಶಕರ್ಕರಿ ಪೂಜೆ, ಪರಿಕಲಶ ಪೂಜೆ, ಬ್ರಹ್ಮಕಲಶ ಪೂಜೆ, ಮಹಾಪೂಜೆ**

ದಿನಾಂಕ: 12.04.2026 ಆದಿತ್ಯವಾರ

ಬೆಳಿಗ್ಗೆ 5.00: **ಗಣಪತಿ ಹೋಮ, ಪ್ರತಿಷ್ಠಾಪಾಣಿ ಲಗ್ನ ಸುಮೂರ್ತದಲ್ಲಿ ಶ್ರೀ ದೇವರ ಪ್ರತಿಷ್ಠೆ, ಪರಿವಾರ ದೇವರ ಪ್ರತಿಷ್ಠೆ, ಬ್ರಹ್ಮಕಲಶಾಭಿಷೇಕ, ಪ್ರತಿಷ್ಠಾಬಲಿ, ಮಹಾಪೂಜೆ, ಮಹಾ ಮಂತ್ರಾಕ್ಷತೆ, ಪ್ರಸಾದ ವಿತರಣೆ.** ಬೆಳಿಗ್ಗೆ 7.00: **ಶ್ರೀ ಕೋದಂಡರಾಮ ದೇವರಿಗೆ ರಂಗಪೂಜೆ, ಪ್ರಸಾದ ವಿತರಣೆ.** ಬೆಳಿಗ್ಗೆ 7.30: **ಶ್ರೀ ದೇವರ ಉತ್ಸವ ಬಲಿ, ದರ್ಶನ ಬಲಿ, ಬಟ್ಟಲು ಕಾಣಿಕೆ, ಪ್ರಸಾದ ವಿತರಣೆ**

ಸಾಂಸ್ಕೃತಿಕ ಕಾರ್ಯಕ್ರಮ

ದಿನಾಂಕ 09.04.2026 ಗುರುವಾರ

ಲವ ವೇದಿಕೆ-ಹನುಮಗಿರಿ

ಸಂಜೆ 5.00-6.30: ರಾಮಕೃಷ್ಣ ಕಾಟುಕುಕ್ಕೆ ಮತ್ತು ಬಳಗದವರಿಂದ **''ದಾಸವಾಣಿ''.** ಸಂಜೆ 6.30-7.30: ವೈಷ್ಣವಿ ನಾಟ್ಯಾಲಯ (ರಿ) ಪುತ್ತೂರು, ಯೋಗೀಶ್ವರಿ ಜಯಪ್ರಕಾಶ್ ಇವರ ಶಿಷ್ಯ ವೃಂದದವರಿಂದ ನೃತ್ಯ ರೂಪಕ **''ಶ್ರೀರಾಮ ಪುನರಾಗಮನ''**

ಕುಶ ವೇದಿಕೆ-ಅಮರಗಿರಿ

ರಾತ್ರಿ 8.00: ಸಾಯಿ ಶಕ್ತಿ ಬಳಗ, ಉರ್ವ ಉಳಿಂಬ, ಮಂಗಳೂರು ಇವರಿಂದ ನಾಟಕ-**''ಜೋಡು ಜೀಟಿಗೆ''**

ದಿನಾಂಕ: 10.04.2026 ಶುಕ್ರವಾರ

ಲವ ವೇದಿಕೆ-ಹನುಮಗಿರಿ

ಬೆಳಿಗ್ಗೆ 9.30-12.30: ಧೀಶಕ್ತಿ ಮಹಿಳಾ ಯಕ್ಷಗಾನ ಬಳಗ ತೆಂಕಿಲ, ಪುತ್ತೂರು ಇವರಿಂದ ತಾಳಮದ್ದಳೆ **''ಶರಸೇತು ಬಂಧನ''.** ಮಧ್ಯಾಹ್ನ 1.00-3.00: ಡಾ. ವಿದ್ಯಾಲಕ್ಷ್ಮಿ.ಕೆ, ನಾಟ್ಯ ವಿದ್ಯಾಲಯ, ಕುಂಬಳೆ ಇವರ ಶಿಷ್ಯ ವೃಂದದವರಿಂದ ಭರತನಾಟ್ಯ ಕಾರ್ಯಕ್ರಮ **''ನೃತ್ಯ ಸಂಭ್ರಮ''.** ಮಧ್ಯಾಹ್ನ 3.30-4.30: ರಂಗಯ್ಯ ಬಲ್ಲಾಳ್ ಸುಸ್ವರ ಮೆಲೋಡೀಸ್, ಉಪ್ಪಿನಂಗಡಿ ಇವರಿಂದ **''ಭಕ್ತಿ ಭಾವ ಸಂಗಮ''.** ಸಂಜೆ 5.00-6.30: ವಿದುಷಿ ಶ್ರೀಮತಿ ದೀಪ್ತಿ ರವಿಚಂದ್ರ ಇವರ ಶಿಷ್ಯವೃಂದ-ಶಾರದ ಕಲಾಕೇಂದ್ರ, ಕುಂಬ್ರ ಇವರಿಂದ **''ಭರತನಾಟ್ಯ''.** ರಾತ್ರಿ 7.00: ಶ್ರೀ ಕೋದಂಡರಾಮ ಕೃಪಾಪೋಷಿತ ಯಕ್ಷಗಾನ ಮಂಡಳಿ, ಹನುಮಗಿರಿ ಮೇಳ ಪ್ರಸಂಗ- **''ನಮೋ ರಘುವಂಶ ದೀಪ''**

ಕುಶ ವೇದಿಕೆ-ಅಮರಗಿರಿ

ಬೆಳಗ್ಗೆ 10.00-11.00: ಶ್ರೀ ಪಂಚಶ್ರೀ ಮಹಿಳಾ ಸಂಘ ಮತ್ತು ಶ್ರೀ ಕೋದಂಡರಾಮ ಮಕ್ಕಳ ಕುಣಿತ ಭಜನಾ ತಂಡದಿಂದ **''ನೃತ್ಯ''.** ಬೆಳಗ್ಗೆ 11.15-12.15: ದತ್ತಾತ್ರೇಯ ರಾವ್ ಪುತ್ತೂರು ಮತ್ತು ಭಾಸ್ಕರ ದಾಸ್ ಹಾಗೂ ಬಳಗದವರಿಂದ **''ಭಕ್ತಿಸಂಗೀತ''.** ಮಧ್ಯಾಹ್ನ 1.30-2.30: ವಿದುಷಿ ನಿಖಿತಾ ಪಾಣಾಜೆ ಮತ್ತು ಶಿಷ್ಯ ವೃಂದದವರಿಂದ **''ಭರತನಾಟ್ಯ''** ಮಧ್ಯಾಹ್ನ 2.45-4.45: ಅಂಬಿಕಾ ಯಕ್ಷಕಲಾ ವೃಂದ ಬಪ್ಪಳಿಗೆ ಇವರಿಂದ ಯಕ್ಷಗಾನ ಪ್ರಸಂಗ-**''ವಿಜಯ ಯಾತ್ರೆ''** ಸಂಜೆ 5.00-6.00: ವರ್ಣಂ ನೃತ್ಯ ತಂಡ ಈಶ್ವರಮಂಗಲ ಮತ್ತು ಶ್ರೀರಾಮ ಲಹರಿ ನಾಟ್ಯಾಲಯ ದೇಲಂಪಾಡಿ ಇವರಿಂದ **''ನೃತ್ಯ''.** ಸಂಜೆ 6.15-8.15: ನೃತ್ಯ ಹನುಮಾನ್-ಕಲಾ ತಪಸ್ವಿ ನಾಟ್ಯ ನಿಲಯ ಗುರು ಶ್ರೀ ಬಾಲಕೃಷ್ಣ ಮಂಜೇಶ್ವರ ಇವರ ತಂಡದಿಂದ **''ಶಾಸ್ತ್ರೀಯ ಹಾಗೂ ಜಾನಪದ ನೃತ್ಯ ಕಾರ್ಯಕ್ರಮ''**

ದಿನಾಂಕ: 11.04.2026 ಶನಿವಾರ

ಲವ ವೇದಿಕೆ-ಹನುಮಗಿರಿ

ಬೆಳಿಗ್ಗೆ 10.00-11.00: ವಿವೇಕಾನಂದ ಕನ್ನಡ ಮಾಧ್ಯಮ ಶಾಲೆ ತೆಂಕಿಲ, ವಿದ್ಯಾರ್ಥಿಗಳಿಂದ **''ಸಾಂಸ್ಕೃತಿಕ ವೈವಿಧ್ಯ''** ಬೆಳಿಗ್ಗೆ 11.15-12.15: ಪುತ್ತೂರು ಜಗದೀಶ ಆಚಾರ್ಯ ಮತ್ತು ಬಳಗದವರಿಂದ- **''ಸಂಗೀತ ಗಾನ ಸಂಭ್ರಮ''.** ಮಧ್ಯಾಹ್ನ 1.00-4.00: ಸಾಯಿ ಕಲಾ ಯಕ್ಷ ಬಳಗ ಡಾ.ಶಿವರಾಮ ಕಾರಂತ ಬಾಲವನ ಪುತ್ತೂರು ಇವರಿಂದ ಯಕ್ಷಗಾನ ಪ್ರಸಂಗ- **''ಶ್ರೀ ರಾಮ ದರ್ಶನ''.** ಸಂಜೆ 5.30-7.00: ಶ್ರೀ ಮೂಕಾಂಬಿಕಾ ಕಲ್ಚರಲ್ ಅಕಾಡೆಮಿ (ರಿ) ಪುತ್ತೂರು, ಇದರ ಕಾವು ಸ್ಥಳೀಯ ಪ್ರತಿಭೆಗಳಿಂದ ನೃತ್ಯಾರ್ಪಣೆ **''ಭರತನಾಟ್ಯ ಕಾರ್ಯಕ್ರಮ''.** ರಾತ್ರಿ 7.15-8.45: ಸ ರಿ ಗ ಮ ಪ ಖ್ಯಾತಿಯ ಶ್ರೀ ಹರ್ಷ ಮೈಸೂರು ಮತ್ತು ತಂಡದವರಿಂದ ಭಕ್ತಿಗೀತೆಗಳ ವಿಶೇಷ ಪ್ರಸ್ತುತಿ **''ರಾಮ ರಾಜ್ಯ ಭಾರತ''.** ರಾತ್ರಿ 9.00-10.30: ನಿನಾದ ಎನ್ನಂಬಲ ತಂಡದಿಂದ ಭರತನಾಟ್ಯ ಗುರುಗಳಾದ ಬೆಂಗಳೂರಿನ ವಿದುಷಿ ನಾಗಶ್ರೀ ಮತ್ತು ನಿವೇದಿತ ಮತ್ತು ಶಿಷ್ಯರಿಂದ ನೃತ್ಯ ರೂಪಕ- **''ರಾಮಾಯಣ ಮತ್ತು ದಶಾವತಾರ''**

ಕುಶ ವೇದಿಕೆ-ಅಮರಗಿರಿ

ಬೆಳಗ್ಗೆ 10.00-12.30: ಶ್ರೀ ವಿಷ್ಣುಮೂರ್ತಿ ಮಕ್ಕಳ ಯಕ್ಷಗಾನ ಕಲಾಕೇಂದ್ರ ಸರಕಾರಿ ಪ್ರೌಢಶಾಲೆ ಇರ್ದೆ-ಉಪ್ಪಳಿಗೆ ಇವರಿಂದ ಯಕ್ಷಗಾನ-**''ಇಂದ್ರಜಿತು ಕಾಳಗ''.** ಮಧ್ಯಾಹ್ನ 1.00-2.00: ಕು. ಸಂಹಿತಾ ಶ್ರೀಧರ್, ಡಾ. ರಕ್ಷಾ ಕಾರ್ತಿಕ್ ರವರ ಶಿಷ್ಯ ಇವರಿಂದ **''ಭರತನಾಟ್ಯ''.** ಮಧ್ಯಾಹ್ನ 2.30-4.00: ಉಮಾಮಹೇಶ್ವರಿ ಸಂಗೀತ ಶಾಲೆ ಪುತ್ತೂರು ಇವರಿಂದ- **''ಸಂಗೀತ ಕಾರ್ಯಕ್ರಮ''** ಸಂಜೆ4.30-5.30: ನೃತ್ಯ-ವಿದುಷಿ ಡಾ.ನಿಶಿತಾ ಪುತ್ತೂರು ಇವರಿಂದ- **''ಭರತನಾಟ್ಯ''.** ಸಂಜೆ 5.45- 6.45: ಸಂದೇಶ್ ಕುಮಾರ್ ರೈ ಮತ್ತು ಬಳಗ ಪುತ್ತೂರು ಇವರಿಂದ- **''ಸ್ವರ ಮಾಧುರ್ಯ ಮ್ಯೂಸಿಕ್''.** ಸಂಜೆ 7.00-7.30: ಸಹೃದ ಕಲಾತಂಡ ಅಡೂರು ಕಾಸರಗೋಡು ಇವರಿಂದ **''ನೃತ್ಯ ರೂಪಕ''.** ಸಂಜೆ 7.45-8.45: ನೃತ್ಯೋಪಾಸನ ಕಲಾ ಅಕಾಡೆಮಿ(ರಿ), ಪುತ್ತೂರು ಪ್ರಸ್ತುತ ಪಡಿಸುವ **''ನೃತ್ಯೋಹಂ''**

ದಿನಾಂಕ 12.04.2026 ಆದಿತ್ಯವಾರ

ಲವ ವೇದಿಕೆ-ಹನುಮಗಿರಿ

ಬೆಳಗ್ಗೆ 10.00-11.30: ಶ್ರೀ ಗಜಾನನ ಆಂಗ್ಲ ಮಾಧ್ಯಮ ಶಾಲೆ, ಹನುಮಗಿರಿ ಮಕ್ಕಳಿಂದ **''ನೃತ್ಯ ವೈಭವ''.** ಬೆಳಿಗ್ಗೆ 11.45-12.45: ಶ್ರೀ ಗಜಾನನ ಕನ್ನಡ ಮಾಧ್ಯಮ ಶಾಲೆ, ಪಾಳ್ಯತ್ತಡ್ಕ ಮಕ್ಕಳಿಂದ **''ನೃತ್ಯ''.** ಮಧ್ಯಾಹ್ನ 1.00-2.00: ಶ್ರೇಯಾ ಕೆ ಆರ್, ಭೂಮಿಕಾ ಆರ್ ಶೆಟ್ಟಿ, ರಚನಾ (ಗಾನ ನೃತ್ಯ ಅಕಾಡೆಮಿ ಮಂಗಳೂರು, ಸುಳ್ಯ) ಇವರಿಂದ **''ಭರತನಾಟ್ಯ''** ಮಧ್ಯಾಹ್ನ 2.15-3.45: ಮಾಂಬಾಡಿ ಶಿಷ್ಯ ವೃಂದ ಮುಜಂಗಾವು ಇವರಿಂದ **''ಯಕ್ಷಗಾನರ್ಚನೆ''.** ಮಧ್ಯಾಹ್ನ 4.00-4.30: ಶರಣ್ಯ ರೈ, ಶ್ರಾವಣ್ಯ ರೈ ನೆಲ್ಲಿತ್ತಡ್ಕ ಹಾಗೂ ಭವ್ಯಶ್ರೀ ಎನ್.ಆರ್. ಪಟ್ಟೆ ಬಡಗನ್ನೂರು ಇವರಿಂದ **''ಭರತನಾಟ್ಯ''.** ಸಂಜೆ 4.45-5.45: ಕು. ವಿದ್ಯಾಶ್ರೀ ಆಚಾರ್ಯ ಈಶ್ವರಮಂಗಲ ಇವರ ಭಾಗವತಿಕೆಯಲ್ಲಿ **''ಗಾನಾರ್ಚನೆ''.** ಸಂಜೆ 7.30: ಡಾ. ಮೋಹನ್ ಆಳ್ವ ಇವರ ಆಳ್ವಾಸ್ ಶಿಕ್ಷಣ ಪ್ರತಿಷ್ಠಾನದ 350 ವಿದ್ಯಾರ್ಥಿಗಳಿಂದ **''ಆಳ್ವಾಸ್ ಸಾಂಸ್ಕೃತಿಕ ವೈಭವ''**

ಕುಶ ವೇದಿಕೆ-ಅಮರಗಿರಿ

ಬೆಳಿಗ್ಗೆ 10.00-12.00: ರಂಗಮನೆ ಚನಿಲ ಸಾರಥ್ಯದ ಶ್ರೀ ದುರ್ಗಾ ರಂಗ ಕಲಾ ಚಾವಡಿ ಪುತ್ತೂರು ಸಾದರ ಪಡಿಸುವ ''ಯಕ್ಷಗಾನ ತಾಳಮದ್ದಳೆ''-**''ಜಾಬಾಲಿ ನಂದಿನಿ''** ಮಧ್ಯಾಹ್ನ 12.15-1.15: ಕು. ದೀಪಿತಾ ಕೆ ಎಸ್ ಬಳಗ ಸುಳ್ಯಪದವು ಇವರಿಂದ **''ಭಕ್ತಿಗಾನ ರಸಮಂಜರಿ''.** ಮಧ್ಯಾಹ್ನ 2.00-3.30: ಸಂಗಮ್ ಬ್ರದರ್ಸ್ ಬೊಳುವಾರು ಇವರಿಂದ **''ದೇಶಭಕ್ತಿ ನೃತ್ಯ''.** ಸಂಜೆ 4.00-5.00: ಸಮರ್ಥ ಸಾಂಸ್ಕೃತಿಕ ಕಲಾತಂಡ ಈಶ್ವರಮಂಗಲ ಇವರಿಂದ **''ನೃತ್ಯ ರೂಪಕ''.** ಸಂಜೆ 5.15-6.15: ಫ್ಯೂಷನ್ ಡಾನ್ಸ್ ಈಶ್ವರಮಂಗಲ ಸ್ಥಳೀಯ ಪ್ರತಿಭೆಗಳಿಂದ-**''ನೃತ್ಯ ವೈವಿಧ್ಯ''.** ಸಂಜೆ 6.30-7.30: ಚಿತ್ತಾರ ನೃತ್ಯತಂಡ ಕರ್ನೂರು ಶಾಲೆಯ ವಿದ್ಯಾರ್ಥಿಗಳಿಂದ ಭಕ್ತಿಪ್ರಧಾನ ನೃತ್ಯರೂಪಕ **''ವಿಷ್ಣು ದರ್ಶನ''**

Hosadigantha Kannada Daily Printed & Published by P.S.Prakash on behalf of Jnanabharathi Prakashana Limited. published at : 2nd Floor, Micasa, Near KSRTC Bus stand, Bejai, Mangaluru - 575 004, Phone : 2497091 to 2497093. Fax : 2497098. RNI:29813/78, Printed at Digantha Mudrana Ltd., D/No.5-184-185, Industrial Estate, Yeyyadi, Mangaluru - 575 008. . Editor: P.S.Prakash, Group Editor: Vinayak S. Bhat, Resident Editor : Prakash Ilanthila.

ಹೊಸ ದಿಗಂತ

ರಾಷ್ಟ್ರ ಜಾಗೃತಿಯ ದೈನಿಕ

ಸಂಗಮ

ದಕ್ಷಿಣ ಕನ್ನಡ | ಉಡುಪಿ | ಕೊಡಗು | ಕಾಸರಗೋಡು

ಸುದ್ದಿ ಅಪ್ಡೇಟ್‌ಗಾಗಿ Google lensನಲ್ಲಿ ಈ QR ಕೋಡ್ ಸ್ಕ್ಯಾನ್ ಮಾಡಿ, whatsApp ಗ್ರೂಪ್ ಇಂದೇ ಸೇರಿ!

ಗುರುವಾರ 09, ಏಪ್ರಿಲ್ 2026 | e-mail diganthamlr@gmail.com | Website www.hosadigantha.com

ಇಂದಿನ ಹವಾಮಾನ



ದಕ್ಷಿಣ ಕನ್ನಡ	ಉಡುಪಿ
34° 24°	32° 25°

ನಿಲ್ಲಿ ನಿಲ್ಲಿ ಬಂದೆ, ಒಂದೇ ಒಂದ್ನಿಮಿಷಾ....



ಕಾಸರಗೋಡು ಜಿಲ್ಲೆಯ ಐದು ವಿಧಾನಸಭಾ ಕ್ಷೇತ್ರಗಳಿಗೆ ಇಂದು ಚುನಾವಣೆ ನಡೆಯಲಿದ್ದು, ಬಿಸಿಲನ್ನೂ ಲೆಕ್ಕಿಸದೆ ಸಿಬ್ಬಂದಿಗಳು ಬುಧವಾರ ತಮ್ಮತಮ್ಮ ಮತಗಟ್ಟೆಯತ್ತ ಹೆಜ್ಜೆ ಹಾಕಿದರು.

ಇನ್ನಷ್ಟು ವಿವರ ಪುಟ 5

ಕಾಲ ಕೆಳಗೇ ಕಾದಿದೆ ಆಪತ್ತು

ಹುಷಾರು!

ರಸ್ತೆ ಬದಿ ಇದೆಂಥಾ ಅವಸ್ಥೆ?

ಉಡುಪಿ: ನಗರದ ಹಳೆ ಸರ್ಕಾರಿ ಬಸ್ ನಿಲ್ದಾಣದ ಬಳಿಯ ಕೋ ಆಪರೇಟಿವ್ ಬ್ಯಾಂಕ್ ಮುಂಭಾಗದ ಪಾದಚಾರಿ ರಸ್ತೆ ಈಗ ನಡೆದಾಡಲು ಸಂಚಕಾರವಾಗಿ ಪರಿಣಮಿಸಿದೆ.

ಇಲ್ಲಿನ ಚಪ್ಪಡಿ ಕಲ್ಲು ಕುಸಿದು ಆಳ ಕಂದಕ ನಿರ್ಮಾಣವಾಗಿದ್ದು, ಸಾರ್ವಜನಿಕರ ಪಾಲಿಗೆ 'ಮೃತ್ಯು ಕೂಪ' ವಾಗಿ ಮಾರ್ಪಟ್ಟಿದೆ.

ಹೆಚ್ಚಿದ ಅಪಘಾತದ ಭೀತಿ: ಈ ಸ್ಥಳವು ಮೂರು ರಸ್ತೆಗಳು



ಸಂಧಿಸುವ ಪ್ರಮುಖ ಜಂಕ್ಷನ್ ಆಗಿದ್ದು, ಇಲ್ಲಿ ರಸ್ತೆ ಅತ್ಯಂತ ಕಿರಿದಾಗಿದೆ. ಜೊತೆಗೆ ಇದೊಂದು ವಸತಿ ಪ್ರದೇಶವೂ ಆಗಿದೆ.

ಹಲವು ಮಂದಿ ಗಾಯಗೊಂಡಿದ್ದಾರೆ

ಇಲ್ಲಿನ ಕಿರಿದಾದ ರಸ್ತೆಯಲ್ಲಿ ವಾಹನಗಳು ಸಂಚರಿಸುವಾಗ ಆಯತಪ್ಪಿ ಈ ಕಂದಕಕ್ಕೆ ಬೀಳುವ ಸಾಧ್ಯತೆ ಹೆಚ್ಚಿದೆ. ಈಗಾಗಲೇ ಹಲವು ಪಾದಚಾರಿಗಳು ಈ ಗುಂಡಿಯಲ್ಲಿ ಎಡವಿ ಬಿದ್ದು ಗಾಯಗೊಂಡಿರುವ ಬಗ್ಗೆ ಕೂಡಾ ದೂರುಗಳು ಕೇಳಿಬಂದಿವೆ.



ಸುತ್ತಮುತ್ತ

ಏ.11,12ರಂದು ನೇಮ

ಮಂಗಳೂರು: ನಗರದ ಪಂಜಿಮೊಗರು ಶಿವಾಜಿನಗರ ಉರುಂದಾಡಿ ಇಲ್ಲಿನ ಶ್ರೀ ಸತ್ಯ ಕೋಡ್ದಬ್ಬು ಮತ್ತು ಪರಿವಾರ ದೈವಗಳ ದೈವಸ್ಥಾನದಲ್ಲಿ ವಾರ್ಷಿಕ ನೇಮೋತ್ಸವವು ಏ.11,12ರಂದು ನಡೆಯಲಿದೆ ಎಂದು ಪ್ರಕಟಣೆ ತಿಳಿಸಿದೆ.

ಸೋಲಾರ್ ದಾರಿದೀಪ ಹಗರಣ: ತನಿಖೆಗೆ ಆದೇಶ

ಕೊಣಾಜೆ: ಉಳ್ಳಾಲ ತಾಲೂಕಿನ ಬೋಳಿಯಾರ್ ಗ್ರಾಮ ಪಂಚಾಯತ್‌ನಲ್ಲಿ ಸೋಲಾರ್ ದಾರಿದೀಪ ಅಳವಡಿಕೆಯಲ್ಲಿ ಭ್ರಷ್ಟಾಚಾರ ಹಿನ್ನಲೆಯಲ್ಲಿ ಸಾಮಾಜಿಕ ಕಾರ್ಯಕರ್ತ ಡೆನಿಲ್ ಫಾಸ್ಕಲ್ ಪಿಂಟೋ ಅವರು ದಾಖಲೆ ಸಮೇತ ದೂರು ಸಲ್ಲಿಸಿದ್ದಾರೆ. ಈ ದೂರಿನ ಹಿನ್ನೆಲೆಯಲ್ಲಿ ದಕ್ಷಿಣ ಕನ್ನಡ ಜಿಲ್ಲಾ ಮುಖ್ಯ ಕಾರ್ಯನಿರ್ವಾಹಕ ಅಧಿ ಕಾರಿ ನರ್ವಾಡೆ ವಿನಾಯಕ್ ಕಾರ್ಭಾರಿ ಅವರು ತನಿಖೆಗೆ ಆದೇಶಿಸಿದ್ದು, ಏ.9ರಂದು ಮಧ್ಯಾಹ್ನ 11ಕ್ಕೆ ಉಳ್ಳಾಲ ತಾಲೂಕು ಕಚೇರಿಯಲ್ಲಿ ದಾಖಲೆ ಜೊತೆಗೆ ತನಿಖೆ ನಡೆಯುಲಿದ್ದು, ತನಿಖಾ ಸ್ಥಳದಲ್ಲಿ ಹಾಜರಿರುವಂತೆ ಬೋಳಿಯಾರು ಗ್ರಾ.ಪಂ. ಅಭಿವೃದ್ಧಿ ಅಧಿಕಾರಿ ಹಾಗೂ ಉಳ್ಳಾಲ ತಾ.ಪಂ. ಕಾರ್ಯನಿರ್ವಾಹಕ ಅಧಿ ಕಾರಿಗೆ ಕಡ್ಡಾಯ ಸೂಚನೆ ನೀಡಲಾಗಿದೆ.

ಬಪ್ಪನಾಡು: ಚಂದ್ರಮಂಡಲ ರಥೋತ್ಸವ

ಮುಲ್ಕಿ: ಸೀಮೆಯ ಒಂಬತ್ತು ಮಾಗಣೆಯ ಬಪ್ಪನಾಡು ಶ್ರೀ ದುರ್ಗಾಪರಮೇಶ್ವರೀ ಜಾತ್ರಾ ಮಹೋತ್ಸವದ ಅಂಗವಾಗಿ ಮಂಗಳವಾರ



ರಾತ್ರಿ ಚಂದ್ರಮಂಡಲ ರಥೋತ್ಸವ ಪಲ್ಲಕಿ ಉತ್ಸವ ವಿಜೃಂಭಣೆಯಿಂದ ನಡೆಯಿತು. ದೇವಸ್ಥಾನದ ತಂತ್ರಿ ಶಿಬರೂರು ಗೋಪಾಲಕೃಷ್ಣ ತಂತ್ರಿ, ಅರ್ಚಕ ಶ್ರೀಪತಿ ಉಪಾಧ್ಯಾಯ, ನರಸಿಂಹ ಭಟ್, ಗೋಪಾಲ ಕೃಷ್ಣ ಭಟ್, ಪ್ರಸಾದ್ ಭಟ್, ದೇವಸ್ಥಾನದ ಅನುವಂಶಿಕ ಮೊಕ್ತೇಸರ ದುಗ್ಗಣ್ಣ ಸಾವಂತ ಅರಸರು ಕಾರ್ಯನಿರ್ವಹಣಾಧಿಕಾರಿ ಶ್ವೇತಾ ಪಳ್ಳಿ, ಡಾ. ಹರಿಕೃಷ್ಣ ಪುನರೂರು, ಕ್ಷೇತ್ರದ ಅಭಿವೃದ್ಧಿ ಸಮಿತಿಯ ಅತುಲ್ ಕುಡ್ವ ಸತೀಶ್ ಭಂಡಾರಿ ಚಂದ್ರಶೇಖರ ಕಾಸಪ್ಪಯ್ಯನವರ ಮನೆ, ಉದ್ಯಮಿ ಶರತ್ ಸಾಲ್ಯಾನ್, ಸುನಿಲ್ ಆಳ್ವ ಕಿರಣ್ ಶೆಟ್ಟಿ ಕೋಲ್ನಾಡು ಗುತ್ತು , ಅಶ್ವಿನ್ ಆಳ್ವ ಕುಬೆವೂರು, ಡಾ. ಹರಿಶ್ಚಂದ್ರ ಪಿ. ಸಾಲ್ಯಾನ್, ಅಕೌಂಟೆಂಟ್ ಶಿವಶಂಕರ್, ಕಾರ್ತಿಕ್ ಕೋಟ್ಯಾನ್ ಮತ್ತಿತರರಿದ್ದರು.

ಬಂಟರ ಸಂಘದಿಂದ ಏ.12ಕ್ಕೆ ಅಧಿವೇಶನ

ಪುತ್ತೂರು: ಮಂಗಳೂರು ಬಂಟರ ಯಾನೆ ನಾಡವರ ಮಾತೃ ಸಂಘದ ವತಿಯಿಂದ ಬಹಿರಂಗ ಅಧಿವೇಶನವು ಏ.12ಕ್ಕೆ ಬೆಳಗ್ಗೆ 9ಕ್ಕೆ ಮಂಗಳೂರು ಪುರಭವನದಲ್ಲಿ ನಡೆಯಲಿದೆ ಎಂದು ಮಾತೃ ಸಂಘದ ಉಪಾಧ್ಯಕ್ಷ, ಪುತ್ತೂರು ತಾಲೂಕು ಬಂಟರ ಸಂಘದ ಅಧ್ಯಕ್ಷ ಹೇಮನಾಥ ಶೆಟ್ಟಿ ಕಾವು ಹೇಳಿದರು. ಬುಧವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ರಾಜ್ಯ ಹೈಕೋರ್ಟ್‌ನ ನ್ಯಾಯಮೂರ್ತಿ ವಿಶ್ವಜಿತ್ ಶೆಟ್ಟಿ ಸವಣೂರು, ರಾಜೇಶ್ ರೈ ಕಲ್ಲಂಗಳ ಮುಖ್ಯ ಅತಿಥಿಗಳಾಗಿ ಪಾಲ್ಗೊಳ್ಳಲಿದ್ದು, ಡಾ. ಕೊಡ್ಮಾಣ್ ನಾಗಪ್ಪ ಆಳ್ವ ಮತ್ತು ಕಲ್ಯಾಣಿ ಆಳ್ವ ಅವರ ಸ್ಮರಣಾರ್ಥ ಒಟ್ಟು 7 ಕ್ಷೇತ್ರಗಳ 8 ಮಂದಿ ಸಾಧಕರಿಗೆ ಪ್ರಶಸ್ತಿ ಪ್ರದಾನ ಮಾಡಲಿದ್ದೇವೆ. ಬಂಟರ ಯಾನೆ ನಾಡವರ ಮಾತೃ ಸಂಘದಿಂದ 14 ಮಂದಿ ಸಾಧಕರನ್ನು ಹಾಗೂ ಪಿ. ಕಿಶನ್ ಹೆಗ್ಡೆ ಅವರನ್ನು ಸಮ್ಮಾನಿಸಲಾಗುತ್ತದೆ ಎಂದರು.

ಏ.14ಕ್ಕೆ ಪುತ್ತೂರು ಜಾತ್ರೆ ಸಂದರ್ಭ ಸಂಜೆ 5.30ಕ್ಕೆ ಪುತ್ತೂರು ತಾಲೂಕು ಬಂಟರ ಸಂಘದ ವತಿಯಿಂದ ಕೊಂಬೆಟ್ಟು ಬಂಟರ ಭವನದ ಬಳಿ ಕಟೀಲು ಮೇಳದವರಿಂದ ಶ್ರೀದೇವಿ ಮಹಾತ್ಮೆ ಯಕ್ಷಗಾನ ಬಯಲಾಟ ಆಯೋಜಿಸಲಾಗಿದೆ ಎಂದರು.

ಉಚಿತ ಶಿಕ್ಷಣ ಯೋಜನೆ

ಬೆಂಗಳೂರು ಬಂಟರ ಸಂಘದಿಂದ ಉಚಿತ ವಸತಿ ಸಹಿತ ಪಿಯುಸಿ ಶಿಕ್ಷಣವನ್ನು ಬೆಂಗಳೂರು ಸಂಘದ ಶಿಕ್ಷಣ ಸಂಸ್ಥೆಯಲ್ಲಿ ನೀಡಲಾಗುತ್ತಿದ್ದು, ಎಸೆಸೆಲ್ಸಿಯಲ್ಲಿ ಶೇ.70ಕ್ಕಿಂತ ಅಧಿಕ ಅಂಕ ಪಡೆದ ವಿದ್ಯಾರ್ಥಿಗಳು ಪ್ರವೇಶ ಪರೀಕ್ಷೆ ಬರೆದು ಈ ಉಚಿತ ಶಿಕ್ಷಣಕ್ಕೆ ಆಯ್ಕೆಯಾಗಲಿದ್ದಾರೆ. ಅರ್ಹ ವಿದ್ಯಾರ್ಥಿಗಳು ಏ.10ರೊಳಗೆ ಅರ್ಜಿ ಸಲ್ಲಿಸಬೇಕಿದ್ದು, ಪುತ್ತೂರಿನ ಬಂಟರ ಸಂಘ ಅಥವಾ ರಾಮಕೃಷ್ಣ ಶಿಕ್ಷಣ ಸಂಸ್ಥೆಯಿಂದ ಅರ್ಜಿ ಪಡೆಯಬಹುದಾಗಿದೆ. ಏ.26ಕ್ಕೆ ಪರೀಕ್ಷೆಯು ರಾಮಕೃಷ್ಣ ಶಿಕ್ಷಣ ಸಂಸ್ಥೆಯಲ್ಲಿ ನಡೆಯಲಿದೆ ಎಂದರು. ಪುತ್ತೂರು ಬಂಟರ ಸಂಘದ ಪ್ರಮುಖರಾದ ಕುಂಬ್ರ ದುರ್ಗಾಪ್ರಸಾದ್ ರೈ, ಸಾಜ ರಾಧಾಕೃಷ್ಣ ಆಳ್ವ ಶಿವನಾಥ ರೈ ಮೇಗಿನಗುತ್ತು, ನಿತ್ಯಾನಂದ ಶೆಟ್ಟಿ ರವಿಪ್ರಸಾದ್ ಶೆಟ್ಟಿ ಇದ್ದರು.

ಗೊಂದಲಕ್ಕೆ ಸಿಲುಕಿ ಹೆದ್ದಾರಿಯಲ್ಲೇ ಅನಗತ್ಯ ಓಡಾಟ ನಡೆಸುತ್ತಿದ್ದಾರೆ ದೂರದ ಊರಿನ ಪ್ರಯಾಣಿಕರು

ಹೆದ್ದಾರಿ ನಾಮಫಲಕದಲ್ಲಿ ಮಾಯವಾದ 'ಉಪ್ಪಿನಂಗಡಿ'!



ಉಪ್ಪಿನಂಗಡಿ: ಮಂಗಳೂರು-ಬೆಂಗಳೂರು ನಡುವಣ ಸಂಪರ್ಕ ಸಾಧಿಸುವ ರಾಷ್ಟ್ರೀಯ ಹೆದ್ದಾರಿ 75ರ ಚತುಷ್ಪಥ ಕಾಮಗಾರಿ ಅಂತಿಮ ಹಂತ ತಲುಪಿದ್ದು, ಹೆದ್ದಾರಿಯಲ್ಲಿನ ಊರುಗಳನ್ನು ನಮೂದಿಸುವ ನಾಮಫಲಕಗಳ ಅಳವಡಿಕೆಯ ವೇಳೆ ಉಪ್ಪಿನಂಗಡಿಯ ಹೆಸರು ಮರೆಯಾಗಿದ್ದು ಬದಲಾದ ಭೌಗೋಳಿಕ ಸ್ಥಿತಿಗತಿಯ ನಡುವೆ ಉಪ್ಪಿನಂಗಡಿಗೆಂದು ಬಂದವರು ಉಪ್ಪಿನಂಗಡಿಯನ್ನು ದಾಟಿ ಹೋಗುವಂತಹ ಸ್ಥಿತಿ ನಿರ್ಮಾಣವಾಗಿದೆ.

ನದಿಗಳ ಸಂಗಮ ತಾಣ

ಆಂಗ್ಲಾಡಳಿತ ಕಾಲದಲ್ಲಿ ತಾಲೂಕು ಕೇಂದ್ರವಾಗಿದ್ದ ಉಪ್ಪಿನಂಗಡಿ ನೇತ್ರಾವತಿ ಹಾಗೂ ಕುಮಾರಧಾರಾ ನದಿಗಳ ಸಂಗಮ ತಾಣದಿಂದ ಪ್ರಸಿದ್ಧವಾಗಿದ್ದು ರಸ್ತೆಗಳಿಲ್ಲದ ಅಂದಿನ ಕಾಲಘಟ್ಟದಲ್ಲಿ ದೋಣಿ ಮೂಲಕ ನದಿ ಸಾರಿಗೆ ವ್ಯವಸ್ಥೆ ಚಾಲ್ತಿಯಲ್ಲಿದ್ದ ಆ ದಿನಗಳಲ್ಲಿ ಪ್ರಮುಖ ವ್ಯಾಪಾರ ಕೇಂದ್ರವಾಗಿಯೂ ಹೆಸರು ಪಡೆದಿತ್ತು. ಆದರೆ ಸತತ ಕಾಡಿದ ನೆರೆಯಿಂದಾಗಿ ದಾಖಲೆಗಳ ಸಂರಕ್ಷಣೆಯ ನೆಲೆಗಟ್ಟಿನಲ್ಲಿ ತಾಲೂಕು ಕೇಂದ್ರವನ್ನು ಪುತ್ತೂರಿಗೆ ಸ್ಥಳಾಂತರಿಸಲಾಗಿತ್ತು. ಆದಾಗ್ಯೂ ಪುತ್ತೂರು, ಬೆಳ್ತಂಗಡಿ, ಬಂಟ್ವಾಳ , ಕಡಬ ತಾಲೂಕುಗಳ ಹಲವು ಗ್ರಾಮಗಳಿಗೆ ಪ್ರಮುಖ ವ್ಯವಹಾರ ಕೇಂದ್ರವಾಗಿ ಉಪ್ಪಿನಂಗಡಿ ಇಂದಿಗೂ ಪ್ರಾಮುಖ್ಯತೆಯನ್ನು ಪಡೆದಿದೆ. ಧಾರ್ಮಿಕವಾಗಿಯೂ ಹಲವಾರು ಪುಣ್ಯ ಕ್ಷೇತ್ರಗಳ ಸಂಪರ್ಕ ಕೊಂಡಿಯಾಗಿ, 'ದಕ್ಷಿಣ ಕಾಶಿ' ಎಂದೇ ಹೆಸರುವಾಸಿಯಾದ ಇಲ್ಲಿಗೆ ಗತಿಸಿದವರ ಮೋಕ್ಷಾ ಕಾರ್ಯಕ್ಕಾಗಿ ದಿನ ನಿತ್ಯ ಪರ ಊರಿನ ನೂರಾರು ಭಕ್ತರು ಆಗಮಿಸುತ್ತಿರುತ್ತಾರೆ. ಅಂತವರಿಗೆ ಪ್ರಸಕ್ತ ಅಗಲೀಕರಣಗೊಂಡ ಹೆದ್ದಾರಿಯಲ್ಲಿ 'ಉಪ್ಪಿನಂಗಡಿ' ಎಂಬ ಊರು ಎಲ್ಲಿದೆ ಎನ್ನುವುದೇ ತಿಳಿಯದೇ ಹೆದ್ದಾರಿಯ ಎತ್ತರಿಸಿದ ರಸ್ತೆಯಲ್ಲಿ ಸಾಗಿ ಅನಗತ್ಯ ಸುತ್ತಾಟ ನಡೆಸುವಂತಾಗಿದೆ. ಈ ಗೊಂದಲವನ್ನು ತಪ್ಪಿಸುವ ಸಲುವಾಗಿ ಹೆದ್ದಾರಿಯ ಆಯಕಟ್ಟಿನ ಬಳಿ ಉಪ್ಪಿನಂಗಡಿಗೆ ಇರುವ ದೂರವನ್ನು ದಾಖಲಿಸುವುದು, ಹಾಗೂ ಉಪ್ಪಿನಂಗಡಿ ಪರಿಸರದಲ್ಲಿ ಉಪ್ಪಿನಂಗಡಿ ಎಂಬ ನಾಮ ಫಲಕವನ್ನು ಅಳವಡಿಸುವ ಕಾರ್ಯ ಮಾಡಬೇಕಾಗಿದೆ. ಈ ತನಕ ಹೆದ್ದಾರಿ ಇಲಾಖೆಯಿಂದ ಈ ಕಾರ್ಯ ನಡೆಯದೆ ಇರುವುದರಿಂದ ದೂರದ ಊರಿನ ಪ್ರಯಾಣಿಕರು ನಿತ್ಯ ಸಂಕಷ್ಟಕ್ಕೆ ತುತ್ತಾಗುತ್ತಿದ್ದಾರೆ. ಹೆದ್ದಾರಿಯಲ್ಲಿ ಸಿಗುವ ಪ್ರತಿ ಗ್ರಾಮಗಳನ್ನು ಗುರುತಿಸುವಂತೆ ಆಯಾ ಗ್ರಾಮಗಳ ಹೆಸರನ್ನು ದಾಖಲಿಸಲು ಹೆದ್ದಾರಿ ಇಲಾಖೆ ಮುಂದಾಗಬೇಕಾಗಿದೆ.

ಕಾಮಗಾರಿ ತ್ವರಿತ ಮುಗಿಯಲಿ

ಹೆದ್ದಾರಿಯ ಕೆಲಸ ಕಾರ್ಯಗಳನ್ನು ಆದ್ಯತೆಯ ಮೇರೆಗೆ ತ್ವರಿತವಾಗಿ ನಡೆಸಿದರೆ ಮುಂಬರುವ ಮಳೆಗಾಲದ ಸಮಯ ಸಮಸ್ಯೆಗಳಿಲ್ಲದಂತೆ ಮಾಡಬಹುದು. ಉಪ್ಪಿನಂಗಡಿಯ ಒಂದು ಪಾರ್ಶ್ವದ ಸರ್ವೀಸ್ ರಸ್ತೆಯ ಕಾಂಕ್ರೀಟೀಕರಣ ಬಾಕಿಯಾಗಿರುವ ಕಾರಣವೇ ತಿಳಿಯದಾಗಿದೆ. ಕಳೆದ ಮಳೆಗಾಲದಲ್ಲಿ ಈ ರಸ್ತೆಯಲ್ಲಿ ಸಂಚಾರವೇ ಸಂಕಷ್ಟಕರವಾಗಿತ್ತು. ಮಳೆ ಕಡಿಮೆಯಾದ ಕೂಡಲೇ ರಸ್ತೆಗೆ ಕಾಂಕ್ರೀಟ್ ಹಾಕಲಾಗುವುದೆಂದು ತಿಳಿಸಿದ್ದರು. ಇದೀಗ ಬೇಸಗೆ ಮುಗಿಯುತ್ತಾ ಬಂದಿದೆ. ಹೆದ್ದಾರಿಯ ಒಂದು ಭಾಗದ ಸರ್ವೀಸ್ ರಸ್ತೆಯನ್ನು ಹಾಗೆಯೇ ಉಳಿಸಿದ್ದಾರೆ ಎನದು ಉಪ್ಪಿನಂಗಡಿಯ ಸ್ವರ್ಣೋದ್ಯಮಿ ಕಾರ್ತಿಕ್ ಸೇಠ್ ಪ್ರತಿಕ್ರಿಯಿಸಿದ್ದಾರೆ.

> **ಸದ್ಯದ ಸ್ಥಿತಿಯಲ್ಲಿ ಸ್ವಂತ ವಾಹನದಲ್ಲಿ ರಾಷ್ಟ್ರೀಯ ಹೆದ್ದಾರಿಯ ಮೂಲಕ ಉಪ್ಪಿನಂಗಡಿಗೆ ಬರುವ ಮಂದಿಗೆ ಉಪ್ಪಿನಂಗಡಿ ಎಲ್ಲಿದೆ ಎನ್ನುವುದೇ ತಿಳಿಯುತ್ತಿಲ್ಲ, ಉಪ್ಪಿನಂಗಡಿಯನ್ನು ದಾಟಿ ಮುಂದಕ್ಕೆ ಹೋಗಿ ಬಳಿಕ ಅವರಿವರಲ್ಲಿ ಕೇಳಿ ಹಿಂತಿರುಗಿ ಬರುತ್ತಿದ್ದಾರೆ.**
>
> ● **ಎಚ್ ಸುಬ್ರಹ್ಮಣ್ಯ ಶೆಣೈ, ಯುವ ಉದ್ಯಮಿ**

ತೆಂಕಿಲದ ಸ್ವಾಮಿ ಕಲಾಮಂದಿರದಲ್ಲಿ ಆಹ್ವಾನ ಪತ್ರಿಕೆ ಲೋಕಾರ್ಪಣೆ

ಮೇ 7ರಂದು ಶೃಂಗೇರಿ ಶ್ರೀಗಳಿಗೆ ಗುರು ವಂದನೆ



ಪುತ್ತೂರು: ಬಪ್ಪಳಿಗೆಯ ಶ್ರೀ ಶಂಕರ ಸಭಾಭವನದಲ್ಲಿ ಮೇ 7ರಂದು ನಡೆಯಲಿರುವ ಶೃಂಗೇರಿ ಜಗದ್ಗುರು ಶ್ರೀ ವಿಧುಶೇಖರ ಭಾರತೀ ಸನ್ನಿಧಾನಂಗಳವರ ಸಾರ್ವಜನಿಕ ಗುರು ವಂದನಾ ಕಾರ್ಯಕ್ರಮದ ಆಹ್ವಾನ ಪತ್ರಿಕೆಯನ್ನು ತೆಂಕಿಲದ ಸ್ವಾಮಿ ಕಲಾ ಮಂದಿರದಲ್ಲಿ ಮಂಗಳವಾರ ಲೋಕಾರ್ಪಣೆಗೊಳಿಸಲಾಯಿತು.

ಗುರು ವಂದನಾ ಸಮಿತಿ ಹಾಗೂ ನಗರದ ನಟ್ಟೋಜ ಫೌಂಡೇಶನ್ ಟ್ರಸ್ಟ್ ಪ್ರವರ್ತಿತ ಅಂಬಿಕಾ ಸಮೂಹ ಶಿಕ್ಷಣ ಸಂಸ್ಥೆಗಳ ಸಹಯೋಗದಲ್ಲಿ ಕಾರ್ಯಕ್ರಮ ಆಯೋಜನೆಗೊಳ್ಳಲಿದೆ.

ಈ ಸಂದರ್ಭ ಅಂಬಿಕಾ ಸಮೂಹ ಶಿಕ್ಷಣ ಸಂಸ್ಥೆಗಳ ಅಧ್ಯಕ್ಷ ಹಾಗೂ ಗುರುವಂದನಾ ಸಮಿತಿಯ ಸಮನ್ವಯಕಾರ ಸುಬ್ರಮಣ್ಯ ನಟ್ಟೋಜ ಮಾತನಾಡಿ, ಸಕಲ ಹಿಂದೂ ಸಮಾಜಕ್ಕೆಮಾರ್ಗದರ್ಶೀ ಪೀಠವೆನಿಸಿರುವ ಶೃಂಗೇರಿ ಜಗದ್ಗುರುಗಳನ್ನು ಸಕಲ ಗೌರವಾದರಗಳೊಂದಿಗೆ ಬರಮಾಡಿ ಕೊಳ್ಳುವುದು ಎಲ್ಲರ ಜವಾಬ್ದಾರಿ. ಶ್ರೀ ವಿಧುಶೇಖರ ಭಾರತೀ ಸನ್ನಿಧಾನಂ ಗಳವರು ಧರ್ಮ ಹಾಗೂ ದೇಶದ ಬಗೆಗೆ ನಿರಂತರವಾಗಿ ಜಾಗೃತಿ ಮೂಡಿಸುತ್ತಿರುವವರು. ಇಂತಹ ಗುರುಗಳನ್ನು ಹೊಂದಿರುವುದು ಹಿಂದೂ ಸಮಾಜದ ಪುಣ್ಯ ಎಂದು ಹೇಳಿದರು.

ಭಾರತ ಮಾತೆಯ ಪುತ್ಥಳಿ ಸಮರ್ಪಣೆ

ಧರ್ಮದ ಬಗೆಗೆ ಮಾತ್ರವಲ್ಲದೆ ದೇಶದ ಬಗೆಗೂ ನಿರಂತರವಾಗಿ ಸಮಾಜಕ್ಕೆ ಮಾರ್ಗದರ್ಶನ ನೀಡುತ್ತಿರುವ ಶೃಂಗೇರಿ ಜಗದ್ಗುರುಗಳಿಗೆ ಇನ್ನಿತರ ಕಾಣಿಕೆಗಳೊಂದಿಗೆ ಭಾರತ ಮಾತೆಯ ಪುತ್ಥಳಿ ಸಮರ್ಪಿಸುವ ಬಗೆಗೆ ಸಭೆಯಲ್ಲಿ ನಿರ್ಣಯಿಸಲಾಯಿತು. ಏ.21ಕ್ಕೆ ಬಪ್ಪಳಿಗೆಯ ಅಂಬಿಕಾ ಕ್ಯಾಂಪಸ್‌ನಲ್ಲಿ ಸಭೆ ಸೇರಿ ಕಾರ್ಯಕ್ರಮದ ಜವಾಬ್ದಾರಿ ಹಂಚಿಕೆ ಬಗ್ಗೆ ತೀರ್ಮಾನಿಸಲಾಯಿತು.

ಹಿರಿಯರ ಮಾರ್ಗದರ್ಶನ

ಗುರುವಂದನಾ ಸಮಿತಿಯ ಅಧ್ಯಕ್ಷ ಚಿದಾನಂದ ಬೈಲಾಡಿ ಮಾತನಾಡಿ, ಎಲ್ಲರೂ ಒಂದಾಗಿ ಕಾರ್ಯ ತತ್ಪರರಾದಾಗ ಯಾವುದೇ ಕೆಲಸ ಕಷ್ಟಸಾಧ್ಯವೆನಿಸುವುದಿಲ್ಲ, ಸ್ಪಂದನೆ, ಸಮಯಪಾಲನೆ, ಶಿಸ್ತು ಮೊದಲಾದ ವಿಚಾರ ಮೈಗೂಡಿಸಿಕೊಂಡು ಹಿರಿಯರ ಮಾರ್ಗದರ್ಶನದಲ್ಲಿ ಮುಂದುವರೆಯಬೇಕು ಎಂದು ಹೇಳಿದರು.

ಗುರು ವಂದನಾ ಸಮಿತಿಯ ಗೌರವಾಧ್ಯಕ್ಷ ಮುಗೆರೋಡಿ ಬಾಲಕೃಷ್ಣ ರೈ, ಕಾರ್ಯಾಧ್ಯಕ್ಷ ಶಿವರಾಮ ಆಳ್ವ ಕೋಶಾಧಿಕಾರಿ ಕಾವು ಹೇಮನಾಥ ಶೆಟ್ಟಿ ಸಂಚಾಲಕ ಡಾ. ಸುರೇಶ್ ಪುತ್ತೂರಾಯ, ಧರ್ಮಾಭ್ಯುದಯ ಧರ್ಮ ಶಿಕ್ಷಣ ತಾಲೂಕು ಸಮಿತಿಯ ಅಧ್ಯಕ್ಷ ದಂಬೆಕಾನ ಸದಾಶಿವ ರೈ, ಪ್ರಧಾನ ಕಾರ್ಯದರ್ಶಿ ಬಾಲಕೃಷ್ಣ ಬೋರ್ಕರ್ ಇದ್ದರು. ಗುರುವಂದನಾ ಸಮಿತಿಯ ಪ್ರಧಾನ ಕಾರ್ಯದರ್ಶಿ ಆರ್.ಸಿ. ನಾರಾಯಣ ರೆಂಜ ಕಾರ್ಯಕ್ರಮ ನಡೆಸಿಕೊಟ್ಟರು.

ಬ್ರಹ್ಮಕಲಶೋತ್ಸವ ಸಮಿತಿ ಅಧ್ಯಕ್ಷ ಡಾ. ಅರುಣಶ್ಯಾಮ್‌ಗೆ ಸನ್ಮಾನ

ಪದ್ಯಾಣ ದೇವಸ್ಥಾನದಲ್ಲಿ ಕಾರ್ಯಕರ್ತರ ಸಂಗಮ



ವಿಟ್ಲ: ಧಾರ್ಮಿಕ ಆಚರಣೆಯ ಮೂಲಕ ಸನಾತನ ಪರಂಪರೆಯನ್ನು ಉಳಿಸುವಲ್ಲಿ ಎಲ್ಲರ ಪಾತ್ರ ದೊಡ್ಡದಿದೆ. ಬ್ರಹ್ಮಕಲಶೋತ್ಸವದ ಮೂಲಕ ನಡೆದ ಧರ್ಮ ಚಿಂತನೆ ಸಮಾಜವನ್ನು ಗಟ್ಟಿಗೊಳಿಸಿದೆ. ದುಗುಡಗಳನ್ನು ಹೊತ್ತು ಬಂದವರಿಗೆ ದೈವದ ಶಕ್ತಿ ಪ್ರೇರಣೆಯಾಗಬೇಕಾಗಿದೆ. ಸಮಾಜದಲ್ಲಿ ನಡುವೆ ನಮ್ಮನ್ನು ನಾವು ಕಳೆಯುವ ಸ್ಥಿತಿಯಲ್ಲಿದ್ದು, ಸನಾತನ ಧರ್ಮದ ಆಚರಣೆಗೆ ಆದ್ಯತೆ ನೀಡಬೇಕಾಗಿದೆ ಎಂದು ಹಿರೇಹಡಗಲಿ ಮಠದ ಶ್ರೀ ಅಭಿನವ ಹಾಲಶ್ರೀ ಸ್ವಾಮೀಜಿ ಹೇಳಿದರು.

ಪದ್ಯಾಣ ಶ್ರೀ ಮಹಾಲಿಂಗೇಶ್ವರ ದೇವಸ್ಥಾನದಲ್ಲಿ ಪುನಃ ಪ್ರತಿಷ್ಠಾ ಅಷ್ಟಬಂಧ ಬ್ರಹ್ಮಕಲಶಾಭಿಷೇಕದ ಬಳಿಕ ನಡೆದ ಕಾರ್ಯಕರ್ತರ ಸಂಗಮದಲ್ಲಿ ಆಶೀರ್ವಚನ ನೀಡಿದರು.

ಕಾರ್ಯಕ್ರಮದ ಯಶಸ್ವಿಗೆ ಶ್ರಮಿಸಿದ ಬ್ರಹ್ಮಕಲಶೋತ್ಸವ ಸಮಿತಿ ಅಧ್ಯಕ್ಷ ಡಾ. ಅರುಣಶ್ಯಾಮ್ ಅವರನ್ನು ಸನ್ಮಾನಿಸಲಾಯಿತು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಹಿಂದೂ ಜಾಗರಣ ವೇದಿಕೆ ಕರ್ನಾಟಕ ಕ್ಷೇತ್ರೀಯ ಸಂಯೋಜಕ ಜಗದೀಶ್ ಕಾರಂತ ವಹಿಸಿದ್ದರು. ರವಿ ಪದ್ಯಾಣ ವೈಯಕ್ತಿಕ ಗೀತೆ ಹಾಡಿದರು. ವಿಶ್ವಹಿಂದೂ ಪರಿಷತ್ ಸಹಕಾರ್ಯದರ್ಶಿ ಶರಣ್ ಕುಮಾರ್ ಪಂಪ್ ವೆಲ್, ಬಜರಂಗದಳ ವಿಭಾಗ ಸಂಯೋಜಕ ಪುನೀತ್‌ಕುಮಾರ್ ಅತ್ತಾವರ, ಗೌರವಾಧ್ಯಕ್ಷ ಪದ್ಯಾಣ ರಘುರಾಮ ಕಾರಂತ ಇದ್ದರು. ಉಷಾ ಕಿರಣ್ ಸೇರಾಜೆ ಪ್ರಾರ್ಥಿಸಿದರು. ಸಂಘಟನಾ ಕಾರ್ಯದರ್ಶಿ ಶಿವಪ್ರಸಾದ ಶೆಟ್ಟಿ ಆನೆಯಾಲಗುತ್ತು ಸ್ವಾಗತಿಸಿದರು. ಕಾರ್ಯದರ್ಶಿ ಕೃಷ್ಣ ಎಂ.ಆರ್. ಕಡಬ ವಂದಿಸಿದರು.

ವಿಖ್ಯಾತ್, ನವ್ಯ ಕೃಷ್ಣ ಮಾಣಿಪ್ಪಾಡಿ ಅವರು ಕಾರ್ಯಕ್ರಮ ನಿರೂಪಿಸಿದರು.

> **ಹಿಂದು ಧರ್ಮ ಭಾರತದ ಪ್ರಾಣ**
>
> **ಧರ್ಮ ಭೂಮಿಯಾಗಿರುವ ಭಾರತದಿಂದ ಧರ್ಮ ಬೇರ್ಪಡಿಸುವುದರಿಂದ ಶವವಾಗುತ್ತದೆ. ಹಿಂದು, ಹಿಂದು ಧರ್ಮ ಭಾರತದ ಪ್ರಾಣವಾಗಿದ್ದು ಇದರ ಸ್ಪಷ್ಟತೆ ಕಾರ್ಯಕರ್ತನಿಗೆ ಬರಬೇಕಾಗಿದೆ. ಭಾರತಕ್ಕೆ ಚೈತನ್ಯ ತುಂಬುವ ತಾಕತ್ತು ಯುವಶಕ್ತಿಯಲ್ಲಿದ್ದು ನಾಯಕನನ್ನು ನಿರ್ಮಾಣ ಮಾಡುವುದು ಸಮಾಜವಾಗಿದೆ. ಧಾರ್ಮಿಕತೆ ಅರ್ಥವಾದಾಗ ಪ್ರತಿಯೊಬ್ಬರಲ್ಲಿ ಸ್ವಾಭಿಮಾನ ಉಕ್ಕಿ ಹರಿಯುತ್ತದೆ. ದೇವಸ್ಥಾನ ಸಮಾಜಿಕ ಪರಿವರ್ತನೆಯ ಕೇಂದ್ರವಾಗಬೇಕಾಗಿದೆ.**
>
> ● **ಜಗದೀಶ್ ಕಾರಂತ, ಹಿಂದೂ ಜಾಗರಣ ವೇದಿಕೆ ಕರ್ನಾಟಕ ಕ್ಷೇತ್ರೀಯ ಸಂಯೋಜಕ**

ಅನುದಾನಿತ ಕನ್ನಡ ಶಾಲೆಗಳಲ್ಲೂ ಆಂಗ್ಲ ಮಾಧ್ಯಮ ಅನುಮತಿಗೆ ಮನವಿ ಸಲ್ಲಿಕೆ



ಉಳ್ಳಾಲ: ಅನುದಾನಿತ ಕನ್ನಡ ಮಾಧ್ಯಮ ಪ್ರಾಥಮಿಕ ಶಾಲೆಗಳಲ್ಲಿಯೂ ಆಂಗ್ಲ ಮಾಧ್ಯಮದ ಎಲ್‌ಕೆಜಿ ಮತ್ತು ಯುಕೆಜಿ ಹಾಗೂ ಒಂದನೇ ತರಗತಿಗಳನ್ನ ಆರಂಭಿಸಲು ಅನುಮತಿ ನೀಡುವಂತೆ ಮಂಗಳೂರು ವಿಧಾನಸಭಾ ಶಾಸಕರು ಹಾಗೂ ಕರ್ನಾಟಕ ವಿಧಾನಸಭೆಯ ಸಭಾಧ್ಯಕ್ಷ ಯು.ಟಿ ಖಾದರ್ ಅವರಲ್ಲಿ ಕರ್ನಾಟಕ ರಾಜ್ಯ ಅನುದಾನಿತ ಶಾಲಾ ಕಾಲೇಜು ಶಿಕ್ಷಕರ ಸಂಘ ಹಾಗೂ ಕರ್ನಾಟಕ ರಾಜ್ಯ ಶಾಲಾ ಶಿಕ್ಷಣ ಇಲಾಖೆಯ ನೌಕರರ ಸಂಘದ ಪರ ಮನವಿ ಸಲ್ಲಿಸಲಾಯಿತು.

ಮಕ್ಕಳ ಸಂಖ್ಯೆ ಕ್ಷೀಣದ ಆತಂಕ

ಕರ್ನಾಟಕ ರಾಜ್ಯದಲ್ಲಿ ಆದರಲ್ಲೂ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಪ್ರಸಕ್ತ ಸಾಲಿನಲ್ಲಿ ಎಲ್ಲಾ ಸರಕಾರಿ ಪ್ರಾಥಮಿಕ ಶಾಲೆಗಳಲ್ಲೂ ಎಲ್‌ಕೆಜಿ,ಯುಕೆಜಿ ಪ್ರಾರಂಭವಾಗಿ ಒಂದನೇ ತರಗತಿಯಿಂದಲೇ ಆಂಗ್ಲ ಮಾಧ್ಯಮ ಬೋಧನೆಗೆ ದ್ವಿಭಾಷಾ ನೀತಿಯಂತೆ ಶಿಕ್ಷಣ ಇಲಾಖೆಯು ತಯಾರಿ ನಡೆಸುತ್ತಿದೆ.ಸರಕಾರಿ ಪ್ರಾಥಮಿಕ ಶಾಲೆಯ ಎಲ್ಲಾ ಶಿಕ್ಷಕರಿಗೆ ಈ ನಿಟ್ಟಿನಲ್ಲಿ ತರಬೇತಿಯೂ ನಡೆಯುತ್ತಿದ್ದು, ಇದು ಸಂತೋಷಕರ ವಿಚಾರವೂ ಆಗಿದೆ. ಅನುದಾನಿತ ಕನ್ನಡ ಮಾಧ್ಯಮ ಶಾಲೆಗಳಲ್ಲಿ ಇದರಿಂದಾಗಿ ಮಕ್ಕಳ ಸಂಖ್ಯೆಯು ತೀರಾ ಕಡಿಮೆಯಾಗುವ ಸಾಧ್ಯತೆಗಳಿದೆ.ಹಾಗಾಗಿ ಅನುದಾನಿತ ಕನ್ನಡ ಶಾಲೆಗಳಲ್ಲೂ ಆಂಗ್ಲ ಮಾಧ್ಯಮದ ಎಲ್‌ಕೆಜಿ, ಯುಕೆಜಿ ತರಗತಿಗಳನ್ನ ಆರಂಭಿಸಲು ಅನುಮತಿ ನೀಡುವಂತೆ ಮನವಿ ಸಲ್ಲಿಸಲಾಯಿತು.

ಸಂಘದ ಮನವಿಗೆ ತಕ್ಷಣ ಸ್ಪಂದಿಸಿದ ಸ್ಪೀಕರ್ ಖಾದರ್, ಶಿಕ್ಷಣ ಇಲಾಖೆಯ ಕಾರ್ಯದರ್ಶಿಯನ್ನು ದೂರವಾಣಿ ಮೂಲಕಸಂಪರ್ಕಿಸಿಪ್ರಸ್ತುತಸಮಸ್ಯೆಯನ್ನು ಮನವರಿಕೆ ಮಾಡಿಕೊಟ್ಟರು.ಅದಕ್ಕೆ ಇರುವ ಕಾನೂನು ತೊಡಕು ಪರಿಹರಿಸಿ ಸೂಕ್ತ ಪರಿಹಾರ ಒದಗಿಸುವುದಾಗಿಯೂ ಅವರು ಭರವಸೆ ನೀಡಿದರು.

ಸಂಘದ ರಾಜ್ಯ ಕಾರ್ಯದರ್ಶಿ ತ್ಯಾಗಂ ಹರೇಕಳ, ಕರ್ನಾಟಕ ರಾಜ್ಯ ಅನುದಾನಿತ ಶಾಲಾ ಕಾಲೇಜು ನೌಕರರ ಸಂಘದ ಜಿಲ್ಲಾಧ್ಯಕ್ಷ ಕೆಎಂಕೆ ಮಂಜನಾಡಿ, ಕರ್ನಾಟಕ ರಾಜ್ಯ ಶಾಲಾ ಶಿಕ್ಷಣ ಇಲಾಖೆ ನೌಕರರ ಸಂಘದ ಜಿಲ್ಲಾ ಪದಾಧಿಕಾರಿ ಡಾ. ಮಂಜುಳಾ ಶೆಟ್ಟಿ, ಶಿವಕುಮಾರ್, ರವಿಶಂಕರ್ ಉಪಸ್ಥಿತರಿದ್ದರು.

ವಿವೇಕಾನಂದ ಪಿಯು ಕಾಲೇಜಿನಲ್ಲಿ 'ಯುರೇಕಾ' 2ನೇ ದಿನದ ಕಾರ್ಯಾಗಾರ



ಪುತ್ತೂರು: ವಿವೇಕಾನಂದ ಪದವಿ ಪೂರ್ವ ಕಾಲೇಜಿನಲ್ಲಿ ಎಸ್ಸೆಸ್ಸೆಲ್ಸಿ ವಿದ್ಯಾರ್ಥಿಗಳಿಗಾಗಿ ಆಯೋಜಿಸಲ್ಪಟ್ಟಿರುವ 'ಯುರೇಕಾ-2026'ರ ವ್ಯಕ್ತಿತ್ವ ವಿಕಸನ ಶಿಬಿರದ 2ನೇ ದಿನ ಮೂರು ಅವಧಿಗಳಲ್ಲಿ ನಡೆಯಿತು.

ಪೂರ್ವಾಹ್ನದ ಮೊದಲ ಅವಧಿಯ ಸಂಪನ್ಮೂಲ ವ್ಯಕ್ತಿಗಳಾಗಿದ್ದ ವಿವೇಕಾನಂದ ಇಂಜಿನಿಯರಿಂಗ್ ಕಾಲೇಜಿನ ಎಐಎಂಎಲ್ ವಿಭಾಗದ ಸಹಾಯಕ ಪ್ರಾಧ್ಯಾಪಕ ಅಜಯ್ ಶಾಸ್ತ್ರಿ ಅವರು, ವಿದ್ಯಾರ್ಥಿಗಳಿಗೆ ಸೈಬರ್ ಅಪರಾಧಗಳ ಕುರಿತು ಜಾಗೃತಿ ಮೂಡಿಸುವ ಸಲುವಾಗಿ 'ಡಿಜಿಟಲ್ ಡಿಫೆಂಡರ್ಸ್ ಆಫ್ ಸೈಬರ್ ಸ್ಪೇಸ್' ಎಂಬ ಶೀರ್ಷಿಕೆಯಡಿಯಲ್ಲಿ ಕಾರ್ಯಾಗಾರ ನಡೆಸಿಕೊಟ್ಟರು. ವಿಷಯದ ಕುರಿತಾಗಿ ವಿದ್ಯಾರ್ಥಿಗಳ ಜೊತೆ ಸಂವಹನ ನಡೆಸಿದ ಅವರು, ಡಿಜಿಟಲ್ ಪ್ರಪಂಚದಲ್ಲಿ ನಾವು ಹೇಗೆ ಮೋಸ ಹೋಗುತ್ತಿದ್ದೇವೆ ಎಂಬ ಬಗ್ಗೆ ಮಾಹಿತಿ ನೀಡಿದರು.

ಬಳಿಕ 2ನೇ ಅವಧಿಯಲ್ಲಿ ಭೌತಶಾಸ್ತ್ರ ಹಾಗೂ ರಸಾಯನ ಶಾಸ್ತ್ರ ವಿಷಯಗಳ ಪ್ರಾಯೋಗಿಕ ಪ್ರಾತ್ಯಕ್ಷಿಕೆಯನ್ನು ವಿವೇಕಾನಂದ ಪ.ಪೂ. ಕಾಲೇಜಿನ ವಿಜ್ಞಾನ ವಿಭಾಗದ ಉಪನ್ಯಾಸಕ ವೃಂದದವರು ನಡೆಸಿಕೊಟ್ಟರು.

ಅಪರಾಹ್ನ ನಂತರದ ಅವಧಿಯನ್ನು ಜಿಲ್ಲಾ ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತ, ನೆಲ್ಯಾಡಿಯ ಸೈಂಟ್ ಜಾರ್ಜ್ ರಾಜ್ಯೋತ್ಸವ ಕಾಲೇಜಿನ ಇತಿಹಾಸ ಉಪನ್ಯಾಸಕ ವಿಶ್ವನಾಥ ಶೆಟ್ಟಿ ಹಾಗೂ ಪುತ್ರಿಯರಾದ ಸಾಯಿಧೃತಿ ಶೆಟ್ಟಿ ಸಾಯಿಧಾತ್ರಿ ಶೆಟ್ಟಿ ಅವರ ಸಹಕಾರದೊಂದಿಗೆ 'ನಗಬೇಕು ಆಗಾಗ ಬದುಕಿನೊಳಗೆ 'ಕ್ರಾಫ್ಟಿಂಗ್ ಎ ಲೈಫ್ ಪರ್ಪಸ್" ಎಂಬ ಶೀರ್ಷಿಕೆಯಡಿ ಶಿಬಿರಾರ್ಥಿಗಳಿಗೆ ಜೀವನ ಕೌಶಲ್ಯ, ಸೃಜನಾತ್ಮಕ ಚಿಂತನೆಗಳ ಆಗತ್ಯತೆಯನ್ನು ವಿವರಿಸಿದರು. ಬಳಿಕ ತಮ್ಮ ಹಾಡುಗಾರಿಕೆ, ವಿವಿಧ ವಿನೋದಮಯ ಚಟುವಟಿಕೆಗಳನ್ನು ಹಮ್ಮಿಕೊಂಡರು.

ಬಪ್ಪನಾಡು: ಶಯನೋತ್ಸವ, ಭಕ್ತರಿಗೆ ಮಲ್ಲಿಗೆ ಪ್ರಸಾದ ವಿತರಣೆ



ಮುಲ್ಕಿ: ಬಪ್ಪನಾಡು ಶ್ರೀ ದುರ್ಗಾ ಪರಮೇಶ್ವರೀ ಜಾತ್ರಾ ಮಹೋತ್ಸವದ ಅಂಗವಾಗಿ ಮಂಗಳವಾರ ರಾತ್ರಿ ಶ್ರೀದೇವಿಗೆ ಶಯನೋತ್ಸವ ವಿಜೃಂಭಣೆಯಿಂದ ನಡೆಯಿತು.

ಮಲ್ಲಿಗೆ ಪ್ರಿಯೆ ಶ್ರೀದೇವಿಗೆ ಭಕ್ತರಿಂದ ಲಕ್ಷಕ್ಕಿಂತಲೂ ಮಿಕ್ಕಿ ಮಲ್ಲಿಗೆ ಸಮರ್ಪಣೆ ಕಾರ್ಯ ನಡೆಯಿತು. ಸೋಮವಾರದವರೆಗೆ ಮಲ್ಲಿಗೆ ಅಟ್ಟೆಗೆ 700 ರೂ. ದರ ಇತ್ತು. ಆದರೆ ಮಂಗಳವಾರ ಏಕಾಏಕಿ ಮಲ್ಲಿಗೆ ಅಟ್ಟೆದರ 1,400 ರೂ. ಆಗಿತ್ತು. ಆದರೂ ಭಕ್ತರು ಅಧಿಕ ದರ ತೆತ್ತು ಮಲ್ಲಿಗೆ ಸಮರ್ಪಿಸಿದ್ದಾರೆ. ಅವಿಭಾಜಿತ ದ.ಕ. ಜಿಲ್ಲೆಯಲ್ಲದೆ, ದೂರದ ಬೆಂಗಳೂರು, ಮುಂಬೈನ ಭಕ್ತರೂ ಬಪ್ಪನಾಡು ದುರ್ಗೆಗೆ ಮಲ್ಲಿಗೆ ಸಮರ್ಪಿಸಿದ್ದಾರೆ. ಬುಧವಾರ ಪ್ರಾತಃ ಕಾಲ ವಿಶೇಷ ಪೂಜೆ ನಡೆದು ಗರ್ಭಗುಡಿಯ ಬಾಗಿಲು ತೆರೆದು ಕ್ಷೇತ್ರದ ತಂತ್ರಿಗಳಾದ ಶಿಬರೂರು ಗೋಪಾಲಕೃಷ್ಣ ತಂತ್ರಿ, ಅರ್ಚಕರಾದ ಶ್ರೀಪತಿ ಉಪಾಧ್ಯಾಯ, ನರಸಿಂಹ ಭಟ್ ನೇತೃತ್ವದಲ್ಲಿ ವಿಶೇಷ ಪ್ರಾರ್ಥನೆ ನಡೆದು ಕವಾಟೋದ್ಘಾಟನೆ ಶ್ರೀದೇವಿಗೆ ವಿಶೇಷ ಪೂಜೆ ನಡೆದು ಭಕ್ತರಿಗೆ ಪ್ರಸಾದ ರೂಪದಲ್ಲಿ ಮಲ್ಲಿಗೆ ವಿತರಿಸಲಾಯಿತು. ಸುಮಾರು ಹತ್ತು ಸಾವಿರಕ್ಕೂ ಮಿಕ್ಕಿ ಭಕ್ತಾದಿಗಳು ಬೆಳಗಿನ ಜಾವ ಪ್ರಸಾದಕ್ಕೆ ಆಗಮಿಸಿದ್ದರು.


ಕ್ಷೇತ್ರದ ಅನುವಂಶಿಕ ಮೊಕ್ತೇಸರ ದುಗ್ಗಣ್ಣ ಸಾವಂತ ಅರಸರು, ಕಾರ್ಯನಿರ್ವಹಣಾಧಿಕಾರಿ ಶ್ವೇತಾ ಪಳ್ಳಿ, ಮಾಜಿ ಮೊಕ್ತೇಸರ ಡಾ.ಹರಿಕೃಷ್ಣ ಪುನರೂರು, ಕಿರಣ್ ಶೆಟ್ಟಿ ಕೋಲ್ನಾಡು ಗುತ್ತು, ಸತೀಶ್ ಶೆಟ್ಟಿ ಪೇಟೆಮನೆ, ಅಕೌಂಟೆಂಟ್ ಶಿವಶಂಕರ್ ವರ್ಮ ಮತ್ತಿತರರಿದ್ದರು.

ಬಪ್ಪನಾಡು ಜಾತ್ರಾ ಸಂಭ್ರಮದಲ್ಲಿ ಸಾಂಪ್ರದಾಯಿಕ ಆಚರಣೆಯ ಪಾಲನೆ

ಶಾಂಭವಿ ತಟದಲ್ಲಿ ಮಾಗಣೆ ಜನರಿಂದ ಮತ್ಸ್ಯ ಬೇಟೆ

■ ಪುನೀತ್ ಕೃಷ್ಣ ಮುಲ್ಕಿ





ಮುಲ್ಕಿ: ಸೀಮೆಯ ಒಂಬತ್ತು ಮಾಗಣೆಯ ಶ್ರೀಕ್ಷೇತ್ರ ಬಪ್ಪನಾಡು ಶ್ರೀದುರ್ಗಾ ಪರಮೇಶ್ವರೀ ದೇವಳದ ಜಾತ್ರೆಯು ಆಗಮ ವೈದಿಕ ಸಂಪ್ರದಾಯ ಗಳಿಂದ ಆಚರಿಸಲ್ಪಟ್ಟರೆ ಮಾಗಣೆ ಗ್ರಾಮೀಣ ಭಾಗಗಳಲ್ಲಿ ಜನರು ಆಚರಿಸಿಕೊಂಡು ಬಂದಿರುವ ಸಂಪ್ರದಾಯಗಳಲ್ಲಿ ಒಂದಾದ ಮತ್ಸ್ಯ ಬೇಟೆಯೂ ಗೌಜಿಯಿಂದ ಜರುಗಿತು.

ಮಾಗಣೆಯ ಮೂಲ್ಕಿ ನಗರ ಪಂಚಾಯತ್ ವ್ಯಾಪ್ತಿಯ ಚಿತ್ರಾಪು ಗ್ರಾಮದ ಮರ್ಕುಂಜ ಕಲ್ಲಂಕ ಸುಣ್ಣದ ಬೂಡು ಬಳಿ ಶಾಂಭವಿ-ನಂದಿನಿ ಹೊಳೆಗುಂಟ ಇರುವ ತಂಕರನಾಗ ಕೊಳ ಮತ್ತು ಕೊಂಕಣ ತೋಡುಗಳಲ್ಲಿ ಪುರಾತನ ಕಾಲದಿಂದ ಮತ್ಸ್ಯ ಬೇಟೆ ಸಂಪ್ರದಾಯ ಅನಾದಿ ಕಾಲದಿಂದಲೂ ನಡೆಯುತ್ತಾ ಬಂದಿದೆ. ಕೊಂಕಣ ತೋಡು ಹಾಗೂ ತಂಕರ ನಾಗಕೊಳದಲ್ಲಿ ಬುಧವಾರ ಮುಂಜಾನೆಯಿಂದಲೇ ಮತ್ಸ್ಯ ಬೇಟೆ ಆರಂಭವಾಗಿದ್ದು, ಸಣ್ಣ ಮಕ್ಕಳಿಂದ ಹಿಡಿದು ಮಹಿಳೆಯರು ಹಾಗೂ ಗ್ರಾಮಸ್ಥರು ವಿವಿಧ ರೀತಿಯ ಬಲೆ ಬಳಸಿ ಮೀನು ಹಿಡಿಯುವುದರಲ್ಲಿ ಮಗ್ನರಾಗಿದ್ದರು.

> **ಚಿತ್ರಾಪು ಮಾತ್ರವಲ್ಲದೆ ಮುಂಬೈ ಸಹಿತ ದೂರ ದೂರುಗಳಿಂದಲೂ ಆಸಕ್ತರು ಆಗಮಿಸಿ ಮೀನು ಹಿಡಿದು ಭಕ್ಷ್ಯ ಸಿದ್ದಪಡಿಸಿ ಜಾತ್ರೆಯನ್ನು ಸಂಭ್ರಮಿಸುತ್ತಾರೆ. ಈ ಸಮಯದಲ್ಲಿ ಮಾತ್ರ ಇಲ್ಲಿ ಮೀನು ಹಿಡಿಯುತ್ತಾರೆ. ಇಲ್ಲಿ ದೊರಕುವ ವಿವಿಧ ಜಾತಿಯ ಮೀನುಗಳು ಬಲು ರುಚಿಕರವಾಗಿರುತ್ತದೆ. ಹಿರಿಯರು ಇಂದಿಗೂ ಇದು ದೇವರ ಪ್ರಸಾದವೆಂದೇ ತಿಳಿಯುತ್ತಾರೆ.**
>
> ● **ಸಂಜೀವ,** ಸ್ಥಳೀಯರು

---

2 ದಿನಗಳ ಎಸ್‌ಡಿಎಂ ಕಾಲೇಜಿನ ಉದ್ಯೋಗ ಮೇಳ ಯಶಸ್ವಿ

1,390 ಮಂದಿಗೆ ದೊರೆಯಿತು ಉದ್ಯೋಗ

ಬೆಳ್ತಂಗಡಿ: ಉಜಿರೆಯ ಶ್ರೀ ಧರ್ಮಸ್ಥಳ ಮಂಜುನಾಥೇಶ್ವರ ಶಿಕ್ಷಣ ಸಂಸ್ಥೆ ಆಶ್ರಯದಲ್ಲಿ ಎಸ್.ಡಿ.ಎಂ. ಸ್ವಾಯತ್ತ ಕಾಲೇಜಿನಲ್ಲಿ ಎಸ್.ಡಿ.ಎಂ. ಇನ್ಸ್‌ಟಿಟ್ಯೂಟ್ ಆಫ್ ಟೆಕ್ನಾಲಜಿ ಮತ್ತು ಎಸ್.ಡಿ.ಎಂ. ಪಾಲಿಟೆಕ್ನಿಕ್ ಸಹಯೋಗದಲ್ಲಿ ನಡೆದ 2 ದಿನಗಳ ಬೃಹತ್ ಉದ್ಯೋಗ ಮೇಳ ಯಶಸ್ವಿಯಾಗಿ ಸಂಪನ್ನಗೊಂಡಿತು.

1,776 ಉದ್ಯೋಗಾಕಾಂಕ್ಷಿಗಳು ಹಾಗೂ ದೇಶದ 124 ಪ್ರತಿಷ್ಠಿತ ಸಂಸ್ಥೆಗಳು ಉದ್ಯೋಗ ಮೇಳದಲ್ಲಿ ಭಾಗವಹಿಸಿದ್ದು, ವಿವಿಧ ಹುದ್ದೆಗಳಿಗೆ ಸ್ಥಳದಲ್ಲೇ ಸಂದರ್ಶನ ನಡೆಯಿತು. 1,390 ಉದ್ಯೋಗಾಕಾಂಕ್ಷಿಗಳು ಪ್ರತಿಷ್ಠಿತ ಕಂಪೆನಿಗಳ ಉದ್ಯೋಗಕ್ಕೆ ಆಯ್ಕೆಯಾದರು. ಉದ್ಯೋಗಾಕಾಂಕ್ಷಿಗಳಿಗೆ ಉಚಿತ ನೋಂದಣಿ ವ್ಯವಸ್ಥೆ ಕಲ್ಪಿಸಲಾಗಿತ್ತು. ಬಹು ಕಂಪೆನಿಗಳಿಗೆ ಸಂದರ್ಶನ ಎದುರಿಸುವ ಮುಕ್ತ ಅವಕಾಶ ಕಲ್ಪಿಸಲಾಗಿದ್ದ ಹಿನ್ನೆಲೆಯಲ್ಲಿ ಕೆಲವು ಅಭ್ಯರ್ಥಿಗಳಿಗೆ ಎರಡಕ್ಕೂ ಅಧಿಕ ಕಂಪೆನಿಗಳಲ್ಲಿ ಉದ್ಯೋಗಕ್ಕೆ ಆಫರ್ ದೊರೆಯಿತು. ಹೀಗಾಗಿ, ಒಟ್ಟಾರೆ ಎರಡು ದಿನಗಳಲ್ಲಿ 1776 ಅಭ್ಯರ್ಥಿಗಳಿಗೆ 3,556 ಹುದ್ದೆಗಳಿಗೆ ಆಯ್ಕೆಯಾದರು.

ಐಟಿ ಮತ್ತು ಸಾಫ್ಟ್‌ವೇರ್ ಡೆವಲಪ್‌ಮೆಂಟ್, ಫಾರ್ಮಾಸ್ಯೂಟಿಕಲ್ಸ್, ಬ್ಯಾಂಕಿಂಗ್ ಮತ್ತು ಫೈನಾನ್ಸ್, ಐಟಿ ಮತ್ತು ಐಟಿಇಎಸ್, ಸೇಲ್ಸ್ ಮತ್ತು ಮಾರ್ಕೆಟಿಂಗ್, ರೀಟೈಲ್ ಮತ್ತು ಸೇಲ್ಸ್, ಶಿಕ್ಷಣ, ಪ್ರವಾಸೋದ್ಯಮ ಮತ್ತು ಆತಿಥ್ಯ, ಅಕೌಂಟಿಂಗ್ ಮತ್ತು ಟ್ಯಾಕ್ಸ್ ಕನ್ಸಲ್ಟೆನ್ಸಿ, ಉತ್ಪಾದನೆ, ಆಟೋಮೊಬೈಲ್, ಟೆಲಿಕಾಂ ಮತ್ತು ಮೀಡಿಯಾ ಸೇರಿದಂತೆ ಹಲವು ಕ್ಷೇತ್ರಗಳಿಗೆ ಸಂಬಂಧಿಸಿದ ಹುದ್ದೆಗಳಿದ್ದವು. ಎಲ್ಲಾ ಕ್ಷೇತ್ರದ ವಿದ್ಯಾರ್ಥಿಗಳಿಗೆ ಸ್ಪರ್ಧೆಗೆ ಮುಕ್ತ ಮತ್ತು ಉಚಿತ ಅವಕಾಶ ಕಲ್ಪಿಸಲಾಗಿತ್ತು.

ಉದ್ಯೋಗ ಮೇಳದಲ್ಲಿ ಪಿ.ಯು.ಸಿ., ಬಿ.ಎ, ಬಿ.ಬಿ.ಎ, ಬಿ.ಕಾಂ, ಬಿ.ಸಿ.ಎ, ಬಿ.ಎಸ್ಸಿ, ಬಿ.ವೋಕ್, ಐ.ಟಿ.ಐ, ಡಿಪ್ಲೋಮಾ, ಇಂಜಿನಿಯರಿಂಗ್, ಬಿ.ಟೆಕ್, ಬಿ.ಎಡ್, ಎಂ.ಎ, ಎಂ.ಸಿ.ಜೆ, ಎಂ.ಎಸ್.ಡಬ್ಲ್ಯು, ಎಂ.ಕಾಂ, ಎಂ.ಸಿ.ಎ, ಎಂ.ಎಸ್ಸಿ, ಎಂ.ಬಿ.ಎ, ಮತ್ತು ಜಿ.ಎನ್.ಎಂ ನರ್ಸಿಂಗ್ ಸೇರಿದಂತೆ ಹಲವು ಶೈಕ್ಷಣಿಕ ಅರ್ಹತೆ ಹೊಂದಿದ ಅಭ್ಯರ್ಥಿಗಳು ಭಾಗವಹಿಸಿದ್ದರು.

ನಿರಂತರ ಸುದ್ದಿ ಅಪ್‌ಡೇಟ್‌ಗಾಗಿ
Google Lens ನಲ್ಲಿ
ಈ QRಕೋಡ್ ಸ್ಕ್ಯಾನ್ ಮಾಡಿ
WhatsApp ಗ್ರೂಪ್ ಇಂದೇ ಸೇರಿ!

ನಿಮ್ಮೂರಿನ ಸುದ್ದಿ

ಹೊಸದಿಗಂತ ಸಂಗಮ 3

ಗುರುವಾರ 09, ಏಪ್ರಿಲ್ 2026 | website hosadigantha.com | E-paper epaper.hosadigantha.com | Email diganthamlr@gmail.com | Twitter HosadiganthaWeb | ಪುಟ ಸಂಖ್ಯೆ

ಸುತ್ತಮುತ್ತ

ಏ.11: ರಿಕ್ಷಾ ಡ್ರೈವರ್ ಅಸೋಸಿಯೇಶನ್‌ನ ಸುವರ್ಣ ಮಹೋತ್ಸವ

ಬಂಟ್ವಾಳ: ರಿಕ್ಷಾ ಡ್ರೈವರ್ ಅಸೋಸಿಯೇಶನ್ ಬಂಟ್ವಾಳ ಇದರ ಸುವರ್ಣ ಮಹೋತ್ಸವ ಹಾಗೂ ರಿಕ್ಷಾ ಭವನದ 25ನೇ ವರ್ಷದ ಬೆಳ್ಳಿ ಹಬ್ಬ ಆಚರಣೆಯು ಏ.11 ರಂದು ಬಿ.ಸಿ.ರೋಡಿನ ರಿಕ್ಷಾ ಭವನದಲ್ಲಿ ನಡೆಯಲಿದೆ ಎಂದು ಸಂಘದ ಅಧ್ಯಕ್ಷ, ನ್ಯಾಯವಾದಿ ಬಿ.ರಾಜೇಶ್ ಬೊಳ್ಳುಕಲ್ಲು ಅವರು ತಿಳಿಸಿದ್ದಾರೆ. ಬಂಟ್ವಾಳ ಪ್ರೆಸ್ ಕ್ಲಬ್‌ನಲ್ಲಿ ಬುಧವಾರ ಪತ್ರಿಕಾಗೋಷ್ಠಿಯಲ್ಲಿ ಈ ಬಗ್ಗೆ ಮಾಹಿತಿ ನೀಡಿ, ಅಂದು ನಡೆಯುವ ಸಭಾ ಕಾರ್ಯಕ್ರಮವನ್ನು ಬಂಟ್ವಾಳ ಶಾಸಕ ರಾಜೇಶ್ ನ್ಯಾಕ್ ಉದ್ಘಾಟಿಸಲಿದ್ದು ಸಂಸದ ಕ್ಯಾ.ಬ್ರಿಜೇಶ್ ಚೌಟ, ಮಾಜಿ ಸಚಿವ ಬಿ.ರಮಾನಾಥ ರೈ ಸೇರಿದಂತೆ ಹಲವಾರು ಗಣ್ಯರು ಅತಿಥಿಗಳಾಗಿ ಭಾಗವಹಿಸಲಿದ್ದಾರೆ. ಈ ಸಂದರ್ಭ ಅಸೋಸಿಯೇಶನ್ ನ ಗೌರವಾಧ್ಯಕ್ಷ ಟಿ. ನಾರಾಯಣ ಪೂಜಾರಿ ಹಾಗೂ ಹಿರಿಯ ರಿಕ್ಷಾ ಚಾಲಕನ್ನು ಸನ್ಮಾನಿಸಲಾಗುವುದು, ಸಂಜೆ ಸಾಂಸ್ಕೃತಿಕ ಕಾರ್ಯಕ್ರಮದ ಪ್ರಯುಕ್ತ ನಾಟಕ ಪ್ರದರ್ಶನ ನಡೆಯಲಿದೆ ಎಂದರು. ಪತ್ರಿಕಾಗೋಷ್ಠಿಯಲ್ಲಿ ಸಂಘದ ಉಪಾಧ್ಯಕ್ಷ ಬಿ.ಹುಸೈನ್ ಪರ್ಲ್ಯ, ಪ್ರಧಾನ ಕಾರ್ಯದರ್ಶಿ ಪ್ರಕಾಶ್ ಪೂಜಾರಿ ಪೂಂಜರಕೋಡಿ, ಸಂಘಟನಾ ಕಾರ್ಯದರ್ಶಿ ಚಂದ್ರಶೇಖರ ಭಂಡಾರಿಬೆಟ್ಟು ಉಪಸ್ಥಿತರಿದ್ದರು.

ಬ್ಲಡ್ ಡೋನರ್ಸ್ ಸಂಸ್ಥೆಯಿಂದ ರಕ್ತ ಯೋಧ ಪ್ರಶಸ್ತಿ' ಪ್ರದಾನ

ಉಳ್ಳಾಲ: ಬ್ಲಡ್ ಡೋನರ್ಸ್ ಮಂಗಳೂರು ಸಂಸ್ಥೆಯ ಹದಿಮೂರನೇ ವರ್ಷದ ಅಂಗವಾಗಿ ವಿವಿಧ ಕಡೆಗಳಲ್ಲಿ ಒಟ್ಟು ಹದಿಮೂರು ರಕ್ತದಾನ ಶಿಬಿರಗಳನ್ನು ನಡೆಸಲಾಗುತ್ತಿದ್ದು, ರಕ್ತದ ಕೊರತೆಯನ್ನು ನೀಗಿಸಲು ಅಗತ್ಯವಿರುವ ಎಲ್ಲಾ ವ್ಯವಸ್ಥೆಯನ್ನು ಸಂಸ್ಥೆಯ ತಂಡದಿಂದ ಕೈಗೊಳ್ಳಲಾಗಿದೆ ಎಂದು ಸಂಸ್ಥೆಯ ಅಧ್ಯಕ್ಷ ನವಾಝ್ ನರಿಂಗಾನ ಹೇಳಿದರು.

ತೊಕ್ಕೊಟ್ಟಿನ ಉಳ್ಳಾಲ ಪ್ರೆಸ್ ಕ್ಲಬ್ ನಲ್ಲಿ ಶನಿವಾರ ನಡೆದ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು ಸಂಸ್ಥೆಯ ವತಿಯಿಂದ ಇದುವರೆಗೆ 550ಕ್ಕೂ ಹೆಚ್ಚು ರಕ್ತದಾನ ಶಿಬಿರಗಳನ್ನು ಯಶಸ್ವಿಯಾಗಿ ಆಯೋಜಿಸಿ 120000 ಯೂನಿಟ್ ರಕ್ತ ಸಂಗ್ರಹಣೆ ಮಾಡಿದ್ದೇವೆ ಎಂದರು. ಏ.10ರಂದು ದುಬೈ, ಏ.12ರಂದು ಕುಶಾಲನಗರ ಹಾಗೂ ಹೊನ್ನಾವರದಲ್ಲಿ ರಕ್ತದಾನ ಶಿಬಿರಗಳು ನಡೆಯಲಿದೆ. ಜೂ.13ರಂದು ನಗರದ ಪುರಭವನದಲ್ಲಿ ನಡೆಯುವ ಕಾರ್ಯಕ್ರಮದಲ್ಲಿ ಐವತ್ತಕ್ಕಿಂತ ಹೆಚ್ಚು ಬಾರಿ ರಕ್ತದಾನ ಮಾಡಿದ ವ್ಯಕ್ತಿಗಳನ್ನು ಗುರುತಿಸಿ 'ರಕ್ತ ಯೋಧ ಪ್ರಶಸ್ತಿ' ನೀಡಲು ತೀರ್ಮಾನಿಸಲಾಗಿದೆ ಎಂದರು. ಬ್ಲಡ್ ಡೋನರ್ಸ್ ಮಂಗಳೂರು ಸಂಸ್ಥೆಯ ಉಪಾಧ್ಯಕ್ಷ ಅಶ್ರಫ್ ಸಿ.ಎಂ ಉಪ್ಪಿನಂಗಡಿ, ಪ್ರಧಾನ ಕಾರ್ಯದರ್ಶಿ ಸಾಹುಲ್ ಹಮೀದ್ ಕಾಶಿಪಟ್ನ, ಶಿಬಿರ ಆಯೋಜಕ ಫರ್ಝಾನ್ ಅಹ್ಮದ್ ಹಾಗೂ ಕಾರ್ಯದರ್ಶಿ ನಿಸಾರ್ ಉಳ್ಳಾಲ ಹಾಗೂ ಸಂಘಟನಾ ಕಾರ್ಯದರ್ಶಿ ಅಬ್ದುಸ್ಸಲಾಂ ಚೆಂಬುಗುಡ್ಡೆ ಪತ್ರಿಕಾಗೋಷ್ಠಿಯಲ್ಲಿ ಉಪಸ್ಥಿತರಿದ್ದರು.

ಏ.17-28: ಪೆರಡಾಲ ದೇವಳದ ಬ್ರಹ್ಮಕಲಶೋತ್ಸವ, ಜಾತ್ರೆ

ಪುತ್ತೂರು: ಪುತ್ತೂರಿನ ಅತೀ ಹೆಚ್ಚು ಭಕ್ತರನ್ನೊಳಗೊಂಡ ಕಾಸರಗೋಡು ತಾಲೂಕಿನ ಪೆರಡಾಲ ಶ್ರೀ ಉದನೇಶ್ವರ ದೇವಸ್ಥಾನದಲ್ಲಿ ನವೀಕರಣ ಪುನಃ ಪ್ರತಿಷ್ಠೆ, ಅಷ್ಟಬಂಧ ಬ್ರಹ್ಮಕಲಶೋತ್ಸವ ಮತ್ತು ವಾರ್ಷಿಕ ಉತ್ಸವ ಏ.17 ರಿಂದ 28ರ ತನಕ ನಡೆಯಲಿದೆ ಎಂದು ಬ್ರಹ್ಮಕಲಶೋತ್ಸವ ಸಮಿತಿ ಪ್ರಧಾನ ಕಾರ್ಯದರ್ಶಿ ನಿರಂಜನ ರೈ ಪೆರಡಾಲ ತಿಳಿಸಿದ್ದಾರೆ. ಬುಧವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಬ್ರಹ್ಮಕಲಶೋತ್ಸವಕ್ಕೆ ಏ.17ರಂದು ಹಸಿರುಹೊರೆಕಾಣಿಕೆ ಮೆರವಣಿಗೆ, ಏ.18ರಂದು ನವೀಕರಿಸಿದ ರಾಜಗೋಪುರ, ರಾಜಾಂಗಣ ಮೇಲ್ಛಾವಣಿ ಮತ್ತು ನೂತನ ಭೋಜನ ಶಾಲೆ ಲೋಕಾರ್ಪಣೆ ನಡೆಯಲಿದೆ ಎಂದರು. ಬ್ರಹ್ಮಶ್ರೀ ಕುಂಟಾರು ರವೀಶ ತಂತ್ರಿಯವರ ನೇತೃತ್ವದಲ್ಲಿ ಏ.23ರಂದು ಶ್ರೀದೇವರ ಪ್ರತಿಷ್ಠೆ ನಡೆಯಲಿದೆ. ಏ.26ರಂದು ಎಡನೀರು ಸಚ್ಚಿದಾನಂದ ಭಾರತೀ ಸ್ವಾಮೀಜಿಯವರ ಉಪಸ್ಥಿತಿಯಲ್ಲಿ ಸಹಸ್ರ ಕಲಶಾಭಿಷೇಕ ಮತ್ತು ಬ್ರಹ್ಮಕಲಶಾಭಿಷೇಕ ನಡೆಯಲಿದೆ. ಏ.27ರಂದು ವರ್ಷಾವಧಿ ಉತ್ಸವ ನಡೆಯಲಿದೆ. ಏ.28ಕ್ಕೆ ಶ್ರೀ ದೇವರ ಬಲಿ ಉತ್ಸವ, ಬಟ್ಟಲು ಕಾಣಿಕೆ, ಮಧ್ಯಾಹ್ನ ಪಿಲಿಚಾಮುಂಡಿ ದೈವದ ಕೋಲ ನಡೆಯಲಿದೆ. ಸುದ್ದಿಗೋಷ್ಠಿಯಲ್ಲಿ ಬ್ರಹ್ಮಕಲಶೋತ್ಸವ ಸಮಿತಿ ಜೊತೆ ಕಾರ್ಯದರ್ಶಿ ಮತ್ತು ಪ್ರಚಾರ ಸಮಿತಿ ಸಂಚಾಲಕ ಡಾ. ಶ್ರೀಶಕುಮಾರ್ ಪಂಜಿತ್ತಡ್ಕ, ಸಾಂಸ್ಕೃತಿಕ ಕಾರ್ಯಕ್ರಮ ಸಮಿತಿ ಪ್ರಧಾನ ಸಂಚಾಲಕ ರಾಜೇಶ್ ಮಾಸ್ಟರ್ ಆಗಲ್ಪಾಡಿ, ಲೆಕ್ಕ ಪರಿಶೋಧಕ ಕುಂಞಣ್ಣ ಉಪಸ್ಥಿತರಿದ್ದರು.

ಸುಳ್ಯ ಶ್ರೀ ಕೇಶವಕೃಪಾ ವೇದ ಮತ್ತು ಕಲಾ ಪ್ರತಿಷ್ಠಾನದಿಂದ ಆಯೋಜನೆ | 30 ದಿನಗಳ ಕಾಲ ಚಟುವಟಿಕೆ

ಏ.19ರಿಂದ 26ನೇ ವರ್ಷದ ವೇದ, ಯೋಗ, ಕಲಾ ಶಿಬಿರ

ಸುಳ್ಯ: ಶ್ರೀ ಕೇಶವಕೃಪಾ ವೇದ ಮತ್ತು ಕಲಾ ಪ್ರತಿಷ್ಠಾನದ ಆಶ್ರಯದಲ್ಲಿ 26ನೇ ವರ್ಷದ ವೇದ-ಯೋಗ-ಕಲಾ ಶಿಬಿರವು ಏ.19ರಿಂದ ಮೇ 17ರ ತನಕ ಸುಳ್ಯ ಖಾಸಗಿ ಬಸ್ಸು ನಿಲ್ದಾಣದ ಬಳಿಯ ಶಿವಕೃಪಾ ಕಲಾ ಮಂದಿರದಲ್ಲಿ ನಡೆಯಲಿದೆ ಎಂದು ಶ್ರೀ ಕೇಶವ ಕೃಪಾ ವೇದ ಮತ್ತು ಕಲಾ ಪ್ರತಿಷ್ಠಾನದ ಅಧ್ಯಕ್ಷ ಪುರೋಹಿತ ನಾಗರಾಜ ಭಟ್ ತಿಳಿಸಿದ್ದಾರೆ.

ಸುಳ್ಯ ಪ್ರೆಸ್ ಕ್ಲಬ್‌ನಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ವೇದ ಶಿಬಿರಕ್ಕೆ ಮುಂಚಿತವಾಗಿ ಏ.12ರಿಂದ 17ರ ತನಕ ಸಂಸ್ಕಾರ ವಾಹಿನಿ ಶಿಬಿರ ಕೇಶವ ಕೃಪಾದಲ್ಲಿ ನಡೆಯಲಿದ್ದು ಪುಟಾಣಿಗಳ ತೊದಲು ನುಡಿಗಳಲ್ಲಿ ವೇದ ಘೋಷಗಳು ಮೊಳಗಲಿದ್ದು ಜೊತೆಗೆ ಭಿನ್ನ ಭಿನ್ನ ಕಲಾಪ್ರಕಾರಗಳು ಅರಳಿ ಮೆಳೈಸುತ್ತದೆ. ಪುಟಾಣಿ ಯೋಗಪಟುಗಳು ದೇಹ ಮನಸ್ಸನ್ನು ಯೋಗದಲ್ಲಿ ತೊಡಗಿಸಿಕೊಳ್ಳಲಿದ್ದಾರೆ ಎಂದು ತಿಳಿಸಿದರು.

'ಸಂಸ್ಕಾರ ವಾಹಿನಿ' ಶಿಬಿರ

ಆರಂಭದಲ್ಲಿ ವೇದ ತರಗತಿಯ ಉದ್ದೇಶವನ್ನಷ್ಟೇ ಹೊಂದಿದ್ದ ಪ್ರತಿಷ್ಠಾನ, ಆ ಬಳಿಕ ವಿವಿಧ ಚಟುವಟಿಕೆಗಳ ಮೂಲಕ ತನ್ನ ಪರಿಯನ್ನು ವಿಸ್ತರಿಸಿತು. ಯೋಗದ ಜೊತೆಗೆ ಕಲಾ ಪ್ರಕಾರಗಳಾದ ಯಕ್ಷಗಾನ, ಕಂಸಾಳೆ, ಜಾದೂ, ಭಜನೆ, ಸಂಗೀತ, ಪೇಪರ್ ಕಟ್ಟಿಂಗ್, ಮಿಮಿಕ್ರಿ, ಈಜು ತರಬೇತಿ ಮೊದಲಾದ ಸೃಜನಶೀಲ ಕಲೆಗಳನ್ನು ಶಿಬಿರಾರ್ಥಿಗಳಿಗೆ ಪರಿಚಯಿಸುವ ಕಾರ್ಯ ಕೈಗೆತ್ತಿಕೊಂಡಿತು. ಸುಮಾರು 30 ದಿನಗಳ ಕಾಲ ನಡೆಯುವ ಶಿಬಿರವು ನಿರ್ದಿಷ್ಟ ಸಮುದಾಯದ ಉಪನೀತ ವಟುಗಳಿಗೆ ಸೀಮಿತವಾಗಿದ್ದು, ಸಮಾಜದ ಎಲ್ಲಾ ಜಾತಿ ಸಮುದಾಯದ ಮಕ್ಕಳಿಗೂ ಸಂಸ್ಕಾರ ಕಲಿಸುವ ಉದ್ದೇಶದಿಂದ ಒಂದು ವಾರಗಳ ಕಾಲ ನಡೆಸಲ್ಪಡುವ 'ಸಂಸ್ಕಾರ ವಾಹಿನಿ' ಎಂಬ ವಿನೂತನ ಶಿಬಿರವನ್ನು ಪ್ರತಿಷ್ಠಾನದ ವತಿಯಿಂದ ಆರಂಭಿಸಲಾಯಿತು ಎಂದು ಅವರು ವಿವರಿಸಿದರು. ಈ ಶಿಬಿರದಲ್ಲಿ ಮುಖ್ಯವಾಗಿ ಚರಕ ಸಂಹಿತೆಯಲ್ಲಿ ಉಲ್ಲೇಖಿಸಲ್ಪಟ್ಟ ಆರೋಗ್ಯಕರ ಆಯುರ್ವೇದ ಭೋಜನ ಪದ್ಧತಿ, ಊಟ ತಿಂಡಿ ಸೇವಿಸುವಾಗ ಅಳವಡಿಸಿಕೊಳ್ಳಬೇಕಾದ ಶಿಸ್ತಿನ ಕ್ರಮಗಳು, ದೇವರ ತೀರ್ಥ-ಪ್ರಸಾದ ಸೇವಿಸುವ ಶಾಸ್ತ್ರೋಕ್ತ ಪದ್ಧತಿ, ಹಿಂದೂ ಧರ್ಮದ ನಂಬಿಕೆಗಳು ಮತ್ತು ಸಹಸ್ರನಾಮ, ವಿಷ್ಣು ಸಹಸ್ರನಾಮ ಮುಂತಾದ ಶ್ಲೋಕಗಳನ್ನು ಸ್ಪುಟವಾಗಿ ಪಠಿಸುವ ಸಾಂಪ್ರದಾಯಿಕ ವಿಧಾನ, ಸುಭಾಷಿತಗಳು, ಆದರ್ಶ ದಿನಚರಿ ರೂಪಿಸಿಕೊಳ್ಳುವ ಬಗೆ, ನೈತಿಕ ಶಿಕ್ಷಣ, ಮಾನವೀಯ ಮೌಲ್ಯಗಳು ಮುಂತಾದ ವ್ಯಕ್ತಿತ್ವ ವಿಕಸನಕ್ಕೆ ಸಂಬಂಧಿಸಿದ ವಿಚಾರಗಳನ್ನು ಪ್ರಾತ್ಯಕ್ಷಿಕೆಯ ಮೂಲಕ ಕಲಿಸಿಕೊಡಲಾಗುತ್ತಿದೆ ಎಂದು ನಾಗರಾಜ ಭಟ್ ಹೇಳಿದರು.

ಪ್ರತೀ ವರ್ಷ ಏಪ್ರಿಲ್ ತಿಂಗಳಲ್ಲಿ ನಡೆಯುವ ಪ್ರತಿಷ್ಠಾನದ ವೇದ ಶಿಬಿರಕ್ಕೆ ಪ್ರತೀ ವರ್ಷವೂ ರಾಜ್ಯ ಮತ್ತು ಹೊರರಾಜ್ಯಗಳಿಂದ ಹಲವಾರು ವಿದ್ಯಾರ್ಥಿಗಳಿಂದ ಅರ್ಜಿಗಳು ಬರುತ್ತಿದ್ದು ಅವುಗಳ ಪೈಕಿ ಸಂದರ್ಶನ ನಡೆಸಿ ಆರಿಸಿದ ಋಗ್ವೇದ ಹಾಗೂ ಯಜುರ್ವೇದದ 85 ಹೊಸ ವಿದ್ಯಾರ್ಥಿಗಳಿಗೆ ವೇದ ಶಿಬಿರಕ್ಕೆ ಪ್ರವೇಶ ಕಲ್ಪಿಸಿ ಕೊಡಲಾಗುತ್ತದೆ. ಒಟ್ಟು ಪ್ರಸ್ತುತ ಶಿಬಿರಾರ್ಥಿಗಳ ಸಂಖ್ಯೆ 220ಕ್ಕೆ ತಲುಪಿದ್ದು ಯಜುರ್ವೇದ ವಿಭಾಗದಲ್ಲಿ 5 ತರಗತಿಗಳಿದ್ದು ಸಂಧ್ಯಾವಂದನೆಯಿಂದ ಮೊದಲ್ಗೊಂಡು ಸೂಕ್ತಗಳು, ರುದ್ರ ಚಮಕ ಶ್ರೀ ಶಿವರಾಧನೆಯ ಪ್ರಾಕ್ಟಿಕಲ್ ಅಲ್ಲದೆ ಅಗ್ನಿಮುಖ ಪ್ರಯೋಗ, ಸಪ್ತಶತೀ ದುರ್ಗಾಪೂಜೆ ಪಾಠಗಳೂ ನಡೆಯುತ್ತಿವೆ. 25 ವರ್ಷಗಳಲ್ಲಿ ಒಟ್ಟು 4613 ವಿದ್ಯಾರ್ಥಿಗಳು ಪ್ರತಿಷ್ಠಾನದ ಶಿಬಿರದಲ್ಲಿ ವೇದಾಧ್ಯಯನ ನಡೆಸಿದ್ದಾರೆ ಎಂದು ಅವರು ತಿಳಿಸಿದರು. ಸುದ್ದಿಗೋಷ್ಠಿಯಲ್ಲಿ ಶಿಬಿರ ಸಂಚಾಲಕ ಅಭಿರಾಮ ಭಟ್ ಸರಳಿಕುಂಜ, ಪ್ರತಿಷ್ಠಾನದ ಪ್ರಬಂಧಕ ಯಶಸ್ವಿ ಪಿ. ಭಟ್, ಸರಣಿ ಶಿವಪೂಜಾ ಅಭಿಯಾನದ ಪ್ರಧಾನ ಸಂಚಾಲಕ ಗೋಪಾಲಕೃಷ್ಣ ಭಟ್ ಶಿವನಿವಾಸ ಹಾಗೂ ಸದಸ್ಯೆ ಸುಜಾತ ರಾಧಾಕೃಷ್ಣ ಭಟ್ ಉಪಸ್ಥಿತರಿದ್ದರು.



ರಾಘವೇಶ್ವರ ಶ್ರೀ ಭೇಟಿ

ವಿಶೇಷವಾಗಿ ಈ ಭಾರಿ ರಾಮಚಂದ್ರಾಪುರ ಮಠದ ಶ್ರೀ ರಾಘವೇಶ್ವರ ಭಾರತೀ ಮಹಾಸ್ವಾಮಿಗಳು ಏ.26ರಂದು ಶಿಬಿರಕ್ಕೆ ಆಗಮಿಸಿ ಏ.27ರಂದು ಶಿಬಿರಾರ್ಥಿಗಳೇ ನೆರವೇರಿಸುವ ಹವನದಲ್ಲಿ ಭಾಗವಹಿಸಿ ಆಶೀರ್ವಚನ ನೀಡಲಿದ್ದಾರೆ ಎಂದು ನಾಗರಾಜ ಭಟ್ ತಿಳಿಸಿದರು.

ನಗರವಾಸಿಗಳ ಸಮಸ್ಯೆ ದೂರ | ಪುಡಾ ಅಧ್ಯಕ್ಷ ಅಮಳ ರಾಮಚಂದ್ರ ಮಾಹಿತಿ

ಏಕ ನಿವೇಶನ ವಿನ್ಯಾಸ: ಅರ್ಜಿ ಸಲ್ಲಿಸಲು ಅವಕಾಶ

ಪುತ್ತೂರು: ರಾಜ್ಯದ ನಗರ ಸ್ಥಳೀಯ ಸಂಸ್ಥೆಗಳ ವ್ಯಾಪ್ತಿಯಲ್ಲಿ ಅನಧಿಕೃತವಾಗಿ ರಚಿಸಿರುವ ಬಡಾವಣೆಗಳಲ್ಲಿನ ಬಿ-ಖಾತಾಗಳಿಗೆ ಎ-ಖಾತಾ ನೀಡುವ ಕುರಿತು ಸರಕಾರ ಆದೇಶಿಸಿದ್ದು ಈ ಹಿನ್ನೆಲೆಯಲ್ಲಿ ನಿವೇಶನದ ಸಂಪರ್ಕ ರಸ್ತೆಯನ್ನು ನಗರಸಭೆಯು ಸಾರ್ವಜನಿಕ ರಸ್ತೆ ಎಂದು ಘೋಷಿಸಿ ಅದರ ದಾಖಲೆಗಳನ್ನಿಟ್ಟು ಪುತ್ತೂರು ನಗರಾಭಿವೃದ್ಧಿ ಪ್ರಾಧಿಕಾರ (ಪುಡಾ)ಕ್ಕೆ ಏಕ ನಿವೇಶನ ವಿನ್ಯಾಸಕ್ಕೆ ಅರ್ಜಿ ಸಲ್ಲಿಸಬಹುದಾಗಿದೆ ಎಂದು ಪುಡಾ ಅಧ್ಯಕ್ಷ ಅಮಳ ರಾಮಚಂದ್ರ ತಿಳಿಸಿದರು.

ಬುಧವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಅನಧಿಕೃತ ವಿಭಾಗದ ಮಾಡಿದ ನಿವೇಶನ (ಕಟ್ ಕನ್ವರ್ಷನ್)ದ ಸಮಸ್ಯೆಯಿಂದ ಜನತೆಗೆ ಸಾಕಷ್ಟು ತೊಂದರೆ ಉಂಟಾಗಿದ್ದು ಹೀಗಾಗಿ ಅದನ್ನು ಬಗೆಹರಿಸಲು ಸಾಕಷ್ಟು ಬೇಡಿಕೆ ಇತ್ತು ಎಂದರು.

ಪುಡಾ ಸದಸ್ಯ ಕಾರ್ಯದರ್ಶಿ ಗುರುಪ್ರಸಾದ್ ಮಾಹಿತಿ ನೀಡಿ, ಸರಕಾರವು ಬಿ-ಖಾತಾದಿಂದ ಎ-ಖಾತ ನೀಡುವ ಆದೇಶಕ್ಕೆ ಸಂಬಂಧಿಸಿ 6 ವಿಂಗಡನೆಗಳನ್ನು ಮಾಡಿದೆ. ನಗರ ಸ್ಥಳೀಯಾಡಳಿತ ಈಗಾಗಲೇ ಬಿ-ಖಾತಾ ನೀಡಿ ಕಟ್ಟಡ ನಿರ್ಮಿಸಲು ಉದ್ದೇಶಿಸಿರುವ ಖಾಲಿ ನಿವೇಶಗಳು, ನಗರ ಸ್ಥಳೀಯಾಡಳಿತದಿಂದ ಬಿ-ಖಾತಾ ಪಡೆದು ಅಥವಾ ಪಡೆಯದೇ ಪರವಾನಿಗೆ ಇಲ್ಲದೆ ನಿರ್ಮಾಣ ಮಾಡಿದ ಕಟ್ಟಡಗಳಿಗೆ ಈ ಆದೇಶ ಅನುಕೂಲವಾಗಲಿದೆ.

ರಾಜ್ಯ ನಗರ-ಗ್ರಾಮಾಂತರ ಯೋಜನಾ ಕಾಯ್ದೆ-1961ನ್ನು ಉಲ್ಲಂಘಿಸಿ ನಿರ್ಮಿಸಿದ ಅಪಾರ್ಟ್ ಮೆಂಟ್/ಘಟಕಗಳು, ಭೂ ಪರಿವರ್ತನೆ ಆಗದೇ ಕಂದಾಯ ಸರ್ವೆ ಸಂಖ್ಯೆ/ಹಿಸ್ಸಾ ಸರ್ವೆ ಸಂಖ್ಯೆ ಹೊಂದಿರುವ ವಿಭಜನೆ ಮಾಡದೇ ಕೆಟಿಸಿಪಿ ಕಾಯ್ದೆ 1961ರಡಿ ಅನುಮೋದನೆ ಪಡೆಯದಿರುವ ಖಾಲಿ ಭೂಮಿಗೆ ಖಾತಾ ನೀಡುವ ಪ್ರಕ್ರಿಯೆ ನಡೆಯಲಿದೆ. ಭೂ ಪರಿವರ್ತನೆಯಾದ ಬಳಿಕ ಸಕ್ಷಮ ಪ್ರಾಧಿಕಾರದಿಂದ ವಿನ್ಯಾಸ ಅನುಮೋದನೆ ಪಡೆಯದೆ ಖಾಲಿ ಭೂಮಿಯನ್ನು ಉಪ-ವಿಭಾಗ ಮಾಡಿ ನೋಂದಾಯಿತ ಪತ್ರಗಳ ಮೂಲಕ 2024ರ ಸೆ. 10ರ ಪೂರ್ವದಲ್ಲಿ ಮಾರಾಟ ಮಾಡಿದ ಪ್ರಕರಣಗಳು, ಭೂ ಪರಿವರ್ತನೆಯಾಗದೆ ಕಂದಾಯ ಭೂಮಿಯನ್ನು ಅನಧಿಕೃತ ಉಪ-ವಿಭಾಗ ಮಾಡಿ 2024ರ ಸೆ. 10ರ ಪೂರ್ವದಲ್ಲಿ ನೋಂದಾಯಿತ ಪತ್ರದ ಮೂಲಕ ವಹಿವಾಟು ನಡೆಸಿ ನಗರ ಸ್ಥಳೀಯ ಸಂಸ್ಥೆಗಳಿಂದ ಖಾತಾ ನೀಡಲಾಗಿರುವ ಪ್ರಕರಣಗಳಿಗೆ ಆದೇಶ ಅನುಕೂಲವಾಗಲಿದೆ ಎಂದರು.

ಜತೆಗೆ ಕಂದಾಯ ಇಲಾಖೆಯಿಂದ ಕರ್ನಾಟಕ ಭೂ ಕಂದಾಯ ಕಾಯ್ದೆ 1964ರ ಕಲಂ 95ಕ್ಕೆ ತಿದ್ದುಪಡಿ ತರಲಾಗಿದ್ದು ಕೃಷಿ ಉದ್ದೇಶದಿಂದ ಕೃಷಿಯೇತರ ಉದ್ದೇಶಗಳಿಗೆ ಭೂ ಪರಿವರ್ತನೆಗೆ ಜಿಲ್ಲಾಧಿಕಾರಿಗಳ ಅನುಮತಿ ಅಗತ್ಯವಿರುವುದಿಲ್ಲ. ಇದಕ್ಕೆ ಸಂಬಂಧಿಸಿ ಪ್ರಾಧಿಕಾರಕ್ಕೆ ಅರ್ಜಿ ಸಲ್ಲಿಸಿ ಪ್ರಸ್ತಾವನೆಯನ್ನು ಸಭೆಯಲ್ಲಿ ಮಂಡಿಸಿ, ಸಂಬಂಧಪಟ್ಟ ಶುಲ್ಕ ಪಾವತಿಸಬೇಕಾಗಿರುತ್ತದೆ ಎಂದರು. ಸುದ್ದಿಗೋಷ್ಠಿಯಲ್ಲಿ ಪುಡಾ ಸದಸ್ಯರಾದ ಲ್ಯಾನ್ಸಿ ಮಸ್ಕರೇನಸ್, ಅನ್ವರ್ ಖಾಸಿಂ, ನಿಹಾಲ್ ಪಿ.ಶೆಟ್ಟಿ ಉಪಸ್ಥಿತರಿದ್ದರು.



> ಪುತ್ತೂರಿನಲ್ಲಿ ಈ ಸಮಸ್ಯೆ ಗಂಭೀರ ವಾಗಿದ್ದ ಹಿನ್ನೆಲೆಯಲ್ಲಿ ಪುತ್ತೂರು ಶಾಸಕರು ಸರಕಾರ, ಸಚಿವರು, ಅಧಿ ಕಾರಿಗಳ ಜತೆಗೆ ಮಾತುಕತೆ ನಡೆಸಿ ಸಮಸ್ಯೆ ಬಗೆಹರಿಸಲು ವಿಶೇಷ ಪ್ರಯತ್ನ ಮಾಡಿದ್ದರು. ಜತೆಗೆ ಪುಡಾ ದಿಂದಲೂ ಸಾಕಷ್ಟು ಒತ್ತಡ ಹಾಕಿ ಬೆಂಗಳೂರಿಗೆ ಓಡಾಡಿ ಸರಕಾರದ ಆದೇಶ ಬರುವಂತೆ ಪ್ರಸ್ತಿಸಲಾಗಿತ್ತು
> ● ಅಮಳ ರಾಮಚಂದ್ರ

ಪುತ್ತೂರು ಕೋ-ಆಪರೇಟಿವ್ ಟೌನ್ ಬ್ಯಾಂಕ್‌ನ ಗಮನಾರ್ಹ ಸಾಧನೆ

ಆರ್ಥಿಕ ವರ್ಷದಲ್ಲಿ ಶೇ.18 ವ್ಯವಹಾರ ಪ್ರಗತಿ

ಪುತ್ತೂರು: ಪುತ್ತೂರು ಕೋ-ಒಪರೇಟಿವ್ ಟೌನ್ ಬ್ಯಾಂಕ್ ತನ್ನ 2025-26ನೇ ಹಣಕಾಸು ವರ್ಷದ ವಾರ್ಷಿಕ ಫಲಿತಾಂಶವನ್ನು ಪ್ರಕಟಿಸಿದ್ದು 117 ವರ್ಷ ಇತಿಹಾಸವಿರುವ ಬ್ಯಾಂಕ್ 2025-26ರಲ್ಲಿ ಬ್ಯಾಂಕಿನ ಇತಿಹಾಸದಲ್ಲೇ ಅತ್ಯಂತ ಗಮನಾರ್ಹ ಸಾಧನೆಯನ್ನು ದಾಖಲಿಸಿದೆ ಎಂದು ಪುತ್ತೂರು ಕೋ-ಒಪರೇಟಿವ್ ಟೌನ್ ಬ್ಯಾಂಕ್‌ನ ಅಧ್ಯಕ್ಷ ಎನ್. ಕಿಶೋರ್ ಕೊಳತ್ತಾಯ ತಿಳಿಸಿದ್ದಾರೆ.

ಆರ್ಥಿಕ ಸಾಧನೆ ಮುಖ್ಯಾಂಶಗಳು

ಬ್ಯಾಂಕು ಕಳೆದ ಹಣಕಾಸು ವರ್ಷದಲ್ಲಿ ಒಟ್ಟು ರೂ.149.00 ಕೋಟಿಗಳ ವ್ಯವಹಾರ ನಡೆಸುವ ಮೂಲಕ ಶೇ.18ರಷ್ಟು ನಿವ್ವಳ ಪ್ರಗತಿಯನ್ನು ಸಾಧಿಸಿದೆ. ಬ್ಯಾಂಕಿನ ಇತಿಹಾಸದಲ್ಲಿ ಇಷ್ಟು ದೊಡ್ಡ ಪ್ರಮಾಣದ ಏರಿಕೆ ಕಂಡು ಬಂದಿರುವುದು ಇದೇ ಮೊದಲು ಎಂಬುದು ವಿಶೇಷ. ಒಟ್ಟು ಠೇವಣಿ ರೂ.88 ಕೋಟಿ, ಒಟ್ಟು ಸಾಲ ಮತ್ತು ಮುಂಗಡಗಳು ರೂ.61 ಕೋಟಿ ಮತ್ತು ಒಟ್ಟು ವ್ಯವಹಾರ ರೂ.149 ಕೋಟಿಗಳಾಗಿವೆ.

ದಾಖಲೆಯ ಸಾಲ ವಸೂಲಾತಿ

ದಾಖಲೆಯ ಸಾಲ ವಸೂಲಾತಿ ಮತ್ತು ಕನಿಷ್ಠ ಎನ್. ಪಿ.ಎ. ಬ್ಯಾಂಕು ಸಾಲ ವಸೂಲಾತಿಯಲ್ಲಿ ಮೈಲಿಗಲ್ಲು ಸ್ಥಾಪಿಸಿದ್ದು ಅತ್ಯಂತ ಶಿಸ್ತುಬದ್ಧ ಆಡಳಿತವನ್ನು ಪ್ರದರ್ಶಿಸಿದೆ. ಸಾಲ ವಸೂಲಾತಿ ಪ್ರಮಾಣ ಶೇ.99.11, ಒಟ್ಟು ವರಮಾನ ರಹಿತ ಆಸ್ತಿ ಕೇವಲ ಶೇ.0.89 ಮತ್ತು ನಿವ್ವಳ ವರಮಾನ ರಹಿತ ಆಸ್ತಿ ಶೇ.0 ಆಗಿದೆ. ಇದು ಬ್ಯಾಂಕಿನ ಇತಿಹಾಸದಲ್ಲೇ ಸಾರ್ವಕಾಲಿಕ ದಾಖಲೆಯಾಗಿದ್ದು ಬ್ಯಾಂಕಿನ ಆರ್ಥಿಕ ಭದ್ರತೆಗೆ ಸಾಕ್ಷಿಯಾಗಿದೆ.

ಲಾಭಾಂಶದ ವಿವರ

ಪ್ರಸಕ್ತ ಸಾಲಿನಲ್ಲಿ ಬ್ಯಾಂಕ್ ರೂ.1.88 ಕೋಟಿಗಳ ಒಟ್ಟು ಲಾಭ ಗಳಿಸಿದೆ (ಲೆಕ್ಕ ಪರಿಶೋಧನೆಗೆ ಒಳ ಪಟ್ಟು) ಸರ್ಕಾರದ ನಿಯಮಾನುಸಾರ ಆದಾಯ ತೆರಿಗೆ ಪಾವತಿಯ ನಂತರ ನಿವ್ವಳ ಲಾಭವನ್ನು ಘೋಷಿಸ ಲಾಗುವುದು. ಬ್ಯಾಂಕ್ ಸತತ ಮೂರನೇ ವರ್ಷವೂ 'ಆರ್ಥಿಕವಾಗಿ ಸದೃಢ ಮತ್ತು ಉತ್ತಮವಾಗಿ ನಿರ್ವಹಿಸಲ್ಪಡುತ್ತಿರುವ ಬ್ಯಾಂಕ್' (ಎಫ್ ಎಸ್‌ಡಬ್ಲ್ಯೂಎಂ) ಎಂಬ ಹೆಗ್ಗಳಿಕೆಗೆ ಪಾತ್ರವಾಗಿದೆ.

ಡಿಜಿಟಲೀಕರಣದ ಗುರಿ

ಬ್ಯಾಂಕನ್ನು ಆಧುನೀಕರಿಸುವ ನಿಟ್ಟಿನಲ್ಲಿ ಈಗಾಗಲೇ ಶೇ.50ರಷ್ಟು ಡಿಜಿಟಲೀಕರಣ ಪ್ರಕ್ರಿಯೆ ಪೂರ್ಣಗೊಂಡಿದೆ. ಉಳಿದ ಶೇ.50 ಕಾರ್ಯ ಭರದಿಂದ ಸಾಗುತ್ತಿದ್ದು ಪ್ರಸಕ್ತ ಸಾಲಿನ ಜೂನ್ 30ರ ಒಳಗಾಗಿ ಬ್ಯಾಂಕನ್ನು ಸಂಪೂರ್ಣ ಡಿಜಿಟಲ್ ಬ್ಯಾಂಕ್ ಆಗಿ ಪರಿವರ್ತಿಸುವ ಗುರಿಯನ್ನು ಹೊಂದಿದ್ದೇವೆ. ಈ ಎಲ್ಲಾ ಸಾಧನೆಗಳಿಗೆ ಸಹಕರಿಸಿದ ಬ್ಯಾಂಕಿನ ಗ್ರಾಹಕರಿಗೆ, ನಿರ್ದೇಶಕ ಮಂಡಳಿ ಮತ್ತು ಸತತ ಪರಿಶ್ರಮ ಹಾಕಿ ದಾಖಲೆಯ ಈ ಸಾಧನೆಗೆ ಕಾರಣಕರ್ತರಾದ ಬ್ಯಾಂಕಿನ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಮತ್ತು ಸಿಬ್ಬಂದಿ ವರ್ಗಕ್ಕೆ ಬ್ಯಾಂಕಿನ ಆಡಳಿತ ಮಂಡಳಿಯು ಅಭಿನಂದನೆಗಳನ್ನು ಸಲ್ಲಿಸಿದೆ ಎಂದು ಎನ್. ಕಿಶೋರ್ ಕೊಳತ್ತಾಯ ಪ್ರಕಟನೆಯಲ್ಲಿ ತಿಳಿಸಿದ್ದಾರೆ.



- ಒಟ್ಟು ಠೇವಣಿ ರೂ.88 ಕೋಟಿ
- ಒಟ್ಟು ಸಾಲ ಮತ್ತು ಮುಂಗಡಗಳು ರೂ.61 ಕೋಟಿ
- ಒಟ್ಟು ವ್ಯವಹಾರ ರೂ.149 ಕೋಟಿ

ಪಾಣೆಮಂಗಳೂರಿನಲ್ಲಿ ಕೂಟಬಂಧು ಸದಸ್ಯರಿಗೆ ಅಭಿನಂದನಾ ಕಾರ್ಯಕ್ರಮ



ಬಂಟ್ವಾಳ: ಸಾಲಿಗ್ರಾಮ ಶ್ರೀ ಗುರು ನರಸಿಂಹ ದೇವಸ್ಥಾನದ ಆಡಳಿತ ಸಮಿಯ ನೂತನ ಅಧ್ಯಕ್ಷ ಚುನಾಯಿತ ಎನ್. ಪ್ರಕಾಶ್ ಕಾರಂತ್ ನರಿಕೊಂಬು ಇವರಿಂದ ಕೂಟಬಂಧು ಸದಸ್ಯರಿಗೆ ಅಭಿನಂದನಾ ಕಾರ್ಯಕ್ರಮ ಪಾಣೆಮಂಗಳೂರಿನ ಶ್ರೀ ಭಯಂಕೇಶ್ವರ ದೇವಸ್ಥಾನದಲ್ಲಿ ನಡೆಯಿತು.

ಹಿರಿಯರಾದ ವೇದಮೂರ್ತಿ ವೆಂಕಪ್ಪಯ್ಯ ಭಟ್ ಕರ್ಬೆಟ್ಟು ಕಾರ್ಯಕ್ರಮ ಉದ್ಘಾಟಿಸಿದರು. ಪಾಣೆಮಂಗಳೂರು ದೇವಸ್ಥಾನದ ವ್ಯವಸ್ಥಾಪನಾ ಸಮಿತಿ ಅಧ್ಯಕ್ಷ ರಘುನಾಥ ಸೋಮಯಾಜಿ ಭಾಗವಹಿಸಿ, ಸಾಲಿಗ್ರಾಮ ದೇವಸ್ಥಾನ ಹಾಗೂ ತನಗೂ ಇದ್ದ ಭಕ್ತಿ ಸಂಬಂಧದ ಬಗ್ಗೆ ವಿಚಾರ ತೆರೆದಿಟ್ಟರು.

ಬಂಟ್ವಾಳ ಶ್ರೀ ಮಹಾಲಿಂಗೇಶ್ವರ ದೇವಸ್ಥಾನದ ವ್ಯವಸ್ಥಾಪನ ಸಮಿತಿ ಅಧ್ಯಕ್ಷ ಡಾ. ರಮೇಶಾನಂದ ಸೋಮಯಾಜಿ ಮುಖ್ಯ ಅತಿಥಿಯಾಗಿ ಭಾಗವಹಿಸಿ, ಈ ಸ್ಥಾನಕ್ಕೆ ಪ್ರಕಾಶ್ ಕಾರಂತ್ ಅರ್ಹ ವ್ಯಕ್ತಿ. ಎಲ್ಲರೊಂದಿಗೆ ಉತ್ತಮ ಒಡನಾಟ ಹೊಂದಿದ್ದು ಆ ಕಾರಣಕ್ಕಾಗಿ ಅವರು ಗೆದ್ದಿದ್ದಾರೆ ಎಂದು ಶುಭ ಕೋರಿದರು.

ಸಾಲಿಗ್ರಾಮ ಶ್ರೀ ಗುರು ನರಸಿಂಹ ದೇವಸ್ಥಾನದ ಆಡಳಿತ ಮಂಡಳಿಯ ನೂತನ ಅಧ್ಯಕ್ಷ ಧರ್ಮದರ್ಶಿ ಪ್ರಕಾಶ್ ಕಾರಂತ್, ಯೋಗ್ಯವಾದ ಆಡಳಿತ ತರುವುದಾಗಿ ಭರವಸೆ ನೀಡಿದರು. ಕಾರ್ಯಕ್ರಮದಲ್ಲಿ ರಘುನಾಥ ಸೋಮಯಾಜಿ ದಂಪತಿಯನ್ನು ಸನ್ಮಾನಿಸಲಾಯಿತು. ಇದೇ ಸಂದರ್ಭ 80ಕ್ಕೂ ಅಧಿಕ ಮಂದಿ ಕೂಟ ಬಂಧುಗಳನ್ನು ಗೌರವಿಸಲಾಯಿತು. ದೇವಸ್ಥಾನದ ನೂತನ ಕೋಶಾಧಿಕಾರಿ ಲಕ್ಷ್ಮೀ ನಾರಾಯಣ ಹೊಳ್ಳ, ಅಂಗ ಸಂಸ್ಥೆಗಳ ಮುಖ್ಯಸ್ಥ ಗೋಪಾಲಕೃಷ್ಣ ಹೇರಳೆ, ಶ್ರೀಧರ್ ಹೊಳ್ಳ, ರಮೇಶ್ ಹೊಳ್ಳ, ವಾಸುದೇವ ಸೋಮಯಾಜಿ, ರಮಾನಂದ ನೂಜಿಪ್ಪಾಡಿ, ಗಿರಿಧರ್ ರಾವ್, ಯಮುನಾ ಐಗಳ್, ವಿನಯ್ ಕಾರಂತ್, ಸೋಮಶೇಖರ ಮಯ್ಯ, ಸದಾಶಿವ ಹೊಳ್ಳ, ಕೃಷ್ಣರಾಜ ಭಟ್ ವೇದಾನಂದ ಕಾರಂತ್ ಇದ್ದರು. ರಾಮಕೃಷ್ಣ ರಾವ್ ಸ್ವಾಗತಿಸಿ, ಸುರೇಶ್ ಹೊಳ್ಳ ಕಳ್ಳಿಮಾರ್ ವಂದಿಸಿದರು. ಜಗದೀಶ್ ಹೊಳ್ಳ ನಿರೂಪಿಸಿದರು.

ಕೊಡಗು ಜಿಲ್ಲೆಯಲ್ಲಿ ಕೇಂದ್ರ ಸರ್ಕಾರದ ಸಹಕಾರದಲ್ಲಿ 'ಪಾಸ್‌ಪೋರ್ಟ್ ಮೇಳ'

ಮಡಿಕೇರಿ: ಕೊಡಗು ಜಿಲ್ಲೆಯ ಸಾರ್ವಜನಿಕರ ಅನುಕೂಲಕ್ಕಾಗಿ ಸಂಸದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ಅವರ ಪ್ರಯತ್ನದಿಂದ ಕೇಂದ್ರ ವಿದೇಶಾಂಗ ಸಚಿವಾಲಯದ ಸಹಕಾರದಲ್ಲಿ ಪಾಸ್‌ಪೋರ್ಟ್ ಮೇಳಕ್ಕೆ ಬುಧವಾರ ಚಾಲನೆ ದೊರೆಯಿತು.

ಕೊಡಗು-ಮೈಸೂರು ಲೋಕಸಭಾ ಕ್ಷೇತ್ರದ ಸದಸ್ಯ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ಅವರು ಸಂಚಾರಿ ಪಾಸ್ ಪೋರ್ಟ್ ಮೇಳಕ್ಕೆ ಚಾಲನೆ ನೀಡಿದರು. ಕೊಡಗು ಜಿಲ್ಲೆಯ ಜನರು ಪಾಸ್‌ಪೋರ್ಟ್‌ಗಾಗಿ ದೂರದ ಊರಿಗೆ ಹೋಗುತ್ತಿದ್ದರು. ಆ ನಿಟ್ಟಿನಲ್ಲಿ ವಿದೇಶಾಂಗ ಸಚಿವಾಲಯಕ್ಕೆ ಮನವಿ ಮಾಡಿಕೊಂಡ ಹಿನ್ನೆಲೆಯಲ್ಲಿ ಬೆಂಗಳೂರಿನ ಪ್ರಾದೇಶಿಕ ಪಾಸ್‌ಪೋರ್ಟ್ ಕಚೇರಿಯವರು ಮೂರು ದಿನಗಳ ಕಾಲ ಪಾಸ್‌ಪೋರ್ಟ್ ಮೇಳ ಹಮ್ಮಿಕೊಂಡಿದ್ದು ಈಗಾಗಲೇ ನೋಂದಣಿ ಮಾಡಿರುವವರು ಇದರ ಪ್ರಯೋಜನ ಪಡೆಯಬಹುದಾಗಿದೆ ಎಂದರು.

ಕಳೆದ ಫೆಬ್ರವರಿ ತಿಂಗಳಿನಲ್ಲಿ ವಿದೇಶಾಂಗ ಸಚಿವಾಲಯದ ಕಾರ್ಯದರ್ಶಿಗಳಿಗೆ ಪತ್ರ ಬರೆದಿದ್ದ ಯದುವೀರ್ ಒಡೆಯರ್ ಕೊಡಗು ಜಿಲ್ಲೆಯಲ್ಲಿ ಪಾಸ್‌ಪೋರ್ಟ್ ಮೇಳ ಆಯೋಜಿಸುವಂತೆ ಮನವಿ ಮಾಡಿದ್ದರು.

ಕೊಡಗು ಜಿಲ್ಲೆಯ ಹಲವಾರು ಮಂದಿ ಪಾಸ್ ಪೋರ್ಟ್ ಬೇಕೆಂದು ಮನವಿ ಸಲ್ಲಿಸಿದ್ದರು. ಇಲ್ಲಿನವರು ಮೈಸೂರಿಗೆ ಅಥವಾ ಬೆಂಗಳೂರಿಗೆ ತೆರಳಬೇಕು. ಇದು ಹಿರಿಯ ನಾಗರಿಕರಿಗೆ ತೊಂದರೆಯಾಗುತ್ತದೆ ಎಂದು ಮನವಿಯಲ್ಲಿ ವಿವರಿಸಿದ್ದರು. ಈ ನಿಟ್ಟಿನಲ್ಲಿ ವಿದೇಶಾಂಗ ಸಚಿವಾಲಯದ ಕಾರ್ಯದರ್ಶಿ ಪ್ರಿಯಾ ರಂಗನಾಥನ್ ಅವರನ್ನು ಭೇಟಿ ಮಾಡಿ, ಕೊಡಗು ಜಿಲ್ಲೆಯಲ್ಲಿ ಪಾಸ್‌ಪೋರ್ಟ್ ಮೇಳ ಆಯೋಜಿಸಲು ಮನವಿ ಸಲ್ಲಿಸಿದ್ದೆ ಇದಕ್ಕೆ ಸ್ಪಂದಿಸಿರುವ ಅಧಿಕಾರಿಗಳು ಮೇಳ ಆಯೋಜಿಸಲು ಕ್ರಮ ಕೈಗೊಂಡಿದ್ದಾರೆ ಎಂದು ಸಂಸದರು ವಿವರಿಸಿದರು.

ನಗರಸಭೆ ಅಧ್ಯಕ್ಷೆ ಪಿ.ಕಲಾವತಿ, ಅಪರ ಜಿಲ್ಲಾಧಿಕಾರಿ ಆರ್.ಐಶ್ವರ್ಯ, ಉಪ ವಿಭಾಗಾಧಿಕಾರಿ ನಿತಿನ್ ಚಕ್ಕಿ, ನಗರಸಭೆ ಸದಸ್ಯರು, ಪಾಸ್ ಪೋರ್ಟ್ ಮೇಳದ ಅಧಿಕಾರಿಗಳು, ಬಿಜೆಪಿ ಜಿಲ್ಲಾಧ್ಯಕ್ಷ ನಾಪಂಡ ರವಿ ಕಾಳಪ್ಪ, ನಗರಾಧ್ಯಕ್ಷ ಉಮೇಶ್ ಸುಬ್ರಮಣಿ ಮತ್ತಿತರರು ಇದ್ದರು.



ಬನಾರಿ ಕಲಾಸಂಘದಿಂದ 'ಶ್ರೀದೇವಿ ಕೌಶಿಕೆ' ಯಕ್ಷಗಾನ ತಾಳಮದ್ದಳೆ



ಮಂಗಳೂರು: ಕಾಸರಗೋಡು ದೇಲಂಪಾಡಿಯ ಕೊರೆಕ್ಕಾನ ಎಂಬಲ್ಲಿ ಬನಾರಿ ಶ್ರೀ ಗೋಪಾಲಕೃಷ್ಣ ಯಕ್ಷಗಾನ ಕಲಾಸಂಘದ ವತಿಯಿಂದ 'ಶ್ರೀದೇವಿ ಕೌಶಿಕೆ' ಯಕ್ಷಗಾನ ತಾಳಮದ್ದಳೆ ಸೋಮವಾರ ನಡೆಯಿತು.

ಹಿರಿಯ ಯಕ್ಷಗಾನ ಭಾಗವತ, ಬನಾರಿ ಕಲಾಸಂಘದ ಕಾರ್ಯದರ್ಶಿ ವಿಶ್ವವಿನೋದ ಬನಾರಿ ಅವರ ಸಂಯೋಜನೆಯಲ್ಲಿ ನಡೆದ ತಾಳಮದ್ದಳೆಯಲ್ಲಿ ಭಾಗವತರಾಗಿ ವಿದ್ಯಾಶ್ರೀ ಆಚಾರ್ಯ ಈಶ್ವರಮಂಗಲ, ಚೆಂಡೆ, ಮದ್ದಳೆ ಚಕ್ರತಾಳ ವಾದನಗಳಲ್ಲಿ ಮಂಡೆಕೋಲು ಅಪ್ಪಯ್ಯ ಮಣಿಯಾಣಿ, ವಿಷ್ಣುಶರಣ ಬನಾರಿ, ರಾಧಾಕೃಷ್ಣ ರೈ ಮುದಿಯಾರು, ಶ್ರೀದೇವ್ ಆಚಾರ್ಯ ಈಶ್ವರಮಂಗಲ ಭಾಗವಹಿಸಿದ್ದರು.

ಅರ್ಥಧಾರಿಗಳಾಗಿ ರಾಮಣ್ಣ ಮಾಸ್ಟರ್ ದೇಲಂಪಾಡಿ, ಯಂ. ರಮಾನಂದ ರೈ ದೇಲಂಪಾಡಿ, ನಾರಾಯಣ ದೇಲಂಪಾಡಿ, ಬಿ.ಎಚ್. ವೆಂಕಪ್ಪ ಗೌಡ ಬೆಳ್ಳಿಪ್ಪಾಡಿ, ಸಂಜೀವ ರಾವ್ ಮಯ್ಯಾಳ, ರಾಮನಾಯ್ಕ ದೇಲಂಪಾಡಿ ಅವರು ಪಾತ್ರ ನಿರ್ವಹಣೆಗೈದರು. ದೇವಿಪ್ರಸಾದ್ ಅವರ ನೂತನ 'ಶ್ರೀನಿಲಯ' ಗೃಹಪ್ರವೇಶ ಕಾರ್ಯಕ್ರಮದ ಅಂಗವಾಗಿ ತಾಳಮದ್ದಳೆ ನಡೆಯಿತು. ವೇದಮೂರ್ತಿ ಪರಕಜೆ ಕೃಷ್ಣಕೃಪಾಕರ ಮತ್ತು ಗೋವಿಂದ ರಾಜ ಅವರ ಮಾರ್ಗದರ್ಶನದಲ್ಲಿ ಮಂತ್ರಘೋಷ ನೆರವೇರಿತು. ಪ್ರಮೀಳಾ ವಾಸುದೇವ ದಂಪತಿ ಸ್ವಾಗತಿಸಿದರು.

ಶ್ರೀರಾಮ ಹನುಮ ಜ್ಯೋತಿ ರಥಯಾತ್ರೆ, ನಳೀಲು ದೇವಸ್ಥಾನ, ಸುಳ್ಯದ ವಿವಿಧೆಡೆ ಸಂಚಾರ

ಸವಣೂರು/ಸುಳ್ಯ: ಹನುಮಗಿರಿ ಶ್ರೀ ಕೋದಂಡ ರಾಮ ಪಂಚಮುಖಿ ಆಂಜನೇಯ ಕ್ಷೇತ್ರದ ಅಷ್ಟಬಂಧ ಬ್ರಹ್ಮಕಲಶೋತ್ಸವ ಅಂಗವಾಗಿ ಅಯೋಧ್ಯೆ ಹಾಗೂ ಆಂಜನಾದ್ರಿಯಿಂದ ಹೊರಟ ಶ್ರೀ ರಾಮ ಹನುಮ ಜ್ಯೋತಿ ರಥಯಾತ್ರೆಯು ಬುಧವಾರ ಬೆಳಗ್ಗೆ ನಳೀಲು ಶ್ರೀ ಸುಬ್ರಹ್ಮಣ್ಯ ದೇವಸ್ಥಾನಕ್ಕೆ ಹಾಗೂ ಬಳಿ ಸುಳ್ಯದ ವಿವಿಧೆಡೆ ಸಂಚಾರ ಮಾಡಿತು.

ನಳೀಲು ದೇವಳ

ನಳೀಲು ದೇವಸ್ಥಾನದ ಮುಂಭಾಗ ಆಗಮಿಸಿದ ರಥಯಾತ್ರೆಗೆ ಭವ್ಯ ಪುಷ್ಪಾರ್ಚನೆಯಿಂದ ಸ್ವಾಗತ ಕೋರಲಾಯಿತು. ಮಂಗಳವಾದ್ಯ ಹಾಗೂ ಚೆಂಡೆಯ ಮೂಲಕ ಭವ್ಯ ರಥಯಾತ್ರೆ ಆಗಮಿಸಿದಾಗ ದೇವಸ್ಥಾನದ ಆಡಳಿತ ಮೊಕ್ತೇಸರ ಸಂತೋಷ್ ಕುಮಾರ್ ರೈ ಅವರು ಮಾಲಾರ್ಪಣೆ ಮಾಡಿದರು. ದೇವಸ್ಥಾನದ ಅರ್ಚಕ ಪ್ರವೀಣ್ ಶಂಕರ್ ಅವರು ರಥಕ್ಕೆ ಆರತಿ ಬೆಳಗಿಸಿದರು. ಈ ಸಂದರ್ಭ ಹನುಮಗಿರಿ ಬಹ್ಮಕಲಶೋತ್ಸವ ಸಮಿತಿಯ ಉಪಾಧ್ಯಕ್ಷ ಕೋಟಿ ಶ್ರೀ ರಾಮ ತಾರಕ ಜಪಯಜ್ಞದ ಸಂಚಾಲಕ ಸೀತಾರಾಮ ರೈ ಕೆದಂಬಾಡಿಗುತ್ತು ಬ್ರಹ್ಮಕಲಶದ ಕುರಿತು ಮಾಹಿತಿ ನೀಡಿದರು. ಅವರಿಗೆ ದೇವಸ್ಥಾನದ ವತಿಯಿಂದ ಪ್ರಸಾದ ಶಾಲು ನೀಡಿ ಗೌರವಿಸಲಾಯಿತು.

ದೇವಸ್ಥಾನದ ಮೊಕ್ತೇಸರ ಮೋಹನ್ ದಾಸ್ ರೈ, ಅರುಣ್ ಕುಮಾರ್ ರೈ, ಸತೀಶ್ ರೈ ನಳೀಲು, ಪ್ರವೀಣ್ ಕುಮಾರ್ ರೈ ನಳೀಲು, ಅಭಿವೃದ್ಧಿ ಸಮಿತಿ ಪ್ರಧಾನ ಕಾರ್ಯದರ್ಶಿ ಸುರೇಶ್ಚಂದ್ರ ರೈ ಪಾಲ್ತಾಡಿ, ದೇವಸ್ಥಾನದ ಜಾತ್ರೋತ್ಸವ ಸಮಿತಿಯ ಕೋಶಾಧಿಕಾರಿ ಸುಧಾಕರ ರೈ ಪಾಲ್ತಾಡಿ, ಪ್ರಧಾನ ಕಾರ್ಯದರ್ಶಿ ಪ್ರವೀಣ್ ಚೆನ್ನಾವರ, ಜಗನ್ನಾಥ ರೈ ಮಣಿಕ್ಕಾರ, ಸೇಸಪ್ಪ ರೈ, ವಾಸುದೇವ ರೈ ಮಣಿಕ್ಕಾರ, ರಾಮಣ್ಣ ರೈ ಬಾಕಿಜಾಲು, ಉಮೇಶ್ ನಾಯ್ಕ ಗೋಪಾಲ ಆಚಾರ್ಯ ನಳೀಲು, ವಸಂತ ರೈ, ಮೀನಾಕ್ಷಿ ರೈ, ಶರತ್ ಕುಮಾರ್ ಮಾಡಾವು, ಕರುಣಾಕರ ಸಾಲಿಯಾನ್ ಕಲ್ಲಕಟ್ಟ, ಚಂದ್ರಶೇಖರ ರೈ ಇಳಂತಾಜೆ, ರವಿಕುಮಾರ್ ಕೈತಡ್ಕ, ಭಾಸ್ಕರ ರೈ ಮಠ, ಶಿವರಾಮ ರೈ ಮಾಡಾವು, ತಾರಾನಾಥ ಸಣಂಗಳ, ಸುಂದರ ಬಾಕಿಜಾಲು, ರಮಾನಾಥ ಬೊಳಿಯಾಲ, ಗಣೇಶ್ ಅಮೆಚ್ಚೋಡು, ಉದಯ ದೊಡ್ಡಮನೆ, ವಿದ್ಯಾಧರ ಗೌಡ ಪಾರ್ಲ, ಪ್ರಮೀತ್ ರಾಜ್ ಕಟ್ಟತ್ತಾರು, ಪಾಲ್ತಾಡಿ ಚಾಕೋಟೆತ್ತಡಿ ಶ್ರೀ ಧರ್ಮರಸು ಉಳ್ಳಾಕುಲು ದೈವಸ್ಥಾನದ ಆಡಳಿತ ಮಂಡಳಿಯ ಅಧ್ಯಕ್ಷ ವಿನಯಚಂದ್ರ ಕೆಳಗಿನಮನೆ, ಜತೆ ಕಾರ್ಯದರ್ಶಿ ತಾರಾನಾಥ ಬೊಳಿಯಾಲ, ಚೆನ್ನಾವರ ಶಿರಾಡಿ ದೈವಸ್ಥಾನದ ಆಡಳಿತ ಸಮಿತಿ ಅಧ್ಯಕ್ಷ ಪುನೀತ್ ರೈ ಚೆನ್ನಾವರ ಪಟ್ಟೆ ಮತ್ತಿತರರಿದ್ದರು.

ಸುಳ್ಯ ತಾಲೂಕಿಗೆ ಆಗಮಿಸಿದ ರಥ

ರಥಯಾತ್ರೆಯು ಸುಳ್ಯ ತಾಲೂಕಿನ ನಾನಾ ಭಾಗಗಳಿಗೆ ಆಗಮಿಸಿದ್ದು ಜ್ಯೋತಿಯನ್ನು ಅದ್ದೂರಿಯಾಗಿ ಪುಷ್ಪವೃಷ್ಟಿಗಳಿಂದ ಸ್ವಾಗತಿಸಿದರು. ಪ್ರಥಮವಾಗಿ ಸುಳ್ಯ ತಾಲೂಕಿನ ಕಾಣಿಯೂರು, ಬೆಳ್ಳಾರೆ, ಪೆರುವಾಜೆ, ಐವರ್ನಾಡು, ಜಾಲ್ಸೂರು, ಕನಕಮಜಲು ಸೇರಿದಂತೆ ಇತರೆ ಭಾಗಗಳಿಗೆ ಜ್ಯೋತಿ ಆಗಮಿಸಿದ್ದು ಭಗವತ್ ಭಕ್ತರು ಶ್ರೀರಾಮ ಹನುಮ ಜ್ಯೋತಿಗಳನ್ನು ತಮ್ಮ ತಮ್ಮ ಮನೆಗಳಿಗೆ ನಂದಾ ದೀಪಗಳಿಂದ ಪ್ರಜ್ವಲಿಸಿ ಕೊಂಡೊಯ್ದದ್ದರು. ಪ್ರತಿ ಗ್ರಾಮಗಳ ದೇಗುಲ, ಭಜನಾ ಮಂದಿರಗಳು ಸೇರಿದಂತೆ ಪವಿತ್ರ ಕ್ಷೇತ್ರಗಳಿಗೆ ರಥವು ಸಾಗಿದ್ದು ಅಲ್ಲಿ ದೀಪಗಳನ್ನು ಪ್ರಜ್ವಲಿಸಿ ಮುಂದಕ್ಕೆ ತೆರಳಿದರು. ಈ ಸಂದರ್ಭ ನ. ಸೀತಾರಾಮ, ಬ್ರಹ್ಮಕಲಶೋತ್ಸವ ಸಮಿತಿ ಉಪಾಧ್ಯಕ್ಷ ಎಸ್.ಎನ್. ಮನ್ಮಥ, ಪ್ರಮುಖರಾದ ಮೋಹನ್ ನಂಗಾರು, ಜಯರಾಮ ರೈ ಜಾಲ್ಸೂರು, ಕನಕಮಜಲು ಸಹಕಾರಿ ಕೃಷಿ ಪತ್ತಿನ ಸಂಘದ ಅಧ್ಯಕ್ಷ ಸುಧಾಕರ ಕಾಮತ್, ಮಾಧವ ಗೌಡ ಕಾಳಮನೆ, ಆತ್ಮರಾಮ ಗಬ್ಬಲಡ್ಕ, ಗಂಗಾಧರ ಕಾಳಮನೆ, ಶಿವರಾಮ ರೈ ಕುರಿಯ, ಜಾಲ್ಸೂರು ಗ್ರಾ.ಪಂ. ಮಾಜಿ ಅಧ್ಯಕ್ಷೆ ಸಾವಿತ್ರಿ ಅಡ್ಕಾರು, ಕೆ.ಎಂ. ಬಾಬು, ಸೀತಾರಾಮ ರೈ, ಶ್ರೀ ಜಲದುರ್ಗಾದೇವಿ ದೇವಸ್ಥಾನದ ವ್ಯವಸ್ಥಾಪನಾ ಸಮಿತಿ ಅಧ್ಯಕ್ಷ ಸುನಿಲ್ ರೈ ಪೆರುವಾಜೆ ಗುತ್ತು, ಪದ್ಮನಾಭ ಶೆಟ್ಟಿ ಪೆರುವಾಜೆ, ಪದ್ಮನಾಭ ಬೀಡು, ಕುಶಾಲಪ್ಪ ಪೆರುವಾಜೆ, ನಾರಾಯಣ ಕೊಂಡೆಪ್ಪಾಡಿ, ದಯಾಕರ ಆಳ್ವ, ಮಾದವ ತಡಗಜೆ, ಪ್ರೇಮಚಂದ್ರ ಬೆಳ್ಳಾರೆ, ವಸಂತ ಆಚಾರ್ಯ ಮತ್ತಿತರರು ಇದ್ದರು.





ಸುತ್ತಮುತ್ತ

ದೈವಗಳ ಪುನರ್ ಪ್ರತಿಷ್ಠೆ

ಬಂಟ್ವಾಳ: ತಾಲೂಕಿನ ಅಮ್ಟಾಡಿ ಗ್ರಾಮದ ಮಂಗ್ಲಿಮಾರ್ ಸಮೀಪದ ಅಕ್ಕೆರಿಪಾದೆ ಎಂಬಲ್ಲಿ ಪುನರ್ ನವೀಕರಣಗೊಂಡ ಗುಡಿಯಲ್ಲಿ ದೈವಗಳ ಪುನರ್ ಪ್ರತಿಷ್ಠೆ ನಡೆಯಿತು. ಕ್ಷೇತ್ರದ ತಂತ್ರಿ ಉದಯ ಪಾಂಗಣ್ಣಾಯ ಇವರ ಮಾರ್ಗದರ್ಶನದಲ್ಲಿ ಪುರೋಹಿತ ನರಸಿಂಹ ಮಯ್ಯ ಮತ್ತಿತರರು ಬ್ರಹ್ಮಲಿಂಗೇಶ್ವರ ಸಹಿತ ರಕ್ತೇಶ್ವರಿ, ಅಣ್ಣಪ್ಪ ಸ್ವಾಮಿ ಮತ್ತು ಜುಮಾದಿ ಬಂಟ ದೈವಗಳ ಗುಡಿಯಲ್ಲಿ ಬಿಂಬ ಪುನರ್ ಪ್ರತಿಷ್ಠೆ ಮತ್ತು ಕಲಶಾಭಿಷೇಕ ನೆರವೇರಿಸಿದರು. ಇದೇ ವೇಳೆ ಕಲಾಯಿ ಶ್ರೀ ಮಹಮ್ಮಾಯಿ ದೇವರಿಗೆ ದೃಢಕಲಶ, ಭೈರವ ಸಹಿತ ಕಲ್ಲುರ್ಟಿ- ಪಂಜುರ್ಲಿ ದೈವಗಳ ಪ್ರತಿಷ್ಠೆ ಮತ್ತು ನಾಗ ಸಾನಿಧ್ಯದಲ್ಲಿ ವಿಶೇಷ ಪೂಜೆ ನಡೆಯಿತು. ಮಧ್ಯಾಹ್ನ ಮಂಗಲಿಮಾರು ಅಣ್ಣಪ್ಪ ಸ್ವಾಮಿ ದೈವಸ್ಥಾನದಲ್ಲಿ ಅನ್ನಸಂತರ್ಪಣೆ ನಡೆಯಿತು. ದೈವಸ್ಥಾನದ ಗಡಿಪ್ರಧಾನ ಬಡಾಜೆ ರವಿಶಂಕರ ಶೆಟ್ಟಿ ಆರಾಧನಾ ಸಮಿತಿ ಅಧ್ಯಕ್ಷ ಭುವನೇಶ್ ಪಚ್ಚಿನಡ್ಕ ಪ್ರಮುಖರಾದ ಎಂ.ತುಂಗಪ್ಪ ಬಂಗೇರ, ದೇವಪ್ಪ ಕುಲಾಲ್, ಕರುಣೇಂದ್ರ ಪೂಜಾರಿ, ಮಲ್ಲಿಕಾ ವಿ.ಶೆಟ್ಟಿ ಲೋಕೇಶ ಸುವರ್ಣ, ಪ್ರೇಮನಾಥ ಕರ್ಕೇರ, ನರಸಿಂಹ ಹೊಳ್ಳ ಮತ್ತಿತರರಿದ್ದರು.

ಕೊಳುವೈಲು ಉಬಾರಮಣ್ಣು ದೈವಸ್ಥಾನದಲ್ಲಿ ನೇಮ

ಮುಲ್ಕಿ: ಹಳೆಯಂಗಡಿ ಸಮೀಪದ ಕೊಳುವೈಲು ಉಬಾರ ಮಣ್ಣು ಶ್ರೀ ಕೋರ್ದಬ್ಬು ದೈವಸ್ಥಾನದಲ್ಲಿ ನೇಮ ನಡೆಯಿತು. ಧಾರ್ಮಿಕ ಕಾರ್ಯಕ್ರಮಗಳ ಅಂಗವಾಗಿ ಶನಿವಾರ ಬೆಳಿಗ್ಗೆ ಭಂಡಾರ ಆಗಮನ,



ರಾತ್ರಿ ಅನ್ನಸಂತರ್ಪಣೆ ಬಳಿಕ ಶ್ರೀ ಕೋರ್ದಬ್ಬು ತನ್ನಿಮಾನಿಗ ದೈವಗಳ ನೇಮ ನಡೆಯಿತು. ಏ.5 ಭಾನುವಾರ ಬೆಳಿಗ್ಗೆ 11ಕ್ಕೆ ಶ್ರೀ ಧೂಮಾವತಿ ಬಂಟ ದೈವಗಳ ನೇಮ, ಸಂಜೆ ಶ್ರೀ ಗುಳಿಗ ದೈವದ ನೇಮ ನಡೆಯಿತು. ದೈವಸ್ಥಾನದ ಗೌರವಾಧ್ಯಕ್ಷ ಚಂದ್ರಶೇಖರ್ ಅಮೀನ್, ಎಸ್ ಎಸ್ ಸತೀಶ್ ಭಟ್, ಸುಧಾಕರ ಜಿ. ಸುವರ್ಣ, ರವಿ ದೇವಾಡಿಗ, ಶಂಕರ್ ಸಾಲ್ಯಾನ್, ಪ್ರವೀಣ್ ಕೋಟ್ಯಾನ್, ಉಮೇಶ್ ದೇವಾಡಿಗ, ರತ್ನಾಕರ ಭಟ್, ಅಧ್ಯಕ್ಷ ಷಣ್ಮುಖಾನಂದ ದೇವಾಡಿಗ, ಉಪಾಧ್ಯಕ್ಷ ಯತಿರಾಜ ಎಸ್ ಸುವರ್ಣ, ಕಾರ್ಯದರ್ಶಿ ವಸಂತ ಎನ್. ಕೋಟ್ಯಾನ್, ಜೊತೆ ಕಾರ್ಯದರ್ಶಿ ರಾಮಚಂದ್ರ, ರಂಜಿತ್ ಕೊಳುವೈಲು, ಕೋಶಾಧಿಕಾರಿ ಶರತ್ ಕುಮಾರ್, ಸಂತೋಷ್ ಕುಮಾರ್ ಮತ್ತು ಲೆಕ್ಕಪರಿಶೋಧಕರು, ಗ್ರಾಮಸ್ಥರು ಉಪಸ್ಥಿತರಿದ್ದರು.

ಆಶ್ರಮದ ಭಗಿನಿಗೆ ಬೀಳ್ಕೊಡುಗೆ

ಉಳ್ಳಾಲ: ಅಸ್ಸೋಸಿ ಮರ್ಸಿ ಫ್ರೆಂಡ್ಸ್ ಹಾಗೂ ಪಾನೀರು ಮರ್ಸಿ ಮಕ್ಕಳ ನಿವಾಸ ವತಿಯಿಂದ ಮರ್ಸಿ ಮಕ್ಕಳ ನಿವಾಸ ಹಾಗೂ ಶಾಲೆಯಲ್ಲಿ ಸುದೀರ್ಘ ಸೇವೆ ಸಲ್ಲಿಸಿ ನಿವೃತ್ತರಾದ ಭಗಿನಿ ಟ್ರೀಜ಼ಾ ಅವರ ಬೀಳ್ಕೊಡುಗೆ ಕಾರ್ಯಕ್ರಮ ನಡೆಯಿತು. ಮರ್ಸಿ ಮಕ್ಕಳ ನಿವಾಸದ ಭಗಿನಿ ಮೇಲ್ವಿಚಾರಕಿ ಲೂಸಿಯಾನ ಮಾತನಾಡಿದರು. ಅಧ್ಯಕ್ಷತೆ ವಹಿಸಿದ್ದ ಕೋಟೆಪುರ ಇಗರ್ಜಿಯ ನಿವೃತ್ತ ನೌಕರ ಸಿರಿಲ್ ರಾಬರ್ಟ್ ಡಿಸೋಜ ಮಾತನಾಡಿದರು. ಉದ್ಯಮಿ ಮೆಲ್ವಿನ್ ಡಯಾಸ್, ಸುಪೀರಿಯರ್ ಸಿಸ್ಟರ್ ಫ್ಲ್ಯಾವಿ, ಮರ್ಸಿ ಫ್ರೆಂಡ್ಸ್ ಅಧ್ಯಕ್ಷ ಸಂದೀಪ್ ಡಿಸೋಜ, ಸಂಚಾಲಕ ಐವನ್ ಮೊಂತೇರೊ, ಮರ್ಸಿ ಫ್ರೆಂಡ್ಸ್ ಪದಾಧಿಕಾರಿಗಳಾದ ರೋಶನ್ ಡಿಸೋಜ,ಪ್ರವೀಣ್ ಕುಟಿನ್ಹಾ,ರೊನಿತ್ ಡಿಸೋಜ,ಸಂತೋಷ್ ಡಿಸೋಜ, ಸ್ಟೀವನ್ ಪಾನೀರು, ಗ್ಲೆನ್ ಡಿಸೋಜ, ಜೈಸನ್ ಡಿಸೋಜ,ಮೈಕಲ್ ಡಿಸೋಜ,ಅರುಣ್ ವಿನ್ಸೆಂಟ್, ಪ್ರಕಾಶ್ ಡಿಸೋಜ, ಸ್ಟೀವನ್ ಪಾನೀರು,ಚೆರಿಶ್ ಡಿಸೋಜ,ಅನಿಲ್ ಪಾನೀರು,ಹರ್ಷ ಕುಟಿನ್ಹಾ,ವಿಲ್ಸನ್ ಕುಟಿನ್ಹಾ ಮೊದಲಾದವರು ಉಪಸ್ಥಿತರಿದ್ದರು. ಮರ್ಸಿ ಫ್ರೆಂಡ್ಸ್ ಜಾಲತಾಣ ವಿಭಾಗದ ಪ್ರದೀಪ್ ಕುಟಿನ್ಹಾ ಸ್ವಾಗತಿಸಿದರು. ಪ್ರದೀಪ್ ಡಿಸೋಜ ನಿರೂಪಿಸಿದರು.

ಚಿಕಿತ್ಸೆ ಫಲಕಾರಿಯಾಗದೇ ವ್ಯಕ್ತಿ ಸಾವು

ಕುಂದಾಪುರ: ಹಟ್ಟಿಯಂಗಡಿ ಗ್ರಾಮದ ಮಾರಲದೇವಿ ದೇವಸ್ಥಾನದ ಎದುರಿನ ಬಸ್ ನಿಲ್ದಾಣದ ಬಳಿ ಅನಾರೋಗ್ಯದಿಂದ ಮಲಗಿದ್ದ ವಿನ್ಸೆಂಟ್ (70) ಚಿಕಿತ್ಸೆ ಫಲಕಾರಿಯಾಗದೆ ಮೃತಪಟ್ಟಿದ್ದಾರೆ. ಅವರನ್ನು ಚಿಕಿತ್ಸೆಗಾಗಿ ಕುಂದಾಪುರ ಸರಕಾರಿ ಆಸ್ಪತ್ರೆಗೆ ಕರೆದುಕೊಂಡು ದಾಖಲಿಸಿ ನಂತರ ಹೆಚ್ಚಿನ ಚಿಕಿತ್ಸೆಗಾಗಿ ಉಡುಪಿ ಅಜ್ಜರಕಾಡು ಸರಕಾರಿ ಆಸ್ಪತ್ರೆಗೆ ದಾಖಲಿಸಲಾಗಿತ್ತು. ಕುಂದಾಪುರ ಗ್ರಾಮಾಂತರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.


ಪದ್ಯಾಣ ಶ್ರೀ ಮಹಾಲಿಂಗೇಶ್ವರ ದೇಗುಲ ಪುನಃ ಪ್ರತಿಷ್ಠಾ ಅಷ್ಟಬಂಧ ಬ್ರಹ್ಮಕಲಶಾಭಿಷೇಕ, ಸುಧರ್ಮ ಸಭೆ

ಆಧ್ಯಾತ್ಮ ಭಾಷೆ ಮೂಲಕ ಭಗವಂತನ ಅನುಸಂಧಾನ ಸಾಧ್ಯ

ವಿಟ್ಲ: ಶ್ವಾಸ ಇದ್ದರೆ ಶರೀರ, ವಿಶ್ವಾಸ ಇದ್ದಾಗ ಬದುಕು, ಇವೆರಡು ಜತೆ ಸಾಗಬೇಕಾಗಿದೆ. ಆಧ್ಯಾತ್ಮ ಭಾಷೆಯ ಮೂಲಕ ಭಗವಂತನ ಅನುಸಂಧಾನ ಸಾಧ್ಯವಾಗುತ್ತದೆ. ಕಲಾಯದಲ್ಲಿ ಶಿವಾಲಯ ಉದಿಸಿಕೊಂಡಿದ್ದು, ಪದ್ಯಾಣದ ಬ್ರಹ್ಮಕಲಶೋತ್ಸವದ ಮೂಲಕ ಸಂಸ್ಕೃತಿಯ ಪುಷ್ಪ ಅರಳಿದೆ. ಮಾನವೀಯ ಮೌಲ್ಯ ತುಂಬುವ ಕಾರ್ಯವಾಗುತ್ತಿದೆ. ಕಾರ್ಯಕರ್ತರ ಕೆಲಸದಿಂದ ಕಾರ್ಯಕ್ರಮ ಸುಂದರವಾಗುತ್ತದೆ ಎಂದು ಒಡಿಯೂರು ಶ್ರೀ ಗುರುದೇವದತ್ತ ಸಂಸ್ಥಾನದ ಶ್ರೀ ಗುರುದೇವಾನಂದ ಸ್ವಾಮೀಜಿ ಹೇಳಿದರು.

ಪದ್ಯಾಣ ಶ್ರೀ ಮಹಾಲಿಂಗೇಶ್ವರ ದೇವಸ್ಥಾನದ ಪುನಃ ಪ್ರತಿಷ್ಠಾ ಅಷ್ಟಬಂಧ ಬ್ರಹ್ಮಕಲಶಾಭಿಷೇಕದ ಅಂಗವಾಗಿ ನಡೆದ ಸುಧರ್ಮಸಭೆಯಲ್ಲಿ ಆಶೀರ್ವಚನ ನೀಡಿದರು.

ಕೊಂಡೆವೂರು ಶ್ರೀನಿತ್ಯಾನಂದ ಯೋಗಾಶ್ರಮದ ಶ್ರೀ ಯೋಗಾನಂದ ಸರಸ್ವತಿ ಸ್ವಾಮೀಜಿ ಆಶೀರ್ವಚನ ನೀಡಿದರು. ಶರವು ಶ್ರೀ ಮಹಾಗಣಪತಿ ದೇವಸ್ಥಾನ ಶಿಲೆಶಿಲೆ ಮೊಕ್ತೇಸರ ರಾಘವೇಂದ್ರ ಶಾಸ್ತ್ರೀ ಉದ್ಘಾಟಿಸಿದರು. ವಿವೇಕಾನಂದ ವಿದ್ಯಾವರ್ಧಕ ಸಂಘದ ಅಧ್ಯಕ್ಷ ಡಾ. ಕಲ್ಲಡ್ಕ ಪ್ರಭಾಕರ ಭಟ್ ಅಧ್ಯಕ್ಷತೆ ವಹಿಸಿದ್ದರು. ವಾಗ್ಮಿ ಚಕ್ರವರ್ತಿ ಸೂಲಿಬೆಲೆ ಧಾರ್ಮಿಕ ಉಪನ್ಯಾಸ ನೀಡಿದರು. ಡಾ. ನವೀನ್ ಕುಮಾರ್ ಬೆಂಗಳೂರು, ಡಾ. ಶಿಲ್ಪಾ ನವೀನ್ ಬೆಂಗಳೂರು, ರವಿ ಇಳಂತಿಲ, ಪದ್ಮನಾಭ ಕೊಟ್ಟಾರಿ, ದಯನಂದ ಶೆಟ್ಟಿ ಉಜಿರೆಮಾರು, ಸೇರಾಜೆ ಗೋಪಾಲಕೃಷ್ಣ ಭಟ್, ಕೆ. ಪಿ. ರಘುರಾಮ ಶೆಟ್ಟಿ ಇದ್ದರು. ಡಾ. ಸುಬ್ರಹ್ಮಣ್ಯ ಭಟ್ ಪದ್ಯಾಣ ಪ್ರಾರ್ಥಿಸಿದರು. ಅಧ್ಯಕ್ಷ ಡಾ. ಅರುಣ್ ಶ್ಯಾಮ್ ಸ್ವಾಗತಿಸಿದರು. ಕಾರ್ಯದರ್ಶಿ ಕೃಷ್ಣ ಎಂ.ಆರ್. ವಂದಿಸಿದರು. ನಿತೇಶ್ ಶೆಟ್ಟಿ ಎಕ್ಕಾರು, ವಿಖ್ಯಾತ್ ನಿರೂಪಿಸಿದರು.



ಹೊಸ ಚಿಂತನೆ ಅಗತ್ಯ

ಭಾರತೀಯ ಸಂಸ್ಕೃತಿಯನ್ನು ಉಳಿಸಲು ಎಲ್ಲಾ ಹಿಂದುಗಳು ಹೊಸದಾಗಿ ಆಲೋಚಿಸಬೇಕಿದೆ ಎಂದು ವಾಗ್ಮಿ ಚಕ್ರವರ್ತಿ ಸೂಲಿಬೆಲೆ ಹೇಳಿದರು. ಸಂಘಟನೆಯನ್ನು ಹಿಂದೂ ಸಂಸ್ಕೃತಿ ಉಳಿಸಿಕೊಳ್ಳುವ ನಿಟ್ಟಿನಲ್ಲಿ ಜೋಡಿಸಿಕೊಳ್ಳಬೇಕಾಗಿದೆ. ಎಲ್ಲರೂ ಒಟ್ಟಾಗಿ ಯುವ ಸಮುದಾಯಕ್ಕೆ ಧೈರ್ಯ ತುಂಬಬೇಕಾಗಿದೆ. ದೇವಸ್ಥಾನವನ್ನು ಕೇಂದ್ರ ವಾಗಿ ದೇಶದ ಸಂಸ್ಕೃತಿಯನ್ನು ಬೆಳೆಸಲಾಗಿದೆ. ದೇಶದ ಇತಿಹಾಸ ರಚನೆ ಮಾಡುವ ವೇಳೆ ಆಕ್ರಮಣ ಪರ್ವದಿಂದ ಆಗಿರುವ ಪ್ರಭಾವ ಗಣನೆಗೆ ತೆಗೆದುಕೊಳ್ಳಲಿಲ್ಲ ಎಂದು ಹೇಳಿದರು.

ಬಲಿಷ್ಠ ಸಮಾಜದ ಚಿಂತನೆ

ಸಮಾಜ ಅನುಭವಿಸಿದ ಸಂಕಟಗಳನ್ನು ಗಮನಿಸಿ, ಕಾರಣ ಹುಡುಕಬೇಕಾದ ಅನಿವಾರ್ಯತೆಯಿದೆ. ಧರ್ಮವನ್ನು ಮಕ್ಕಳಿಗೆ ಸರಿಯಾಗಿ ಬೋಧಿಸುವ ಕಾರ್ಯ ಧಾರ್ಮಿಕ ಕೇಂದ್ರದಲ್ಲಿ ಆಗಬೇಕು. ದೇವಸ್ಥಾನ ಗ್ರಾಮದ ಜನರ ಜೀವನದ ಅಳತೆ ಕೋಲಾಗಿ ಬೆಳೆಯಬೇಕು.

- ಶ್ರೀ ಯೋಗಾನಂದ ಸರಸ್ವತಿ ಸ್ವಾಮೀಜಿ
ಶ್ರೀನಿತ್ಯಾನಂದ ಯೋಗಾಶ್ರಮ ಕೊಂಡೆವೂರು

ಸ್ವದೇಶಕ್ಕೆ ಮಹತ್ವ

ರಾಷ್ಟ್ರ ಜಾಗೃತಿ, ಧರ್ಮ ಚಿಂತೆಯ ಕಾರ್ಯಕ್ರಮ ನಿರಂತರವಾಗಿ ಧಾರ್ಮಿಕ ಕೇಂದ್ರದಲ್ಲಿ ನಡೆಯಬೇಕು. ಭಾರತದಲ್ಲಿ ಮಾತೆಗೆ ವಿಶೇಷ ಸ್ಥಾನ ನೀಡಲಾಗಿದೆ. ದಿನಬಳಕೆ ವಸ್ತುಗಳಲ್ಲಿ ವಿದೇಶವನ್ನು ಬಿಟ್ಟು ಸ್ವದೇಶಕ್ಕೆ ಮಹತ್ವ ನೀಡಬೇಕು. ಮಾತೃ ಭಾಷೆಗೆ ಒತ್ತು ನೀಡಬೇಕು.

- ಡಾ. ಕಲ್ಲಡ್ಕ ಪ್ರಭಾಕರ ಭಟ್
ಅಧ್ಯಕ್ಷರು, ವಿವೇಕಾನಂದ ವಿದ್ಯಾವರ್ಧಕ ಸಂಘ

ಸುಸ್ಥಿರ ಸ್ವಚ್ಛತೆ ಸುಸ್ಥಿರ ಅಭಿವೃದ್ಧಿ ಸಂವಾದಕ್ಕೆ ಚಾಲನೆ | ಯು.ಟಿ. ಖಾದರ್ ಭರವಸೆ

ಉಳ್ಳಾಲ ತಾಲೂಕು ಕಸ ಮುಕ್ತಕ್ಕೆ ಅಗತ್ಯ ಕ್ರಮ

ಕೊಣಾಜೆ: ಉಳ್ಳಾಲ ತಾಲೂಕಿನಾದ್ಯಂತ ಸೃಷ್ಟಿ ಮಾಡಿರುವ ಬಯಲು ಕಸಾಲಯಗಳನ್ನು ಅಳಿಸಿ ಸುಸ್ಥಿರ ಅಭಿವೃದ್ಧಿ ಕಾರ್ಯವನ್ನು ಅಭಿಯಾನ ರೀತಿಯಲ್ಲಿ ಶೀಘ್ರವಾಗಿ ಆರಂಭಿಸಲು ಅಗತ್ಯ ಕ್ರಮ ಕೈಗೊಳ್ಳಲಾಗುವುದೆಂದು ವಿಧಾನ ಸಭಾಧ್ಯಕ್ಷ ಯು.ಟಿ ಖಾದರ್ ಹೇಳಿದರು.

ಮುಡಿಪು ಜೀವನ್ ಮೂರ್ತಿ ಸರ್ವೋದಯ ಮಂಟಪದಲ್ಲಿ ನಡೆದ ಶೂನ್ಯ ಕಸ ನಿರ್ವಹಣೆ ಸ್ವಚ್ಛ ಮನೆ ಸ್ವಯಂ ಘೋಷಣೆ ಸುಸ್ಥಿರ ಸ್ವಚ್ಛತೆ ಸುಸ್ಥಿರ ಅಭಿವೃದ್ಧಿ ಸಂವಾದಕ್ಕೆ ಚಾಲನೆ ನೀಡಿ ಯುನೈಟೆಡ್ ಆಫ್ ರೋಡ್ಸ್ ಮಂಗಳೂರು ವತಿಯಿಂದ ಅಸಹಾಯಕ ಕುಟುಂಬಗಳ ಸಮಗ್ರ ಅಭಿವೃದ್ಧಿಗೆ ನೀಡಲಾದ ಒಂದು ಲಕ್ಷ ಇಪ್ಪತ್ತೈದು ಸಾವಿರ ಮೊತ್ತದ ಶೈಕ್ಷಣಿಕ, ಆರೋಗ್ಯ, ಸ್ವ ಉದ್ಯೋಗ, ಸೋಲಾರ್ ಸೌಲಭ್ಯ ವಿತರಿಸಿ ಮಾತನಾಡಿದರು.

ರೋಗ ಮುಕ್ತ ಆರೋಗ್ಯವಂತ ಸಮಾಜ ನಿರ್ಮಾಣಕ್ಕೆ ಪ್ಲಾಸ್ಟಿಕ್ ಮಾಲಿನ್ಯ ಮುಕ್ತ ಸ್ವಚ್ಛ ಪರಿಸರ ಅಗತ್ಯವಾಗಿದ್ದು, ಈ ದಿಸೆಯಲ್ಲಿ ಸರಕಾರ ಸಮಾಜ ಹಾಗೂ ಸಂಘ ಸಂಸ್ಥೆಗಳು ಒಂದಾಗಿ ಶ್ರಮಿಸುವುದು ಅಗತ್ಯ ವೆಂದರು.

ಸ್ವಚ್ಛತೆಗಾಗಿ ನಿರಂತರವಾಗಿ ಶ್ರಮಿಸುತ್ತಿರುವ ಜನ ಶಿಕ್ಷಣ ಟ್ರಸ್ಟ್ ಹಾಗೂ ಉಳ್ಳಾಲ, ಪುತ್ತೂರು, ಮಂಗಳೂರು ತಾಲೂಕಿನ 11 ಕುಟುಂಬಗಳಿಗೆ ನೆರವಾದ ಯುನೈಟೆಡ್ ಆಫ್ ರೋಡ್ಸ್ ಮಂಗಳೂರು ತಂಡದ ಸದಸ್ಯರ ಸೇವಾ ಕಾರ್ಯವನ್ನು ಶ್ಲಾಘಿಸಿದರು.

ಮಂಗಳೂರು ವಿವಿ ಕುಲಪತಿ ಪ್ರೊ. ಪಿ.ಎಲ್. ಧರ್ಮ ಮಾತನಾಡಿ, ಗ್ರಾಮ ಅಧ್ಯಯನದೊಂದಿಗೆ ಕಸ ಮುಕ್ತ ಗ್ರಾಮ ನಿರ್ಮಾಣಕ್ಕೆ ಮಂಗಳೂರು ವಿವಿ ವಿದ್ಯಾರ್ಥಿಗಳಿಗೆ ಸ್ವಚ್ಛತಾ ಪಾಠದೊಂದಿಗೆ ಸ್ವಚ್ಛ ಗ್ರಾಮ ಅಭಿಯಾನ ಆರಂಭಿಸಲಾಗಿದೆ ಎಂದು ತಿಳಿಸಿದರು. ವಿಶ್ವ ಸಂಸ್ಥೆಯ 17 ಸಾಮಾಜಿಕ ಅಭಿವೃದ್ಧಿ ಗುರಿಗಳ ಬಗ್ಗೆ ಪಿಎ ಕಾಲೇಜು ಪ್ರಾಧ್ಯಾಪಕ ಡಾ. ಸಿವಿ ಪೂಜಾರ್ ಅರಿವು ಮೂಡಿಸಿದರು. ಯುನೈಟೆಡ್ ಆಫ್ ರೋಡ್ಸ್ ಅಧ್ಯಕ್ಷ ಅವಿನಾಶ್ ಅಡಪ ನಡಿಗುತ್ತು, ನಾಸೀರ್ ನಡುಪದವು, ವಿಜೇಶ್ ನಾಯ್ಕ್ ನಡಿಗುತ್ತು ಜನ ಜೀವನದ ಗೌರವ ಅಧ್ಯಕ್ಷ ರಮೇಶ ಶೇಣವ, ಅಧ್ಯಕ್ಷ ರಾಧಾಕೃಷ್ಣ ರೈ ಉಮಿಯ ಮುಡಿಪು ಉತ್ಸವ ಸಮಿತಿಯ ಹೈದರ್ ಕೈರಂಗಳ, ಪ್ರೌಢ ಶಾಲಾಭಿವೃದ್ಧಿ ಸಮಿತಿ ಅಧ್ಯಕ್ಷ ಇಬ್ರಾಹಿಂ ನಡುಪದವು, ಉಮಾನಾಥ ಕೋಟ್ಯಾನ್, ಜಮಿಯ್ಯತುಲ್ ಫಲಾಹ್‌ನ ಅಬ್ದುಲ್ ನಾಸೀರ್, ಅಬ್ದುಲ್ ರಹಿಮಾನ್ ಕೋಡಿಜಾಲ್ ಸೀತಾರಾಮ್, ಪಿ.ಎ ಕಾಲೇಜಿನ ಪ್ರೊ. ಪ್ರಶಾಂತ್ ಉಪಸ್ಥಿತರಿದ್ದರು.



ಅಭಿಯಾನದಲ್ಲಿ ಭಾಗವಹಿಸಲು ಸಂಕಲ್ಪ

ಸ್ಮೈಲ್ ಸ್ಕಿಲ್ ಸ್ಕೂಲ್ ವಿದ್ಯಾರ್ಥಿನಿಯರು, ಶಿಕ್ಷಕಿಯರು ಗ್ರಾಮ ಸ್ವರಾಜ್ ಅಭಿಯಾನ ಹಾಗೂ ಸ್ಕಿಲ್ ಇನ್ ವಿಲೇಜ್ ಯೋಜನೆಯ ಸಂಯೋಜಕ ಸಂಯೋಜಕಿಯರು ಸುಸ್ಥಿರ ಸ್ವಚ್ಛತೆ ಅಭಿಯಾನದಲ್ಲಿ ಸಕ್ರಿಯವಾಗಿ ಭಾಗವಹಿಸುವ ಸಂಕಲ್ಪ ಮಾಡಿದರು

ಕೋಟಿ ಫೌಂಡೇಷನ್‌ನಿಂದ ಮುಕ್ಕೂರು ಅಂಗನವಾಡಿ ಕೇಂದ್ರದ ಅಭಿವೃದ್ಧಿ

ಅಭಿವೃದ್ಧಿ ಕಾರ್ಯ ಸಮಾಜಕ್ಕೆ ಮಾದರಿ: ಶಶಿಕಲಾ

ಪುತ್ತೂರು: ಕೋಟೆ ಫೌಂಡೇಷನ್ ಪ್ರಾಯೋಜಕತ್ವದಲ್ಲಿ ಮುಕ್ಕೂರು ನೇಸರ ಯುವಕ ಮಂಡಲ, ನೇಸರ ಯುವತಿ ಮಂಡಲ, ನೇಸರ ದಶಪ್ರಣತಿ ಸಮಿತಿ ಸಹಕಾರದೊಂದಿಗೆ ಸುಮಾರು ರೂ.1.50 ಲಕ್ಷ ವೆಚ್ಚದಲ್ಲಿ ಮುಕ್ಕೂರು ಅಂಗನವಾಡಿ ಕೇಂದ್ರದಲ್ಲಿ ಅನುಷ್ಠಾನಿಸಿದ 2ನೇ ಹಂತದ ಅಭಿವೃದ್ಧಿ ಕಾಮಗಾರಿ ಹಾಗೂ ಚಿಣ್ಣರ ಸಾಂಸ್ಕೃತಿಕ ಸಂಭ್ರಮ ನಡೆಯಿತು.

ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಪೆರುವಾಜೆ ವನಶ್ರೀ ಶಶಿಕಲಾ ಜಿ.ಕೆ. ಅವರು, ಬದುಕಿನ ಹೆಚ್ಚಿನ ಸಮಯವನ್ನು ಸಮಾಜಕೋಸ್ಕರ ಮೀಸಲಿಟ್ಟ ಕೋಟೆ ವಸಂತ ಕುಮಾರ್ ಅವರು ಸತ್ಯ, ಧರ್ಮ, ನ್ಯಾಯದ ಮಾರ್ಗದಲ್ಲಿ ಮುನ್ನಡೆದವರು. ಅವರ ನೆನಪಿನಲ್ಲಿ ಸ್ಥಾಪಿಸಿದ ಕೋಟೆ ಫೌಂಡೇಷನ್ ಮೂಲಕ ಮುಕ್ಕೂರು ಅಂಗನವಾಡಿಯಲ್ಲಿ ಅನುಷ್ಠಾನಿಸಿದ ಅಭಿವೃದ್ಧಿ ಕೆಲಸ ಅವರ ಸಮಾಜಮುಖಿ ಚಿಂತನೆಗೆ ಸಮರ್ಪಿತ ಎಂದರು.

ಕೋಟೆ ವಸಂತ ಕುಮಾರ್ ಅವರ ಕುರಿತು ಸುಳ್ಯ ಚುಟುಕು ಸಾಹಿತ್ಯ ಪರಿಷತ್ತಿನ ಅಧ್ಯಕ್ಷೆ ಆಶ್ವಿನಿ ರಾಮಚಂದ್ರ ಸಂಸ್ಮರಣೆಗೈದರು.

ಕಾರ್ಯಕ್ರಮ ಉದ್ಘಾಟಿಸಿದ ಮುಕ್ಕೂರು ನೇಸರ ಯುವಕ ಮಂಡಲ ಗೌರವಾಧ್ಯಕ್ಷ ಜಗನ್ನಾಥ ಪೂಜಾರಿ ಮುಕ್ಕೂರು, ಪುಣ್ಚಪ್ಪಾಡಿ ಸ.ಹಿ.ಪ್ರಾ. ಶಾಲಾ ಮುಖ್ಯ ಗುರು ರಶ್ಮಿತಾ ಜೈನ್ ಮಾತನಾಡಿದರು.



ನೇಸರ ದಶಪ್ರಣತಿ ಸಮಿತಿ ಅಧ್ಯಕ್ಷ ಡಾ. ನರಸಿಂಹ ಶರ್ಮ ಕಾನಾವು ಅಧ್ಯಕ್ಷತೆ ವಹಿಸಿ ಮಾತನಾಡಿದರು.

ಬೆಳ್ಳಾರೆ ಜೇಸಿಐ ಅಧ್ಯಕ್ಷೆ ಪೂರ್ಣಿಮಾ ಪೆರ್ಲಂಪಾಡಿ, ಬೆಳ್ಳಾರೆ ವಲಯ ಮಹಿಳಾ ಮೇಲ್ವಿಚಾರಕಿ ಉಷಾ ಪ್ರಸಾದ್ ರೈ, ಪೆರುವಾಜೆ ಡಾ. ಶಿವರಾಮ ಕಾರಂತ ಪ್ರಥಮ ದರ್ಜೆ ಕಾಲೇಜಿನ ಹಿರಿಯ ವಿದ್ಯಾರ್ಥಿ ಸಂಘದ ಅಧ್ಯಕ್ಷ ರಕ್ಷಿತ್ ಕುಮಾರ್ ಪೆರುವಾಜೆ, ನೇಸರ ದಶಪ್ರಣತಿ ಸಮಿತಿ ಸಂಚಾಲಕ ಕುಂಬ್ರ ದಯಾಕರ ಆಳ್ವ ಶುಭ ಹಾರೈಸಿದರು.

ವೇದಿಕೆಯಲ್ಲಿ ಮುಕ್ಕೂರು ಅಂಗನವಾಡಿ ಕೇಂದ್ರದ ಬಾಲ ವಿಕಾಸ ಸಮಿತಿ ಅಧ್ಯಕ್ಷೆ ಸುನೀತಾ ಕಂಬುರ್ತೋಡಿ, ಮುಕ್ಕೂರು ನೇಸರ ಯುವಕ ಮಂಡಲ ಅಧ್ಯಕ್ಷ ರಮೇಶ್ ಕಾನಾವು ಉಪಸ್ಥಿತರಿದ್ದರು.

ನೇಸರ ದಶಪ್ರಣತಿ ಸಮಿತಿ ಸಂಚಾಲಕ ನರಸಿಂಹ ತೇಜಸ್ವಿ ಕಾನಾವು ಪ್ರಸ್ತಾವನೆಗೈದರು. ಅಂಗನವಾಡಿ ಕಾರ್ಯಕರ್ತೆ ರೂಪಾ ವಂದಿಸಿದರು. ನೇಸರ ಯುವತಿ ಮಂಡಲದ ಸದಸ್ಯೆ ದೀಕ್ಷಾ ನೀರ್ಕಜೆ ಕಾರ್ಯಕ್ರಮ ನಿರ್ವಹಿಸಿದರು.

ಗೌರವಾರ್ಪಣೆ

ಈ ಸಂದರ್ಭ ಅನುದಾನ ಒದಗಿಸಿದ ಕೋಟೆ ಫೌಂಡೇಷನ್ ಪರವಾಗಿ ಕೆ. ಗಣಪಯ್ಯ ವನಶ್ರೀ ಅನುದಾನ ತರುವಲ್ಲಿ ಪ್ರಧಾನ ಪಾತ್ರ ವಹಿಸಿದ ನೇಸರ ದಶಪ್ರಣತಿ ಸಮಿತಿ ಸಂಚಾಲಕ ನರಸಿಂಹ ತೇಜಸ್ವಿ ಕಾನಾವು, ಅಂಗವಾಡಿಯ ಅಭಿವೃದ್ಧಿಗೆ ಶ್ರಮಿಸುತ್ತಿರುವ ಮುಕ್ಕೂರು ಅಂಗನವಾಡಿ ಕೇಂದ್ರದ ಬಾಲ ವಿಕಾಸ ಸಮಿತಿ ಅಧ್ಯಕ್ಷೆ ಸುನೀತಾ ಕಂಬುರ್ತೋಡಿ ಅವರನ್ನು ಸನ್ಮಾನಿಸಲಾಯಿತು. ಮುಕ್ಕೂರು ಸರಕಾರಿ ಹಿರಿಯ ಪ್ರಾಥಮಿಕ ಶಾಲೆಗೆ 1ನೇ ತರಗತಿಗೆ ಸೇರ್ಪಡೆಗೊಳ್ಳಲಿರುವ 7 ಮಂದಿ ವಿದ್ಯಾರ್ಥಿಗಳನ್ನು ಎಸ್‌ಡಿಎಂಸಿ ಅಧ್ಯಕ್ಷ ಜಯಂತ ಗೌಡ ಹೂವು ನೀಡಿ ಸ್ವಾಗತಿಸಿದರು.

ಫುಟ್ಬಾಲ್ ಟರ್ಫ್ ಮೈದಾನದಲ್ಲಿ 25 ದಿನಗಳ ತರಬೇತಿ ಶಿಬಿರ: ಉದ್ಘಾಟನೆ



ಮಂಗಳೂರು: ಶ್ರಮವಿಲ್ಲದೆ ಏನನ್ನು ಸಾಧಿಸಲು ಸಾಧ್ಯವಿಲ್ಲ, ಕಠಿನ ಶ್ರಮದ ಮೂಲಕ ಯುವಜನತೆ ಬೆಳೆಯಬೇಕು. ಫುಟ್ಬಾಲ್ ನಂತಹ ಕ್ರೀಡೆ ಮನರಂಜನೆಯೊಂದಿಗೆ ಆರೋಗ್ಯವಂತ ಜೀವನ ನಡೆಸಲು ಸಾಧ್ಯವಿದೆ ಎಂದು ಅನಿವಾಸಿ ಉದ್ಯಮಿ, ಗಡಿಯಾರ್ ಸಮೂಹ ಸಂಸ್ಥೆಯ ಸ್ಥಾಪಕಾಧ್ಯಕ್ಷ ಇಬ್ರಾಹಿಂ ಗಡಿಯಾರ್ ಹೇಳಿದರು.

ದ.ಕ ಫುಟ್ಬಾಲ್ ಅಸೋಸಿಯೇಶನ್ ಆಶ್ರಯದಲ್ಲಿ ನಗರದ ಫುಟ್ಬಾಲ್ ಟರ್ಫ್ ಮೈದಾನದಲ್ಲಿ 25 ದಿನಗಳ ಫುಟ್ಬಾಲ್ ತರಬೇತಿ ಶಿಬಿರ ಉದ್ಘಾಟಿಸಿ ಅವರು ಮಾತನಾಡಿದರು.

ಕುವೈಟ್‌ನ ಇಂಜಿನಿಯರ್ ಮೋಹನ್ ದಾಸ್ ಕಾಮತ್ ಮಾತನಾಡಿ, ಇಷ್ಟೊಂದು ಸುಸಜ್ಜಿತ ಕ್ರೀಡಾಂಗಣ ದೊರಕಿರುವುದು ನಿಮ್ಮೆಲ್ಲರ ಭಾಗ್ಯ. ಇದರ ಸದುಪಯೋಗ ಪಡಿಸಿಕೊಂಡು ಬೆಳೆಯಿರಿ ಎಂದರು.

ಜಿಲ್ಲಾ ಯುವಜನಸೇವೆ ಹಾಗೂ ಕ್ರೀಡಾ ಇಲಾಖೆಯ ಅಧಿಕಾರಿ ಪ್ರದೀಪ್ ಡಿಸೋಜ ಮಾತನಾಡಿ, ಶಿಬಿರದಲ್ಲಿ ಪಾಲ್ಗೊಳ್ಳುವ ಮೂಲಕ ಮಂಗಳೂರಿಂದ ಅಂತಾರಾಷ್ಟ್ರೀಯ ಕ್ರೀಡಾಪಟುಗಳು ಮೂಡಿಬರಬೇಕೆಂದು ಹೇಳಿದರು.

ದಕ್ಷಿಣ ಕನ್ನಡ ಜಿಲ್ಲಾ ಫುಟ್ಬಾಲ್ ಸಂಸ್ಥೆಯ ಅಧ್ಯಕ್ಷ ಡಿ.ಎಂ ಅಸ್ಲಂ ಸ್ವಾಗತಿಸಿ, ರಾಜ್ಯ ಫುಟ್ಬಾಲ್ ಸಂಸ್ಥೆಯ ಸದಸ್ಯ ವಿಜಯ್ ಸುವರ್ಣ, ಜಿಲ್ಲಾ ಫುಟ್ಬಾಲ್ ಸಂಸ್ಥೆಯ ಕಾರ್ಯದರ್ಶಿ ಹುಸೇನ್ ಬೋಳಾರ, ಖಜಾಂಚಿ ಫಿರೋಝ್ ಉಳ್ಳಾಲ, ಸಂಸ್ಥೆಯ ತರಬೇತುದಾರರಾದ ಅಂತೋನಿ ಡಿಸೋಜ, ಅಜ್ಮಲ್, ಅನ್ವರ್, ತನ್ವೀರ್ ಹಾಗೂ ಭವಿಷ್ಯ ಉಪಸ್ಥಿತರಿದ್ದರು.

ಮಜಿ ಸರಕಾರಿ ಪ್ರಾಥಮಿಕ ಶಾಲೆಯಲ್ಲಿ ಮಕ್ಕಳ ಪದವಿ ಪ್ರದಾನ ಕಾರ್ಯಕ್ರಮ



ಬಂಟ್ವಾಳ: ವೀರಕಂಬ ಗ್ರಾಮದ ಮಜಿ ದಕ್ಷಿಣ ಕನ್ನಡ ಜಿಲ್ಲಾ ಪಂಚಾಯತ್ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಪೂರ್ವ ಪ್ರಾಥಮಿಕ ತರಗತಿ ಮಕ್ಕಳ ಪದವಿ ಪ್ರದಾನ ಕಾರ್ಯಕ್ರಮ ಮಂಗಳವಾರ ನಡೆಯಿತು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ಶಾಲಾಭಿವೃದ್ಧಿ ಸಮಿತಿ ಅಧ್ಯಕ್ಷರಾದ ಕೊರಗಪ್ಪ ನಾಯ್ಕ ಸಿಂಗೇರಿ ವಹಿಸಿದ್ದರು.

ಕಾರ್ಯಕ್ರಮದಲ್ಲಿ ಮಕ್ಕಳಿಗೆ ಪದವಿ ಪ್ರದಾನ ಮಾಡಿ ಮಾತನಾಡಿದ ರೊಟೇರಿಯನ್ ಗಣೇಶ್ ಶೆಟ್ಟಿ ಮಕ್ಕಳಿಗೆ ಪ್ರಾಥಮಿಕ ಹಂತದಲ್ಲಿ ಪದವಿ ಅನ್ನುವ ಪರಿಕಲ್ಪನೆಯನ್ನು ಕಲ್ಪಿಸಿ ಮಕ್ಕಳಿಗೆ ಕಲಿಕೆಯ ಪ್ರೋತ್ಸಾಹಿಸಲು ಉತ್ತಮವಾದ ಕಾರ್ಯಕ್ರಮವಾಗಿದೆ ಎಂದರಲ್ಲದೆ ಶಾಲೆಗೆ ಅಗತ್ಯವಿದ್ದ ಒಂದು ಸ್ಮಾರ್ಟ್ ಟಿವಿ ಹಾಗೂ ಶಾಲಾ ಆವರಣ ಗೋಡೆ ನಿರ್ಮಿಸಲು ಸಹಕರಿಸುದಾಗಿ ತಿಳಿಸಿದರು. ಶಾಲೆಗೆ 10 ವರ್ಷಗಳಿಂದ ಉಚಿತ ತರಕಾರಿ ಪೂರೈಸುತ್ತಿರುವ ಮೆಲ್ಕಾರ್ ಚಂದ್ರಿಕಾ ವೆಜಿಟೇಬಲ್ ನ ಮೊಹಮ್ಮದ್ ಶರೀಫ್ ಅತಿಥಿಯಾಗಿ ಭಾಗವಹಿಸಿ ಮಾತನಾಡಿ ಪೂರ್ವ ಪ್ರಾಥಮಿಕ ತರಗತಿಗಳಿಂದಲೇ ಮಕ್ಕಳಿಗೆ ಶಿಕ್ಷಣದ ಜೊತೆಗೆ ಉತ್ತಮ ಸಂಸ್ಕಾರವನ್ನು ಕಲಿಸಿ ಉತ್ತಮ ವ್ಯಕ್ತಿಗಳನ್ನಾಗಿ ರೂಪಿಸುವ ಜವಾಬ್ದಾರಿ ಪೋಷಕರಲ್ಲಿದೆ ಎಂದರು.

ಕೆ.ಜಿ ಮಕ್ಕಳಿಂದ 2025– 26ನೇ ಸಾಲಿನ ಕಲಿಕಾ ಚಟುವಟಿಕೆಗಳ ಪ್ರದರ್ಶನ ಜರಗಿತು. ಮಜಿ ಶಾಲಾ ನಿವೃತ್ತ ಶಿಕ್ಷಕಿ ಶಕುಂತಲಾ ಎಂ ಬಿ , ಉಪಸ್ಥಿತರಿದ್ದರು. ಶಾಲಾ ಮುಖ್ಯ ಶಿಕ್ಷಕಿ ಬೆನೆಡಿಕ್ಟಾ ಆಗ್ನೆಸ್ ಮೆಂಡೋನ್ಸಾ ಸ್ವಾಗತಿಸಿ, ಸಹ ಶಿಕ್ಷಕ ತೌಸೀಫ್ ಅಹಮದ್ ವಂದಿಸಿದರು. ಪೂರ್ವ ಪ್ರಾಥಮಿಕ ತರಗತಿ ಶಿಕ್ಷಕಿ ಪಲ್ಲವಿ ಹಾಗೂ ಸುಷ್ಮಾ ನಿರೂಪಿಸಿದರು. ಸಂಗೀತ ಶರ್ಮ, ಹರಿಣಾಕ್ಷಿ, ಜಯಲಕ್ಷ್ಮಿ ಇಂದುಶೇಖರ್ ಸಹಕರಿಸಿದರು



ಬಿಜೆಪಿ ಸಂಸ್ಥಾಪನಾ ದಿನದ ಅಂಗವಾಗಿ ಬಿಜೆಪಿ ಬೂತ್ ಅಧ್ಯಕ್ಷರ ಮನೆಯಲ್ಲಿ ಭಾರತೀಯ ಜನತಾ ಪಾರ್ಟಿ ಧ್ವಜ ಹಾರಿಸುವ ಪ್ರಕ್ರಿಯೆಗೆ ಸಂಸದ ಕೋಟ ಶ್ರೀನಿವಾಸ ಪೂಜಾರಿ ಚಾಲನೆ ನೀಡಿದರು. ಬಿಜೆಪಿ ರಾಜ್ಯ ಹಿಂದುಳಿದ ವರ್ಗಗಳ ಮೋರ್ಚಾ ಉಪಾಧ್ಯಕ್ಷ ಐರೋಡಿ ವಿಠಲ್ ಪೂಜಾರಿ, ಮಹಾಶಕ್ತಿ ಕೇಂದ್ರದ ಅಧ್ಯಕ್ಷ ಸುರೇಶ್ ಕುಂದರ್, ಐರೋಡಿ ಗ್ರಾ.ಪಂ. ಮಾಜಿ ಉಪಾಧ್ಯಕ್ಷ ನಟರಾಜ್ ಗಾಣಿಗ,ಬಾಳ್ಕುದ್ರು ಆನಂದ್ ಪೂಜಾರಿ, ಮೋಹನ್ ಬಂಗೇರ,ರಮೇಶ್ ಕಾರಂತ ಮತ್ತಿತರರಿದ್ದರು.

ಚಿಲಿಂಬಿ: ಏ.10, 11ರಂದು ನೇಮ

ಮಂಗಳೂರು: ನಗರದ ಚಿಲಿಂಬಿ ಹಿಲ್ಸ್‌ನ ಆದರ್ಶನಗರದಲ್ಲಿರುವ ಶ್ರೀ ಸ್ವಾಮಿ ಕೊರಗಜ್ಜ ಕ್ಷೇತ್ರದಲ್ಲಿ ಶ್ರೀ ದೇವಿ ಚಾಮುಂಡೇಶ್ವರಿ ಹಾಗೂ ಪರಿವಾರ ದೈವಗಳ ಮತ್ತು ಕೊರಗಜ್ಜ ದೈವದ ನೇಮೋತ್ಸವ ಏ. 10 ಮತ್ತು 11ರಂದು ಜರುಗಲಿದೆ.

ಏ. 10ರಂದು ಮಧ್ಯಾಹ್ನ 12.30ಕ್ಕೆ ಶ್ರೀ ದೇವಿಗೆ ಮಹಾಪೂಜೆ ನಡೆಯಲಿದ್ದು, ಬಳಿಕ ಸಾರ್ವಜನಿಕ ಅನ್ನಸಂತರ್ಪಣೆ ಜರುಗಲಿದೆ. ಸಂಜೆ 6ಕ್ಕೆ ಚಾಮುಂಡಿ, ಜಟ್ಟಿಂಗ ಹಾಗೂ ಗುಳಿಗ ದೈವಗಳ ನೇಮ ನಡೆಯಲಿದೆ. ರಾತ್ರಿ 9 ಗಂಟೆಗೆ ಪಂಜುರ್ಲಿ ಮತ್ತು ಮಂತ್ರ ಗುಳಿಗ ದೈವದ ನೇಮ ಜರುಗಲಿದೆ. ಏ.11ರಂದು ರಾತ್ರಿ 8 ಗಂಟೆಗೆ ಕೊರಗಜ್ಜ ದೈವದ ನೇಮ ನಡೆಯಲಿದ್ದು ನಂತರ ಅಗೆಲು ಸೇವೆ ಜರುಗಲಿದೆ. ಅಗೆಲು ಸೇವೆಯ ಅನಂತರ ಭಕ್ತರಿಗೆ ಅಗೆಲು ಸೇವೆಯ ಅನ್ನಸಂತರ್ಪಣೆ ವ್ಯವಸ್ಥೆ ಮಾಡಲಾಗಿದೆ. ಕ್ಷೇತ್ರದ ಭಕ್ತರು ಹಾಗೂ ಸಾರ್ವಜನಿಕರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ ಧಾರ್ಮಿಕ ಕಾರ್ಯಕ್ರಮವನ್ನು ಯಶಸ್ವಿಗೊಳಿಸಬೇಕಾಗಿ ಸ್ವಾಮಿ ಕೊರಗಜ್ಜ ಸೇವಾ ಸಮಿತಿ ಅಧ್ಯಕ್ಷ ರಾಜೇಂದ್ರ ಚಿಲಿಂಬಿ ಪ್ರಕಟಣೆಯಲ್ಲಿ ವಿನಂತಿಸಿದ್ದಾರೆ.

ಕಳಾರ ತಿಮರಡ್ಡದಲ್ಲಿ ಮಲತ್ಯಾಜ್ಯ ಘಟಕ ನಿರ್ಮಾಣಕ್ಕೆ ತೀವ್ರ ವಿರೋಧ | ದ.ಕ. ಜಿಲ್ಲಾಧಿಕಾರಿ ಸ್ಥಳ ಪರಿಶೀಲನೆ ನಡೆಸಲು ಹೋರಾಟಗಾರರ ಆಗ್ರಹ

ಕಡಬ ಪಟ್ಟಣ ಪಂಚಾಯತ್ ಎದುರು ಸ್ಥಳೀಯರಿಂದ ಪ್ರತಿಭಟನೆ; ತಹಶೀಲ್ದಾರ್‌ಗೆ ಮನವಿ

ಕಡಬ: ಕಡಬ ಪಟ್ಟಣ ಪಂಚಾಯತ್ ವ್ಯಾಪ್ತಿಯ ಕಳಾರ ತಿಮರಡ್ಡದಲ್ಲಿ ಮಲತ್ಯಾಜ್ಯ ಘಟಕಕ್ಕೆ ಜಾಗ ನಿಗದಿಪಡಿಸಿರುವ ವಿಚಾರದಲ್ಲಿ ಅಧಿಕಾರಿಗಳು ತಪ್ಪು ಮಾಹಿತಿ ನೀಡಿದ್ದಾರೆ. ಜಿಲ್ಲಾಧಿಕಾರಿ ಬಂದು ಸ್ಥಳ ಪರಿಶೀಲನೆ ಮಾಡಬೇಕು. ಆಗ ವಾಸ್ತವಾಂಶ ತಿಳಿಯುತ್ತದೆ ಎಂದು ಕಳಾರ ಪರಿಸರ ಸಂರಕ್ಷಣ ಹೋರಾಟ ಸಮಿತಿ ಪ್ರಧಾನ ಕಾರ್ಯದರ್ಶಿ ಕೆ. ಎಚ್. ಹಂಝು ಕಳಾರ ಆಗ್ರಹಿಸಿದರು.

ಕಳಾರ ತಿಮರಡ್ಡದ ಜನವಸತಿ ಪ್ರದೇಶದಲ್ಲಿ ಮಲತ್ಯಾಜ್ಯ ಘಟಕ ಸ್ಥಾಪಿಸುವುದರ ವಿರುದ್ಧ ಪಟ್ಟಣ ಪಂಚಾಯತ್ ಕಚೇರಿ ಎದುರು ಹೋರಾಟ ಸಮಿತಿ ನೇತೃತ್ವದಲ್ಲಿ ನಡೆದ ಪ್ರತಿಭಟನೆ ವೇಳೆ ಅವರು ಮಾತನಾಡಿದರು. ವಾಸ್ತವಾಂಶ ತಿಳಿಯಲು ಜಿಲ್ಲಾಧಿಕಾರಿಗಳು ಸ್ಥಳಕ್ಕೆ ಆಗಮಿಸಬೇಕು ಎಂದು ಅವರು ಆಗ್ರಹಿಸಿದರು.



ಕಾನೂನು ಹೋರಾಟ ನಡೆಸಲಿದ್ದೇವೆ

ನಮ್ಮ ಮತ ಪಡೆದು ಅಧಿಕಾರಕ್ಕೆ ಬಂದ ಜನಪ್ರತಿನಿಧಿಗಳು ಕೂಡಾ ಈ ಸಂಕಷ್ಟ ಕಾಲದಲ್ಲಿ ನಮ್ಮ ಪರವಾಗಿಲ್ಲ, ಎಲ್ಲಾ ಗೊತ್ತಿದ್ದೂ ಅವರು ಸುಮ್ಮನಿದ್ದಾರೆ ಎಂದು ಆರೋಪಿಸಿದ ಕೆ.ಎಚ್. ಹಂಝು ತಿಮರಡ್ಡದ ಜನವಸತಿ ಇರುವ ಪ್ರದೇಶದಲ್ಲಿ ಯೋಜನೆಯನ್ನು ಅನುಷ್ಠಾನ ಮಾಡಲು ನಾವು ಬಿಡುವುದಿಲ್ಲ. ಅಧಿಕಾರಿಗಳು ಮತ್ತು ಜನಪ್ರತಿನಿಧಿಗಳು ನಮ್ಮ ಮನವಿಗೆ ಸ್ಪಂದಿಸದೇ ಹೋದರೆ ನಾವು ನಮ್ಮ ದಾರಿ ನೋಡಬೇಕಾಗುತ್ತದೆ. ಈಗಾಗಲೇ ಕಾನೂನು ಹೋರಾಟದ ಬಗ್ಗೆ ಸಿದ್ಧತೆ ನಡೆದಿದೆ. ಹೈಕೋರ್ಟ್‌ನಲ್ಲಿ ನಾವು ನ್ಯಾಯಕ್ಕಾಗಿ ದಾವೆ ಹೂಡಲಿದ್ದೇವೆ ಎಂದರು.

ಕಡಬ ಪಟ್ಟಣ ಪಂಚಾಯಿತಿ ಅಧ್ಯಕ್ಷೆ ತಮನ್ನಾ ಜಬೀನ್ ಮಾತನಾಡಿ, ತಿಮರಡ್ಡದಲ್ಲಿ ಮಲತ್ಯಾಜ್ಯ ಘಟಕ ನಿರ್ಮಾಣಕ್ಕೆ ಪರಿಸರದ ಜನ ವಿರೋಧ ವ್ಯಕ್ತಪಡಿಸಿರುವ ಹಿನ್ನೆಲೆಯಲ್ಲಿ ಈಗಾಗಲೇ ತುರ್ತು ಸಭೆ ಕರೆದು ಬೇರೆ ಸ್ಥಳ ನಿಗದಿ ಪಡಿಸಿಕೊಡುವಂತೆ ನಿರ್ಣಯ ಅಂಗೀಕರಿಸಿ ಕಂದಾಯ ಇಲಾಖೆಗೆ ಕಳುಹಿಸಿಕೊಟ್ಟಿದ್ದೇವೆ. ಆ ಬಗ್ಗೆ ಇನ್ನೊಮ್ಮೆ ಪಟ್ಟಣ ಪಂಚಾಯತ್ ಆಡಳಿತ ಮಂಡಳಿ ಸಭೆ ಕರೆದು ನಿರ್ಣಯ ಅಂಗೀಕರಿಸಲಿ ಎಂದರು.

ಮನವಿ ಸ್ವೀಕರಿಸಿದ ಪಟ್ಟಣ ಪಂಚಾಯತ್ ಮುಖ್ಯಾಧಿಕಾರಿ ಇ. ಲೀಲಾವತಿ ಮಾತನಾಡಿ, ಇದು ಕೇಂದ್ರ ಸರಕಾರದ ಮಹತ್ವಾಕಾಂಕ್ಷೆಯ ಯೋಜನೆ. ಜಿಲ್ಲೆಯ ಬೇರೆ ಬೇರೆ ಪಂಚಾಯತ್ ವ್ಯಾಪ್ತಿಯಲ್ಲಿ ಈಗಾಗಲೇ ಅನುಷ್ಠಾನ ಮಾಡಲಾಗಿದೆ. ಶೀಘ್ರ ಅನುಷ್ಠಾನ ಮಾಡಲು ಜಿಲ್ಲಾಧಿಕಾರಿ ಅವರಿಂದ ಆದೇಶ ಇದೆ. ಮಾತ್ರವಲ್ಲ ವಿರೋಧವಿದ್ದರೆ ಪೊಲೀಸ್ ರಕ್ಷಣೆಯೊಂದಿಗೆ ಕಾಮಗಾರಿ ಪ್ರಾರಂಭಿಸಲು ನಮಗೆ ಕಟ್ಟುನಿಟ್ಟಿನ ಆದೇಶವಿದೆ. ಆದರೂ ಮನವಿಯನ್ನು ಜಿಲ್ಲಾಧಿಕಾರಿಗೆ ಕಳುಹಿಸಿಕೊಡುತ್ತೇವೆ ಎಂದರು. ಬಳಿಕ ಹೋರಾಟಗಾರರು ಕಡಬ ತಹಶೀಲ್ದಾರ್ ಅವರಿಗೂ ಮನವಿ ಸಲ್ಲಿಸಿದರು.

ಕಳಾರ ಪರಿಸರ ಸಂರಕ್ಷಣ ಹೋರಾಟ ಸಮಿತಿ ಉಪಾಧ್ಯಕ್ಷ ಇಸ್ಮಾಯಿಲ್ ಕೆ.ಎಚ್. ಮನವಿ ನೀಡಿದರು. ಕಳಾರ ಮಸೀದಿ ಅಧ್ಯಕ್ಷ ಹಾಜಿ ಅಬ್ದುಲ್‌ರಹಿಮಾನ್ ಅಡ್ಕಾಡಿ, ಕಡಬ ಶ್ರೀ ದುರ್ಗಾಂಬಿಕಾ ಅಮ್ಮನವರ ದೇವಸ್ಥಾನದ ವ್ಯವಸ್ಥಾಪನ ಸಮಿತಿ ಅಧ್ಯಕ್ಷ ಚಂದ್ರಶೇಖರ ಕರ್ಕೇರ ಪೆಲತ್ತೋಡಿ, ಹೋರಾಟ ಸಮಿತಿಯ ಉಪಾಧ್ಯಕ್ಷ ರಮ್ಲ ಸನ್‌ರೈಸ್, ಕಾರ್ಯದರ್ಶಿ ಫಾರೂಕ್ ಕೆ.ಎಂ., ಕೋಶಾಧಿಕಾರಿ ಗಣೇಶ್ ಪೆಲತ್ತೋಡಿ, ಜಿಲ್ಲಾ ಪರಿಷತ್ ಮಾಜಿ ಸದಸ್ಯ ಸಯ್ಯದ್ ಮೀರಾ ಸಾಹೇಬ್, ಪ್ರಮುಖರಾದ ಲಕ್ಷ್ಮೀಶ ಬಂಗೇರ, ವಿಕ್ಟರ್ ಮಾರ್ಟಿಸ್, ಆದಂ ಕುಂಡೋಳಿ, ಜೈನಾಬಿ ಆದಂ, ಕೆ.ಎಂ.ಇಬ್ರಾಹಿಂ ಕಳಾರ, ಇಸ್ಮಾಯಿಲ್ ಬಿ.ಡಿ.ಎಸ್., ಹುಸೈನ್, ಅಬ್ದುಲ್ಲ ಅಕ್ಕರೆ, ಅಬ್ಬಾಸ್, ಇಬ್ರಾಹಿಂ ಒರೋಡಿ, ಜತ್ತಪ್ಪ ಶೆಟ್ಟಿ ನಾರಾಯಣ ಶೆಟ್ಟಿ, ಜಲೀಲ್ ಕೆ.ಎ., ವಿಶ್ವನಾಥ ಶೆಟ್ಟಿ ಅಶ್ರಫ್ ಕೆ.ಎಚ್., ನರೇಂದ್ರ ಪೆಲತ್ತೋಡಿ, ಹಾರೀಸ್ ಕಳಾರ, ಮಹಮ್ಮದ್ ಅಲಿ, ಅಬ್ದುಲ್ ನವಿಶಾನ್, ಆದಂ ಅಡ್ಕಾಡಿ, ಜಬ್ಬಾರ್ ಕಳಾರ, ಇಸ್ಮಾಯಿಲ್ ಮೇಸ್ತ್ರಿ, ಇಸ್ಮಾಯಿಲ್, ಶಕೀರ್ ಗುಡ್ಡೆ, ಸುಕೇಶ್ ಕಡಬ, ಉಸ್ಮಾನ್ ತಿಮರಡ್ಡ, ರಾಮಚಂದ್ರ ಗೌಡ ಭಾಗವಹಿಸಿದ್ದರು.

ಸುತ್ತಮುತ್ತ

ವಿಧಾನಸಭಾ ಚುನಾವಣೆ: ಗುರುತಿನ ಚೀಟಿ ಕಡ್ಡಾಯ

ಕಾಸರಗೋಡು: ಜಿಲ್ಲೆಯಲ್ಲಿ ಏ.9ರಂದು ನಡೆಯಲಿರುವ ವಿಧಾನಸಭಾ ಚುನಾವಣೆಯ ಅಂಗವಾಗಿ ಮತದಾರರನ್ನು ಗುರುತಿಸಲು ಫೋಟೋ ಹೊಂದಿರುವ ಮತದಾರರ ಗುರುತಿನ ಚೀಟಿ ಮುಖ್ಯ ದಾಖಲೆಯಾಗಿದೆ. ಮತದಾರರ ಗುರುತಿನ ಚೀಟಿ ಇಲ್ಲದವರು ಚುನಾವಣಾ ಆಯೋಗವು ಅನುಮೋದಿಸಿದ ದಾಖಲೆಗಳನ್ನು ಗುರುತಿನ ಪುರಾವೆಯಾಗಿ ಬಳಸಬಹುದು.

ಈ ಕೆಳಗಿನ ಗುರುತಿನ ಪುರಾವೆಗಳನ್ನು ಪ್ರಸ್ತುತಪಡಿಸುವ ಮೂಲಕವೂ ಮತ ಚಲಾಯಿಸಬಹುದು. ಆಧಾರ್ ಕಾರ್ಡ್, ಮಹಾತ್ಮ ಗಾಂಧಿ ರಾಷ್ಟ್ರೀಯ ಉದ್ಯೋಗ ಖಾತರಿ ಯೋಜನೆಯ ಗುರುತಿನ ಚೀಟಿ, ಬ್ಯಾಂಕ್ ಅಥವಾ ಅಂಚೆ ಕಚೇರಿಯಿಂದ ನೀಡಲಾದ ಫೋಟೋ ಹೊಂದಿರುವ ಗುರುತಿನ ಚೀಟಿ, ಕಾರ್ಮಿಕ ಸಚಿವಾಲಯದ ಯೋಜನೆಯಡಿ ನೀಡಲಾದ ಆರೋಗ್ಯ ರಕ್ಷಣಾ ಸ್ಮಾರ್ಟ್ ಕಾರ್ಡ್, ಚಾಲನಾ ಪರವಾನಗಿ, ಪಾನ್ ಕಾರ್ಡ್, ರಾಷ್ಟ್ರೀಯ ಜನಸಂಖ್ಯಾ ನೋಂದಣಿಯಡಿ ಭಾರತದ ರಿಜಿಸ್ಟ್ರಾರ್ ಜನರಲ್ ನೀಡಿದ ಸ್ಮಾರ್ಟ್ ಕಾರ್ಡ್, ಭಾರತೀಯ ಪಾಸ್‌ಪೋರ್ಟ್, ಫೋಟೋ ಹೊಂದಿರುವ ಪಿಂಚಣಿ ದಾಖಲೆ, ಕೇಂದ್ರ, ರಾಜ್ಯ, ಸಾರ್ವಜನಿಕ ವಲಯ ಮತ್ತು ಸಾರ್ವಜನಿಕ ಸೀಮಿತ ಕಂಪೆನಿಗಳ ಉದ್ಯೋಗಿಗಳಿಗೆ ನೀಡಲಾದ ಸೇವಾ ಗುರುತಿನ ಚೀಟಿ, ಸಂಸದರು ಮತ್ತು ಶಾಸಕರಿಗೆ ನೀಡಲಾದ ಅಧಿಕೃತ ಗುರುತಿನ ಚೀಟಿ ಮತ್ತು ಭಾರತ ಸರಕಾರದ ಸಾಮಾಜಿಕ ನ್ಯಾಯ ಮತ್ತು ಸಬಲೀಕರಣ ಸಚಿವಾಲಯ ನೀಡಿದ ವಿಶೇಷ ದಿವ್ಯಾಂಗ ಗುರುತಿನ ಚೀಟಿಯನ್ನು ಸಹ ಗುರುತಿನ ಪುರಾವೆಯಾಗಿ ಬಳಸಬಹುದು.

ಚುನಾವಣೆಗೆ ಸಜ್ಜುಗೊಂಡಿರುವ ಮತಗಟ್ಟೆಗಳು

ಕಾಸರಗೋಡು: ವಿಧಾನಸಭಾ ಚುನಾವಣೆಯ ಅಂಗವಾಗಿ ಮತಯಂತ್ರಗಳು ಮತ್ತು ಸಂಬಂಧಿತ ಸಾಮಗ್ರಿಗಳನ್ನು ವಿತರಣಾ ಕೇಂದ್ರಗಳಿಂದ ಜಿಲ್ಲೆಯ ಎಲ್ಲಾ ಮತಗಟ್ಟೆಗಳಿಗೆ ಬುಧವಾರ ವಿತರಿಸಲಾಯಿತು. ಮತಗಟ್ಟೆ ಅಧಿಕಾರಿಗಳು ಬೂತ್‌ಗಳನ್ನು ಸ್ಥಾಪಿಸಿದರು. ಜಿಲ್ಲೆಯಲ್ಲಿ ಒಟ್ಟು 5504 ಮತಗಟ್ಟೆ ಅಧಿಕಾರಿಗಳಿದ್ದಾರೆ. ಅವರಲ್ಲಿ ಶೇಕಡಾ 60ರಷ್ಟು ಮಂದಿ ಮಹಿಳೆಯರು. ಮಂಜೇಶ್ವರ ಮತ್ತು ಕಾಸರಗೋಡು ಕ್ಷೇತ್ರಗಳ ಮತದಾನ ಸಾಮಗ್ರಿಗಳ ವಿತರಣೆಯು ಕಾಸರಗೋಡು ಸರಕಾರಿ ಕಾಲೇಜಿನಿಂದ, ಉದುಮ ಕ್ಷೇತ್ರದ ಮತದಾನ ಸಾಮಗ್ರಿಗಳ ವಿತರಣೆಯು ನಾಯನ್ಮಾರಮೂಲೆ ಟಿಐಎಚ್‌ಎಸ್ ಶಾಲೆಯಿಂದ ಮತ್ತು ಕಾಞಂಗಾಡು ಹಾಗೂ ತೃಕ್ಕರೀಪುರ ಕ್ಷೇತ್ರಗಳ ಮತದಾನ ಸಾಮಗ್ರಿಗಳ ವಿತರಣೆಯು ಕಾಞಂಗಾಡು ದುರ್ಗಾ ಹೈಯರ್ ಸೆಕೆಂಡರಿ ಶಾಲೆಯಿಂದ ಏರ್ಪಡಿಸಲಾಯಿತು.

ಜಿಲ್ಲಾಧಿಕಾರಿ ಅರ್ಜುನ್ ಪಾಂಡ್ಯನ್, ಚುನಾವಣಾ ಅಧಿಕಾರಿಗಳಾದ ಎ.ಪಿ.ರಘುಮಣಿ, ಬಿನು ಜೋಸೆಫ್, ಲಿಪು ಎಸ್.ಲಾರೆನ್ಸ್, ಕೆ.ಆರ್.ಮನೋಜ್ ಮತ್ತು ವಿ.ಇ.ಶೆರ್ಲಿ ಚಟುವಟಿಕೆಗಳ ನೇತೃತ್ವ ವಹಿಸಿದ್ದರು. ಉದುಮ ಕ್ಷೇತ್ರದ ನಾಯನ್ಮಾರಮೂಲೆ ಟಿಐಎಚ್‌ಎಸ್‌ಎಸ್‌ನಲ್ಲಿ ಜಿಲ್ಲಾಧಿಕಾರಿ ಮತ್ತು ಜಿಲ್ಲಾ ಪೊಲೀಸ್ ಮುಖ್ಯಸ್ಥರ ಸಮ್ಮುಖದಲ್ಲಿ ಸ್ಟ್ರಾಂಗ್ ರೂಮ್ ತೆರೆಯಲಾಯಿತು. ಜಿಲ್ಲಾಧಿಕಾರಿ ಅರ್ಜುನ್ ಪಾಂಡ್ಯನ್ ಮತ್ತು ಜಿಲ್ಲಾ ಪೊಲೀಸ್ ಮುಖ್ಯಸ್ಥ ವಿಜಯ್ ಭರತ್ ರೆಡ್ಡಿ ಅವರು ವಿವಿಧ ಕೇಂದ್ರಗಳಲ್ಲಿನ ವಿತರಣಾ ಚಟುವಟಿಕೆಗಳಿಗೆ ಭೇಟಿ ನೀಡಿ ವ್ಯವಸ್ಥೆಗಳನ್ನು ಪರಿಶೀಲಿಸಿದರು.

ಆರೋಗ್ಯ ದಿನಾಚರಣೆ

ಕಾಸರಗೋಡು: ಜಿಲ್ಲಾ ವೈದ್ಯಕೀಯ ಕಚೇರಿ (ಆರೋಗ್ಯ) ಮತ್ತು ರಾಷ್ಟ್ರೀಯ ಆರೋಗ್ಯ ಮಿಷನ್ ಇವುಗಳ ಜಂಟಿ ಆಶ್ರಯದಲ್ಲಿ ಕಾಞಂಗಾಡು ರಾಜ್ ರೆಸಿಡೆನ್ಸಿ ಸಮ್ಮೇಳನ ಸಭಾಂಗಣದಲ್ಲಿ ಜಿಲ್ಲಾ ಮಟ್ಟದ ವಿಶ್ವ ಆರೋಗ್ಯ ದಿನಾಚರಣೆಯ ಉದ್ಘಾಟನೆ ನಡೆಯಿತು. ಉಪ ಜಿಲ್ಲಾ ವೈದ್ಯಾಧಿಕಾರಿ ಡಾ.ಸಂತೋಷ್ ಬಿ. ಕಾರ್ಯಕ್ರಮವನ್ನು ಉದ್ಘಾಟಿಸಿದರು. ಉಪ ಜಿಲ್ಲಾ ವೈದ್ಯಾಧಿಕಾರಿ ಡಾ.ಅಜಯ್ ರಾಜನ್ ಮುಖ್ಯ ಭಾಷಣ ಮಾಡಿದರು. ತಾಂತ್ರಿಕ ಸಹಾಯಕ ಎಂ.ಚಂದ್ರನ್ ಮಾತನಾಡಿದರು. ಉಪ ಜಿಲ್ಲಾ ಶಿಕ್ಷಣ ಮಾಧ್ಯಮ ಅಧಿಕಾರಿ ಪಿ.ಪಿ.ಹಸೀಬ್ ಸ್ವಾಗತಿಸಿ, ಎಚ್‌ಡಬ್ಲ್ಯೂಸಿ ನೋಡಲ್ ಅಧಿಕಾರಿ ಡಾ.ಧನ್ಯಾ ದಯಾನಂದ ವಂದಿಸಿದರು. ಈ ವರ್ಷದ ವಿಶ್ವ ಆರೋಗ್ಯ ದಿನದ ಸಂದೇಶ ಆರೋಗ್ಯಕ್ಕಾಗಿ ವಿಜ್ಞಾನದೊಂದಿಗೆ ಕೈಜೋಡಿಸೋಣ ಎಂಬುದಾಗಿದೆ. ವೈಜ್ಞಾನಿಕ ಜ್ಞಾನ ಮತ್ತು ಜಾಗತಿಕ ಸಹಕಾರದ ಮೂಲಕ ಆಧುನಿಕ ಜಗತ್ತು ಅನುಭವಿಸುತ್ತಿರುವ ಹೊಸ ಆರೋಗ್ಯ ಸವಾಲುಗಳನ್ನು ಎದುರಿಸುವುದು ಈ ವರ್ಷದ ಅಭಿಯಾನದ ಮುಖ್ಯ ಉದ್ದೇಶವಾಗಿದೆ. ಈ ಸಂದೇಶವು ಒಂದು ಆರೋಗ್ಯ ಎಂಬ ದೃಷ್ಟಿಕೋನಕ್ಕೆ ಹೆಚ್ಚಿನ ಪ್ರಾಮುಖ್ಯತೆಯನ್ನು ನೀಡುತ್ತದೆ.





ಕಾಸರಗೋಡು ಜಿಲ್ಲೆಯ 5 ವಿಧಾನಸಭಾ ಕ್ಷೇತ್ರಗಳಲ್ಲಿ ಚುನಾವಣೆ | ಇಂದು ಮತದಾನ

ಶಾಂತಿಯುತ, ನ್ಯಾಯಸಮ್ಮತ ಚುನಾವಣೆಗೆ ಸಕಲ ಸಿದ್ಧತೆ

ಕಾಸರಗೋಡು: ಕೇರಳ ವಿಧಾನಸಭೆಯ 140 ಸ್ಥಾನಗಳಿಗೆ ಏ.9ರಂದು ಮತದಾನ ನಡೆಯಲಿದೆ. ಕಾಸರಗೋಡು ಜಿಲ್ಲೆಯ ಐದು ವಿಧಾನಸಭಾ ಕ್ಷೇತ್ರಗಳಾದ ಮಂಜೇಶ್ವರ, ಕಾಸರಗೋಡು, ಉದುಮ, ಕಾಞಂಗಾಡು, ತೃಕ್ಕರೀಪುರ ವಿಧಾನಸಭಾ ಕ್ಷೇತ್ರಗಳಲ್ಲೂ ಚುನಾವಣೆ ನಡೆಯಲಿದೆ.

ಬೆಳಗ್ಗೆ 7 ಗಂಟೆಗೆ ಆರಂಭಗೊಳ್ಳುವ ಮತದಾನವು ಸಂಜೆ 6 ಗಂಟೆಯ ತನಕ ಮುಂದುವರಿಯಲಿದೆ. ಇದೇ ವೇಳೆ ಸಂಜೆ 6 ಗಂಟೆಯೊಳಗೆ ಮತಗಟ್ಟೆಗಳಲ್ಲಿ ಸರದಿ ಸಾಲಿನಲ್ಲಿ ನಿಂತಿರುವ ಮತದಾರರಿಗೆ ಟೋಕನ್ ನೀಡಿ 6 ಗಂಟೆ ಬಳಿಕವೂ ಮತ ಚಲಾಯಿಸಲು ಅವಕಾಶ ನೀಡಲಾಗುವುದು ಎಂದು ಕಾಸರಗೋಡು ಜಿಲ್ಲಾ ಚುನಾವಣಾಧಿಕಾರಿಯಾದ ಜಿಲ್ಲಾಧಿಕಾರಿ ಅರ್ಜುನ್ ಪಾಂಡ್ಯನ್ ತಿಳಿಸಿದ್ದಾರೆ.

ಸಮರ್ಪಕ ಭದ್ರತಾ ವ್ಯವಸ್ಥೆ

ಜಿಲ್ಲೆಯ ಐದು ವಿಧಾನಸಭಾ ಕ್ಷೇತ್ರಗಳ ಸೂಕ್ಷ್ಮ ಮತ್ತು ಅತೀ ಸೂಕ್ಷ್ಮ ಮತಗಟ್ಟೆಗಳಿಗೆ ಕೇಂದ್ರ ಸೇನೆ ನಿಯೋಜನೆ ಸಹಿತ ಸಮರ್ಪಕ ಭದ್ರತಾ ವ್ಯವಸ್ಥೆಗಳನ್ನು ಕೈಗೊಳ್ಳಲಾಗಿದೆ.

ಸಿಸಿ ಕ್ಯಾಮರಾ ಅಳವಡಿಕೆ, ವೆಬ್‌ಕಾಸ್ಟಿಂಗ್

ಮಾತ್ರವಲ್ಲದೆ ಮತಗಟ್ಟೆಗಳಲ್ಲಿ ಸಿಸಿಟಿವಿ ಕ್ಯಾಮರಾ ಅಳವಡಿಕೆ ಮತ್ತು ವೆಬ್‌ಕಾಸ್ಟಿಂಗ್ ಸೌಲಭ್ಯಗಳನ್ನು ಒದಗಿಸಲಾಗಿದೆ. ಜಿಲ್ಲೆಯಾದ್ಯಂತ ನ್ಯಾಯಸಮ್ಮತ ಹಾಗೂ ಶಾಂತಿಯುತ ಮತದಾನಕ್ಕೆ ಎಲ್ಲರೂ ಸಹಕರಿಸಬೇಕೆಂದು ಜಿಲ್ಲಾಧಿಕಾರಿ ವಿನಂತಿಸಿದ್ದಾರೆ.



ಮಂಜೇಶ್ವರ ಮಂಡಲದಲ್ಲಿ ಅತೀ ಹೆಚ್ಚು ಅಭ್ಯರ್ಥಿಗಳು

ಜಿಲ್ಲೆಯ ಐದು ವಿಧಾನಸಭಾ ಕ್ಷೇತ್ರಗಳ ಪೈಕಿ ಮಂಜೇಶ್ವರದಲ್ಲಿ ಅತೀ ಹೆಚ್ಚು 11 ಮಂದಿ ಹಾಗೂ ಕಾಞಂಗಾಡಿನಲ್ಲಿ ಅತೀ ಕಡಿಮೆ 4 ಮಂದಿ ಅಭ್ಯರ್ಥಿಗಳು ಕಣದಲ್ಲಿದ್ದಾರೆ. ಉಳಿದಂತೆ ಕಾಸರಗೋಡು 5, ಉದುಮ, ತೃಕ್ಕರೀಪುರದಲ್ಲಿ ತಲಾ 6 ಮಂದಿ ಸ್ಪರ್ಧಾಳುಗಳಿದ್ದಾರೆ. ಬಹಿರಂಗ ಪ್ರಚಾರವು ಮಂಗಳವಾರ ಸಂಜೆ ಮುಕ್ತಾಯಗೊಂಡಿದ್ದು, ಬುಧವಾರ ಮನೆ ಮನೆ ಸಂಪರ್ಕ ಅಭಿಯಾನದಲ್ಲಿ ಸ್ಪರ್ಧಾಳುಗಳು ಮತ್ತು ರಾಜಕೀಯ ಪಕ್ಷಗಳ ಪ್ರತಿನಿಧಿಗಳು ಪಾಲ್ಗೊಂಡಿದ್ದರು. ಒಟ್ಟಾರೆಯಾಗಿ ಏ.9ರಂದು ನಡೆಯುವ ಮತದಾನವು ಶಾಂತಿಯುತವಾಗಿ ಮುಕ್ತಾಯಗೊಳ್ಳಲಿ ಎಂಬುದು ಸಾರ್ವಜನಿಕರ ಅಭಿಲಾಷೆಯಾಗಿದೆ.

11,03,618 ಮಂದಿ ಮತದಾರರು

ಕಾಸರಗೋಡು ಜಿಲ್ಲೆಯಲ್ಲಿ 11,03,618 ಮಂದಿ ಮತದಾರರಿದ್ದು ಈ ಪೈಕಿ 5,44,543 ಮಂದಿ ಪುರುಷರು, 5,59,063 ಮಂದಿ ಮಹಿಳೆಯರು ಹಾಗೂ 12 ಮಂದಿ ಮಂಗಳಮುಖಿಯರು ಒಳಗೊಂಡಿದ್ದಾರೆ. ಜಿಲ್ಲೆಯ ಐದು ವಿಧಾನಸಭಾ ಕ್ಷೇತ್ರಗಳಲ್ಲಾಗಿ ಒಟ್ಟು 32 ಮಂದಿ ಅಭ್ಯರ್ಥಿಗಳು ಕಣದಲ್ಲಿದ್ದು, ಜಿಲ್ಲೆಯಾದ್ಯಂತ ಒಟ್ಟು 269 ಮತಗಟ್ಟೆಗಳನ್ನು ಸ್ಥಾಪಿಸಲಾಗಿದೆ.

ಇದೇ ವೇಳೆ ಮಂಜೇಶ್ವರ ಕ್ಷೇತ್ರದಲ್ಲಿ 36, ಕಾಸರಗೋಡಿನಲ್ಲಿ 57, ಉದುಮದಲ್ಲಿ 34, ಕಾಞಂಗಾಡಿನಲ್ಲಿ 45, ತೃಕ್ಕರೀಪುರದಲ್ಲಿ 66 ಮತಗಟ್ಟೆಗಳು ಸಹಿತ ಒಟ್ಟು 238 ಬೂತ್‌ಗಳನ್ನು ಸೂಕ್ಷ್ಮ ಸಂವೇದಿ ಬೂತ್‌ಗಳೆಂದು ಗುರುತಿಸಲಾಗಿದೆ. ಜಿಲ್ಲೆಯಲ್ಲಿ 6,679 ಮಂದಿ ಈಗಾಗಲೇ ಮನೆಯಿಂದ ಮತ ಚಲಾಯಿಸಿದ್ದಾರೆ. ಈ ಪೈಕಿ 85 ವರ್ಷಕ್ಕಿಂತ ಮೇಲ್ಪಟ್ಟ 3189 ಮಂದಿ ಮತ್ತು ದಿವ್ಯಾಂಗ ವಿಭಾಗದ 3490 ಮಂದಿ ಮತದಾರರು ಸೇರಿದ್ದಾರೆ.

ಜಿಲ್ಲೆಯ ಐದು ಮಂಡಲಗಳಲ್ಲೂ ಪ್ರಬಲ ತ್ರಿಕೋನ ಸ್ಪರ್ಧೆ

ಜಿಲ್ಲೆಯ ಐದು ವಿಧಾನಸಭಾ ಕ್ಷೇತ್ರಗಳಲ್ಲಿ ಪ್ರಬಲ ತ್ರಿಕೋನ ಸ್ಪರ್ಧೆ ಕಂಡುಬಂದಿದೆ. ಮಂಜೇಶ್ವರ ಮಂಡಲದಲ್ಲಿ ಬಿಜೆಪಿ (ಎನ್‌ಡಿಎ)ಯ ಕೆ.ಸುರೇಂದ್ರನ್, ಮುಸ್ಲಿಂಲೀಗ್ (ಯುಡಿಎಫ್)ನ ಎ.ಕೆ.ಎಂ.ಅಶ್ರಫ್, ಸಿಪಿಎಂ (ಎಲ್‌ಡಿಎಫ್)ನ ಕೆ.ಆರ್.ಜಯಾನಂದ ನಡುವೆ ತ್ರಿಕೋನ ಸ್ಪರ್ಧೆ ಏರ್ಪಟ್ಟಿದೆ. ಅಲ್ಲದೆ ಸ್ವತಂತ್ರ ಅಭ್ಯರ್ಥಿಗಳಾದ ಜೀನ್ ಲವೀನಾ ಮೊಂತೆರೋ ಮತ್ತು ಕಣ್ಣೂರು ಅಬ್ದುಲ್ಲ ಮಾಸ್ಟರ್ ಪ್ರಬಲ ಸ್ಪರ್ಧಾಳುಗಳಾಗಿ ಕಂಡುಬಂದಿದ್ದಾರೆ. ಕಾಸರಗೋಡು ವಿಧಾನಸಭಾ ಕ್ಷೇತ್ರದಲ್ಲಿ ಬಿಜೆಪಿ (ಎನ್‌ಡಿಎ)ಯ ಎಂ.ಎಲ್.ಅಶ್ವಿನಿ, ಮುಸ್ಲಿಂಲೀಗ್ (ಯುಡಿಎಫ್)ನ ಕಲ್ಲಟ್ರ ಮಾಹಿನ್ ಹಾಜಿ, ಎಲ್‌ಡಿಎಫ್ ಬೆಂಬಲಿತ ಸ್ವತಂತ್ರ ಅಭ್ಯರ್ಥಿ ಶಾನವಾಸ್ ಪಾದೂರು ಮಧ್ಯೆ ಪ್ರಬಲ ತ್ರಿಕೋನ ಸ್ಪರ್ಧೆ ಗೋಚರಿಸುತ್ತಿದೆ. ಮಾತ್ರವಲ್ಲದೆ ಉದುಮ ವಿಧಾನಸಭಾ ಕ್ಷೇತ್ರದಲ್ಲಿ ಬಿಜೆಪಿಯ ಮನುಲಾಲ್ ಮೇಲತ್, ಸಿಪಿಎಂನ ಸಿ.ಎಚ್.ಕುಂಞಂಬು, ಕಾಂಗ್ರೆಸ್‌ನ ಕೆ.ನೀಲಕಂಠನ್ ಅವರ ಮಧ್ಯೆ ಹಣಾಹಣಿ ಏರ್ಪಟ್ಟಿದೆ. ಕಾಞಂಗಾಡು ವಿಧಾನಸಭಾ ಕ್ಷೇತ್ರದಲ್ಲಿ ಬಿಜೆಪಿಯ ಎಂ.ಬಲರಾಜ್, ಸಿಪಿಐಯ ಗೋವಿಂದನ್ ಪಳ್ಳಿಕಾಪಿಲ್, ಕೇರಳ ಕಾಂಗ್ರೆಸ್‌ನ ಶೈಜಿ ಒಟ್ಟಪ್ಪಳ್ಳಿ ಹಾಗೂ ತೃಕ್ಕರೀಪುರ ವಿಧಾನಸಭಾ ಕ್ಷೇತ್ರದಲ್ಲಿ ಎನ್‌ಡಿಎ ಮೈತ್ರಿಕೂಟದ ರವಿ ಕುಳಂಗರ, ಸಿಪಿಎಂನ ಡಾ.ವಿ.ಪಿ.ಪಿ.ಮುಸ್ತಾಫ, ಕಾಂಗ್ರೆಸ್‌ನ ಸಂದೀಪ್ ವಾರಿಯರ್ ಅವರ ನಡುವೆ ಸ್ಪರ್ಧೆ ಕಂಡುಬಂದಿದೆ.

ಕಾಸರಗೋಡು ಸರ್ಕಾರಿ ಕಾಲೇಜಿನಲ್ಲಿ ಜಿಲ್ಲಾಧಿಕಾರಿ ಸೆಲ್ಫಿ

ಕಾಸರಗೋಡು: ಮತದಾನದ ಹಕ್ಕುಗಳ ಬಗ್ಗೆ ಜಾಗೃತಿ ಮೂಡಿಸಲು ಮತ್ತು ಚುನಾವಣಾ ಪ್ರಚಾರಕ್ಕಾಗಿ ಕಾಸರಗೋಡು ಸರಕಾರಿ ಕಾಲೇಜಿನಲ್ಲಿ ಸ್ಥಾಪಿಸಲಾದ ಸೆಲ್ಫಿ ಪಾಯಿಂಟ್ ಗಮನಾರ್ಹವಾಗಿದೆ. ಅಭಿಯಾನದ ಭಾಗವಾಗಿ ಸಂಪೂರ್ಣವಾಗಿ ತ್ಯಾಜ್ಯ ಪ್ಲಾಸ್ಟಿಕ್ ಬಾಟಲಿಗಳಿಂದ ನಿರ್ಮಿಸಿದ ಈ ಸೆಲ್ಫಿ ಪಾಯಿಂಟ್‌ನಲ್ಲಿ ಜಿಲ್ಲಾಧಿಕಾರಿ ಅರ್ಜುನ್ ಪಾಂಡ್ಯನ್ ಸೆಲ್ಫಿ ತೆಗೆದುಕೊಂಡರು. ಕಾಸರಗೋಡು ನಗರಸಭೆ ಮತ್ತು ಸ್ವೀಪ್ ಇವುಗಳ ಜಂಟಿ ನೇತೃತ್ವದಲ್ಲಿ ಕಾಲೇಜು ಆವರಣದಲ್ಲಿ ಈ ಮಾದರಿ ಸೆಲ್ಫಿ ಪಾಯಿಂಟ್‌ನ್ನು ಸ್ಥಾಪಿಸಲಾಗಿದೆ. ಈ ಸೆಲ್ಫಿ ಪಾಯಿಂಟ್ ತ್ಯಾಜ್ಯ ಮುಕ್ತ ಮತ್ತು ಪ್ರಕೃತಿ ಸ್ನೇಹಿ ಚುನಾವಣೆಯ ಸಂದೇಶವನ್ನು ನೀಡುತ್ತದೆ. ಶುಚಿತ್ವಾ ಮಿಷನ್ ಸಂಯೋಜಕ ಪಿ.ಜಯನ್, ಜಿಲ್ಲಾ ಮಾಹಿತಿ ಅಧಿಕಾರಿ ಎಂ.ಮಧುಸೂದನನ್ ಮತ್ತು ಇತರರು ಸಮಾರಂಭದಲ್ಲಿ ಭಾಗವಹಿಸಿದ್ದರು.

ಕಾಸರಗೋಡು ಜಿಲ್ಲೆಯ ಮತಗಟ್ಟೆಗಳಿಗೆ ಅಧಿಕಾರಿಗಳು, ಸೂಕ್ಷ್ಮ ವೀಕ್ಷಕರ ನೇಮಕ



ಕಾಸರಗೋಡು: ವಿಧಾನಸಭಾ ಚುನಾವಣೆಗೆ ಮತಗಟ್ಟೆ ಅಧಿಕಾರಿಗಳು ಮತ್ತು ಸೂಕ್ಷ್ಮ ವೀಕ್ಷಕರ ನೇಮಕಾತಿ ಅಂಗವಾಗಿ ಅಂತಿಮ ಹಂತದ ರಾಂಡಮೈಸೇಶನ್ (ಮತದಾನದ ದಿನಕ್ಕಾಗಿ ಬೂತ್ ಮಟ್ಟದ ಅಧಿಕಾರಿಗಳನ್ನು ಮತ್ತು ಇತರ ಸಿಬ್ಬಂದಿಗಳನ್ನು ಆ್ಯಪ್ ಮೂಲಕ ನೇಮಕ ಮಾಡುವುದು) ಜಿಲ್ಲಾಧಿಕಾರಿ ಕಚೇರಿಯಲ್ಲಿ ಪೂರ್ಣಗೊಂಡಿತು.

ಇದರೊಂದಿಗೆ ಮತಗಟ್ಟೆ ಅಧಿಕಾರಿಗಳ ಮೂರನೇ ಹಂತದ ರಾಂಡಮೈಸೇಶನ್ ಮತ್ತು ಮತದಾನ ಕರ್ತವ್ಯಕ್ಕೆ ಸಂಬಂಧಿಸಿದಂತೆ ಸೂಕ್ಷ್ಮ ವೀಕ್ಷಕರ ಎರಡನೇ ಹಂತದ ರಾಂಡಮೈಸೇಶನ್ ನಡೆಯಿತು. ಯಾವ ಮತಗಟ್ಟೆಗೆ ಯಾವ ಅಧಿಕಾರಿಗಳು ಎಂಬುದನ್ನು ಈ ಮೂಲಕ ನಿರ್ಧರಿಸಲಾಗಿದೆ. ಶೇಕಡಾ 20ರಷ್ಟು ಮೀಸಲು ಸೇರಿದಂತೆ ಜಿಲ್ಲೆಯ 1146 ಮತಗಟ್ಟೆಗಳಿಗೆ 5504 ಅಧಿಕಾರಿಗಳು ಮತ್ತು 171 ಸೂಕ್ಷ್ಮ ವೀಕ್ಷಕರನ್ನು ನಿಯೋಜಿಸಲಾಗಿದೆ. ಚುನಾವಣಾ ಕರ್ತವ್ಯವನ್ನು ಮತಗಟ್ಟೆ ಅಧಿಕಾರಿಗಳಿಗೆ ನಿಯೋಜಿಸುವ ಆದೇಶವು ಮೊಬೈಲ್ ಸಂದೇಶ ಮತ್ತು ಆದೇಶ ಎಂಬ ಸಾಫ್ಟ್‌ವೇರ್ ಮೂಲಕ ಲಭ್ಯವಿದೆ. ಸಾಮಾನ್ಯ ವೀಕ್ಷಕರಾದ ವಿಜಯ್ ಬಾಲಕೃಷ್ಣ ವಾಘ್ಮಾರೆ ಮತ್ತು ಜ್ಞಾನೇಶ್ವರ್ ಕೊಂಡಿ ಬಹುಕಿಲಾರಿ ಅವರ ಸಮ್ಮುಖದಲ್ಲಿ ರಾಂಡಮೈಸೇಶನ್ ಜರಗಿತು. ಈ ಸಂದರ್ಭದಲ್ಲಿ ಎಡಿಎಂ ಕೆ.ವಿ.ಶ್ರುತಿ, ಚುನಾವಣಾ ಉಪ ಕಲೆಕ್ಟರ್ ಎ.ಎನ್.ಗೋಪಕುಮಾರ್, ಎನ್‌ಐಸಿ ಜಿಲ್ಲಾ ಮಾಹಿತಿ ಅಧಿಕಾರಿ ಕೆ.ಲೀನಾ ಉಪಸ್ಥಿತರಿದ್ದರು.

ಪಾರದರ್ಶಕ, ಸರಳವಾಗಿವೆ ಮತಗಟ್ಟೆಗಳ ಕಾರ್ಯವಿಧಾನಗಳು



ಕಾಸರಗೋಡು: ಚುನಾವಣೆ ಅಂಗವಾಗಿ ಮತಗಟ್ಟೆಗಳಲ್ಲಿನ ಕಾರ್ಯವಿಧಾನಗಳು ಪಾರದರ್ಶಕ ಮತ್ತು ಸರಳವಾಗಿವೆ. ಸರದಿ ಸಾಲಿನಲ್ಲಿ ನಿಲ್ಲುವುದರಿಂದ ತೊಡಗಿ ಮತ ಚಲಾಯಿಸುವ ವರೆಗಿನ ಎಲ್ಲಾ ಹಂತಗಳು ಅತ್ಯಂತ ಸರಳವಾಗಿವೆ.

ಗುರುತಿನ ಪರಿಶೀಲನೆ

ಮತದಾರರು ಸರದಿ ಸಾಲಿನಲ್ಲಿ ನಿಂತು ಮತಗಟ್ಟೆಯನ್ನು ಪ್ರವೇಶಿಸಿದಾಗ ಮೊದಲ ಅಧಿಕಾರಿ ಮತದಾರರ ಪಟ್ಟಿಯಲ್ಲಿರುವ ಹೆಸರು ಮತ್ತು ಮತದಾರರ ಗುರುತಿನ ದಾಖಲೆಯನ್ನು ಪರಿಶೀಲಿಸುತ್ತಾರೆ.

ಶಾಯಿ ಗುರುತು

ಪರಿಶೀಲನೆಯ ನಂತರ ಅಧಿಕಾರಿಯು ಮತದಾರರ ಎಡಗೈಯ ತೋರು ಬೆರಳಿಗೆ ಶಾಯಿ ಹಚ್ಚಿ ತಮ್ಮ ಮತವನ್ನು ದಾಖಲಿಸಲು ಸ್ಲಿಪ್ ನೀಡುತ್ತಾರೆ. ಈ ಹಂತದಲ್ಲಿ ಮತದಾರರು ನೋಂದಣಿ ಚೀಟಿಯಲ್ಲಿ ಸಹಿ ಮಾಡಬೇಕು.

ಎರಡನೇ ಹಂತದ ತಪಾಸಣೆ

ಮುಂದಿನ ಅಧಿಕಾರಿಯು ಮತದಾರರಿಂದ ಚೀಟಿ ಸ್ವೀಕರಿಸಿ ಮತ್ತೊಮ್ಮೆ ಬೆರಳಿನ ಮೇಲಿನ ಶಾಯಿ ಗುರುತನ್ನು ಪರಿಶೀಲಿಸುತ್ತಾರೆ.

ಮತದಾನ

ಮತದಾರರು ಮತದಾನದ ವಿಭಾಗಕ್ಕೆ ಪ್ರವೇಶಿಸಿ ತಮ್ಮ ಆಯ್ಕೆಯ ಅಭ್ಯರ್ಥಿಗೆ ಅಥವಾ ನೋಟಾಗೆ ಮತ ಚಲಾಯಿಸಬಹುದು. ಇಲೆಕ್ಟ್ರಾನಿಕ್ ಮತಯಂತ್ರದ (ಇವಿಎಂ) ಗುಂಡಿಯನ್ನು ಒತ್ತಿದಾಗ ಕೆಂಪು ದೀಪ ಬೆಳಗುತ್ತದೆ ಮತ್ತು ಮತ ಚಲಾಯಿಸಲಾಗಿದೆ ಎಂದು ದೃಢೀಕರಿಸುವ ಬೀಪ್ ಶಬ್ದ ಕೇಳಿಸುತ್ತದೆ.

ಸೂಚನೆ

ಯಾವುದೇ ಅಭ್ಯರ್ಥಿಗಳ ಬಗ್ಗೆ ಆಸಕ್ತಿ ಇಲ್ಲದವರಿಗೆ ಯಂತ್ರದ ಕೆಳಭಾಗದಲ್ಲಿ ನಾಟ್ ಆಫ್ ದಿಸ್ (ನೋಟಾ) ಆಯ್ಕೆ ಲಭ್ಯವಿದೆ. ಮತದಾನ ಪೂರ್ಣಗೊಳ್ಳುವ ವರೆಗೆ ಎಲ್ಲಾ ಬೂತ್‌ಗಳಲ್ಲಿ ಬಿಗಿ ಭದ್ರತಾ ವ್ಯವಸ್ಥೆಗಳನ್ನು ಮಾಡಲಾಗಿದೆ.

ಮೊಬೈಲ್ ಫೋನ್‌ಗಳ ನಿರ್ಬಂಧ

ಭದ್ರತಾ ವ್ಯವಸ್ಥೆಗಳ ಅಂಗವಾಗಿ ಮತದಾನ ಕೇಂದ್ರಗಳ ಒಳಗೆ ಮೊಬೈಲ್ ಫೋನ್‌ಗಳನ್ನು ಕೊಂಡೊಯ್ಯುವಂತಿಲ್ಲ. ಮತದಾರರ ಅನುಕೂಲಕ್ಕಾಗಿ ಅವರ ಫೋನ್‌ಗಳನ್ನು ಸುರಕ್ಷಿತವಾಗಿಡಲು ಕೇಂದ್ರಗಳ ಹೊರಗೆ ವಿಶೇಷ ಕೌಂಟರ್‌ಗಳನ್ನು ಸ್ಥಾಪಿಸಲಾಗಿದೆ.

ಬೂತ್‌ಗಳಿಗೆ ಶಸ್ತ್ರಾಸ್ತ್ರ ನಿಷೇಧ

ಮತಗಟ್ಟೆಯ ಬಳಿ ಶಸ್ತ್ರಾಸ್ತ್ರಗಳನ್ನು ತರುವುದನ್ನು ಕಟ್ಟುನಿಟ್ಟಾಗಿ ನಿಷೇಧಿಸಲಾಗಿದೆ. ಮತದಾರರು ಸರದಿಯಲ್ಲಿ ಸಾಲಿನಲ್ಲಿ ನಿಂತು ಅಧಿಕಾರಿಗಳು ಮತ್ತು ಪೊಲೀಸರ ಸೂಚನೆಗಳನ್ನು ಪಾಲಿಸಬೇಕು ಎಂದು ಜಿಲ್ಲಾ ಪೊಲೀಸ್ ಮುಖ್ಯಸ್ಥ ಬಿ.ವಿ. ವಿಜಯ್ ಭರತ್ ರೆಡ್ಡಿ ಮನವಿ ಮಾಡಿದ್ದಾರೆ.

ಪ್ರಮುಖ ನಿಯಮಗಳು

ಜಿಲ್ಲೆಯಲ್ಲಿ ವಿಧಾನಸಭಾ ಚುನಾವಣೆಯ ಅಂಗವಾಗಿ ಸಾರ್ವಜನಿಕ ಪ್ರಚಾರವನ್ನು 100 ಮೀಟರ್ ಒಳಗೆ ಸಂಪೂರ್ಣವಾಗಿ ನಿಷೇಧಿಸಲಾಗಿದೆ. ಮತಗಟ್ಟೆಯಿಂದ 100 ಮೀಟರ್ ಒಳಗೆ ಮತ್ತು ರಾಜಕೀಯ ಪಕ್ಷಗಳು ಮತದಾರರಿಗೆ ಚೀಟಿ ವಿತರಣಾ ಕೌಂಟರ್‌ನಿಂದ ಪ್ರಚಾರ ಮಾಡುವುದನ್ನು ಕೂಡಾ ನಿಷೇಧಿಸಲಾಗಿದೆ.

ಘೋಷಣೆಗಳನ್ನು ಕೂಗುವುದು, ಪೋಸ್ಟರ್‌ಗಳು/ ಬ್ಯಾನರ್‌ಗಳನ್ನು ಹಾಕುವುದು ಮತ್ತು ಕರಪತ್ರಗಳನ್ನು ವಿತರಿಸುವುದನ್ನು ಅನುಮತಿಸಲಾಗುವುದಿಲ್ಲ. ಮತದಾರರ ಮೇಲೆ ಪ್ರಭಾವ ಬೀರುವ ರಾಜಕೀಯ ಚರ್ಚೆಗಳನ್ನು ಕೂಡಾ ನಿಷೇಧಿಸಲಾಗಿದೆ. ಅನಗತ್ಯವಾಗಿ ಗುಂಪು ಸೇರುವುದನ್ನು ತಪ್ಪಿಸಬೇಕು. ಮತಗಟ್ಟೆ ಬಳಿ ಮತದಾರರು, ಅಧಿಕಾರಿಗಳು ಮತ್ತು ಅಧಿಕೃತ ಏಜೆಂಟ್‌ಗಳಿಗೆ ಮಾತ್ರ ಅವಕಾಶ ನೀಡಲಾಗಿದೆ.

ಕಾಳ್ಯಂಗಾಡು ಮೂಕಾಂಬಿಕಾ ಕ್ಷೇತ್ರ ಬ್ರಹ್ಮಕಲಶೋತ್ಸವಕ್ಕೆ ಚಪ್ಪರ ಮುಹೂರ್ತ



ಕಾಸರಗೋಡು: ಕಾಳ್ಯಂಗಾಡು ಶ್ರೀ ಮೂಕಾಂಬಿಕಾ ಕ್ಷೇತ್ರದಲ್ಲಿ ಏ.26ರಿಂದ ಮೇ 2ರ ತನಕ ಜರಗಲಿರುವ ಪುನರ್ ಪ್ರತಿಷ್ಠಾ ಬ್ರಹ್ಮಕಲಶೋತ್ಸವದ ಚಪ್ಪರ ಮುಹೂರ್ತ ಕಾರ್ಯಕ್ರಮವು ಶ್ರೀ ಕ್ಷೇತ್ರದ ಧರ್ಮದರ್ಶಿ ನಾರಾಯಣ ಕಾಳ್ಯಂಗಾಡು ಮತ್ತು ಅರ್ಚಕ ಯೋಗೀಶ್ ಅವರ ನೇತೃತ್ವದಲ್ಲಿ ಜರಗಿತು. ಚಪ್ಪರ ಸಮಿತಿಯ ಲವ ಮೀಪುಗುರಿ, ಸುರೇಶ್ ಅಭಿನಂದನ್ ಈ ಸಂದರ್ಭ ಭಾಗವಹಿಸಿದ್ದರು.

ಕಾರ್ಯಕ್ರಮದಲ್ಲಿ ಪ್ರತಿಷ್ಠಾ ಬ್ರಹ್ಮಕಲಶೋತ್ಸವ ಸಮಿತಿಯ ಅಧ್ಯಕ್ಷ ಡಾ.ಕೆ.ಎನ್.ವೆಂಕಟ್ರಮಣ ಹೊಳ್ಳ, ಶ್ರೀ ಕ್ಷೇತ್ರದ ಮೊಕ್ತೇಸರ ಅಚ್ಯುತ ಕಾಳ್ಯಂಗಾಡು, ಪ್ರಧಾನ ಕಾರ್ಯದರ್ಶಿ ದಯಾನಂದ ಕೊಳ್ಕೆಬೈಲು, ಉಪಾಧ್ಯಕ್ಷ ಮಿಥುನ್ ಕಾಳ್ಯಂಗಾಡು, ಕಾರ್ಯದರ್ಶಿ ರಂಜಿತ್ ಮನ್ನಿಪ್ಪಾಡಿ, ಪುಷ್ಪಮ್ಮ ಕಾಳ್ಯಂಗಾಡು, ಜೀರ್ಣೋದ್ಧಾರ ಸಮಿತಿ ಅಧ್ಯಕ್ಷ ಮೋಹನ್‌ರಾಜ್ ಕೊರಕೋಡು, ಮಹಿಳಾ ಸಂಘದ ಕಾರ್ಯದರ್ಶಿ ದೀಪಾ ರಾಜೇಶ್, ಪ್ರಶಾಂತ್ ಹಾಗೂ ವಿವಿಧ ಉಪಸಮಿತಿಯ ಪ್ರಮುಖರು ಉಪಸ್ಥಿತರಿದ್ದರು.




ಕಾಸರಗೋಡು ಜಿಲ್ಲೆಯ ಹೊಸದುರ್ಗ ತಾಲೂಕಿನ ವಾಣಿಯಂಪಾರೆ ಸಮೀಪದ ಇತಿಹಾಸ ಪ್ರಸಿದ್ಧ ಉದಯಗಿರಿ ಶ್ರೀ ಮಹಾಕಾಳಿ ದೇವಾಲಯದಲ್ಲಿ ಸಪ್ತ ದಿನಗಳ ಭಜನಾ ಪ್ರದಕ್ಷಿಣೆ ಮತ್ತು ಪ್ರತಿಷ್ಠಾ ಮಹೋತ್ಸವ ಭಕ್ತಿಭಾವದಿಂದ ಸಂಪನ್ನಗೊಂಡಿತು. ಈ ಸಂದರ್ಭದಲ್ಲಿ ಶ್ರೀ ಮಹಾಕಾಳಿ ಕ್ಷೇತ್ರಕ್ಕೆ ಕೋಟೆಯಾರ್ ಸಮಾಜ ಬಾಂಧವರು ಕೊಡುಗೆಯಾಗಿ ನೀಡಿದ ನೂತನ ಮುಖ್ಯದ್ವಾರದ ಲೋಕಾರ್ಪಣೆ ನಡೆಯಿತು. ಸಮಾಜ ಬಾಂಧವರು ಹಾಗೂ ಭಕ್ತಜನರು ಇದ್ದರು.

ಶಿಕ್ಷಣ ಇಲಾಖೆ ನಿರ್ದೇಶನ | ಫಿಟ್‌ನೆಸ್ ಸರ್ಟಿಫಿಕೆಟ್ ಇಲ್ಲದ ಕಟ್ಟಡದಲ್ಲಿ ಶಾಲೆಗಳು ಕಾರ್ಯಾಚರಿಸುವಂತಿಲ್ಲ

ಎಲ್ಲಾ ಶಾಲಾ ಕಟ್ಟಡಗಳಲ್ಲೂ ಅಗ್ನಿನಂದಕ ಉಪಕರಣ ಕಡ್ಡಾಯ

ಕಾಸರಗೋಡು: ಶಾಲಾ ಕಟ್ಟಡಗಳಲ್ಲಿ ಅಗ್ನಿನಂದಕ ಉಪಕರಣಗಳನ್ನು ಕಡ್ಡಾಯವಾಗಿ ಅಳವಡಿಸುವಂತೆ ರಾಜ್ಯದ ಸಾರ್ವಜನಿಕ ಶಿಕ್ಷಣ ಇಲಾಖೆಯು ಸೂಚನೆ ನೀಡಿದೆ. ಅದರಂತೆ ಕಾಸರಗೋಡು ಜಿಲ್ಲೆಯೂ ಸಹಿತ ರಾಜ್ಯದ ಎಲ್ಲಾ ಜಿಲ್ಲೆಗಳಲ್ಲೂ ಈ ಯೋಜನೆಯು ಜಾರಿಗೆ ಬರಲಿದೆ.

ಪ್ರಸ್ತುತ ಜಿಲ್ಲೆಯ ಬಹುತೇಕ ಶಾಲೆಗಳಲ್ಲಿ ಈ ವ್ಯವಸ್ಥೆಗಳಿಲ್ಲ, ಆದ್ದರಿಂದ ಇನ್ನು ಮುಂದೆ ಈ ಯೋಜನೆಯನ್ನು ಕಡ್ಡಾಯಗೊಳಿಸಬೇಕೆಂದು ನಿರ್ದೇಶನ ಹೊರಡಿಸಲಾಗಿದೆ. ಸ್ಥಳೀಯಾಡಳಿತ ಸಂಸ್ಥೆಗಳ ಫಿಟ್‌ನೆಸ್ ಸರ್ಟಿಫಿಕೆಟ್ ಇಲ್ಲದ ಕಟ್ಟಡದಲ್ಲಿ ಶಾಲೆಗಳು ಕಾರ್ಯಾಚರಿಸಬಾರದೆಂದು ಮತ್ತು ತಾತ್ಕಾಲಿಕ ಬಾಡಿಗೆ ಕಟ್ಟಡಗಳಲ್ಲಿರುವ ಶಾಲೆಗಳಿಗೆ ಕೂಡಾ ಈ ವ್ಯವಸ್ಥೆಯನ್ನು ಕಡ್ಡಾಯಗೊಳಿಸುವಂತೆ ತಿಳಿಸಲಾಗಿದೆ.



ಶಾಲಾ ಹಿತ್ತಿಲಿನ ಮೂಲಕ ಹಾದು ಹೋಗಿರುವ ವಿದ್ಯುತ್ ತಂತಿಯಿಂದ ಶಾಕ್ ತಗುಲಿ ಕಳೆದ ವರ್ಷ ಕೊಲ್ಲಂ ಜಿಲ್ಲೆಯ ತೇವಲಕ್ಕರದ ವಿದ್ಯಾರ್ಥಿಯೋರ್ವ ಮೃತಪಟ್ಟ ದುರ್ಘಟನೆಯ ಹಿನ್ನೆಲೆಯಲ್ಲಿ ಸಾರ್ವಜನಿಕ ಶಿಕ್ಷಣ ಇಲಾಖೆಯು ಶಾಲಾ ಕಟ್ಟಡಗಳ ಸುರಕ್ಷತೆಯನ್ನು ಇನ್ನಷ್ಟು ಖಚಿತಪಡಿಸಬೇಕು ಎಂಬ ಕಟ್ಟುನಿಟ್ಟಿನ ಆದೇಶವನ್ನು ಹೊರಡಿಸಿದೆ. ಶಾಲೆಗಳಲ್ಲಿ ವಿದ್ಯುತ್ ಮತ್ತು ಅಗ್ನಿರಕ್ಷಾ ಉಪಕರಣಗಳನ್ನು ಸ್ಥಾಪಿಸಲಾಗಿದೆ ಎಂಬುದನ್ನು ಶಿಕ್ಷಣ ಅಧಿಕಾರಿಗಳು ಪರಿಶೀಲಿಸಿ ಖಚಿತಪಡಿಸಬೇಕು ಎಂದು ಉಲ್ಲೇಖಿಸಲಾಗಿದೆ.

ಶಾಲಾ ತರಗತಿ ಕೊಠಡಿಗಳಿಗೆ ಹಾವುಗಳು ಪ್ರವೇಶಿಸದಂತೆ ಗಮನಿಸಬೇಕು. ಈ ಹಿನ್ನೆಲೆಯಲ್ಲಿ ದಿನಂಪ್ರತಿ ತರಗತಿ ಆರಂಭಗೊಳ್ಳುವ ಮೊದಲು ತರಗತಿ ಕೊಠಡಿಗಳಲ್ಲಿ ತಪಾಸಣೆ ನಡೆಸಬೇಕು. ಅದೇ ರೀತಿ ಶಾಲಾ ಹಿತ್ತಿಲಿನಲ್ಲಿರುವ ಹುಲ್ಲು ಸಹಿತ ಕಾಡುಪೊದೆಗಳನ್ನು ವರ್ಷದಲ್ಲಿ ಎರಡು ಬಾರಿಯಾದರೂ ತೆರವುಗೊಳಿಸಬೇಕೆಂದು ನಿರ್ದೇಶಿಸಲಾಗಿದೆ.

ಶೌಚಾಲಯ ಶುಚಿತ್ವಕ್ಕೆ ಹೆಚ್ಚಿನ ಒತ್ತು ನೀಡಲು ಸೂಚನೆ

ಶಾಲಾ ಶೌಚಾಲಯಗಳನ್ನು ಶುಚಿಯಾಗಿರಿಸುವ ಬಗ್ಗೆಯೂ ಹೆಚ್ಚಿನ ಗಮನ ಹರಿಸಬೇಕೆಂದು ತಿಳಿಸಲಾಗಿದೆ. ಶಾಲೆಗಳಲ್ಲಿ ಆಹಾರ ತಯಾರಿಸುವವರಿಗೆ ತಿಂಗಳಿಗೊಮ್ಮೆ ಆರೋಗ್ಯ ತಪಾಸಣೆ ನಡೆಸಿ ಆರೋಗ್ಯ ಕಾರ್ಡ್ ನೀಡಬೇಕು. ಆಹಾರವನ್ನು ಮಕ್ಕಳಿಗೆ ವಿತರಿಸುವ ಮೊದಲು ಅಧ್ಯಾಪಕ ಅಥವಾ ಶಾಲಾ ಆಡಳಿತ ಸಮಿತಿಯ ಸದಸ್ಯ ಆಹಾರದ ರುಚಿ ನೋಡಿ ಗುಣಮಟ್ಟವನ್ನು ರಿಜಿಸ್ಟರ್‌ನಲ್ಲಿ ದಾಖಲಿಸಬೇಕೆಂದು ಶಿಕ್ಷಣ ಇಲಾಖೆಯು ನಿರ್ದೇಶಿಸಿದೆ.

ಅಬಕಾರಿ ಗುಪ್ತಚರ ವಿಭಾಗದಿಂದ ಕಾರ್ಯಾಚರಣೆ

ಮದ್ಯ, ಮಾದಕದ್ರವ್ಯ ವಶಕ್ಕೆ

ಕಾಸರಗೋಡು: ವಿಧಾನಸಭಾ ಚುನಾವಣೆ ಹಿನ್ನೆಲೆಯಲ್ಲಿ ಅಬಕಾರಿ ಇಲಾಖೆ ಗುಪ್ತಚರ ವಿಭಾಗವು ಕಾಸರಗೋಡು ಸಹಿತ ರಾಜ್ಯಾದ್ಯಂತ ಎಲ್ಲಾ ಜಿಲ್ಲೆಗಳಲ್ಲಿ ಆಪರೇಷನ್ ಹಾಟ್‌ಸ್ಪಾಟ್, ಆಪರೇಷನ್ ಸಿ – ಹಂಟ್ ಪ್ರಕಾರ ವ್ಯಾಪಕ ಕಾರ್ಯಾಚರಣೆ ಆರಂಭಿಸಿದೆ. ರೈಲು ನಿಲ್ದಾಣ, ಬಸ್ ನಿಲ್ದಾಣಗಳು ಸಹಿತ ಹಲವು ಕೇಂದ್ರಗಳಿಗೆ ಅಬಕಾರಿ ಗುಪ್ತಚರ ವಿಭಾಗವು ದಾಳಿ ನಡೆಸಿದೆ.

ಮಾ.16ರಿಂದ ಏ.2ರ ಅವಧಿಯಲ್ಲಿ ನಡೆದ ಕಾರ್ಯಾಚರಣೆಯಲ್ಲಿ 61 ಅಬಕಾರಿ ಪ್ರಕರಣಗಳು, 52 ಮಾದಕದ್ರವ್ಯ ಪ್ರಕರಣಗಳು ಮತ್ತು ನಿಷೇಧಿತ ತಂಬಾಕು ಉತ್ಪನ್ನಕ್ಕೆ ಸೇರಿದ 47 ಪ್ರಕರಣ ದಾಖಲಿಸಲಾಗಿದೆ. ಅವುಗಳಲ್ಲಿ 27.85 ಲೀಟರ್ ಅಕ್ರಮ ಮದ್ಯ, 1560 ಲೀ. ಹುಳಿರಸ, 195.52 ಲೀ. ವಿದೇಶ ಮದ್ಯ, 53.66 ಲೀ. ಅನಧಿಕೃತ ಮದ್ಯ, 8.45 ಲೀಟರ್ ಬಿಯರ್ ಮತ್ತು 8.370 ಲೀ. ಗೋವಾ ನಿರ್ಮಿತ ಮದ್ಯವನ್ನು ವಶಪಡಿಸಲಾಗಿದೆ. 36.078 ಕಿಲೋ ಗಾಂಜಾ, 1362 ಗಾಂಜಾ ಸಸಿಗಳು, 328.404 ಗ್ರಾಂ ಮೆಥಾಂಫಿಟಮಿನ್, 0.330 ಗ್ರಾಂ ಎಂಡಿಎಂಎ, 2.54 ಗ್ರಾಂ ಬ್ರೌನ್ ಶುಗರ್, 2.06 ಗ್ರಾಂ ಹ್ಯಾಶಿಶ್ ಆಯಿಲ್ ಮತ್ತು 54.06 ಕಿಲೋ ನಿಷೇಧಿತ ತಂಬಾಕು ಉತ್ಪನ್ನಗಳನ್ನು ವಶಪಡಿಸಿಕೊಳ್ಳಲಾಗಿದೆ. ಅಲ್ಲದೆ ಅನಧಿಕೃತವಾಗಿ ಮಾದಕದ್ರವ್ಯ ಸಾಗಿಸುತ್ತಿದ್ದ ವೇಳೆ 62.5 ಲಕ್ಷ ರೂ.ವನ್ನು ವಶಪಡಿಸಲಾಗಿದೆ. ಇದಕ್ಕೆ ಸಂಬಂಧಿಸಿ ಅಬಕಾರಿ ಪ್ರಕರಣಗಳಲ್ಲಿ 39 ಆರೋಪಿಗಳು, ಮಾದಕದ್ರವ್ಯ ಪ್ರಕರಣಗಳಲ್ಲಿ 49 ಆರೋಪಿಗಳನ್ನು ಬಂಧಿಸಲಾಗಿದೆ. ಒಟ್ಟು 7 ವಾಹನ ವಶಪಡಿಸಲಾಗಿದೆ. ನಿಷೇಧಿತ ತಂಬಾಕು ಉತ್ಪನ್ನ ಸಾಗಾಟ ಪ್ರಕರಣಗಳಿಗೆ ಸಂಬಂಧಿಸಿ 5400 ರೂ. ದಂಡ ವಶಪಡಿಸಲಾಗಿದೆ.

website hosadigantha.com | E-paper epaper.hosadigantha.com | Email diganthamlr@gmail.com | Twitter HosadiganthaWeb
ಗುರುವಾರ 09, ಏಪ್ರಿಲ್ 2026

ಸುತ್ತ ಮುತ್ತ

ಇಂದು ಕಂಬಳ ಎಸೋಸಿಯೇಶನ್ ಸಭೆ

ಪಡುಬಿದ್ರಿ: ಕರ್ನಾಟಕ ರಾಜ್ಯ ಕಂಬಳ ಅಸೋಸಿಯೇಶನ್ ವಾರ್ಷಿಕ ವಿಶೇಷ ಸಭೆಯು ಪಡುಬಿದ್ರಿ ಬಂಟರ ಭವನದಲ್ಲಿ ಏ.9ರಂದು ಮಧ್ಯಾಹ್ನ ಗಂಟೆ 3.30ಕ್ಕೆ ನಡೆಯಲಿದೆ. ಕರ್ನಾಟಕ ರಾಜ್ಯ ಕಂಬಳ ಅಸೋಸಿಯೇಷನ್ ಇದರ ಅಧ್ಯಕ್ಷರಾದ ಬೆಳಪು ಡಾ. ದೇವಿಪ್ರಸಾದ್ ಶೆಟ್ಟಿಯವರ ಅಧ್ಯಕ್ಷತೆಯಲ್ಲಿ ಜರಗಲಿದ್ದು, ಕಂಬಳ ಸಂಘಟಕರು, ಕೋಣಗಳ ಯಜಮಾನರು, ತೀರ್ಪುಗಾರರು, ಓಟಗಾರರು, ಕೋಣ ಬಿಡುವವರು ಈ ಸಭೆಯಲ್ಲಿ ಪಾಲ್ಗೊಳ್ಳುವರು. ಕರ್ನಾಟಕ ಸರಕಾರ ಕಂಬಳಕ್ಕೆ ನೀಡುವ ಅನುದಾನದ ಕುರಿತು ಶಿಫಾರಸು ನೀಡುವ ಬಗ್ಗೆ ರಾಜ್ಯ ಕಂಬಳ ಅಸೋಸಿಯೇಷನ್ ಅಜೀವ ಸದಸ್ಯತ್ವ ಪಡೆಯುವವರ ಬಗ್ಗೆ ಈ ವರ್ಷದ ಆಗುಹೋಗುಗಳ ಬಗ್ಗೆ ಮತ್ತು ಸುಧಾರಣೆಯ ಬಗ್ಗೆ ವಿಮರ್ಶೆ, ಆಧುನಿಕ ತಂತ್ರಜ್ಞಾನ (ಸೆನ್ಸರ್)ದ ಅಳವಡಿಕೆಯ ಬಗ್ಗೆ, ರಾಜ್ಯ ಕಂಬಳ ಅಸೋಸಿಯೇಷನ್ನ ಬೈಲ ಕರಡು ಪ್ರತಿಯನ್ನು ವಿವರಿಸುವುದು, ಜಿಲ್ಲಾ ಕಂಬಳ ಸಮಿತಿಯ ಮಹಾಸಭೆ ನಡೆಸುವುದರ ದಿನ ನಿಗದಿಯ ಬಗ್ಗೆ ಸಭೆಯಲ್ಲಿ ಚಿಂತಿಸಲಾಗುವುದು ಎಂದು ಪ್ರಧಾನ ಕಾರ್ಯದರ್ಶಿ ವಿಜಯ ಕುಮಾರ್ ಕಂಗಿನಮನೆ ಪ್ರಕಟನೆ ತಿಳಿಸಿದೆ.

ಸಾಲಿಗ್ರಾಮದಲ್ಲಿ ವಸಂತ ವೇದ ಶಿಬಿರ: ಅರ್ಜಿ ಆಹ್ವಾನ

ಕೋಟ: ಸಾಲಿಗ್ರಾಮ ಶ್ರೀ ಗುರುನರಸಿಂಹ ದೇವಸ್ಥಾನದ ಆಡಳಿತ ಮಂಡಳಿ, ಕೂಟ ಮಹಾಜಗತ್ತು ಸಾಲಿಗ್ರಾಮ ಅಂಗಸಂಸ್ಥೆಯ ಸಹಕಾರದಲ್ಲಿ ವಸಂತ ವೇದ ಶಿಬಿರ ಏ. 18ರಿಂದ ಮೇ 10ರ ವರೆಗೆ ನಡೆಯಲಿದೆ. ಈ ಶಿಬಿರವು ಉಪನೀತರಾದ ವಿಪ್ರವಟುಗಳಿಗೆ ಮೀಸಲಾಗಿದ್ದು ಕಳೆದ ಸಾಲಿನ ವಿದ್ಯಾರ್ಥಿಗಳು ಹಾಗೂ ಹೊಸದಾಗಿ ಸೇರಲು ಇಚ್ಛಿಸುವವರು ಅರ್ಜಿ ಸಲ್ಲಿಸಬಹುದು. ಆಸಕ್ತರು ದೇವಸ್ಥಾನದ ಕಚೇರಿ ದೂರವಾಣಿ ಸಂಖ್ಯೆ 9449545714ನ್ನು ಸಂಪರ್ಕಿಸಿ ಅರ್ಜಿಯನ್ನು ಏ .15ರೊಳಗೆ ವಾಟ್ಸಪ್, ಇಮೇಲ್ ಅಥವಾ ದೇಗುಲದ ಕಚೇರಿಗೆ ಸಲ್ಲಿಸುವಂತೆ ಪ್ರಕಟಣೆ ತಿಳಿಸಿದೆ.

ನಾಳೆ ವಿವಿಧ ಹುದ್ದೆಗಳಿಗೆ ನೇರ ಸಂದರ್ಶನ

ಉಡುಪಿ: ನಗರದ ಅಜ್ಜರಕಾಡು ಕಿತ್ತೂರು ರಾಣಿ ಚೆನ್ನಮ್ಮ ರಸ್ತೆಯ ಧನಂಜಯ ಟವರ್‌ನ ಹರ್ಷ ರೀಟೇಲ್ ಪ್ರೈ.ಲಿ. ಇಲ್ಲಿ ಏ. 10ರಂದು ಬೆಳಗ್ಗೆ 10.30ಕ್ಕೆ ವಿವಿಧ ಹುದ್ದೆಗಳಿಗೆ ನೇರ ಸಂದರ್ಶನ ನಡೆಯಲಿದೆ. ಡಿಪ್ಲೋಮಾ ಹಾಗೂ ಇತರೆ ಪದವಿ ವಿದ್ಯಾರ್ಹತೆಯೊಂದಿಗೆ ಉತ್ತೀರ್ಣರಾದ ಅಭ್ಯರ್ಥಿಗಳು ಅಂಕಪಟ್ಟಿ ಸ್ವ-ವಿವರವುಳ್ಳ ರೆಸ್ಯೂಮ್ ಹಾಗೂ ಆಧಾರ್‌ಕಾರ್ಡ್ ಪ್ರತಿಯೊಂದಿಗೆ ನೇರ ಸಂದರ್ಶನದಲ್ಲಿ ಭಾಗವಹಿಸಬಹುದಾಗಿದೆ. ಹೆಚ್ಚಿನ ಮಾಹಿತಿಗಾಗಿ ಜಿಲ್ಲಾ ಉದ್ಯೋಗ ವಿನಿಮಯ ಕಚೇರಿ, ಜಿಲ್ಲಾಧಿಕಾರಿ ಕಚೇರಿ ಸಂಕೀರ್ಣ, ರಜತಾದ್ರಿ, ಮಣಿಪಾಲ ಉಡುಪಿ ದೂರವಾಣಿ ಸಂಖ್ಯೆ 8105618291, 9945856670 ಹಾಗೂ 9901472710 ಅನ್ನು ಸಂಪರ್ಕಿಸಬಹುದಾಗಿದೆ ಎಂದು ಜಿಲ್ಲಾ ಉದ್ಯೋಗ ವಿನಿಮಯ ಕೇಂದ್ರದ ಉದ್ಯೋಗಾಧಿಕಾರಿಗಳ ಕಚೇರಿ ಪ್ರಕಟಣೆ ತಿಳಿಸಿದೆ.

ಸಾಧನಾ ಸಮಾಜ ಸೇವಾ ಸಂಸ್ಥೆ ಅಧ್ಯಕ್ಷರಾಗಿ ಆಯ್ಕೆ

ಬೈಂದೂರು: ಮರವಂತೆಯ ಸಾಧನಾ ಸಮಾಜ ಸೇವಾ ಸಂಸ್ಥೆಯ 46ನೇ ವರ್ಷದ ಅಧ್ಯಕ್ಷರಾಗಿ ಎಂ. ಶೇಷಗಿರಿ ಆಚಾರ್ಯ ಅವರನ್ನು ಸಂಸ್ಥೆಯ ಮಹಾಸಭೆಯಲ್ಲಿ ಆಯ್ಕೆ ಮಾಡಲಾಯಿತು.



ಕಾರ್ಯದರ್ಶಿಯಾಗಿ ಗಜೇಂದ್ರ ಖಾರ್ವಿ ಹಾಗೂ ಕೋಶಾಧಿಕಾರಿಯಾಗಿ ಗುರುದಾಸ ಶ್ಯಾನುಭಾಗ್ ಅವರು ಆಯ್ಕೆಗೊಂಡರು.


ಸ್ಪೋಕನ್ ಇಂಗ್ಲಿಷ್ ಶಕ್ತೀಕರಣ-ಒಪ್ಪಂದ

ಶಿರ್ವ: ಕೋಡ್ ಕ್ರಾಫ್ಟ್ ಟೆಕ್ನಾಲಜೀಸ್ ಸಂಸ್ಥೆಯು ಆಕಾಂಕ್ಷಾ ಚಾರಿಟೇಬಲ್ ಟ್ರಸ್ಟ್ ಹಾಗೂ ಉಡುಪಿ ಗ್ರಾಮೀಣ ಬಂಟರ ಸಂಘದ ಚಾರಿಟೇಬಲ್ ಟ್ರಸ್ಟ್ ಸಹಭಾಗಿತ್ವದಲ್ಲಿ ಸಿಎಸ್ಆರ್ ಅಡಿಯಲ್ಲಿ ಒಂದು ವರ್ಷದ ಸ್ಪೋಕನ್ ಇಂಗ್ಲಿಷ್ ಶಕ್ತೀಕರಣ ಕಾರ್ಯಕ್ರಮವನ್ನು ಜಾರಿಗೆ ತರಲು ಪರಸ್ಪರ ಒಪ್ಪಂದ ಮಾಡಿಕೊಂಡಿದೆ. ಈ ಉಪಕ್ರಮವು ಉಡುಪಿ ಜಿಲ್ಲೆಯಾದ್ಯಂತ ಉಡುಪಿ ಗ್ರಾಮೀಣ ಬಂಟರ ಸಂಘದ ಚಾರಿಟೇಬಲ್ ಟ್ರಸ್ಟ್ ಗುರುತಿಸಿದ ಕನ್ನಡ ಮಾಧ್ಯಮ ಶಾಲೆಗಳ ವಿದ್ಯಾರ್ಥಿಗಳಿಗೆ ಗುಣಮಟ್ಟದ ಇಂಗ್ಲಿಷ್ ಸಂವಹನ ಕೌಶಲ್ಯಗಳನ್ನು ಒದಗಿಸುವುದನ್ನು ಉದ್ದೇಶಿಸಿದೆ. ಈ ಕಾರ್ಯಕ್ರಮವು 2026ರ ಜೂನ್ ತಿಂಗಳಿಂದ ಆರಂಭವಾಗುವ ಮುಂದಿನ ಶೈಕ್ಷಣಿಕ ವರ್ಷದೊಂದಿಗೆ ಪ್ರಾರಂಭವಾಗಲಿದೆ.
ಈ ಯೋಜನೆಯ ಮುಖ್ಯ ಉದ್ದೇಶ ಭಾಷಾ ಅಂತರವನ್ನು ಕಡಿಮೆ ಮಾಡುವುದು ಮತ್ತು ಗ್ರಾಮೀಣ ವಿದ್ಯಾರ್ಥಿಗಳ ಆತ್ಮವಿಶ್ವಾಸ, ಉದ್ಯೋಗಾರ್ಹತೆ, ಮತ್ತು ಸಮಗ್ರ ವ್ಯಕ್ತಿತ್ವ ಅಭಿವೃದ್ಧಿಯನ್ನು ಹೆಚ್ಚಿಸುವುದು ಆಗಿದೆ. ಪ್ರಾಯೋಗಿಕ ಸಂವಹನ, ಸಂವಹನಾತ್ಮಕ ಕಲಿಕೆ, ವಿಧಾನಗಳು ಮತ್ತು ನಿರಂತರ ಮೌಲ್ಯಮಾಪನದ ಮೂಲಕ ಈ ಕಾರ್ಯಕ್ರಮವು ಧೀರ್ಘಕಾಲಿಕ ಪರಿಣಾಮ ಉಂಟುಮಾಡುವ ಗುಣಮಟ್ಟದ ತರಬೇತಿಯನ್ನು ನೀಡಲು ಪ್ರಯತ್ನಿಸುತ್ತದೆ. ಈ ಸಹಯೋಗದ ಮೂಲಕ ಯುವ ಮನಸ್ಸುಗಳಿಗೆ ಅಗತ್ಯವಾದ ಭಾಷಾ ಕೌಶಲಗಳನ್ನು ನೀಡುವುದರೊಂದಿಗೆ ಅವರ ಭವಿಷ್ಯದಲ್ಲಿ ಉತ್ತಮ ಶಿಕ್ಷಣ ಮತ್ತು ಉದ್ಯೋಗಾವಕಾಶಗಳ ಬಾಗಿಲುಗಳನ್ನು ತೆರೆಯುವತ್ತ ನಾವು ಬದ್ಧರಾಗಿದ್ದೇವೆ ಎಂದು ಮಣಿಪುರ ಗ್ರಾಮೀಣ ಬಂಟರ ಚಾರಿಟೇಬಲ್ ಟ್ರಸ್ಟ್ ಇದರ ಅಧ್ಯಕ್ಷ ಅಶೋಕ್ ಕುಮಾರ್ ಶೆಟ್ಟಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಘಟ್ಟಪ್ರದೇಶಗಳ ಬೇಸಗೆ ಮಳೆಯಿಂದ ಒಳಹರಿವು ಹೆಚ್ಚಳ | ಜಲಾಶಯದಿಂದ ನೀರು ಹೊರಕ್ಕೆ

ಮುಂಡ್ಲಿಯಲ್ಲಿ ನೀರಿನ ಮಟ್ಟ ಏರಿಕೆ, ಕಾರ್ಕಳಕ್ಕೆ ಸದ್ಯಕಿಲ್ಲ ಚಿಂತೆ!

■ ಗಣೇಶ್ ನಾಯಕ್, ಸಾಣೂರು



ಕಾರ್ಕಳ: ಒಂದು ಕಡೆ ಬಿಸಿಲಿನ ಪ್ರಖರತೆ ತೀವ್ರವಾಗಿದ್ದರೂ ಎರಡು ಮೂರು ಬಾರಿ ಪಶ್ಚಿಮ ಘಟ್ಟಪ್ರದೇಶದಲ್ಲಿ ಸುರಿದ ಮಳೆಯಿಂದಾಗಿ ನದಿಯಲ್ಲಿ ನೀರು ಗಣನೀಯ ಪ್ರಮಾಣದಲ್ಲಿ ಉಳಿದುಕೊಂಡಿದೆ.
ಮಳೆ ಬಿದ್ದ ಪರಿಣಾಮ ಕಾರ್ಕಳ ಪುರಸಭೆ ವ್ಯಾಪ್ತಿಗೆ ನೀರುಣಿಸುತ್ತಿರುವ ಮುಂಡ್ಲಿ ಜಲಾಶಯವು ತುಂಬಿಕೊಂಡಿದ್ದು, ಜಲಾಶಯದಿಂದ ನೀರು ಹೆಚ್ಚುವರಿಯಾಗಿ ಬಿಡುತ್ತಿದ್ದಾರೆ. ಈ ಬಾರಿ ಕಾರ್ಕಳ ಪೇಟೆಯಲ್ಲಿ ನೀರಿನ ಸಮಸ್ಯೆ ಕಾಡುವುದು ಬಹುತೇಕ ಇಲ್ಲವಾಗಿದೆ.
ಕಾರ್ಕಳ ನಗರಕ್ಕೆ ನೀರು ಪೂರೈಕೆ ಮಾಡುವಲ್ಲಿ ಮುಂಡ್ಲಿ ಹಾಗೂ ರಾಮಸಮುದ್ರ ಪ್ರಮುಖ ಎರಡು ಸರಬರಾಜು ಕೇಂದ್ರವಾಗಿದೆ. ಮುಂಡ್ಲಿ ಜಲಾಶಯದಲ್ಲಿ 125 ಎಚ್ ಪಿ (ಜೆಟ್) ಸಾಮರ್ಥ್ಯದ 2 ಪಂಪ್ ಅಳವಡಿಕೆ ಮಾಡಲಾಗಿದ್ದು ರಾಮಸಮುದ್ರ ಪಂಪ್ ಹೌಸ್ ಕೆಳ ಭಾಗದಲ್ಲಿ 40 ಜೆಟ್ ಸಾಮರ್ಥ್ಯ 2 ಪಂಪ್ ಹಾಗೂ ಮೇಲ್ಭಾಗದಲ್ಲಿ 3 ಪಂಪ್ ಅಳವಡಿಕೆ ಮಾಡಿ ನೀರನ್ನು ಸರಬರಾಜು ಮಾಡಲಾಗುತ್ತಿದೆ. 1994ರಲ್ಲಿ ಎರಡು ಕೋಟಿ ರೂ. ವೆಚ್ಚದಲ್ಲಿ ಕಾರ್ಕಳ ತಾಲೂಕಿನ ದುರ್ಗ ಗ್ರಾ.ಪಂ. ವ್ಯಾಪ್ತಿಯ ಮುಂಡ್ಲಿಯಲ್ಲಿ ಸ್ವರ್ಣ ನದಿಗೆ ಅಡ್ಡವಾಗಿ ಕಿಂಡಿ ಅಣೆಕಟ್ಟು ನಿರ್ಮಿಸಲಾಗಿತ್ತು. ಕೆಲ ವರ್ಷಗಳ ಹಿಂದೆ ಇದೇ ಪರಿಸರದಲ್ಲಿ ನಿರ್ಮಾಣಗೊಂಡ ಜಲವಿದ್ಯುತ್ ಘಟಕದಿಂದಾಗಿ ಕಿರು ಅಣೆಕಟ್ಟಾಗಿ ಮಾರ್ಪಡಾಗಿದೆ. ಇಲ್ಲಿ ಸಂಗ್ರಹವಾಗುವ ನೀರನ್ನು ರಾಮಸಮುದ್ರ ಪಂಪ್ ಹೌಸ್‌ಗೆ ಹಾಯಿಸಿ ಅಲ್ಲಿ ಶುದ್ಧೀಕರಿಸಿ ಕಾರ್ಕಳದ ವಿವಿಧೆಡೆಗಳಿಗೆ ಕುಡಿಯಲು ಈ ನೀರು ಪೂರೈಸಲಾಗುತ್ತಿದೆ.


ಕಾರ್ಕಳ ಪೇಟೆಗೆ

ಮುಂಡ್ಲಿ ಜಲಾಶಯ 3 ಎಂಎಲ್‌ಡಿ ನೀರು ಸಂಗ್ರಹ ಸಾಮರ್ಥ್ಯವನ್ನು ಹೊಂದಿದೆ. ದಿನದ 24 ಗಂಟೆಗಳ ಕಾಲ ವಿದ್ಯುತ್ ಕೈಕೊಡದಿದ್ದರೆ ನಿರಂತರ ನೀರನ್ನು ಮುಂಡ್ಲಿ ಜಲಾಶಯದಿಂದ ತೆಗೆಯಲಾಗುತ್ತದೆ. ಈ ನೀರು ಎಕ್ಸ್‌ಪ್ರೆಸ್ ಲೈನ್ ಮೂಲಕ ರಾಮಸಮುದ್ರದ ಬಳಿಯಿರುವ ಸಂಪುಗೆ ಸರಬರಾಜಾಗಿ ಅಲ್ಲೇ ಇರುವ 2 ಲಕ್ಷ ಗ್ಯಾಲನ್ ಸಾಮರ್ಥ್ಯದ ಟ್ಯಾಂಕಿನಲ್ಲಿ ತುಂಬಿ, ಕಾರ್ಕಳ ಪೇಟೆಗೆ ಪೂರೈಕೆ ಮಾಡುವ ಜತೆಗೆ ಎಕ್ಸ್‌ಪ್ರೆಸ್ ಲೈನ್ ಮುಖಾಂತರ ಬಂಡಿಮಠ ಬಳಿಯ 2 ಲಕ್ಷ ಗ್ಯಾಲನ್ ಸಾಮರ್ಥ್ಯದ ಟ್ಯಾಂಕ್‌ನಲ್ಲಿ ತುಂಬಿಕೊಳ್ಳುತ್ತದೆ. ಇದು ಅಲ್ಲಿನ ಕಲ್ಲೊಟ್ಟೆ, ಕಾಬೆಟ್ಟು, ಅಂಚಿಕಟ್ಟೆ, ಬಂಗ್ಲೆಗುಡ್ಡೆ, ಕಜೆ ಹಿಮ್ಮುಂಜೆ, ಸದ್ಭಾವನಗರ, ಪರಪು, ಕುದುರೆಮುಖ ಕಾಲೋನಿಗಳಿಗೆ ಸರಬರಾಜಾಗುತ್ತದೆ.
ಪ್ರಸ್ತುತ ಹಿರಿಯಂಗಡಿ, ಆಡೂರು ಭಾರತ್ ಬೀಡಿ ಕಾಲೋನಿ, ಪತ್ತೊಂಜಿಕಟ್ಟೆ ಎಂಬಲ್ಲಿ ಮೇಲ್ಭಾಗದ ಜಲ ಸಂಗ್ರಹಾಗಾರದಿಂದ ನೀರು ಸರಬರಾಜು ಆಗುತ್ತಿದೆ. ಆದರೆ ಬಂಗ್ಲೆಗುಡ್ಡೆ, ಗುಂಡ್ಯ, ಪರಪು, ಸದ್ಭಾವನ ನಗರ, ಪರಪು ವಾಡ, ಪತ್ತೊಂಜಿಕಟ್ಟೆ ಮೂರು ಸೆಂಟ್ಸ್ ಕಾಲೋನಿಗಳಿಗೆ ನೀರು ಪೂರೈಕೆ ಮಾಡುತ್ತಿರುವ ಸಾರ್ವಜನಿಕ ಬಾವಿ ಸಂಪೂರ್ಣವಾಗಿ ಬತ್ತಿ ಹೋಗಿದೆ. ಜತೆಗೆ ಈ ಪ್ರದೇಶಗಳು ಕಲ್ಲು ಬಂಡೆಗಳಿಂದ ಕೂಡಿರುವುದರಿಂದ ಅಲ್ಲಿ ಬಾವಿ ಕೊರೆಯಲು ಅವಕಾಶಗಳೇ ಇಲ್ಲದಂತಾಗಿದೆ. ಈ ಭಾಗದ ಜನರು ಬಂಡಿಮಠ ಬಳಿಯ ಟ್ಯಾಂಕ್‌ನಿಂದ ಬರುವ ನೀರನ್ನೇ ಅವಲಂಬಿಸಬೇಕಾಗಿದೆ.

> **ಸದ್ಯಕ್ಕೆ ಸಮಸ್ಯೆ ಇಲ್ಲ**
> ಪಶ್ಚಿಮ ಘಟ್ಟ ಪ್ರದೇಶದಲ್ಲಿ ಸುರಿದ ಅಕಾಲಿಕ ಮಳೆಯಿಂದಾಗಿ ಮುಂಡ್ಲಿ ಜಲಾಶಯದಲ್ಲಿ ನೀರಿನ ಮಟ್ಟ ಏರಿಕೆಯಾಗಿದೆ. ಈ ಬಾರಿ ಕಾರ್ಕಳ ಪೇಟೆಗೆ ನೀರಿನ ಸಮಸ್ಯೆ ಕಾಡಲಿಕ್ಕೆ ಇಲ್ಲ. ಮೇ ತಿಂಗಳ ಕೊನೆಯಲ್ಲಿ ಸಮಸ್ಯೆ ಬಂದಲ್ಲಿ ರಾಮಸಮುದ್ರದ ನೀರನ್ನು ಶುದ್ಧೀಕರಿಸಿ ನೀಡುವಂತಹ ವ್ಯವಸ್ಥೆಯನ್ನು ಕೈಗೊಳ್ಳಲಿದ್ದೇವೆ.
> ● ಲೀನ ಬ್ರಿಟ್ಟೋ, ಮುಖ್ಯಾಧಿಕಾರಿಗಳು, ಪುರಸಭೆ, ಕಾರ್ಕಳ

ಏ.16ರಿಂದ 20ರ ತನಕ ಅರೆಹೊಳೆ ದಿಬ್ಬಣ, ಸಾಂಸ್ಕೃತಿಕ ಆಡುಂಬೊಲ

ರಂಗಶಾಲೆಯ ನೂತನ ಕಟ್ಟಡ ಲೋಕಾರ್ಪಣೆ



ಬೈಂದೂರು: ಅರೆಹೊಳೆ ಪ್ರತಿಷ್ಠಾನ, ಬೈಂದೂರು ತಾಲೂಕಿನ ಅರೆಹೊಳೆಯಲ್ಲಿ ಏ.16ರಿಂದ 20ರ ತನಕ ಅರೆಹೊಳೆ ದಿಬ್ಬಣ ಎನ್ನುವ ಕಾರ್ಯಕ್ರಮವನ್ನು ಆಯೋಜಿಸಿದ್ದು, ಬಹು ಮಹತ್ವಾಕಾಂಕ್ಷೆಯ ಅರೆಹೊಳೆ ರಂಗಶಾಲೆಯ ನೂತನ ಕಟ್ಟಡ ಲೋಕಾರ್ಪಣೆ ಹಾಗೂ ಸಾಂಸ್ಕೃತಿಕ ಆಡುಂಬೊಲ ನಡೆಯಲಿದೆ ಎಂದು ಪ್ರತಿಷ್ಠಾನದ ಮುಖ್ಯಸ್ಥ ಅರೆಹೊಳೆ ಸದಾಶಿವ ರಾವ್ ತಿಳಿಸಿದರು.
ಬುಧವಾರ ಆಮಂತ್ರಣ ಪತ್ರಿಕೆ ಬಿಡುಗಡೆ ಸಮಾರಂಭದಲ್ಲಿ ಮಾಹಿತಿ ನೀಡಿದ ಅವರು, ಅರೆಹೊಳೆ ರೆಪರ್ಟರಿ ಮತ್ತು ಥಿಯೇಟರ್ ಸ್ಕೂಲ್‌ನಲ್ಲಿ ಏ.16 ಗುರುವಾರ ಬೆಳಿಗ್ಗೆ 8ಕ್ಕೆ ಎ.ಎಸ್.ಕೆ. ಫೌಂಡೇಶನ್ ಪ್ರಾಯೋಜಿತ 5 ದಿನಗಳ ರಂಗ ಶಿಬಿರ ರಂಗಿನಾಟವನ್ನು ಯಕ್ಷಗುರು ಸುಜಯೀಂದ್ರ ಹಂದೆ ಉದ್ಘಾಟಿಸಲಿದ್ದಾರೆ. ಮಧ್ಯಾಹ್ನ 2.30ಕ್ಕೆ ಮಹಾಗಣಪತಿ ವಾದ್ಯವೃಂದ ಆಕಳಬೈಲು ಪ್ರಸ್ತುತಿಯಲ್ಲಿ ಸ್ಯಾಕ್ಸೋಫೋನ್ ವಾದ್ಯಗೋಷ್ಠಿ ನಡೆಯಲಿದೆ. ಸಂಜೆ 5.30ಕ್ಕೆ ಪ್ರತಿಷ್ಠಾನದ ನಂದಗೋಕುಲ ಕಲಾವಿದರಿಂದ ಧರ್ಮಸ್ಥಳ ಮಹಿಮೆ ಸಾರುವ ಧರ್ಮ ಸಂಸ್ಥಾಪನಾರ್ಥಾಯ ಎನ್ನುವ ನೃತ್ಯರೂಪಕದ ಪ್ರಥಮ ಪ್ರದರ್ಶನ ನಡೆಯಲಿದೆ. ರಾತ್ರಿ 8ಕ್ಕೆ ಹನುಮಗಿರಿ ಮೇಳದವರಿಂದ ಯಕ್ಷಗಾನ ಸಾಕೇತ ಸಾಮ್ರಾಜ್ಞಿ ಪ್ರದರ್ಶನಗೊಳ್ಳಲಿದೆ ಎಂದರು.
ಏ.17ರಂದು ಮಧ್ಯಾಹ್ನ 2.30ಕ್ಕೆ ಯಕ್ಷ ನುಡಿಸಿರಿ ಬಳಗ ಸಿದ್ದಾಪುರ ಪ್ರಸ್ತುತಿಯಲ್ಲಿ ತಾಳಮದ್ದಳೆ ನಡೆಯಲಿದೆ. ಸಂಜೆ 7.30ಕ್ಕೆ ನಟನ ಪ್ರಸ್ತುತಿಯಲ್ಲಿ ನಾಟಕ ಕಣಿವೆಯ ಹಾಡು ಪ್ರದರ್ಶನಗೊಳ್ಳಲಿದೆ.
ಏ.18ರಂದು ಮಧ್ಯಾಹ್ನ 2.30ಕ್ಕೆ ಅರೆಹೊಳೆ ನೃತ್ಯ ತರಗತಿಯ ವಿದ್ಯಾರ್ಥಿಗಳಿಂದ ನೃತ್ಯ ವರ್ಷಾ, ಗೀತಾ ಬೈಂದೂರು ನೇತೃತ್ವದಲ್ಲಿ ಹಾಡುತಾ ಆಡುತಾ, ಸಂಜೆ 5ಕ್ಕೆ ಹಿರಿಯ ಸ್ಯಾಕ್ಸೋಫೋನ್ ವಾದಕ ಮಂಜು ದೇವಾಡಿಗ ಆಕಳಬೈಲು, ಹಿರಿಯ ಯಕ್ಷಗಾನ ಕಲಾವಿದ ಮಹಾಬಲೇಶ್ವರ ರೈ ಕಾಸರಗೋಡು, ಹಿರಿಯ ಸೂಲಗಿತ್ತಿ ತುಂಗ ದೇವಾಡಿಗ ಚಿಕ್ಕಾಡಿ ಇವರಿಗೆ ಅರೆಹೊಳೆ ದಿಬ್ಬಣ ಪುರಸ್ಕಾರ ಪ್ರದಾನ ಮಾಡಲಾಗುವುದು. ಸಂಜೆ 7.15ರಿಂದ ಆಯಣ ಡಾನ್ಸ್ ತಂಡದವರಿಂದ ಧ್ರುವ ನೃತ್ಯರೂಪಕ ಪ್ರದರ್ಶನಗೊಳ್ಳಲಿದೆ ಎಂದರು.
ಏ.19 ಮಧ್ಯಾಹ್ನ 2.30ಕ್ಕೆ ಅರೆ ಶಾಸ್ತ್ರೀಯ ಸಮೂಹ ನೃತ್ಯ ಸ್ಪರ್ಧೆ ನೂಪುರಂಗಳ್, ಸಂಜೆ 6.45ಕ್ಕೆ ವಿದುಷಿ ವಿದ್ಯಾಶ್ರೀ ರಾಧಾಕೃಷ್ಣ ಗಾನನೃತ್ಯ ಅಕಾಡೆಮಿ ಮಂಗಳೂರು ಇವರ ಪ್ರಸ್ತುತಿಯಲ್ಲಿ ಜ್ವಾಲಾಮುಖಿ ಅಂಬೆ ಏಕವ್ಯಕ್ತಿ ಪ್ರದರ್ಶನ ನಡೆಯಲಿದೆ. ಏ.20ರಂದು ಮಧ್ಯಾಹ್ನ 2.30ರಿಂದ ರಾಜ್ ಗುರು ಹೊಸಕೋಟೆ ಮತ್ತು ನಯನ ಸೂಡ ಇವರಿಂದ ಆದಿಮೂಲ ತಂಡ ಹಾಗೂ ರಂಗಿನಾಟ ಶಿಬಿರಾರ್ಥಿಗಳಿಂದ ರಂಗಗೀತೆಗಳು, ಸಂಜೆ 7.30ಕ್ಕೆ ನೃತ್ಯ ನಿಕೇತನ ಕೊಡವೂರು ಇವರಿಂದ ನೃತ್ಯ ರೂಪಕ ನಾರಸಿಂಹ ಪ್ರದರ್ಶನಗೊಳ್ಳಲಿದೆ ಎಂದರು.
ಅರೆಹೊಳೆ ದೇವಸ್ಥಾನದ ಅರ್ಚಕ ರಾಘವೇಂದ್ರ ಕಾರಂತ ಆಮಂತ್ರಣ ಪತ್ರಿಕೆ ಬಿಡುಗಡೆಗೊಳಿಸಿದರು. ಚಿಕ್ಕಾಡಿ ಗೆಳೆಯರ ಬಳಗದ ಅಧ್ಯಕ್ಷ ಉಮೇಶ ಮೊಗವೀರ, ನಂದಗೋಕುಲ ತಂಡದ ನೃತ್ಯ ನಿರ್ದೇಶಕಿ ಶ್ವೇತಾ ಅರೆಹೊಳೆ ಉಪಸ್ಥಿತರಿದ್ದರು. ಸಾಂಸ್ಕೃತಿಕ ಚಿಂತಕ ಉದಯ ಶೆಟ್ಟಿ ಪಡುಕೆರೆ ನಿರ್ವಹಿಸಿದರು.

ಕೋಟೇಶ್ವರ ವಲಯ ದ್ರಾವಿಡ ಬ್ರಾಹ್ಮಣ ಪರಿಷತ್ತಿನ ವಾರ್ಷಿಕ ಅಧಿವೇಶನ

11 ದಂಪತಿಗಳಿಗೆ ಸುವರ್ಣ ದಾಂಪತ್ಯ ಸನ್ಮಾನ



ಕುಂದಾಪುರ: ವಿಳಂಬ ವಿವಾಹ – ಶೀಘ್ರ ಡೈವೋರ್ಸ್ ಎಂಬ ಈ ದಿನಗಳಲ್ಲಿ ವಿವಾಹ ಮತ್ತು ವೈವಾಹಿಕ ಜೀವನ ಎಂಬ ನಮ್ಮ ಆದರ್ಶ ಪರಂಪರೆ ಅರ್ಥ ಕಳೆದುಕೊಳ್ಳುತ್ತಿದೆಯೋ ಎಂದು ಆತಂಕವಾಗುತ್ತಿದೆ. ಆದರೆ ಐವತ್ತು, ಅರವತ್ತು ವರ್ಷಗಳಿಗೂ ಹೆಚ್ಚು ಕಾಲ ಸಂತಸ ಮತ್ತು ಸಂತೃಪ್ತ ದಾಂಪತ್ಯ ಜೀವನ ನಡೆಸಿ ಮುನ್ನಡೆಯುತ್ತಿರುವ ಜೋಡಿಗಳು ನಮ್ಮ ನಡುವೆ ಇರುವುದು ಸಮಾಧಾನದ ವಿಷಯ. ಇಂತಹ ಆದರ್ಶ ಜೋಡಿಗಳಿಗೆ ಸುವರ್ಣ ದಾಂಪತ್ಯ ಸನ್ಮಾನವನ್ನು ಮಾಡಿರುವುದು ಕೋಟೇಶ್ವರ ಬ್ರಾಹ್ಮಣ ಪರಿಷತ್ತಿನ ಒಂದು ಮಾದರಿ ಕಾರ್ಯ ಎಂದು ಕುಂದಾಪುರ ತಾಲೂಕು ದ್ರಾವಿಡ ಬ್ರಾಹ್ಮಣ ಪರಿಷತ್ ಅಧ್ಯಕ್ಷ ಕೃಷ್ಣಾನಂದ ಚಾತ್ರ ಶ್ಲಾಘಿಸಿದರು.
ಕೋಟೇಶ್ವರದ ಶ್ರೀ ಕೋದಂಡ ರಾಮ ಮಂದಿರದಲ್ಲಿ ಭಾನುವಾರ ನಡೆದ ಕೋಟೇಶ್ವರ ವಲಯ ದ್ರಾವಿಡ ಬ್ರಾಹ್ಮಣ ಪರಿಷತ್ತಿನ ವಾರ್ಷಿಕ ಅಧಿವೇಶನದಲ್ಲಿ ಅವರು ಮಾತನಾಡಿದರು. ಸನ್ಮಾನಗೊಂಡ ಜೋಡಿಗಳಲ್ಲಿ ವಿಭಿನ್ನ ಉದ್ಯೋಗಿಗಳಿದ್ದಾರೆ. ಆದರೆ ಅವರೆಲ್ಲರಲ್ಲಿನ ಸಮಾನ ಅಂಶವೆಂದರೆ ಧರ್ಮಾಚರಣೆ. ಎಲ್ಲರೂ ಸಂಧ್ಯಾವಂದನೆ, ಪೂಜೆ, ಧ್ಯಾನ, ಯೋಗ, ಭಜನೆ ಮಾಡುವ ಅಭ್ಯಾಸ ಹೊಂದಿದವರೇ. ಇಂತಹ ಹವ್ಯಾಸಗಳು ಜೀವನದಲ್ಲಿ ಸಹಿಷ್ಣುತೆ, ಆರೋಗ್ಯ, ಸಂತಸವನ್ನು ಹೆಚ್ಚಿಸಬಲ್ಲವು ಎಂದು ಅವರು ಹೇಳಿದರು.
ಅರವತ್ತು ವರ್ಷಗಳಿಗೂ ಹೆಚ್ಚು ಸುದೀರ್ಘ ದಾಂಪತ್ಯ ಜೀವನ ನಡೆಸುತ್ತಿರುವ ವಿಪ್ರ ಪ್ರಮುಖ ಎಚ್. ಗಜೇಂದ್ರ ರಾವ್ ಅಧಿವೇಶನವನ್ನು ಉದ್ಘಾಟಿಸಿ ಶುಭಕೋರಿದರು. ವಲಯಾಧ್ಯಕ್ಷ ಬಿ. ವಾದಿರಾಜ ಹೆಬ್ಬಾರ್ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದರು. ಐವತ್ತು ಹಾಗೂ ಅಧಿಕ ವರ್ಷಗಳ ಸಂತೃಪ್ತ ವೈವಾಹಿಕ ಜೀವನ ನಡೆಸುತ್ತಿರುವ 11 ಜೋಡಿಗಳಿಗೆ ಸುವರ್ಣ ದಾಂಪತ್ಯ ಸನ್ಮಾನ ನೀಡಿ ಗೌರವಿಸಲಾಯಿತು. ತಾಲೂಕು ದ್ರಾವಿಡ ಬ್ರಾಹ್ಮಣ ಪರಿಷತ್ತಿನ ಮಹಿಳಾ ಘಟಕಾಧ್ಯಕ್ಷೆ ಭಾರ್ಗವಿ ಭಟ್ ಶುಭ ಹಾರೈಸಿದರು. ಕೋಟೇಶ್ವರ ವಲಯ ಮಹಿಳಾ ಘಟಕಾಧ್ಯಕ್ಷೆ ವಾಣಿಶ್ರೀ ಹೆಬ್ಬಾರ್ ಮಾತನಾಡಿದರು.
ವಲಯ ಗೌರವಾಧ್ಯಕ್ಷ ಗಣಪಯ್ಯ ಚಡಗ ಸ್ವಾಗತಿಸಿದರು. ಸೌಮ್ಯ ಉಡುಪ ಪಟ್ಟಿ ಬಹುಮಾನ ವಿಜೇತರ ಪಟ್ಟಿ ವಾಚಿಸಿದರು. ಕಾರ್ಯದರ್ಶಿ ನಾಗೇಂದ್ರ ಬಿಳಿಯ ವಾರ್ಷಿಕ ವರದಿ ಓದಿದರು. ಕೋಶಾಧಿಕಾರಿ ಗಜೇಂದ್ರ ಹೆಬ್ಬಾರ್ ಆಯ ವ್ಯಯ ವರದಿ ಮಂಡಿಸಿದರು. ಆಚಲಾ ಹೆಬ್ಬಾರ್ ನಿರೂಪಿಸಿ, ಗಾಯತ್ರಿ ಹಂದೆ ವಂದಿಸಿದರು.

> **ಸನ್ಮಾನ**
> ಭಾರತದ ವನಿತಾ ಕಿರಿಯರ ಏಕದಿನ ಕ್ರಿಕೆಟ್ ತಂಡದ ನಾಯಕಿ, ರಚಿತಾ ಹತ್ವಾರ್ ಮತ್ತು ಬಿಬಿಎ ಪದವಿ ಪರೀಕ್ಷೆಯಲ್ಲಿ ಸ್ವರ್ಣ ಪದಕ ವಿಜೇತೆ ಶ್ರಾವ್ಯಾ ಅಡಿಗ ಅವರನ್ನು ಸನ್ಮಾನಿಸಿ ಅಭಿನಂದಿಸಲಾಯಿತು. ಅರ್ಹರಿಗೆ ಸಹಾಯಧನ ವಿತರಿಸಲಾಯಿತು. ವಾರ್ಷಿಕಾಧಿವೇಶನದ ಅಂಗವಾಗಿ ಮಕ್ಕಳು ಮತ್ತು ಮಹಿಳೆಯರಿಗೆ ನಡೆಸಿದ ವಿವಿಧ ಸ್ಪರ್ಧಾ ವಿಜೇತರಿಗೆ ಪ್ರಶಸ್ತಿಗಳನ್ನು ನೀಡಲಾಯಿತು.

ಶ್ರೀ ಜಟ್ಟಿಗೇಶ್ವರ ಯೂತ್ ಕ್ಲಬ್ ವಾರ್ಷಿಕೋತ್ಸವ ಸಾಧಕರಿಗೆ ಸನ್ಮಾನ



ಕುಂದಾಪುರ: ಸಂಘ ಸಂಸ್ಥೆಗಳು ಸಮಾಜದ ಆಗುಹೋಗುಗಳಿಗೆ ಸದಾ ಸ್ಪಂದಿಸಬೇಕು ಎಂದು ಬೈಂದೂರು ಶಾಸಕ ಗುರುರಾಜ್ ಶೆಟ್ಟಿ ಗಂಟಿಹೊಳೆ ಹೇಳಿದರು.
ಗಂಗೊಳ್ಳಿ ಲೈಟ್‌ಹೌಸ್ ಶ್ರೀ ಜಟ್ಟಿಗೇಶ್ವರ ದೇವಸ್ಥಾನದ ವಠಾರದಲ್ಲಿ ಸೋಮವಾರ ಜರಗಿದ ಗಂಗೊಳ್ಳಿ ಶ್ರೀ ಜಟ್ಟಿಗೇಶ್ವರ ಯೂತ್ ಕ್ಲಬ್‌ನ 35ನೇ ವಾರ್ಷಿಕೋತ್ಸವದಲ್ಲಿ ಮುಖ್ಯ ಅತಿಥಿಯಾಗಿ ಅವರು ಮಾತನಾಡಿದರು.
ರಾಜ್ಯ ಪ್ರಶಸ್ತಿ ಪುರಸ್ಕೃತ ಅಂಗನವಾಡಿ ಕಾರ್ಯಕರ್ತೆ ಫಿಲೋಮಿನಾ ಫೆರ್ನಾಂಡಿಸ್ ಅಧ್ಯಕ್ಷತೆ ವಹಿಸಿದ್ದರು. ಕುಂದಾಪುರದ ವಿದ್ಯುತ್ ಗುತ್ತಿಗೆದಾರ ಕೆ.ಆರ್. ನಾಯ್ಕ್, ಶ್ರೀ ನಾರಾಯಣಗುರು ಜನ ಸೇವಾ ಸಂಘ ಗಂಗೊಳ್ಳಿ ಅಧ್ಯಕ್ಷ ಗೋಪಾಲ ಪೂಜಾರಿ, ಪಂಚಗಂಗಾವಳಿ ಬಳಗ ಗಂಗೊಳ್ಳಿ ಇದರ ಅಧ್ಯಕ್ಷ ರೋಶನ್ ಖಾರ್ವಿ, ಗುತ್ತಿಗೆದಾರ ಜಯಂತ್ ಶೇರುಗಾರ್, ಗಂಗೊಳ್ಳಿ ಗ್ರಾಪಂ ಸದಸ್ಯ ಮಹೇಶ್ (ಅಯ್ಯಪ್ಪ), ಉಪನ್ಯಾಸಕ ನರೇಂದ್ರ ಎಸ್.ಗಂಗೊಳ್ಳಿ, ಯೂತ್ ಕ್ಲಬ್ ಅಧ್ಯಕ್ಷ ಕೆ.ಚಂದ್ರ ಖಾರ್ವಿ ಗೌರವಾಧ್ಯಕ್ಷ ಮಡಿ ಮಾಧವ ಖಾರ್ವಿ, ಶ್ರೀ ಜಟ್ಟಿಗೇಶ್ವರ ಮಹಿಳಾ ಮಂಡಳಿ ಅಧ್ಯಕ್ಷೆ ಜಯಂತಿ ಜಿ.ಖಾರ್ವಿ ಇದ್ದರು. ಇದೇ ಸಂದರ್ಭ ಸಾಧಕರಾದ ಮಡಿ ಹರೀಶ್ ಖಾರ್ವಿ, ಮಾಧವ ಖಾರ್ವಿ (ಎಸ್‌ಐ), ಮಡಿ ನಾಗರಾಜ ಖಾರ್ವಿ, ವೆಂಕಟೇಶ ಕೋಟಾನ್, ಮಡಿ ಸಂತೋಷ ಖಾರ್ವಿ ಮತ್ತು ಮಡಿ ರಾಘವೇಂದ್ರ ಖಾರ್ವಿ ಅವರನ್ನು ಸನ್ಮಾನಿಸಿ ಗೌರವಿಸಲಾಯಿತು.
ಕೋಶಾಧಿಕಾರಿ ಬಿ.ನಾಗರಾಜ ಖಾರ್ವಿ ಸ್ವಾಗತಿಸಿದರು. ಜಿ. ಕೇಶವ ಖಾರ್ವಿ ವರದಿ ವಾಚಿಸಿದರು. ಮಡಿ ರೇಖಾ ಖಾರ್ವಿ, ನಿಶಾ ಖಾರ್ವಿ ಬಹುಮಾನ ವಿಜೇತರ ಪಟ್ಟಿ ವಾಚಿಸಿದರು. ಸುಂದರ ಜಿ. ನಿರ್ವಹಿಸಿದರು. ಮಡಿ ವಿಶ್ವನಾಥ ಖಾರ್ವಿ ವಂದಿಸಿದರು.

ಮೂವರು ದಂಪತಿಗೆ ಮಕ್ಕಳ ದತ್ತು ಆದೇಶ ನೀಡಿದ ಜಿಲ್ಲಾಧಿಕಾರಿಗಳು

ಉಡುಪಿ: ಬಾಲನ್ಯಾಯ (ಮಕ್ಕಳ ಪಾಲನೆ ಮತ್ತು ರಕ್ಷಣೆ) ತಿದ್ದುಪಡಿ ಕಾಯ್ದೆ 2021 ರ ಸೆಕ್ಷನ್ 56(1) 58 ಮತ್ತು 61 ರ ಅಡಿಯಲ್ಲಿ ಜಿಲ್ಲಾಧಿಕಾರಿ ಸ್ವರೂಪ ಟಿ.ಕೆ ಅವರು ಸೋಮವಾರ ನಗರದ ಮಣಿಪಾಲ ರಜತಾದ್ರಿಯ ಕಚೇರಿಯಲ್ಲಿ ಬೆಂಗಳೂರು, ಆಂಧ್ರಪ್ರದೇಶ (ತೆಲಂಗಾಣ) ಹಾಗೂ ಉಡುಪಿ ಜಿಲ್ಲೆ ದಂಪತಿಗಳಿಗೆ ಒಟ್ಟು 3 ಮಕ್ಕಳ ಅಂತಿಮ ದತ್ತು ಆದೇಶ ನೀಡಿದರು.
ಈ ಸಂದರ್ಭದಲ್ಲಿ ಮಾತನಾಡಿದ ಅವರು, ಕೌಟುಂಬಿಕ ವ್ಯವಸ್ಥೆಯಲ್ಲಿ ಬೆಳೆಯುವುದು ಪ್ರತಿಯೊಂದು ಮಗುವಿನ ಹಕ್ಕು. ಮಗುವಿಗೆ ಅವಶ್ಯವಿರುವ ಪ್ರೀತಿ ಮತ್ತು ಆರೈಕೆಯನ್ನು ಕುಟುಂಬದ ವಾತಾವರಣವು ಕಲ್ಪಿಸುತ್ತದೆ. ದತ್ತು ಪ್ರಕ್ರಿಯೆಯು ಕಾನೂನು ಬದ್ಧವಾಗಿ, ಬಾಲನ್ಯಾಯ (ಮಕ್ಕಳ ಪಾಲನೆ ಮತ್ತು ರಕ್ಷಣೆ) ತಿದ್ದುಪಡಿ ಕಾಯಿದೆ ಅಡಿಯಲ್ಲಿ ಕುಟುಂಬದ ಪ್ರೀತಿ ವಂಚಿತ, ಪೋಷಕರನ್ನು ಕಳೆದುಕೊಂಡ, ಪಾಲನೆ ಪೋಷಣೆ ವಂಚಿತ ಪರಿತ್ಯಕ್ತ ಹಾಗೂ ನಿರ್ಗತಿಕ ಮಕ್ಕಳು ಮಾತ್ರ ಜಿಲ್ಲಾ ಮಕ್ಕಳ ಕಲ್ಯಾಣ ಸಮಿತಿಯಿಂದ ದತ್ತು ಮುಕ್ತ ಆದೇಶ ಪಡೆದು ದತ್ತು ನೀಡಲು ಅರ್ಹರಾಗಿರುತ್ತಾರೆ ಎಂದರು.
ಪರಿತ್ಯಕ್ತ ಮಕ್ಕಳ ರಕ್ಷಣೆಗಾಗಿ ಇರುವ ವಿಶೇಷ ಮಮತೆಯ ತೊಟ್ಟಿಲುಗಳಲ್ಲಿ ಮಕ್ಕಳನ್ನು ಬಿಡಬಹುದಾಗಿದೆ. ಜಿಲ್ಲೆಯ ಸಂತೆಕಟ್ಟೆಯ ಶ್ರೀ ಕೃಷ್ಣಾನುಗ್ರಹ ದತ್ತು ಕೇಂದ್ರ ಹಾಗೂ ಬಿ.ಆರ್.ಶೆಟ್ಟಿ ಆಸ್ಪತ್ರೆ ಇಲ್ಲಿ ಮಮತೆಯ ತೊಟ್ಟಿಲುಗಳನ್ನು ಇರಿಸಲಾಗಿದೆ ಎಂದ ಅವರು, ಕಾನೂನು ಉಲ್ಲಂಘಿಸಿ ಅಥವಾ ಮಕ್ಕಳ ಮಾರಾಟ ಪ್ರಕರಣಗಳಲ್ಲಿ ಆಸ್ಪತ್ರೆ ಸಿಬ್ಬಂದಿಯವರು ಶಾಮೀಲಾಗಿದ್ದಲ್ಲಿ 1 ಲಕ್ಷ ರೂಪಾಯಿ ದಂಡ ಹಾಗೂ 7 ವರ್ಷದ ವರೆಗೆ ಜೈಲು ಶಿಕ್ಷೆ ಹಾಗೂ ಮಕ್ಕಳನ್ನು ಮಾರಾಟ ಮಾಡಿದವರಿಗೆ ಹಾಗೂ ಮಕ್ಕಳನ್ನು ಕೊಂಡುಕೊಂಡವರಿಗೆ 1 ಲಕ್ಷ ದಂಡ ಹಾಗೂ 5 ವರ್ಷದವರೆಗೆ ಜೈಲು ಶಿಕ್ಷೆ ವಿಧಿಸಲಾಗುವುದು ಎಂದು ಜಿಲ್ಲಾಧಿಕಾರಿಗಳು ತಿಳಿಸಿದರು.
ಈ ಸಂದರ್ಭದಲ್ಲಿ ಜಿಲ್ಲಾ ಮಕ್ಕಳ ರಕ್ಷಣಾ ಘಟಕದ ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿ ನಾಗರತ್ನ ನಾಯಕ್, ರಕ್ಷಣಾಧಿಕಾರಿಗಳಾದ ಸುರಕ್ಷಾ ಹಾಗೂ ಮಹೇಶ್ ದೇವಾಡಿಗ, ಕೃಷ್ಣಾನುಗ್ರಹ ವಿಶೇಷ ದತ್ತು ಕೇಂದ್ರದ ವೃಂದಾ ಉಪಸ್ಥಿತರಿದ್ದರು. ದತ್ತು ಪ್ರಕ್ರಿಯೆ ಕುರಿತು ಹೆಚ್ಚಿನ ಮಾಹಿತಿಗಾಗಿ ವೆಬ್‌ಸೈಟ್ https://missionvatsalya.wcd.gov.in ಹಾಗೂ ಜಿಲ್ಲಾ ಮಕ್ಕಳ ರಕ್ಷಣಾ ಘಟಕ ಕಚೇರಿ, ದೂರವಾಣಿ ಸಂಖ್ಯೆ: 0820-2574964 ಮತ್ತು ಸಂತೆಕಟ್ಟೆಯ ಶ್ರೀಕೃಷ್ಣಾನುಗ್ರಹ ವಿಶೇಷ ದತ್ತು ಕೇಂದ್ರ ದೂರವಾಣಿ ಸಂಖ್ಯೆ 9880442640 ಅನ್ನು ಸಂಪರ್ಕಿಸಬಹುದಾಗಿದೆ ಎಂದು ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿ ಪ್ರಕಟಣೆ ತಿಳಿಸಿದೆ.

'ಹೌಂದೇರಾಯ ವಾಲ್ಗುವಾ' 89.6 ಕುಂದಾಪ್ರ ಎಫ್‌ಎಂ ವಾರ್ಷಿಕೋತ್ಸವ




ಕುಂದಾಪುರ: ಜನಪದ ಕಲೆ ತನ್ನ ವಿಶಿಷ್ಟತೆಯನ್ನು ಕಾಪಾಡಿಕೊಂಡು ಬಂದರೆ ಸಮಾಜಕ್ಕೆ ಒಳ್ಳೆಯದು ಎಂದು ಸಂಸದ ಕೋಟ ಶ್ರೀನಿವಾಸ ಪೂಜಾರಿ ಹೇಳಿದರು.
ಕುಂದಾಪುರದ ಭಂಡಾರ್ಕಾರ್ಸ್ ಕಾಲೇಜಿನ ಆರ್.ಎನ್.ಶೆಟ್ಟಿ ಸಭಾಂಗಣದಲ್ಲಿ ರೇಡಿಯೋ ಕುಂದಾಪ್ರ 89.6 ಎಫ್.ಎಂ ನ ವಾರ್ಷಿಕೋತ್ಸವ 'ಹೌಂದೇರಾಯ್ನ ವಾಲ್ಗವಾ' ಸಮಾರಂಭವನ್ನು ದೀಪ ಬೆಳಗಿಸಿ ಮತ್ತು ಸಾಲಿಗ್ರಾಮ ಪಾರಂಪಳ್ಳಿಯ ಗುರು ಮಾರುತಿ ಹೌಂದೇರಾಯ್ನ ವಾಲ್ಗವಾ ತಂಡಕ್ಕೆ ಸಿಂಗಾರ ಹೂವನ್ನು ನೀಡುವುದರ ಮೂಲಕ ವಿಭಿನ್ನವಾಗಿ ಬುಧವಾರ ಉದ್ಘಾಟಿಸಿ ಅವರು ಮಾತನಾಡಿದರು.
ಅಧ್ಯಕ್ಷತೆಯನ್ನು ಕಾಲೇಜಿನ ವಿಶ್ವಸ್ಥ ಮಂಡಳಿ ಉಪಾಧ್ಯಕ್ಷ ಕೆ. ಶಾಂತಾರಾಮ್ ಪ್ರಭು ವಹಿಸಿದ್ದರು. ಶಾಸಕ ಕಿರಣ್ ಕುಮಾರ್ ಕೊಡ್ಗಿ ಇದ್ದರು. 89.6 ಎಫ್ ಎಂ ಮೂಲಕ ಕಾರ್ಯಕ್ರಮಗಳನ್ನು ನೀಡಿದ ಸತೀಶ್ ಶೆಟ್ಟಿಗಾರ್ ಜೆಪ್ಪಿ, ಚಂದ್ರ ಮೊಗವೀರ, ಸುಬ್ರಹ್ಮಣ್ಯ ಪೂಜಾರಿ ಕುಂದಬಾರಂದಾಡಿ ಗೌರವಿಸಲಾಯಿತು. ಹಿರಿಯ ವಿದ್ಯುತ್ ಗುತ್ತಿಗೆದಾರ ಕೆ.ಆರ್.ನಾಯ್ಕ, ತಾಲೂಕು ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಡಾ.ಉಮೇಶ್ ಪುತ್ರನ್, ಕರ್ನಾಟಕ ಮಾಧ್ಯಮ ಅಕಾಡೆಮಿಯ ಸದಸ್ಯ ಯು. ಎಸ್.ಶೆಣೈ, ಪಿಯು ಕಾಲೇಜಿನ ಪ್ರಾಂಶುಪಾಲ ಡಾ.ಜಿ.ಎಂ.ಗೊಂಡ ಉಪಸ್ಥಿತರಿದ್ದರು. ಡಾ.ಶುಭಕರಾಚಾರಿ ಸ್ವಾಗತಿಸಿದರು. ಜ್ಯೋತಿ ಸಾಲಿಗ್ರಾಮ ನಿರೂಪಿಸಿದರು.

ಉಪ ಲೋಕಾಯುಕ್ತರ ದಿಢೀರ್ ಭೇಟಿ ವೇಳೆ ಆಡಳಿತಾತ್ಮಕ ನ್ಯೂನ್ಯತೆ, ಕಡತ ವಿಲೇವಾರಿ ವಿಳಂಬ ಪತ್ತೆ, ಮಾಹಿತಿ ನೀಡಲು ಅಧಿಕಾರಿಗಳು ವಿಫಲ

ಕರ್ತವ್ಯ ಲೋಪಗಳಿಗೆ ಸಂಬಂಧಿಸಿ ಒಟ್ಟು 17 ಸ್ವಯಂ ಪ್ರೇರಿತ ಪ್ರಕರಣ ದಾಖಲು

ಉಡುಪಿ: ಕರ್ನಾಟಕ ಉಪ ಲೋಕಾಯುಕ್ತ ನ್ಯಾಯಮೂರ್ತಿ ಬಿ. ವೀರಪ್ಪ ಅವರು ಉಡುಪಿ ಜಿಲ್ಲೆಗೆ ನೀಡಿದ ದಿಢೀರ್ ಭೇಟಿಯ ವೇಳೆ ವಿವಿಧ ಸರ್ಕಾರಿ ಇಲಾಖೆಗಳಲ್ಲಿ ಕಂಡುಬಂದ ಗಂಭೀರ ಕರ್ತವ್ಯ ಲೋಪಗಳಿಗೆ ಸಂಬಂಧಿಸಿದಂತೆ ಒಟ್ಟು 17 ಸ್ವಯಂ ಪ್ರೇರಿತ ಪ್ರಕರಣಗಳನ್ನು ದಾಖಲಿಸಿಕೊಂಡಿದ್ದಾರೆ.



ಫೆಬ್ರವರಿ 26 ಮತ್ತು 27 ರಂದು ಜಿಲ್ಲೆಯ ಸಾರ್ವಜನಿಕ ಕುಂದುಕೊರತೆ ಆಲಿಸುವ ಶಿಬಿರದ ಅವಧಿಯಲ್ಲಿ ಈ ಭೇಟಿ ನಡೆದಿದ್ದು, ಆಡಳಿತಾತ್ಮಕ ನ್ಯೂನ್ಯತೆಗಳ ಆಧಾರದ ಮೇಲೆ ಈ ಕ್ರಮ ಜರುಗಿಸಲಾಗಿದೆ.
ಸಾರ್ವಜನಿಕ ಶಿಕ್ಷಣ ಇಲಾಖೆಯ ಕಚೇರಿಯಲ್ಲಿ ಕರ್ತವ್ಯದ ಅವಧಿಯಲ್ಲಿ ಅನುಮತಿಯಿಲ್ಲದೆ ಸಿಬ್ಬಂದಿ ಹೊರಗಿರುವುದು, ಕಚೇರಿಯ ವಹಿಗಳನ್ನು ಸರ್ಕಾರದ ಮಾರ್ಗಸೂಚಿಯಂತೆ ನಿರ್ವಹಿಸದಿರುವುದು ಮತ್ತು ಸಿಬ್ಬಂದಿ ಗುರುತಿನ ಚೀಟಿ ಧರಿಸದ ಕಾರಣಕ್ಕೆ ಅಧಿಕಾರಿಗಳ ವಿರುದ್ಧ ದೂರು ದಾಖಲಾಗಿದೆ. ಉಡುಪಿ ತಹಶೀಲ್ದಾರ್ ಕಚೇರಿಯಲ್ಲಿ ಆರ್‌ಆರ್‌ಟಿ ಮತ್ತು ಪೋಡಿ ಕಡತಗಳು ದೀರ್ಘಕಾಲದಿಂದ ವಿಲೇವಾರಿಯಾಗದೆ ಬಾಕಿ ಇರುವುದು ಕಂಡುಬಂದಿದೆ. ಅತೀ ಮುಖ್ಯವಾಗಿ, ತಹಶೀಲ್ದಾರ್ ಕಚೇರಿಯೊಳಗೆ ಅನಧಿಕೃತವಾಗಿ ಚಿಟ್ ಫಂಡ್ ವ್ಯವಹಾರ ನಡೆಸುತ್ತಿರುವುದು ಪತ್ತೆಯಾಗಿದ್ದು, ಇದನ್ನು ಗಂಭೀರ ಕರ್ತವ್ಯ ಲೋಪ ಎಂದು ಪರಿಗಣಿಸಲಾಗಿದೆ.
ನಗರಾಭಿವೃದ್ಧಿ ಮತ್ತು ನಗರಸಭೆ ವ್ಯಾಪ್ತಿಯಲ್ಲಿ ಅನೇಕ ನ್ಯೂನ್ಯತೆಗಳು ಬಯಲಾಗಿವೆ. ಅನುಮೋದಿತ ನಕ್ಷೆಗೆ ವ್ಯತಿರಿಕ್ತವಾಗಿ ಅಕ್ರಮ ಕಟ್ಟಡಗಳ ನಿರ್ಮಾಣ, ಇ-ಆಸ್ತಿ ಅರ್ಜಿಗಳ ವಿಳಂಬ ಮತ್ತು ತೆಂಕನಿಡಿಯೂರು ಕೆರೆ ಅಭಿವೃದ್ಧಿಯಲ್ಲಿನ ನಿರ್ಲಕ್ಷ್ಯದ ಬಗ್ಗೆ ಪ್ರಕರಣ ದಾಖಲಿಸಲಾಗಿದೆ. ನಿಟ್ಟೂರಿನ ಕೊಳಚೆ ನೀರು ಶುದ್ಧೀಕರಣ ಘಟಕವು ಸಮರ್ಪಕವಾಗಿ ಕಾರ್ಯನಿರ್ವಹಿಸದೆ ಪರಿಸರ ಮಾಲಿನ್ಯಕ್ಕೆ ಕಾರಣವಾಗುತ್ತಿದ್ದರೂ, ಮಾಲಿನ್ಯ ನಿಯಂತ್ರಣ ಮಂಡಳಿ ಯಾವುದೇ ಕ್ರಮ ಕೈಗೊಳ್ಳದಿರುವ ಬಗ್ಗೆ ನ್ಯಾಯಮೂರ್ತಿಗಳು ಆಕ್ಷೇಪ ವ್ಯಕ್ತಪಡಿಸಿದ್ದಾರೆ.
ಗಣಿ ಮತ್ತು ಭೂ ವಿಜ್ಞಾನ ಇಲಾಖೆಯಲ್ಲಿ ಜಿಲ್ಲೆಯ ಕ್ವಾರಿಗಳು ಮತ್ತು ಕ್ರಷರ್‌ಗಳ ಒತ್ತುವರಿ ಹಾಗೂ ಪರವಾನಗಿ ಉಲ್ಲಂಘನೆಯ ಕುರಿತು ಅಧಿಕಾರಿಗಳ ಬಳಿ ಸರಿಯಾದ ಮಾಹಿತಿ ಇಲ್ಲದಿರುವುದು ಕಂಡುಬಂದಿದೆ. ಪ್ರಾದೇಶಿಕ ಸಾರಿಗೆ ಅಧಿಕಾರಿಗಳ ಕಚೇರಿಯಲ್ಲಿ ಶಾಲಾ ವಾಹನಗಳ ಸುರಕ್ಷತಾ ನಿಯಮಗಳ ಪಾಲನೆ ಮತ್ತು ವಾಹನಗಳ ಜಿಪಿಎಸ್ ಕಣ್ಗಾವಲಿನ ಬಗ್ಗೆ ದಾಖಲೆಗಳನ್ನು ಸಲ್ಲಿಸಲು ಅಧಿಕಾರಿಗಳು ವಿಫಲರಾಗಿದ್ದಾರೆ. ಇದಲ್ಲದೆ, ಮಣಿಪಾಲ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಮಾದಕ ದ್ರವ್ಯ ಮಾರಾಟಗಾರರ ವಿರುದ್ಧ ಕಠಿಣ ಕ್ರಮ ಕೈಗೊಳ್ಳದ ಬಗ್ಗೆಯೂ ದೂರು ದಾಖಲಿಸಿಕೊಳ್ಳಲಾಗಿದೆ.
ಜಿಲ್ಲಾ ಸಾರ್ವಜನಿಕ ಆಸ್ಪತ್ರೆಯಲ್ಲಿ ಸ್ವಚ್ಛತೆಯ ಕೊರತೆ, ವೈದ್ಯರು ಮತ್ತು ಸಿಬ್ಬಂದಿ ಸಮವಸ್ತ್ರ ಧರಿಸದಿರುವುದು ಮತ್ತು ಆಸ್ಪತ್ರೆಯ ತ್ಯಾಜ್ಯ ವಿಲೇವಾರಿಯಲ್ಲಿನ ಲೋಪಗಳ ಬಗ್ಗೆ ಪ್ರಕರಣ ದಾಖಲಿಸಲಾಗಿದೆ. ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ, ಸಮಾಜ ಕಲ್ಯಾಣ, ಮೀನುಗಾರಿಕೆ, ಪ್ರವಾಸೋದ್ಯಮ ಮತ್ತು ಭೂದಾಖಲೆಗಳ ಇಲಾಖೆಗಳಲ್ಲಿಯೂ ಕಡತಗಳ ವಿಲೇವಾರಿ ವಿಳಂಬ ಮತ್ತು ಮಾಹಿತಿ ನೀಡಲು ಅಧಿಕಾರಿಗಳು ವಿಫಲರಾದ ಹಿನ್ನೆಲೆಯಲ್ಲಿ ಸ್ವಯಂ ಪ್ರೇರಿತ ದೂರುಗಳನ್ನು ದಾಖಲಿಸಿ, ಮುಂದಿನ ತನಿಖೆಗೆ ಆದೇಶಿಸಲಾಗಿದೆ.
ಜಿಲ್ಲಾ ಸಾರ್ವಜನಿಕ ಆಸ್ಪತ್ರೆಗೆ ಉಪ ಲೋಕಾಯುಕ್ತ ನ್ಯಾಯಮೂರ್ತಿಗಳು ಭೇಟಿ ನೀಡಿದ ಸಂದರ್ಭದಲ್ಲಿ ಜನನ ಹಾಗೂ ಮರಣ ಪ್ರಮಾಣದ ಅನೇಕ ಪತ್ರಗಳು ಕಂಡು ಬಂದ ಹಿನ್ನೆಲೆ, ಸಂಬಂಧಪಟ್ಟವರಿಗೆ ಪೋಸ್ಟ್ ಮೂಲಕ ರವಾನೆ ಮಾಡಬೇಕೆಂದು ಸೂಚನೆ ನೀಡಿದ ಅವರು, ಆಸ್ಪತ್ರೆಯ ಕ್ಯಾಂಟೀನ್ ಅನ್ನು ಸಮರ್ಪಕವಾಗಿ ನಿರ್ವಹಿಸದೇ ಇರುವುದು ಸೇರಿದಂತೆ ಪರಿಶೀಲನೆ ನಡೆಸಿದ ಅವರು, ನ್ಯೂನ್ಯತೆಗಳು ಕಂಡು ಬಂದ ಹಿನ್ನೆಲೆ ಸ್ವಯಂ ಪ್ರೇರಿತವಾಗಿ ದೂರು ದಾಖಲಿಸಲಾಯಿತು.